॥ ಶ್ರೀ ಮಧ್ವಾಂತರ್ಗತ ವೇದವ್ಯಾಸಾಯ ನಮಃ ॥

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತ

ಭಾವಿಸಮೀರ ಶ್ರೀಮದ್ವ್ಯಾದಿರಾಜತೀರ್ಥರಿಂದ ಅನುವಾದಿತ ಕನ್ನಡ ,

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ

ಸಂಪುಟ ೩

Phone : 3515

T. Venkanna, B.A., B.

(Tamarapanni Venkannachar

ADVOCATE,

381, 3rd Block, 57th Cross,

Rajajinagar, Bangalore-560 0

ಶ್ರೀ ತ್ರೈಲೋಕ್ಯಾಚಾರ್ಯ ಸೇವಕ ವೃಂದ

ನಂ. 223, ಎರಡನೇ ಕ್ರಾಸ್, ಹನುಮಂತನಗರ

ಬೆಂಗಳೂರು-560 019

ಭಾವಿಸಮೀರ ಶ್ರೀಮದ್ವಾದಿರಾಜತೀರ್ಥರಿಂದ ವಿರಚಿತವಾದ ಕನ್ನಡ

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ

" Sreemanmahabharatatatparyanirnaya " — Vol. III

Prose Translation in Kannada by Sreemadvadirajatheertha

1,000 ಪ್ರತಿಗಳು — ಜುಲೈ 1983

ಈ ಮೂರನೆಯ ಸಂಪುಟವನ್ನು ಬೆಂಗಳೂರಿನ ಕರ್ನಾಟಕ ಪಬ್ಲಿಷರ್ಸ್ ಅಂಡ್
ಬುಕ್‌ಸೆಲ್ಲರ್ಸ್ ಅಸೋಸಿಯೇಷನ್ ಇವರಿಂದ ರಿಯಾಯಿತಿದರದಲ್ಲಿ
ದೊರೆತ ಕಾಗದದಲ್ಲಿ ಮುದ್ರಿಸಲಾಗಿದೆ.

ಆನಂದ್ ಪ್ರಿಂಟರ್ಸ್

25, ಗಾಂಧೀ ಬಜಾರ್, ಬೆಂಗಳೂರು-4

ಇವರಿಂದ ಮುದ್ರಿತ

ಪ್ರಕಾಶಕರ ನುಡಿ

ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮವ್ ।
ದೇವೀಂ ಸರಸ್ವತೀಂ ವ್ಯಾಸಂ ತತೋಜಯಮುದೀರಯೇತ್ ॥

ಶ್ರೀಮದಾನಂದತೀರ್ಥಭಗವತ್ಪಾದರ 'ಸರ್ವಮೂಲ' ಗ್ರಂಥಗಳಲ್ಲಿ ಮೇರು-ಕೃತಿ 'ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ' ಗ್ರಂಥ. ಈ ಗ್ರಂಥಕ್ಕೆ ಅನೇಕ ಜ್ಞಾನಿಗಳು ಸಂಸ್ಕೃತ ವ್ಯಾಖ್ಯಾನಗಳನ್ನು ರಚನೆ ಮಾಡಿ ಸಜ್ಜನರಿಗೆ ಅನುಗ್ರಹವನ್ನು ಮಾಡಿದ್ದಾರೆ. ಆದರೆ ಈಗ ಈ ಸಂಸ್ಕೃತ ಗ್ರಂಥಗಳನ್ನು ಓದಿ ಅರ್ಥಮಾಡಿಕೊಳ್ಳುವ ಅಧಿಕಾರಿಗಳು ಬಹಳ ಕಡಿಮೆಯಾಗಿದ್ದಾರೆ. ಶ್ರೀಮತ್ ಭಾವಿಸಮೀರರೆನಿಸಿದ ಶ್ರೀ ವಾದಿರಾಜತೀರ್ಥಶ್ರೀಗಳವರು ಸಂಸ್ಕೃತ ವ್ಯಾಖ್ಯಾನವಾದ 'ಭಾವಪ್ರಕಾಶಿಕಾ' ಮತ್ತು ಈಗ ತಮ್ಮ ಹಸ್ತದಲ್ಲಿರುವ ಕನ್ನಡದ ಈ ವ್ಯಾಖ್ಯಾನವನ್ನೂ ದಯಪಾಲಿಸಿ ಮಹದುಪಕಾರ ಮಾಡಿದ್ದಾರೆ.

ಈ ಕನ್ನಡ 'ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ' ಗ್ರಂಥದ ಪ್ರಥಮ ಹಾಗೂ ದ್ವಿತೀಯ ಸಂಪುಟಗಳು ಆಗಸ್ಟ್ 1980 ಮತ್ತು ಮೇ 1982ರಲ್ಲಿ ಪ್ರಕಟವಾಗಿದ್ದು, ಈಗ ತಮ್ಮ ಕೈಯಲ್ಲಿರುವ ಮೂರನೆಯ ಸಂಪುಟದೊಂದಿಗೆ ಪೂರ್ಣವಾಗಿದೆ. ಅನೇಕ ಕಾರಣಗಳಿಂದ ಪ್ರಕಟಣಕಾರ್ಯವು ತಡವಾಯಿತಾದರೂ ಸಾಧ್ಯವಾದಷ್ಟು ಮುದ್ರಣದೋಷದೂರವಾದ ಗ್ರಂಥವನ್ನು ತಮುಗಿತ್ತಿರುವೆವೆಂಬ ತೃಪ್ತಿ ನಮಗಾಗಿದೆ.

ನಮ್ಮ ಶಕ್ತಿಗೆ ಮೀರಿದುದೆನಿಸಿದ ಈ ಗ್ರಂಥದ ಪ್ರಕಟಣಾ ಕಾರ್ಯವನ್ನು 'ತ್ರೈಲೋಕ್ಯಾಚಾರ್ಯ ಸೇವಕ ವೃಂದದವರ ಸೇವಾ' ಎಂದು ಸ್ವೀಕರಿಸಿ ಅನುಗ್ರಹಿಸಿರುವ ಶ್ರೀ ಶ್ರೀಲಕ್ಷ್ಮೀಹಯಗ್ರೀವಸ್ವಾಮಿಯ ಚರಣಾರವಿಂದಗಳಲ್ಲೂ, ಆ ಪರಮಾತ್ಮನ ಮುಖ್ಯಪ್ರತಿಬಿಂಬರಾದ ವಾಯುದೇವರ ತೃತೀಯಾವತಾರರಾದ ಹಾಗೂ ಮೂಲಗ್ರಂಥಕರ್ತೃಗಳಾದ 'ಶ್ರೀ ತ್ರೈಲೋಕ್ಯಾಚಾರ್ಯ'ರ ಪಾದಾರವಿಂದಗಳಲ್ಲೂ, ಈ ಗ್ರಂಥದ ಕನ್ನಡ ಅನುವಾದದಿಂದ ಸಜ್ಜನರಿಗೆ ಜ್ಞಾನಸುಧಾಪಾನ ಮಾಡಿಸಿರುವ ಭಾವಿಸಮೀರ ಶ್ರೀಮದ್ವಾದಿರಾಜರ ಪಾದಸರಸಿಜಗಳಲ್ಲೂ ನಮ್ಮ ಭಕ್ತಿಪೂರ್ವಕ ಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸುತ್ತೇವೆ.

ನಮ್ಮ ವೃಂದದ ಮೇಲೆ ತಮ್ಮ ಪೂರ್ಣ ಕೃಪೆಯಿರುವುದನ್ನುವುದನ್ನು ಪ್ರಥಮ ಸಂಪುಟಕ್ಕೆ ಮುನ್ನುಡಿಯನ್ನು ಅನುಗ್ರಹಿಸುವುದರ ಮೂಲಕ ಪ್ರಷ್ಟ ಪಡಿಸಿರುವ ನಮ್ಮ ಮಾರ್ಗದರ್ಶಿಗಳೂ ಗುರುಗಳೂ ಆದ ಮಧ್ವಶಾಸ್ತ್ರಸಂಪನ್ನರಾದ

ಶ್ರೀ ಬಾಳಗಾರು ಶ್ರೀನಿವಾಸಾಚಾರ್ಯರ ಚರಣಾಂಬೋರುಹಗಳೂ ನನ್ನ ಭಕ್ತಿ-ಪೂರ್ವಕ ಪ್ರಣಾಮಗಳನ್ನು ಸ್ವೀಕರಿಸಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಮುದ್ರಣಕಾರರ ಮನವೊಪ್ಪುವಂತೆ ಮೂಲಪ್ರತಿಗಳನ್ನು ತಯಾರಿಸಿದ, ಕಾಲಗಣನೆಯಿಲ್ಲದೆ ತಮ್ಮ ಅಮೂಲ್ಯ ಸಲಹೆಗಳನ್ನಿತ್ತುದಲ್ಲದೆ, ಕರಡುಪ್ರತಿಗಳನ್ನು ತಿದ್ದಿಕೊಟ್ಟು ಗ್ರಂಥದ ಅಂದವನ್ನು ಹೆಚ್ಚಿಸಿ 'ತ್ರೈಲೋಕ್ಯಾಚಾರ್ಯ'ರ ಸೇವೆಯೆಂದು ಹೃತ್ಪೂರ್ವಕವಾಗಿ ಸಹಕರಿಸಿದ ಮಹನೀಯರಿಗೂ, ಸಲಹೆ ಸಹಕಾರಗಳಿತ್ತ ಇತರ ಭಕ್ತವೃಂದದವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಈ ಗ್ರಂಥದ ಮುದ್ರಣಕ್ಕಾಗಿ ರಿಯಾಯಿತಿ ದರದಲ್ಲಿ ಕಾಗದವನ್ನು ಒದಗಿಸಿದ ಕರ್ನಾಟಕ ಪಬ್ಲಿಷರ್ಸ್ ಅಂಡ್ ಬುಕ್‌ಸೆಲ್ಲರ್ಸ್ ಅಸೋಸಿಯೇಷನ್‌ನ ಕಾರ್ಯಕಾರಿ ವರ್ಗಕ್ಕೂ, ದ್ವಿತೀಯ ಸಂಪುಟದ ಮುದ್ರಣಕ್ಕಾಗಿ ಧನಸಹಾಯವನ್ನು ನೀಡಿದ ಶ್ರೀ ತಿರುಪತಿ ತಿರುಮಲೈ ದೇವಸ್ಥಾನದ ಆಡಳಿತವರ್ಗಕ್ಕೂ, ಪಡಿಯಚ್ಚುಗಳನ್ನಿತ್ತು ಗ್ರಂಥದ ಅಂದಕ್ಕೆ ಕಾರಣರಾದ ಶ್ರೀಹರಿವಿಠಲ ಪ್ರಕಾಶನದ ಶ್ರೀ ರಾಣ್ಯಾ ರಾಜಾ-ರಾಯರಿಗೂ, ಮುದ್ರಣಕಾರ್ಯವನ್ನು ತಡವಾಗಿಯಾದರೂ ನಮ್ಮ ಮನಸ್ಸಿಗೆ ಒಪ್ಪುವಂತೆ ಮಾಡಿಕೊಟ್ಟ ಆನಂದ್ ಪ್ರಿಂಟರ್ಸ್‌ನವರಿಗೂ ನನ್ನ ವಂದನೆಗಳು.

ಮುಖ್ಯವಾಗಿ ಮುಂಚಿತವಾಗಿ ಲಕ್ಷ್ಮೀಕಟಾಕ್ಷ ಮಾಡಿ ಗ್ರಂಥಪ್ರಕಟಣಾ ವಿಳಂಬವನ್ನು ಪ್ರಮಾದವಾಗೆಣಿಸದೆ ಸಹಕರಿಸಿದ ಗ್ರಾಹಕವರ್ಗಕ್ಕೂ ನನ್ನ ವಂದನೆಗಳನ್ನು ಸಲ್ಲಿಸಿ ತ್ರೈಲೋಕ್ಯಾಚಾರ್ಯರ ಸೇವೆಗಾಗಿ ವಿರಮಿಸುತ್ತೇನೆ.

ವಿಷಯಾನುಕ್ರಮಣಿಕಾ

ಅಧ್ಯಾಯ	ವಿಷಯ		ಪುಟಸಂಖ್ಯೆ
	ಪ್ರಕಾಶಕರ ನುಡಿ	....	iii
೨೪	ಶ್ರೀಕೃಷ್ಣಚರಿತೆ ಉದ್ಯೋಗಪರ್ವನಿರ್ಣಯಃ	....	೧
೨೫	,, ಭೀಷ್ಮಪರ್ವಃ	....	೧೩
೨೬	,, ದ್ರೋಣಪರ್ವನಿರ್ಣಯಃ	....	೨೪
೨೭	,, ಕರ್ಣವಧಃ	....	೫೮
೨೮	,, ದುರ್ಯೋಧನವಧಾದಿ ಪಾಂಡವಸ್ವಪುರಪ್ರವೇಶಃ	....	೭೪
೨೯	,, ಸಮಸ್ತ ಧರ್ಮನಿರ್ಣಯಃ	....	೧೦೩
೩೦	,, ಅಶ್ವಮೇಧಿಕನಿರ್ಣಯಃ	....	೧೧೩
೩೧	,, ಧೃತರಾಷ್ಟ್ರ ಸ್ವರ್ಗಾರೋಹಣಃ	....	೧೩೩
೩೨	,, ಪಾಂಡವ ಸ್ವರ್ಗಾರೋಹಣಃ	....	೧೪೪
	ಈ ಗ್ರಂಥದಲ್ಲಿ ಪ್ರತಿಪಾದಿತ ಹಾಗೂ ನಿರ್ದೇತ ವಿಷಯಗಳ ಪುಟ-ಸಂಖ್ಯಾಸೂಚಿ	....	1

ಶ್ರೀ ಹಯಗ್ರೀವ ದೇವರು

ಭಕ್ತಿಂ ಶಕ್ತಿಂ ವಿರಕ್ತಿಂ ಚ ಭುಕ್ತಿಂ ಮುಕ್ತಿಂ ಚ ಯುಕ್ತಿದ ।
ಹರೇ ಮೇ ದೇಹಿ ದೈತ್ಯಾರೇ ಹರೇ ನರಹರೇ ಯಥಾ ॥

ಉಡುಪಿ ಶ್ರೀಕೃಷ್ಣ ದೇವರು

ಶ್ರೀಕೃಷ್ಣಬ್ರಹ್ಮರುದ್ರ ಗರುಡೇಂದ್ರನತಂ ಶರಣ್ಯಂ
ಸರ್ವಾಶುಭಪ್ರಶಮನಂ ಭುವನೈಕನಾಥಮ್ ।
ಸದ್ಪ್ರೋಪ್ಯಪೀಠ ಪುರಮಧ್ಯಗಮಿಂದಿರೇಶಂ
ಗೋವರ್ಧನೋದ್ಧರಣ ದಕ್ಷಮಹಂ ನತೋಽಸ್ಮಿ ॥

॥ ಶ್ರೀಮದ್ಧನುರ್ಮುದ್ಭೀಮಮುಧ್ವಾಂತರ್ಗತ ಶ್ರೀರಾಮಕೃಷ್ಣವೇದವ್ಯಾಸಾತ್ಮಕ
ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

ಭಾವಿಸಮೀರ ಶ್ರೀ ವಾದಿರಾಜತೀರ್ಥ ವಿರಚಿತ ಕನ್ನಡ

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ

ಸಂಪುಟ ೩

ಅಧ್ಯಾಯ ೨೪

ಉದ್ಯೋಗಪರ್ವನಿರ್ಣಯಃ

ಈ ಇಪ್ಪತ್ತನಾಲ್ಕನೇ ಅಧ್ಯಾಯದಲ್ಲಿ—ಪಾಂಡವರು ಸಭಿ ಮಾಡಿಕೊಂಡು ಕುಳಿಥಾರೆ. ದ್ರುಪದರಾಯ, ವಿರಾಟರಾಯ, ಬಲರಾಮ, ಶ್ರೀಕೃಷ್ಣ, ಯಾದವರಿಂದ ಯುಕ್ತರಾಗಿ ಸನುಸ್ತರೂ ಸಭಿಯಲ್ಲಿ ಕುಳಿಥಾರೆ. ಶ್ರೀಕೃಷ್ಣನ ಮುಖದಿಂದ ಏನು ಅಮೃತವಚನ ಬಂದೀತೆಂದು ಗಲಭಿ ಮಾಡದೇ ಸ್ವಾಮೀ ಮುಖಕಮಲ ನೋಡತ ಕುಳಿತಿಹೋರು. ಹರಿ, ಮೇಘಗಂಭೀರವಚನ ದ್ರುಪದರಾಯನ ಕೂಡ ಆಡಥಾನೆ. 'ಹೇ ದ್ರುಪದರಾಯ, ಪಾಂಡವರಿಗೆ ನೀನು ಮಾವನಾಗಬೇಕು. ಇವರ ರಾಜ್ಯ ದುರ್ಯೋಧನ ಅಪಲಾಪ ಮಾಡಿದ್ದಾನೆ. ಪಾಂಡವರ ರಾಜ, ನೀನು ಸಾಧಿಸಿಕೊಡು ನಾವು ನಿಬ್ಬಣಕ್ಕೆ ಬಂದವರು. ವಿರಾಟರಾಯ ಬೀಗನಿದ್ದಾನೆ. ದ್ರುಪದರಾಯ ಮಾವನಿದ್ದಾನೆ. ನಾ ಚಿಕ್ಕವ ನನಗೆ ತಿಳಿದಷ್ಟು ಹೇಳಥೀನಿ' ಎನಲಿಕ್ಕೆ, ದುರ್ಯೋಧನನ ಅಭಿಪ್ರಾಯ ತಿಳೋದರಗೋಸ್ಕರ, ದ್ರುಪದರಾಯ ತನ್ನ ಪುರೋಹಿತನ್ನ ಹಸ್ತಿನಾವತಿಗೆ ಕಳುಹಿಸಿಕೊಟ್ಟ.

ಪುರೋಹಿತ ಹೋಗಿ ಕೌರವರ ಮುಂದೆ ಭೀಮಾರ್ಜುನರ ಪರಾಕ್ರಮ ಬಹಳೇ ಹೇಳಿದ. 'ಧರ್ಮರಾಯನ ರಾಜ್ಯ, ಭೀಮಾರ್ಜುನರು ನಿನಗೆ ದಕ್ಕಗೊಡರು. ನಿನ್ನ ಕ್ಷೇಮ ಇಚ್ಛಿಸಬೇಕಾಗಿ ಪಾಂಡವರ ರಾಜ್ಯ ಶೀಘ್ರ ಕೊಡು. ವನವಾಸ ಮಾಡುವಾಗ, ಭೀಮಸೇನ ಕಿರ್ಮೀರನ್ನ ಕೊಂದಾನೆ. ತೀರ್ಥಕ್ಷೇತ್ರಗಳಲ್ಲಿ ರಾಕ್ಷಸರು ದ್ವಿಜರಿಗೆ ಉಪದ್ರವ ಕೊಡತ ಯಾತ್ರಿ ಮಾಡಗೊಡರು. ತೀರ್ಥ ಆಶ್ರಯಿಸಿಕೊಂಡು ವಿಘ್ನ ಆಚರಿಸತಿಹೋರು. ಅಂಥಾ ಮೂರು ಕೋಟಿ ಮುಂದಿ ರಾಕ್ಷಸರನ್ನ ಕೊಂದಾನೆ. ಮತ್ತು ಮಣಿಮಂತಾದಿ ದೈತ್ಯರನ್ನ ಸಂಹಾರ ಮಾಡ್ಯಾನೆ. ಋಷಿಗಳು ಬ್ರಾಹ್ಮಣರುಗಳು ಸನ್ಯಾಸಿಗಳು ಇವರಿಂದ ಕೂಡಿ ಧರ್ಮರಾಯ ತೀರ್ಥಯಾತ್ರಿ ಮಾಡ್ಯಾನೆ. ಧರ್ಮರಾಯ ತಪಸ್ಸಾಮರ್ಥಿಯಿಂದ

ಶುದ್ಧನಾಗ್ಯಾನೆ. ಇನ್ನು ನಿಮ್ಮ ಮ್ಯಾಲೆ ಕೋಪಕ್ಕೆ ಬಾಹೋದಿಲ್ಲ. ಭೀಮಸೇನನ ಬಲ ಮೊದಲಿಗೇ ಕಂಡಿದೀ. ಹಿಡಿಂಬ, ಬಕಾಸುರ, ಜರಾಸಂಧ ಮೊದಲಾದ ಪ್ರಬಲರನ್ನೆಲ್ಲ ಕೊಂದಾನೆ. ಜಟಾಸುರನೆಂಬ ರಾಕ್ಷಸ ಪಾರ್ವತೀ ವರಬಲದಿಂದ ಅವಧ್ಯನಾಗಿದ್ದ. ಬ್ರಾಹ್ಮಣರೂಪದಲ್ಲಿ ಬಂದು ಧರ್ಮರಾಯನಲ್ಲಿ ಭೋಜನ ಬೇಡತಿಹ. ಭೀಮಸೇನ ಜಟಾಸುರನೆಂತ ತಿಳಿದಿಹ. ಬ್ರಾಹ್ಮಣವೇಷ ಧರಿಸಿ ಬಂದಾನೆಂದು ಕೊಂದಿದ್ದಿಲ್ಲ. ಅರ್ಜುನ ಐದು ವರುಷ ವಿದ್ಯಾ ಕಲೀಲಿಕ್ಕೆ ಸ್ವರ್ಗಕ್ಕೆ ಹೋಗಿದ್ದ. ಭೀಮಸೇನ ಒಂದು ದಿವಸ ಮೃಗಬ್ಯಾಟಿಗೆ ಹೋಗಿರಲಾಗಿ, ಜಟಾಸುರ ತನ್ನ ನಿಜರೂಪ ಧರಿಸಿ, ದ್ರೌಪದೀ ನಕುಲ-ಸಹದೇವರನ್ನ ಹೊತ್ತುಕೊಂಡು ಹೋಗ ಥಾನೆ. ಮಾರ್ಗದಲ್ಲಿ ಭೀಮಸೇನನ್ನ ಕಂಡು, ಭಯಗ್ರಸ್ಥನಾಗಿ ದ್ರೌಪದೀ ನಕುಲ-ಸಹದೇವರನ್ನ ಬಿಟ್ಟುಕೊಟ್ಟು ಓಡಿಹೋಗಲಿಕ್ಕೆ, ಭೀಮಸೇನ ಜಟಾಸುರನ್ನ ಹಿಡದು, ತನ್ನ ಕಾಲಪೆಟ್ಟಿನಿಂದ ಒರಸಿಬಿಷ್ಟನು. ಹೇ ದುರ್ಯೋಧನ! ಭೀಮಸೇನನ ಅದ್ಭುತ ಪರಾಕ್ರಮಗಳು ಬಹಳಿ ಅವೆ. ಅರ್ಜುನನ ಪರಾಕ್ರಮ ಹೇಳಥೀನಿ ಕೇಳು. ನಿವಾತಕವಚರು, ಪೌಲೋಮ-ಕಾಲಕೇಯರು, ಸುರರಾಜಗೆ ಮಣಿದು ಬರತಿದ್ದಿಲ್ಲ. ದೇವೇಂದ್ರ ಅರ್ಜುನನ್ನ ಗುರುದಕ್ಷಿಣಿ ಬೇಡಿ, ನಿವಾತಕವಚರು ತನಗೆ ಮಣಿದು ಬಾಹೋದಿಲ್ಲ. ಅವರನ್ನ ಅರ್ಜುನ ಸಂಹರಿಸಲು ತನಗೆ ಗುರುದಕ್ಷಿಣಿ ಮುಟ್ಟತದೆಂದು ಹೇಳಲಾಗಿ, ಅರ್ಜುನ ನಿವಾತಕವಚರು, ಪೌಲೋಮ-ಕಾಲಕೇಯರನ್ನ ಕೊಂದು, ಇಂದ್ರನ, ತುಷ್ಟಿಬಡಿಸಿದ. ಭೀಮಾರ್ಜುನರು ಬಹಳ ಪ್ರಬಲರಿದ್ದಾರೆ. ಅಂಥಾವರು ಧರ್ಮರಾಯನ ಆಜ್ಞಾಧಾರರಾಗಿದ್ದಾರೆ. ಪಾಂಡವರಿಗೆ ಶ್ರೀಕೃಷ್ಣ ಸಹಾಯ ನಿದ್ದಾನೆ. ಅಲ್ಲಿ ಬ್ರಹ್ಮ ರುದ್ರ ಇಂದ್ರಾದಿ ದೇವತಿಗಳಿದ್ದಾರೆಂದು ತಿಳಿ. ಸಕಲ ಚೇತನಾಚೇತನ ಜಗತ್ತು ಸ್ವಾಮೀ ಅಧೀನ ಅಂಥಾ ಶ್ರೀಕೃಷ್ಣನ ಕೈಯಿಂದ ಧರ್ಮರಾಯ ಲಾಲಿಸಿಕೋಥಾನೆ. ಭೀಮಾರ್ಜುನರು ಬಹಳ ಪರಾಕ್ರಮ ಉಳ್ಳವರು. ಹೇ ಧೃತರಾಷ್ಟ್ರ, ನಿನ್ನ ಮಕ್ಕಳಿಗೆ 'ಹೇಳಿ ಪಾಂಡವರಿಗೆ ರಾಜ್ಯ ಕೊಡಿಸು' ಎಂದು ದ್ರುಪದರಾಯನ ಪುರೋಹಿತ ಅನೇಕ ಪ್ರಕಾರ ಹೇಳಿದರೂ ಲೆಕ್ಕಿಸಲಿಲ್ಲ. ಪುರೋಹಿತ ತನ್ನ ಯಜಮಾನನ ಸಮೀಪಕ್ಕೆ ಉಪಪ್ಲಾವ್ಯಕ್ಕೆ ಬಂದನು. ದುರ್ಯೋಧನ ರಾಜ್ಯ ಕೊಡೋಹಾಂಗೆ ಇಲ್ಲೆಂದು ಹೇಳಿದನು.

ದುರ್ಯೋಧನಾದಿಗಳ ಅಭಿಪ್ರಾಯ ತಿಳದು, ತಾನು ದ್ವಾರಾವತಿಗೆ ಹೋಗುವುದಾಗಿ, ಶ್ರೀಕೃಷ್ಣ ಧರ್ಮರಾಯನ ಅಪ್ಪಣೆ ಕೊಂಡು, ಸಮುಸ್ತರ ಕೈಯ ಪೂಜಿಗೊಂಡು ದ್ವಾರಾವತಿಗೆ ಹೋದಮ್ಯಾಲೆ, ಮರುದಿವಸ ವಾರ್ತಿಗಳ ತರಸ್ತಿಹ ಹರಿ ದ್ವಾರಾವತಿಗೆ ಹೋದಮ್ಯಾಲೆ, ಸಹಾಯ ಬೇಡಿಕೊಂಡೇನೆಂದು ಹಸ್ತಿನಾವತಿಯಿಂದ ದುರ್ಯೋಧನ ತೆರಳಿದನು. ಅದೇ ದಿವಸ ಅದೇ ಕ್ಷಣದಲ್ಲಿ ಅರ್ಜುನ, ದ್ವಾರಾವತಿಗೆ ಉಪಪ್ಲಾವ್ಯದಿಂದ ಹೋದನು. ವೇಗದಿಂದ ದುರ್ಯೋಧನ

ದ್ವಾರಾವತಿಗೆ ಮುಂದಾಗಿ ಹೋದನು. ಸ್ವಾಮಿ ಯೋಗನಿದ್ರಿಯಲ್ಲಿ ಮುಲಗಿಕೊಂಡಾನೆ. ದುರ್ಯೋಧನ ತಾನು ಕುರುಕುಲದ ಅರಸು ರಾಜಾಧಿರಾಜ, ಗೋಪಾಲನ ಕಾಲದೆಸಿಯಲ್ಲಿ ನಿಂದರಬಾರದು ಎಂದು, ಸ್ವಾಮೀ ಶಿರೋಭಾಗದಲ್ಲಿ ಕುಳಿತನು ತನಗೆ ನಿದ್ರಿ ಇಲ್ಲದಿದ್ದರೂ ಸ್ವಾಮಿ, ಗಾಢನಿದ್ರಿಯೋಪಾದಿ ತೋರಿಸಲೋಸುಗ ಮಲಗಿಕೊಂಡಾನೆ. ದುರ್ಯೋಧನನ ತರುವಾಯ ಅರ್ಜುನ ಬಂದನು. ಸ್ವಾಮಿ ಯೋಗನಿದ್ರಿಯಲ್ಲಿದ್ದಾನೆಂದು ಬಹಳ ನಮ್ರಭಾವದಿಂದ, ಎರಡೂ ಕೈ ಮುಗಿದುಕೊಂಡು, ತಲಿ ಬಗ್ಗಿಸಿಕೊಂಡು ಸ್ವಾಮೀ ಪಾದಾಂಬುಜ ಸಮೀಪದಲ್ಲಿ ನಿಂಥಾನೆ. ಹರಿ ಕಪಟನಾಟಕ, ಎಚ್ಚೆತ್ತವನೋಪಾದಿ ತೋರಿಸಿ, ಸ್ವಾಮಿ ವಿಶ್ವೇಶ್ವರ, ವಿಶ್ವಾಧಾರ, ವಿಶ್ವಚಕ್ಷು 'ಅರ್ಜುನ! ದಾವಾಗ ಬಂದಿ!' ಎಂದು ಕೇಳಲು, ದುರ್ಯೋಧನ 'ಅರ್ಜುನನಕಿಂತ ನಾ ಮುಂಚೆ ಬಂದೀನಿ' ಎಂತ ಮಾತಾಡಿದನು. 'ನೀನೂ ಬಂದ್ಯಾ! ಒಳಿತಾಯಿತು. ಉಭಯತರೂ ಏನುಕಾರಣ ಬಂದಿದ್ದೀರಿ?' ಎಂದು ಸ್ವಾಮಿ, ತಾ ಸರ್ವಜ್ಞ ಶಿಖಾಮಣಿ ಬಲ್ಲರ್ತೂ ಸರಿಯೆ, ಅರಿಯದವನೋಪಾದಿ ಕೇಳಲು, ಸಹಾಯ ಬೇಡಲು ಬಂದದ್ದಾಗಿ ಉಭಯತರೂ ಹೇಳಿಕೊಂಡರು. 'ದುರ್ಯೋಧನ ಮೊದಲು ಬಂದರೂ ಸರಿಯೇ, ಅರ್ಜುನನ್ನ ಮೊದಲು ಕಂಡೀನಿ. ನೀವಿಬ್ಬರೂ ಬಂದದ್ದು ಅಪೂರ್ವ, ಆಶ್ಚರ್ಯ ಆಯಿತು. ನಿಮ್ಮ ಉಭಯತರಿಗೆ ಸಮ ಮಾಡಿಕೊಟ್ಟೀನು. ನಾನು ಒಬ್ಬನೆ ನಿರಾಯುಧನಾಗಿ ಬಂದೇನು, ಇದೊಂದು ಪಾಲು. ನೆನ್ನ ಮಕ್ಕಳು ನಾರಾಯಣನಾಮಕರು ಹತ್ತುಲಕ್ಷ ಮುಂದಿ ಇದ್ದಾರೆ. ಯುದ್ಧದಲ್ಲಿ ಬಹಳ ಚತುರರು. ಹತ್ತುಲಕ್ಷ ಮಕ್ಕಳು, ಕಾಲಾಳು ಒಂದು ಪಾಲು. ಹೀಂಗೆ ಎರಡು ಪಾಲು ಮಾಡಿದ್ದೀನಿ. ದಾವ ಪಾಲು ಬೇಕು ತೆಗೆದುಕೊಂಡು ಹೋಗರಿ' ಎಂದಲ್ಲಿ, ದುರ್ಯೋಧನ ವಿಚಾರಕ್ಕೆ ಬಿದ್ದ. ಸ್ವಾಮಿಗೆ ಅರ್ಜುನ ಅಂದ, 'ಸ್ವಾಮಿ ನೀನು ನಿರಾಯುಧನಾಗಿ ನಮ್ಮ ಕಡಿಗೆ ಬರಬೇಕು' ಎನಲಿಕ್ಕೆ, ದುರ್ಯೋಧನಗೆ ಬಹಳ ಹರ್ಷವಾಯಿತು. ಒಬ್ಬ ಕೃಷ್ಣ ನಿರಾಯುಧನ್ನ ಕೊಂಡು ಏನು ಮಾಡಬೇಕು. ಹತ್ತುಲಕ್ಷ ಮಕ್ಕಳು ವೀರಪರಾಕ್ರಮರು ತನ್ನ ಕಾರ್ಯ ಸಾಧಿಸಿಕೊಡಬೇಕಾಗಿ ಅವರು ಪರಾಕ್ರಮ ತೋರಿಸ್ಯಾರೆಂದು ಸಂತೋಷ ಉಳ್ಳವನಾಗಿ, ಹತ್ತುಲಕ್ಷ ಮಕ್ಕಳ ಇಸಗೊಂಡು, ಬಲರಾಮನ ಸಮೀಪಕ್ಕೆ ಬಂದ. ಸ್ವಾಮಿ ಬ್ರಹ್ಮಾದಿ ಜಗತ್ತಿಗೆ ಅರಸು. ಹತ್ತುಲಕ್ಷ ಮಕ್ಕಳು ಸ್ವಾಮೀ ಸಮ ಬಾರರು. ಸಮುದಂತೆ ಜಗತ್ತಿಗೆ ವಿಡಂಬನಾರ್ಥ ತೋರಿಸಿದನಲ್ಲದೆ, ಸ್ವಾಮೀ ಸಮ ಹಿಂದೆ ಹೋದ ಜಗತ್ತು; ಮುಂದೆ ಬಾಹೋ ಜಗತ್ತು, ಈಗ ಇಹೋ ಜಗತ್ತು, ದಾವದೂ ಸಮ ಬಾರದು.

ದುರ್ಯೋಧನ ಬಲರಾಮನ ಸಮೀಪಕ್ಕೆ ಬಂದು, ತನಗೆ ಸಹಾಯವಾಗ ಬೇಕೆಂದು ಹೇಳಿಕೊಂಡನು. ಬಲರಾಮನ ಮುಮತಿ ದುರ್ಯೋಧನನ ವ್ಯಾಲೆ

ಇಹೋದು. ಆದರೂ ತನಗೆ ಕೇಶವನ ಅಂಜಿಕೆ ಬಹಳ ಇಹೋದು. ಉಪಪ್ಲಾವ್ಯದಲ್ಲಿ ಆದಂಥ ವರ್ತಮಾನ ದುರ್ಯೋಧನಗೆ ಹೇಳಿದ. "ಇಲ್ಲಿ ಪ್ರಸಂಗ ಬಂದಿದ್ದವು. ಅವರ ಮಾತಿಗೆ ನಾನು ಉತ್ತರ ನಡಸಿದೆ. ದುರ್ಯೋಧನನ ಒಳ್ಳಹೊಕ್ಕು ಕಾರ್ಯ ಸಾಧಿಸಿಕೋಬೇಕು. ಸ್ವಾಮಿತ್ವ ಮಾಡಿದರೆ ರಾಜ್ಯ ಕೊಡೋಹಾಂಗೆ ಇಲ್ಲ. ಈ ರೀತಿ ಮಾತನಾಡಿದರೆ ಸಾತ್ಯಕಿ ನನಗೆ ನಿಂದಿಸಿದ. 'ಒಂದು ವೃಕ್ಷಕ್ಕೆ ಎರಡು ಪೆಂಟೆ ಇರತವೆ. ಒಂದು ಫಲಯುಕ್ತವಾಗತದೆ. ಒಂದು ಫಲರಹಿತವಾಗತದೆ. ವಸುದೇವನ ಹೊಟ್ಟೇಲಿ ಇಬ್ಬರೂ ಹುಟ್ಟೀರಿ. ಕೃಷ್ಣನ ಸಾಮರ್ಥಿ ನಿನಗಿಲ್ಲ. ವಯೋವೃದ್ಧನಾಗಿ ಬುದ್ಧಿ ಇಲ್ಲದಿದ್ದರೆ ಏನು ಮಾಡಬೇಕು! ದುರ್ಯೋಧನ ಒಳಿತಿಗೆ ತಕ್ಕವನಲ್ಲ. ಸವಾಧಾನಕ್ಕೆ ತಕ್ಕವನಲ್ಲ. ಗಾರ್ದಪಕ್ಕೆ ದೊಣ್ಣೀ ಪೆಟ್ಟೇಲಿ ಹೊಡದರೆ ಮಾರ್ಗಕ್ಕೆ ಬರತದೆ. ದುರ್ಯೋಧನ ಗಾರ್ದಪ ಸ್ವಭಾವದವ. ಪಾಂಡವರು ಅಕಳ ಸ್ವಭಾವದವರು.' ಈ ರೀತಿ ಅನೇಕ ಪ್ರಕಾರ, ಸಾತ್ಯಕಿ ನಿಂದಿಸಲಿಕ್ಕೆ ಕೇಶವ ಸುಮ್ಮಗಿದ್ದ. ನನ್ನ ಮಾತನ್ನೆಲ್ಲ ಹಾರಿಸಿಬಿಟ್ಟ. ಸಾತ್ಯಕಿ ಸಭಿಯೊಳಗೆ ಅಪ್ರತಿಷ್ಠಿ ಮಾಡಿದ. ನಾ ದಾರ ಕಡಿಗೂ ಸಹಾಯವಾಗಿ ಬಾಹೋಹಾಂಗೆ ಇಲ್ಲ. ತೀರ್ಥಯಾತ್ರಿಗೆ ಹೋಗಥೀನಿ. ನಿನಗೆ ಬಹಳ ನಿಂದಿಸಿದರು ಅವರ ಮಾತುಗಳು ನನಗೆ ಬಹಳ ದುಃಖಿಬಡಸತವೆ. ನಾ ನಿನಗೆ ಸಹಾಯವಾಗಿ ಬಾಹೋಹಾಂಗೆ ಇಲ್ಲ" ಎಂದು ಎನಲು, ಅಲ್ಲಿಂದ ಕೃತವರ್ಮನ ಸವೀಪಕ್ಕೆ ಹೋಗಿ ಸಹಾಯ ಬೇಡಲು, ಅವನಿಂದ ಒಂದು ಅಕ್ಷೋಹಿಣಿ ಸೇನಿ ಕೊಂಡು ಹಸ್ತಿನಾವತಿಗೆ ಹೋದನು.

ಹೀಂಗೆ ನಾನಾದೇಶದ ರಾಯರು ತಮ್ಮ ತಮ್ಮ ಬಲಗೊಂಡು ದುರ್ಯೋಧನಗೆ ಸಹಾಯವಾಗಿ ಬಂದರು. ಹೀಂಗೆ ದುರ್ಯೋಧನಗೆ ಹನ್ನೊಂದು ಅಕ್ಷೋಹಿಣಿ ಸೈನ್ಯ ಮಿಳಿತವಾಯಿತು. ಏಳು ಅಕ್ಷೋಹಿಣಿ ಸೈನ್ಯ ಪಾಂಡವರ ಕಡಿಗೆ ಕೂಡಿತು. ದಾವದಾವ ರಾಯರಿದ್ದರೆಂದರೆ—ಧರ್ಮರಾಯನ ಮೈದುನ ದೃಷ್ಟಕೇತುರಾಯ, ಜರಾಸಂಧನ ಮಗ ಸಹದೇವ, ಕಾಶೀರಾಯ, ಕುಂತೀಭೋಜರಾಯ, ಪುರಜಿತರಾಯ, ಹೀಂಗೆ ದೇಶದೇಶದ ರಾಯರು ದೇವಾಂಶರು, ಪಾಂಡವರ ಪಕ್ಷಪಾತಿಯರು. ಇನ್ನು ದುರ್ಯೋಧನನ ಕಡಿಯವರು—ಜಯತ್ಸೇನ, ಕ್ಷೇಮದೂರ್ತ, ಅಂಬಷ್ಠ, ಶ್ರುತಾಯುಷ, ಅಚ್ಯುತಾಯುಷ, ಸೌಂಧವ, ಅಲಂಬುಷ, ಯುಧಾಮನ್ಯು, ನರಕಾಸುರನ ಮಗ ಭಗದತ್ತ, ಬಾಹ್ಲೀಕರಾಯ, ಭೂರಿಶ್ರವ, ಇವರ ಹೊರ್ತು ಭೀಷ್ಮ, ದ್ರೋಣ, ಕೃಪಾಚಾರ್ಯ, ಅಶ್ವತ್ಥಾಮ ಹೀಂಗೆ ಪರಾಕ್ರಮಿಗಳು ಪಾಂಡವರಲ್ಲಿ ಮನಸ್ಸು ಇಟ್ಟರು. ಮೂಲಪುರುಷ ಧೃತರಾಷ್ಟ್ರ ಒದುಕಿದ್ದಾನೆ. ಕಾರಣ ಪಾಂಡವರ ಪಕ್ಷವಾಗಬಾರದೆಂದು ದುರ್ಯೋಧನನ ಬಳಿಗೆ ಬಂದು ಭೀಷ್ಮ ದ್ರೋಣಾದಿಗಳು ಇದ್ದರು. ಪಾಂಡ್ಯದೇಶದ ಅರಸು ವೀರಸೇನರಾಯನು ಬಂದಿಹ. ಹಾಂಗೆ ಶಲ್ಯ ಪಾಂಡವರ ಕಡಿಗೆ ಅಕ್ಷೋಹಿಣಿ ಸೇನಿ ಕೊಂಡು ಹೋಗಲಾಗಿ,

ದುರ್ಯೋಧನನು ಮಾರ್ಗದಲ್ಲಿ ಸ್ಥಳಸ್ಥಳಗಳಲ್ಲಿ ಸಭೆ ಮಾಡಿ ಶಲ್ಯಗೆ ಮೋಹಿಸಿದನು. ಇದಿಷ್ಟೂ ತನಗೆ ಧರ್ಮರಾಯ ಮಾಡಿದ್ದಾನೆಂದು ತಿಳದು, ಅವರ ಮನೋಭೀಷ್ಟ ಕೊಟ್ಟೀನೆಂದನು. ದುರ್ಯೋಧನನ ಭೃತ್ಯರು ಈ ವಾರ್ತೆ ಕೊಂಡುಹೋದರು. ದುರ್ಯೋಧನ ಶಲ್ಯನ ಸಮೀಪಕ್ಕೆ ಬಂದನು. 'ಮಾವ ನನಗೆ ವರವು ಕೊಟ್ಟೇ-ನೆಂದಿದ್ದಿ, ನನಗೆ ಸಹಾಯ ವಾಗ್ಬೇಕು'• ಎಂದು ಬೇಡಿಕೊಂಡನು. ಮಾತಿಗೆ ಅಂತರ ಬೀಳಬಾರದೆಂದು, ತನ್ನ ಯಶಸ್ಸು ಕೀರ್ತಿ ಹೆಚ್ಚಿಸಿಕೋಬೇಕಾಗಿ 'ಅವಶ್ಯ ನಿನಗೆ ಸಹಾಯವಾಗಿ ಬಂದೇನು. ಪಾಂಡವರ ಭೆಟ್ಟಿಲ್ಲದೆ ಬಹಳ ದಿವಸವಾಗೇದೆ. ಭೆಟ್ಟೀ ಕೊಂಡು ಬರಥೀನಿ' ಎಂದು, ದುರ್ಯೋಧನಗೆ ಅಭಯ ಕೊಟ್ಟು, ಉಪ-ಪ್ಲಾವ್ಯಕ್ಕೆ ಬಂದನು. ಪಾಂಡವರ ಭೆಟ್ಟಿ ಕೊಂಡನು. ಪಾಂಡವರಿಗೆ ಸಹಾಯ ಬರಥೇನೆಂದು ಹೇಳದ್ದ, ಅದರಿಂದ ಮಾರ್ಗದಲ್ಲಿ ಆದಂಥ ವರ್ತಮಾನ ಹೇಳಿ, ದುರ್ಯೋಧನಗೆ ಸಹಾಯ ಹೋಗಥೀನೆಂದು ಹೇಳಲು, ಪಾಂಡವರು ಹೇಳಿದರು. 'ಕರ್ಣಗೆ ಸ್ಪರ್ಧಿ ಹುಟ್ಟಿಸಿ ನಮ್ಮ ಕಾರ್ಯ ಮಾಡು. ಹಂಸ ಕಾಗಿ ಸದೃಶ ಕೊಟ್ಟು, ಘಳಿಘಳಿಗ್ಯೆ ಕರ್ಣನ ತೇಜೋಭಂಗ ಮಾಡು' ಎಂದು ಶಲ್ಯಗೆ ಹೇಳಿ-ಕೊಂಡರು.

ಧೃತರಾಷ್ಟ್ರ ಪಾಂಡವರ ಸಮೀಪಕ್ಕೆ ಸಂಜಯನ ಕಳುಹಿದ್ದಾನೆ. 'ನೀವು ಪಾಂಡವರು ಧರ್ಮಿಷ್ಟರು. ತೀರ್ಥಯಾತ್ರಿ ಮಾಡಿ ಶುದ್ಧರಾಗಿ ಬಂದಿದ್ದೀರಿ. ಪಾಪದಲ್ಲಿ ಮಹಾ ಹೇಸಿಕೆಯುಳ್ಳವರು. ಜ್ಞಾತಿಗಳ ವಧ ಮಹಾಪಾಪ. ಶುಭ್ರ ವಸ್ತ್ರಕ್ಕೆ ಕಲ್ಮಶ ಹತ್ತಬಾರದು. ಕಂಬಳಿಗೆ ದೋಷ ಹೊಂದಿದರೆ ದೋಷವಿಲ್ಲ. ದುರ್ಯೋಧನ ರಾಜ್ಯ ಕೊಡುವುದಿಲ್ಲ. ರಾಜ್ಯದ ನಿಮಿತ್ತ ಕುಲಕ್ಷಯವಾದೀತು. ಕುಲಕ್ಷಯದಲ್ಲಿ ಬುದ್ಧಿ ಮಾಡಬಾರದು.' ಹೀಂಗೆ ಸಂಜಯ, ಧೃತರಾಷ್ಟ್ರನ ಆಜ್ಞೆ ಪಾಂಡವರಿಗೆ ಹೇಳಲಿಕ್ಕೆ, ವನವಾಸದಲ್ಲಿ ಧರ್ಮರಾಯ, ಭೀಮಸೇನನ ಸಂಗಡ ಹಠವಾದದಲ್ಲಿ ಪ್ರತಿಜ್ಞೆ ಮಾಡ್ಯಾನೆ, ತನ್ನ ವಚನ ಹ್ಯಾಂಗೆ ಹುಸಿ ಮಾಡಥಾನೆ. ಆದಕಾರಣ ಸಂಜಯನ ಕೂಡ ಧರ್ಮರಾಯ ಮಾತನಾಡಥಾನೆ. 'ಹೇ ಸಂಜಯ, ನಮ್ಮ ರಾಜ್ಯ ಕಪಟತನದಿಂದ ಅಪಲಾಪ ಮಾಡ್ಯಾನೆ. ಹನ್ನೆರಡು ವರುಷ ವನವಾಸ, ಒಂದು ವರುಷ ಅಜ್ಞಾತವಾಸ, ಸಂಖ್ಯೆ ಮಾಡಿದಪ್ಪಂದೆ ಮುಗಿಸಿ ಬಂದೀವಿ. ನಮ್ಮ ರಾಜ್ಯ ನೆನುಗೆ ಕೊಟ್ಟರಂತೂ ಒಳಿತವೆ. ಕೊಡದ ಪಕ್ಷನೇ ವೈರಿಗಳ ಕೊಂದರೆ, ಜ್ಞಾತಿವಧದೋಷ ನಮಗೆ ಬಾಹೋದಿಲ್ಲ. ಪಾಪಿಗಳ ಕೊಂದದ್ದರಿಂದ ಧರ್ಮಕ್ಕೆ ಸಾಧನವಾಗತದೆ.' ಹೀಂಗೆ ಧರ್ಮರಾಯ ಆಡಲಿಕ್ಕೆ, 'ರಾಯ ಬಲು ಚಲೋ ಮಾತು ಪ್ರಮಾಣಪೂರ್ವಕ ಆಡಿದಿ. ಭಲಾ ಯುಧಿಷ್ಠಿರ!' ಎಂದು, ಶ್ರೀಕೃಷ್ಣ ಧರ್ಮರಾಯಗೆ ಪೊಗಳಹೊಕ್ಕ. ಸಂಜಯ ಸಮಸ್ತರಿಗೆ ನಮಸ್ಕಾರ ಮಾಡಿ, 'ಹೋಗಬರಥೀನಿ' ಎಂದು ವಿಪ್ಪಣಿ ಕೊಂಡು ಹಸ್ತಿನಾವತಿಗೆ ತೆರಳಿದನು.

ರಥ ಓಡಸ್ತಲೇ, ಅಸ್ತಮಾನಕ್ಕೆ ಸಂಜಯ ಬಂದನೆಂದು ಧೃತರಾಷ್ಟ್ರರಾಯಗೆ ವರ್ತಮಾನ ಹೋಯಿತು. ಒಳಗೆ ಕರೆಕಳುಹಿ ಕೇಳಲಾಗಿ 'ರಾಯ ಅನರ್ಥಕ್ಕೆ ಮೂಲಕಾರಣ ನೀನೇನೆ. ಕುರುಕುಲಕ್ಕೆ ವಿನಾಶಕಾರಣ ಪ್ರಾಪ್ತವಾಯಿತು. ವಿಸ್ತಾರ ಹೇಳಬೇಕಾದರೆ ಬಹಳ ದಣಿದು ಬಂದೀನಿ. ಗಂಟಲೊಳಗೆ ಧೂಳಿ ತುಂಬೇದೆ. ನಾಳೆ ಸಭಿ ನೆರಸು. ಸವಿಸ್ತರೂ ಕ್ಷೇಳೋಹಾಂಗೆ ಹೇಳೀನಂತೆ. ನಾ ಹೋಗಿ ಬರಥೀನಿ.' ಹೀಂಗೆ ಧೃತರಾಷ್ಟ್ರನ ವಿಪ್ಪಣಿ ಕೊಂಡು ಸಂಜಯ ಮನಿಗೆ ಹೋದನು.

ಸಂಜಯ ಮನಿಗೆ ಹೋದಮ್ಯಾಲೆ, ಸಂಜಯ ಏನು ಹೇಳ್ಯಾನು ಎಂದು ಅಂಧನೃಪಗೆ ನಿದ್ರಿ ಬಾರದು. ವಿದುರನ ಕರಸಿ ನೀತಿ ಹೇಳಿನಲಿಕ್ಕೆ ವಿದುರ ಹೇಳಿದನು. 'ರಾಯಾ, ಪಾಂಡವರನ್ನ ಕರೆಸಿ ರಾಜ್ಯ ಕೊಡೋದು ಪರಮಧರ್ಮ. ಅದರಿಂದ ಇಹಲೋಕದಲ್ಲಿ ನಿನುಗೆ ಕೀರ್ತಿ ಬರತದೆ. ಪರಲೋಕದಲ್ಲಿ ಪುಣ್ಯವದೆ. ಪಾಂಡವರಿಗೆ ರಾಜ್ಯ ಕೊಡದ ಪಕ್ಷವೇ, ನಿನ್ನ ನೂರು ಮಕ್ಕಳೂ ಶೀಘ್ರವಾಗಿ ಯಮುದೇವರ ಮನಿ ಕಂಡಾರು. ರಾಜ್ಯ ಕೊಟ್ಟದ್ದರಿಂದ ಸಾಕ್ಷಾತ್ ಪರದೇವತಿ ಕೃಷ್ಣನಾಜ್ಞಿ ನಡೆಸಿಧಾಂಗಾಗತದೆ. ಕೊಡದೇ ಹೋದರೆ ದೇವರಾಜ್ಞಿ ಮೀರಿ-ಧಾಂಗಾಗತದೆ, ನಿನಗೇ ದೋಷ ಬರತದೆ. ಆದರಿಂದ ನಿನಗೆ ನರಕಾದ್ಯನರ್ಥ ವಾಗತದೆ. ರಾಯ ಸಕಲರ ಕ್ಷೇಮ ಇಚ್ಛೈಸಿ ರಾಜ್ಯ ಕೊಡು.' ಹೀಂಗಂತ ಹೇಳಲಿಕ್ಕೆ, ವಿದುರ ಹೇಳೋ ಮಾತು ಗತಲೋಚನನ ಮನಸ್ಸಿಗೆ ಬಾರದು. ಗಾಂಧಾರಿಗೆ, ಪುತ್ರರಿಗೆ ಉಪದೇಶ ಕೊಡೋವಲ್ಲಿ ಇಚ್ಛೆ ಇದ್ದಿಲ್ಲ. ಧೃತರಾಷ್ಟ್ರ ವಿದುರನ ಕೂಡ ಮಾತನಾಡಥಾನೆ. 'ಹೇ ವಿದುರ ಜ್ಞಾನದಿಂದ ದೋಷ ಪರಿಹರಿಸಿ ಕೊಂಡೇನು. ಜ್ಞಾನಮಾರ್ಗ ಹೇಳು' ಎಂದು ವಿದುರನ್ನ ಕೇಳಿದನು. ವಿದುರ ಹೇಳಥಾನೆ. 'ರಾಯ, ದೋಷ ಮಾಡಿ ಜ್ಞಾನದಿಂದ ದೋಷ ಪರಿಹರಿಸಲಿಕ್ಕೆ ವಶವಲ್ಲ. ಅಧರ್ಮದಲ್ಲಿ ಬುದ್ಧಿ ಎರಗಿಸದೆ, ಧರ್ಮದಲ್ಲಿ ಬುದ್ಧಿ ಉಳ್ಳವನಾಗಿ ಜ್ಞಾನ ಸಂಪಾದಿಸಬೇಕು. ನಾರಾಯಣನ ಸ್ವರೂಪ ಹೇಳೆಂತಿ. ನಾ ಶೂದ್ರ-ಸ್ತ್ರೀಯಲ್ಲಿ ಹುಟ್ಟಿದ್ದೀನಿ. ನನಗೆ ಯೋಗ್ಯತಿಲ್ಲ. ಬ್ರಹ್ಮದೇವರ ಪುತ್ರ ಸನತ್ಸು-ಜಾತನ್ನ ಸ್ಮರಿಸು' ಎಂದನು. ರಾಯ ಸ್ಮರಿಸಲಿಕ್ಕೆ ಆದೇ ರಾತ್ರೀಲಿ ಸನತ್ಸುಜಾತ ಬಂದು ಧೃತರಾಷ್ಟ್ರಗೆ ದಿವ್ಯಜ್ಞಾನ ಹೇಳಿದನು. 'ನಾರಾಯಣ ಸರ್ವೋತ್ತಮ. ಬ್ರಹ್ಮಾದಿ ದೇವತಿಗಳು ತದ್ದಾಸರು. ರಮಾಬ್ರಹ್ಮಾದಿ ಜಗತ್ತು ಸ್ವಾಮೀ ಅಧೀನ. ಇಂಥಾ ದಿವ್ಯಜ್ಞಾನ ಕಪಟ ಗೂಢದ್ವೇಷಿಗೆ ತಿಳಿದೂನು, ದಿವ್ಯಗತಿ ಆಗದು. ಪಾಂಡವರು ದೇವಾಂಶರಿದ್ದಾರೆ. ಅವರಿಗೆ ಸಾಕ್ಷಾತ್ ಸರ್ವೋತ್ತಮದೇವತಿ ಶ್ರೀಕೃಷ್ಣ ಸಹಾಯನಿದ್ದಾನೆ. ನಿನ್ನ ಕುರುಕುಲಕ್ಕೆ ಕ್ಷೇಮ ಇಚ್ಛೈಸಿ, ಪಾಂಡವರನ್ನ ಕರಸಿ ಶೀಘ್ರ ರಾಜ್ಯ ಕೊಡು.' ಹೀಂಗೆ ಸನತ್ಸುಜಾತ ಹೇಳಿ ಹೋದಮ್ಯಾಲೆ

ಬೆಳಗಾಯಿತು. ಸಂಜಯ ಕೌರವರ ಸಭಿಗೆ ಬಂದು ಧರ್ಮರಾಯನ ಅಭಿಪ್ರಾಯ ಹೇಳಿದ. 'ಧೃತರಾಷ್ಟ್ರರಾಯ, ಸಮಸ್ತರ ಕ್ಷೇಮ ಇಚ್ಛೈಸಿ ಪಾಂಡವರಿಗೆ ರಾಜ್ಯ ಕೊಟ್ಟದ್ದರಿಂದ ನಿನ್ನ ಕುರುಕುಲಕ್ಕೆ ಕ್ಷೇಮವದೆ.' ಈ ಪ್ರಕಾರ ಹೇಳಿ ಭಗವದ್ಧ್ಯಾನ ಹೇಳಥಾನೆ.

ಧರ್ಮರಾಯ ಶ್ರೀಕೃಷ್ಣನ್ನ ಯುಕ್ತಿ ಕೇಳಿದ್ದಾನೆ. 'ಸಂಜಯ ಹಸ್ತಿನಾವತಿಗೆ ಹೋಗಿ ಧೃತರಾಷ್ಟ್ರರಾಯನ ಅಭಿಪ್ರಾಯ ತಿಳದು ತಾನೂ ಬರಲಿಲ್ಲ, ವಿದುರನ್ನಾದರೂ ಕಳುಹಲಿಲ್ಲ. ಸ್ವಾಮಿ ನಿನ್ನ ಆಜ್ಞೆ ಆಗಬೇಕು. ದಂಡಯಾತ್ರೆ ಮಾಡಿಕೊಂಡು ಹಸ್ತಿನಾವತಿಗೆ ಹೋಗಿ, ಪಾಪಿಗಳ ಕೊಂದು, ಪಾಪಿಗಳಿಗೆ ಸಹಕಾರಿ ದಾರಿದ್ದಾರೆ ಅವರನ್ನೆಲ್ಲ ಕೊಂದು, ರಾಜ್ಯ ಸಂಪಾದಿಸಬೇಕು.' ಹೀಂಗೆ ಧರ್ಮರಾಯ ಅನಲಿಕ್ಕೆ, 'ಈಗಲೇ ದಂಡಯಾತ್ರೆ ಕೊಂಡು ಹೋಗಬಾರದು. ನಿವುಗೆ ದುರ್ನಾಮ ಬರಥಾಂಗೆ, ನಾನು ಸಂಧಾನಕ್ಕೆ ಹೋಗಥೀನಿ. ಋಷಿಗಳಿಂದ ಯುಕ್ತನಾಗಿ, ಪಾಂಡವರಿಗೆ ರಾಜ್ಯ ಕೊಡೆಂದು ಬಹಳ ನೀತಿಗಳ ಹೇಳೇನು. ನನ್ನ ಮಾತು ಕೇಳದ ಪಕ್ಷವೇ, ಇನ್ನು ಪಾಂಡವರ ಮ್ಯಾಲೆ ಮಾತಿಲ್ಲೆಂದು, ಅವರ ಮ್ಯಾಲೆ ಮಾತು ಹೊರಿಸಿಬಿಡುವೆ. ನಾ ಹಸ್ತಿನಾವತಿಗೆ ಹೋಗಿ ನಿನ್ನ ದೂತತ್ವ ಮಾಡಿಬಂದೇನು.' ಹೀಂಗಂತ ಧರ್ಮರಾಯನ ಆಜ್ಞೆ ಕೊಂಡು, ಹರಿ ಹಸ್ತಿನಾವತಿಗೆ ತೆರಳುವಾಗ, ಭೀಮಸೇನ ತಾ ಬಲಿಷ್ಠನಾದರೂ, "ಸ್ವಾಮಿ ಸಂಧಾನ ಮಾಡಿಕೊಂಡು ಬಾ. ಜ್ಞಾತಿಕ್ಷಯ ಒಳ್ಳೇದಲ್ಲ, ಯುದ್ಧ ಆಗೋಹಾಂಗೆ ಮಾಡಬ್ಯಾಡ. 'ಪಾಂಡವರ ದೆಸಿಯಿಂದ ಕುಲಕ್ಷಯ' ಈ ದುರ್ನಾಮ ನವುಗೆ ಬರಬ್ಯಾಡ. ದುರ್ಯೋಧನನ ಭೃತ್ಯರಾಗಿದ್ದೇವಲ್ಲದೆ, ರಾಜ್ಯ ನವುಗೆ ಹತ್ತದು. ರಾಜ್ಯದ್ದೆಸಿಯಿಂದ ಗುರುಹಿರೇರ ದ್ರೋಹ, ಜ್ಞಾತಿಕ್ಷಯ ಮಾಡಲಾರೆವು." ಹೀಂಗೆ ಭೀಮಸೇನ ಅನಲಿಕ್ಕೆ ಶ್ರೀಕೃಷ್ಣ ಮಾತನಾಡಥಾನೆ. 'ಎಲೈ ಭೀಮಸೇನ ನಿನ್ನ ಬಲ ಎತ್ತಹೋಯಿತು! ನಿರ್ಬಲ ಅಧೈರ್ಯ ಮಾತನಾಡತಿದ್ದಿ. ನಿನ್ನ ಪೌರುಷ ಪರಾಕ್ರಮ ತ್ರಿಲೋಕದಲ್ಲಿ ಪಸರಿಸೇದ. ಹೀಂಗ್ಯಾಕೆ ಧೈರ್ಯಭ್ರಷ್ಟನಾದಿ!' ಎಂದನು. ಸ್ವಾಮಿ ಸರ್ವಜ್ಞಶಿಖಾಮಣಿ, ಭೀಮಸೇನನ ಅಭಿಪ್ರಾಯ ತಾ ಬಲ್ಲರೂ ಸರಿಯೆ, ಭೀಮಸೇನಗೆ ದುರ್ಯೋಧನಾದಿಗಳ ಮ್ಯಾಲೆ, ಕೋಪೋದ್ರೇಕ ಮಾಡಬೇಕಾಗಿ, ಭೀಮಸೇನನ್ನ ನಿಬರ್ಲನೆಂದು ನಿಂದಸ್ತಾನೆ. ಭೀಮಸೇನ ಸ್ವಾಮೀ ಅಭಿಪ್ರಾಯ ತಿಳದು, ತನ್ನ ಬಲ ಸ್ವಾಮೀ ಮುಂದೆ ಹೇಳಥಾನೆ. 'ಸ್ವಾಮಿ ನಿನ್ನನುಗ್ರಹದಿಂದ ಈ ಬ್ರಹ್ಮಾಂಡ ಎರಡು ಹೋಳು ಮಾಡಿ ತಾಳ ಬಾರಿಸೇನು.' ಹೀಂಗೆ ಭೀಮಸೇನ ತನ್ನ ಪರಾಕ್ರಮ ಹೇಳಿಕೊಳ್ಳಲಿಕ್ಕೆ 'ಭಲಾ ಭೀಮಸೇನ! ಇದರಕಿಂತಲೂ ಹೆಚ್ಚೆಂದು ತಿಳಿದೇವೆ, ಥೋಡೆ ಬಲ ಹೇಳಿಕೊಂಡಿದಿ. ದುರ್ಯೋಧನಾದಿಗಳ ಅಪ್ರಯಾಸದಿಂದ ಕೊಂದು ಬಿಷ್ಟುವಿ. ಪಾಪಿಗಳ ಕೊಂದರೆ ದೋಷ ಇಲ್ಲ' ಎಂದು ಶ್ರೀಕೃಷ್ಣ ಹೇಳಿದನು.

ಇಷ್ಟೇನುಕಾರಣ ಮಾಡಬೇಕಿತ್ತೆಂದರೆ, ಭೀಮಸೇನ ಉಗ್ರನಾದರೂ ಸಂಧಾನ ವಿಷಯದಲ್ಲಿ ಸಮಾಧಾನಕ್ಕೆ ಒಂದಿದ್ದ. ದೇವರ ಚಿತ್ತಾನುಸಾರ ಇರುವಾತ. ಲೋಕಸಮ್ಮತಿಯಿಂದ ಭೀವ ಸೇನ ದಯಾಳುತನದಿಂದ ಪ್ರಾತನಾಡಿದ. ಶ್ರೀಕೃಷ್ಣ ಅರ್ಜುನನ್ನ ಕೇಳಿದ್ದಾನೆ. 'ನಿನ್ನ ಅಭಿಪ್ರಾಯವೇನು? ಹಸ್ತಿನಾವತಿಗೆ ಹೋಗಿ ಸಂಧಾನ ಮಾಡಲ್ಯಾ, ಯುದ್ಧ ಆರಂಭಿಸಲ್ಯಾ ಹೇಳು' ಎಂದಲ್ಲಿ, 'ಸ್ವಾಮಿ ರಾಜ್ಯನಿಮಿತ್ತ ಕುಲಕ್ಷಯವಾಗತದೆ. ಆವರ ಪಕ್ಷಪಾತಿ ಭೀಷ್ಮ ದ್ರೋಣಾದಿಗಳ ಕೊಲ್ಲಬೇಕಾಗತದೆ. ಸಂಧಾನ ಮಾಡಿಕೊಂಡು ಬಾ' ಎನಲಿಕ್ಕೆ ಹಸ್ತಿನಾವತೀಲಿ ಸಂಧಾನ ಯತ್ನ ಮಾಡೇನು ಎಂದನು. ನಕುಲ, ಕೃಷ್ಣ ಮನುಷ್ಯನೆಂದು ತಿಳದು, 'ಸ್ವಾಮಿ ಹಸ್ತಿನಾವತೀಲಿ ಮಹಾ ಪಾಪಿಷ್ಟರಿದ್ದಾರೆ. ಜಾಗ್ರತಿ ಇರಲಿ' ಎಂದು ಹೇಳಿದ. ಸಹದೇವ ಸ್ವಾಮಿ ಮುಂದೆ ಶೂರತ್ವ ಮಾತು 'ಯುದ್ಧ ಆಗೋ ಹಾಂಗೆ ಮಾಡಿಕೊಂಡು ಬಾ' ಎನಲು, ಸಹದೇವನ ಮಾತಿಗೆ ಬಲಿಕೀ ಕೊಟ್ಟ. ಸಾತ್ಯಕಿ ಶ್ರೀಕೃಷ್ಣಗೆ 'ಸ್ವಾಮಿ ಯುದ್ಧ ಆರಂಭಿಸಿಕೊಂಡು ಬರಬೇಕು' ಅಂಥಾನೆ. ದ್ರೌಪದೀ ಮಾತನಾಡಥಾಳೆ. 'ಹೇ ಸ್ವಾಮಿ, ಖಳರ ನಿಗ್ರಹಗೋಸ್ಕರ ನಿನ್ನ ಅವತಾರವಾಗೇದೆ. ಪಾಪಿಗಳ ಕೊಲ್ಲೋದು ದೊಡ್ಡ ಧರ್ಮ. ಅರ್ಜುನ ಸಂಧಾನ ಮಾಡೆಂದು ಹೇಳಥಾನೆ. ಸ್ವಾಮಿ ಆತನ ಮಾತ ಕೇಳಬ್ಯಾಡ. ಯುದ್ಧ ಆಗೋ ಹಾಂಗೆ ಮಾಡಿಕೊಂಡು ಬಾ' ಎನಲು, ಶ್ರೀಕೃಷ್ಣ ಸಾತ್ಯಕಿಯಿಂದ ಯುಕ್ತನಾಗಿ ರಥ ಏರಿಕೊಂಡು, ಪಾಂಡವರಿಂದ ಬಹು ದೂರ ಕಳಿಸಿಕೊಂಡು, ಹಸ್ತಿನಾವತಿಗೆ ತೆರಳುವಾಗ, ಸ್ನೇಹಿತರ ಕೈಯ ಬಹುದೂರ ಕಳಿಸಿಕೊಳ್ಳಬಾರದೆಂದು ಪಾಂಡವರಿಗೆ ನಿಂದರಿಸಿ, ಸ್ವಾಮಿ ಹಸ್ತಿನಾವತಿಗೆ ಹೋದನು. ಮಾರ್ಗದಲ್ಲಿ ಋಷಿಗಳು ಕಂಡು ಅತ್ಯಂತ ಪೂಜಿ ಮಾಡಿದ್ದಾರೆ. 'ನಾನು ಹಸ್ತಿನಾವತಿಗೆ ಹೋಗಿ ಪಾಂಡವರಿಗೆ ರಾಜ್ಯ ಕೊಡೋಹಾಂಗೆ ಮಾಡಿಕೊಂಡು ಬರಥೀನಿ' ಎಂದು ಹೇಳತ, ಬ್ರಹ್ಮಾದಿಗಳ ಕೈಯ ಪೂಜಿಗೊಳ್ಳತ, ಸ್ತೋತ್ರ ಮಾಡಿಸಿಕೊಳ್ಳತ ರಥದಲ್ಲಿ -- ದುರ್ಯೋಧನನ ಪೂಜಿ ಲೆಕ್ಕಿಸದೇ—ಮಹಾವೇಗದಿಂದ ಹಸ್ತಿನಾವತಿಗೆ ಹೋದನು.

ಸ್ವಾಮಿ ಜಗದೇಕಸುಂದರ ಬರಥಾನೆಂದು ಭೀಷ್ಮ ದ್ರೋಣಾದಿಗಳು, ಸ್ವಾಮಿ ಎದುರುಗೊಂಡು, ರಾಜಮಾರ್ಗದಿಂದ ಕರದೊಯ್ಯುವಾಗ, ಸಮಸ್ತ ಪ್ರಾಣಿಗಳೂ ಸ್ವಾಮೀ ಮುಖಜೆಲ್ವಿಕೆ ನೋಡಿ, ತಮ್ಮ ಕಣ್ಣುಗಳಿಂದ ಮುಖಕಮಲ ಪಾನ ಮಾಡತಿಹೋರು. ಆಂತಃಕರಣದಲ್ಲಿ ಅಪ್ಪಿಕೊಳ್ಳತಿಹೋರು ಸ್ವಾಮಿ ರಾಜ-ಮಾರ್ಗದಲ್ಲಿ ಹೊಕ್ಕನು. ಧೃತರಾಷ್ಟ್ರ ಕುರುಡನಾದರೂ ಮಾರ್ಗದಲ್ಲಿ ಭೀಷ್ಮನ್ನ ಮುಂದುಮಾಡಿಕೊಂಡುಹೋಗಿ, ಸ್ವಾಮಿಯನ್ನ ಕರತಂದು, ಸುವರ್ಣಸಿಂಹಾಸನ ದಲ್ಲಿ ಕುಳ್ಳಿರಿಸಿ, ಸ್ವಾಮಿಗೆ ಅರ್ಘ್ಯಾದಿ ಪೂಜಿ ಮಾಡಿದನು. ದುರ್ಯೋಧನ ತನ್ನ ಮನಿಗೆ ಕರಕೊಂಡು ಹೋಗಿ ಅನೇಕ ಪೂಜಾಸಾಧನದ್ರವ್ಯಗಳ ತಂದನು.

ಇನ್ನು ಪೂಜಿ ಮಾಡಬೇಕು, ಯಾದವಪತಿ ದುರ್ಯೋಧನಾದಿಗಳ ಕೈಯ ಪೂಜಿ ಕೊಳ್ಳದೆ ವಿದುರನ ಮನಿಗೆ ತೆರಳಿದನು. ದುರ್ಯೋಧನ ತನ್ನ ಕೈಯ ಪೂಜಿ ಕೊಳ್ಳಬೇಕೆಂದು ಬೇಡಿಕೊಳ್ಳಲು, ಪಾಂಡವರು ತನ್ನ ಭಕ್ತರು, ದುರ್ಯೋಧನಾದಿಗಳು ಅವರ ದ್ವೇಷಿಗಳಾದ್ದರಿಂದ ಪೂಜಿಗೊಳ್ಳಬಾರದೆಂದು, ಸ್ವಾಮಿ ಅಷ್ಟೂ ಅನಾದರ ಮಾಡಿ ವಿದುರನ ಮನಿಗೆ ಹೋಗುವಾಗ, ಭೀಷ್ಮದ್ರೋಣಾದಿಗಳು ಸ್ವಾಮೀನ ತಮ್ಮ ಮನಿಗೆ ಬರಬೇಕು, ತಮ್ಮ ಕೈಯ ಪೂಜಿ ಕೊಳ್ಳಬೇಕು ಎಂದು ಕೇಳತಿರಲಾಗಿ, 'ನೀವಷ್ಟೂರೂ ಹೀನರೇ ಇದ್ದೀರಿ. ಹೀನನ ಬಳಿವಿಡಿದು ನನ್ನ ಭಕ್ತಳು ದ್ರೌಪದೀನ್ನ ಅವಮಾನ ಮಾಡಿಸಿದ್ದೀರಿ. ದ್ರೌಪದೀ ವಸ್ತ್ರಾಪಹರಣ ಕಾಲದಲ್ಲಿ ದಾರೂ ನಿವಾರಿಸಲಿಲ್ಲ. ಆದ್ದರಿಂದ ನಿಮ್ಮ ಕೈಯ ಪೂಜಿ ಕೊಳ್ಳಬಾರದು. ಈ ಪಟ್ಟಣದೊಳಗೆ ಶುದ್ಧಾಂತಃಕರಣ ಉಳ್ಳವ ವಿದುರ ಒಬ್ಬನಿದ್ದಾನೆ' ಎಂದು ಅತನ ಮನಿಗೆ ಜಗತ್ಪತಿ ಹೋಗಲಿಕ್ಕೆ, ವಿದುರ ಮಹಾಭಕ್ತಿರಸದಿಂದ, ಸ್ವಾಮಿ ತನ್ನ ಮನಿಗ ಬಂದನೆಂದು ಕುಣಿದಾಡಹೊಕ್ಕ. ಬಹಳ ಸಂಭ್ರಮದಿಂದ ಅರ್ಘ್ಯಾದಿ ಪೂಜಿ ಮಾಡಿ, ಸ್ವಾಮೀ ಪಾದೋದಕ ಶಿರಸ್ಸಿನಲ್ಲಿ ಧರಿಸಿ, ಬಹಳ ಕೃತಾರ್ಥನಾದ. 'ಸ್ವಾಮಿ, ನನ್ನ ದೇಹೇಂದ್ರಿಯಗಳೆಲ್ಲವೂ ಸಕಲವೂ ನಿನ್ನದು. ನಾನು ನಿನ್ನ ದಾಸನು' ಎಂದು ಸ್ವಾಮೀ ಸ್ತೋತ್ರ ಮಾಡಿ, ಮಹಾಪ್ರೀತಿಯಿಂದ ಮೃಷ್ಟಾನ್ನ, ಷಡ್ರಸೋಪೇತವಾದಂಥ ಚತುರ್ವಿಧಾನ್ನ ಸ್ವಾಮಿಗೆ ಸಮರ್ಪಣೆ ಮಾಡಿದನು. ಸ್ವಾಮಿ ವಿದುರನ ಮನೀಲಿ ಭೋಜನ ಮಾಡಿದನು.

ಬೆಳಗಾಯಿತು. ಕೃಷ್ಣ ಏನುಕಾರಣ ಬಂದಾನೆ, ಅಭಿಪ್ರಾಯ ತಿಳಿಯಬೇಕೆಂದು ದಿವ್ಯ ಸಭಿ ಮಾಡಿ, ಧೃತರಾಷ್ಟ್ರ ಶ್ರೀಕೃಷ್ಣನ್ನ ಕರೆಕಳುಹಿದ. ದೇವರ ವಚನ ಕಲಿಕಲ್ಮಶದೋಷ ಪರಿಹರಿಸ್ತದೆ. ಅಂಥಾ ಜಗನ್ನಾಥನ ಅಮೃತವಚನ ಕೇಳಬೇಕಾಗಿ ಸಮಸ್ತರೂ ಆತುರರಾಗಿಹೋರು. ಸಮಸ್ತರೂ ಕೇಳಿದರು. ಅದೇನೆಂದರೆ, 'ಎಲೈ ವೈಚಿತ್ರವೀರ್ಯ, ನಿನ್ನ ಮಗ, ನಿರ್ದೋಷಗುಣ ಉಳ್ಳಂಥ ಧರ್ಮರಾಯಗೆ ಸಾಮ್ರಾಜ್ಯ ಕೊಡು. ಅದರಿಂದ ನಿನ್ನ ಕುಲ ಅಭಿವೃದ್ಧಿ ಆದೀತು. ಹೀಂಗೆ ತಿಳದು ಶೀಘ್ರ ಕರಸಿ, ಧರ್ಮರಾಯಗೆ ರಾಜ್ಯ ಇತ್ತದ್ದರಿಂದ ಧನಾರ್ಥ ಕಾಮಗಳು ಉಂಟು. ನಿನ್ನ ಕೀರ್ತಿ ಲೋಕತ್ರಯದಲ್ಲೆ ಪಸರಿಸಿ, ನನ್ನ ಅನುಗ್ರಹಕ್ಕೆ ಪಾತ್ರನಾದಿ. ನನ್ನ ಮಾತು ಕೇಳದೆ ದುರ್ಯೋಧನನಲ್ಲಿ ರಾಜ್ಯ ಇಟ್ಟದ್ದರಿಂದ, ನಿನ್ನ ಕುಲಕ್ಷಯವಾದೀತು. ಇಹಪರಲೋಕಗಳಲ್ಲಿ ಅಪಕೀರ್ತಿಗೆ ಪಾತ್ರನಾದಿ, ನನ್ನ ಅನುಗ್ರಹಕ್ಕೆ ಪಾತ್ರನಾಗದೆ, 'ನರಕಾದ್ಯನರ್ಥ ಅನುಭವಿಸಬೇಕಾದೀತು.' ಹೀಂಗೆಂದು ಶ್ರೀಕೃಷ್ಣ ಮಾತನಾಡಲಿಕ್ಕೆ, 'ಸ್ವಾಮಿ ನಾನು ಕುರುಡ. ನನಗೆ ಹೇಳೋದೆ ದುರ್ಯೋಧನಗೆ ಹೇಳಬೇಕು.' ಹೀಂಗಂತ ಅನಲಿಕ್ಕೆ ಸ್ವಾಮಿ ದುರ್ಯೋಧನನ ಕೂಡ ಮಾತನಾಡೆನಲಿಕ್ಕೆ, ಸ್ವಾಮಿ ದುರ್ಯೋಧನನ

ಮಾರಿ ನೋಡಿ, 'ದುರ್ಯೋಧನ ನೀ ಚಿಕ್ಕವ. ದೀರ್ಘಜ್ಞಾನ ನಿನಗಿಲ್ಲ. ಧರ್ಮರಾಯಗೆ ರಾಜ್ಯ ಕೊಡು.' ಹೀಂಗಂತ ದುರ್ಯೋಧನಗೆ ಅನಲಿಕ್ಕೆ, ಪರಶುರಾಮ, ನಾರದ, ಕಣ್ವಾದಿ ಋಷಿಗಳು ಎಲ್ಲ 'ಅಪ್ಪಾ ದುರ್ಯೋಧನ, ಶ್ರೀಕೃಷ್ಣನ ಮಾತು ಹಿತಕರವಾದ್ದು. ಸ್ವಾಮೀ ವಚನ ವೀರಬ್ಯಾಡ.' ಈ ಪ್ರಕಾರ ತಾಯಿತಂದೇರು, ಋಷಿಗಳು ಭೀಷ್ಮಾದಿಗಳು ಪಾಂಡವರಿಗೆ ರಾಜ್ಯ ಕೊಡೆಂದು ಹೇಳಥಾರೆಂದು, ಹುಬ್ಬು ಗಂಟಿಕ್ಕಿಕೊಂಡು, ದುರ್ಯೋಧನ ಸಭಿ ಬಿಟ್ಟು ಹೋಗಲಿಕ್ಕೆ, ಅತನ ಬಳಿವಿಡಿದು ತಮ್ಮಂದಿರು, ಶಕುನಿ, ಕರ್ಣ ಮೊದ ಲಾದವರೆಲ್ಲ ಸಭಿ ಬಿಟ್ಟುಹೋದರು. ಅವರೆಲ್ಲ ದೇವತಿಗಳಿಗೆ ವಿರೋಧ ಉಳ್ಳವರು. ಕರ್ಣನಲ್ಲಿ ಸೂರ್ಯನ ಆವೇಶ ಹೋಗಿ, ದೇವತಿಗಳ ವಿರುದ್ಧವೇ ಎಂದರೆ, ಕರ್ಣ ಸ್ವಭಾವದಿಂದ ದುಷ್ಟನಲ್ಲ. ಸ್ವರೂಪದಲ್ಲಿ ಒಳ್ಳೆಯವನಾದರೂ ಹೀನಗುಣ ಬರತಿಹೋದು. ಹೀನ ಮಾತು ಆಡತಿಹೋನು. ವಿಕರ್ಣ ಪರಮ ಪಾಪಿ. ಡಂಭಾರ್ಥವಾಗಿ, ಜನರು ತನಗೆ ಧರ್ಮಿಷ್ಠನೆನಬೇಕಾಗಿ ಒಳ್ಳೇ ಮಾತನಾಡಿದರೂ, ವಿಕರ್ಣ ಹೀನ, ದುಷ್ಟಸ್ವಭಾವ ಉಳ್ಳವ. ಹೀನಗೆ ಹೀನಗತಿ, ಕರ್ಣಗೆ ಶುಭಗತಿ.

ಕೃಷ್ಣ ಸಂಧಾನಕ್ಕೆ ಬಂದಾನೆ. ಕೃಷ್ಣನ್ನ ಕಟ್ಟಿಹಾಕಿದರೆ ಪಾಂಡವರ ಬಲವೆಲ್ಲ ಮುರೀತದೆಂದು ಕರ್ಣ, ಶಕುನಿ, ದುರ್ಯೋಧನಾದಿಗಳು ದುರಾಲೋಚನಿ ಮಾಡಲಿಕ್ಕೆ, ಸಾತ್ಯಕಿ ಕೇಳಿ ದುರ್ಯೋಧನನ್ನ ಒಳಗೆ ಬಿಡಬ್ಯಾಡೆಂದು ಕೃತ. ವರ್ಮನ್ನ ಅಕ್ಷೌಹಿಣಿ ಸೇನಾಬಲದಿಂದ, ರಾಜಮಂದಿರದ ದ್ವಾರದಲ್ಲಿಟ್ಟನು. ಈ ವಾರ್ತಿ ಸಾತ್ಯಕಿ ಕೊಂಡುಬಂದು ಮುಕುಂದಗೆ ಮುಟ್ಟಿಸಿ, ಶೀಘ್ರ ನಡಿಯ-ಬೇಕೆಂದು ಹೇಳಲು, ಸ್ವಾಮಿ ಜಗದಂತರ್ಯಾಮಿ, ಸಕಲರ ಚೇಷ್ಟ ತಾ ಬಲ್ಲ. ಆದರೂ ಸಾತ್ಯಕಿ ಮುಖದಿಂದ ತನಗೆ ನಿರ್ಬಂಧನ ಮಾಡೋ ವಾರ್ತಿ ಕೇಳಿ, ಧೃತರಾಷ್ಟ್ರನ್ನ ಕುರಿತು ಮಾತನಾಡಥಾನೆ. 'ರಾಯ ನಿನ್ನ ಮಕ್ಕಳು ನನ್ನ ಕಟ್ಟಿ-ಹಾಕಬೇಕೆಂದು ಮಾಡಿದ್ದಾರಂತೆ. ನನಗೆ ಹ್ಯಾಂಗೆ ನಿಬಂಧನಿ ಮಾಡಥಾರೆ ಮಾಡಲಿ!' ಎಂದು, ದಿವ್ಯಚಕ್ಷು ಕೊಟ್ಟ. ತನ್ನ ವಿಶ್ವರೂಪ ತೋರಿಸಿದ. ನಾಲ್ಕೂ ಕಡೀಲಿ ಕೃಷ್ಣನ ಮಾಯವೆ! ದಾರನ್ನಂತ ಕಟ್ಟಿಹಾಕ್ಯಾರು! ದುರ್ಯೋಧನ ಕೃಷ್ಣನ ಅನಂತರೂಪಗಳ ಕಂಡು, ಪ್ರಳಯಕಾಲದಲ್ಲಿ ಅನಂತ ಸೂರ್ಯರು ಒಂದೇ ಕಡೀಲಿ ಒದಗಿದರೆ ಹ್ಯಾಂಗೆ ಕಾಂತಿ, ಹಾಂಗೆ ಕಾಣಸ್ತದೆ. ಹಾಂಗೆ ಶ್ರೀಕೃಷ್ಣನ ರೂಪಗಳು ಕಂಡು, ಸ್ವಾಮೀ ತೇಜಸ್ಸು ನೋಡಲಾರದೆ, ಪ್ರಕಾಶದಿಂದ ಸಮಸ್ತರೂ ಕಣ್ಣು ಮುಚ್ಚಿಕೊಂಡರು. ಧೃತರಾಷ್ಟ್ರ ಸ್ವಾಮೀನ್ನ ಬೇಡಿಕೊಂಡ. 'ಸ್ವಾಮಿ ನನಗೆ ದಿವ್ಯಚಕ್ಷು ಕೊಟ್ಟ. ಅದ್ಭುತರೂಪ ನೋಡಲಾರೆ ದೇವ! ಈ ದಿವ್ಯ ಚಕ್ಷು ನಾ ಒಲ್ಲೆ. ಮೊದಲಪ್ಪಂದೆ ನಾ ಕುರುಡನಾದೇನು.' ಹೀಂಗೆನಲು, ಸ್ವಾಮಿ ಮೊದಲಿ ನೋಪಾದಿ, ದಿವ್ಯ ಚಕ್ಷು ಇಲ್ಲಥಾಂಗೆ ಮಾಡಿದನು. ಸ್ವಾಮಿ ದ್ವಿಭುಜ ಉಳ್ಳವ-

ನಾದ. ಅನಂತಶಕ್ತಿ ಉಳ್ಳಾತ, ಪಾಂಡವರ ಸಂಧಾನ ತಿದ್ದಲಾರನೆ! ಪಾಪಿಗಳಿಗೆ ತಮುಸ್ಸಿಗೆ ಕೆಡಹಾಕಬೇಕಾಗೇದೆ. ಅದಕಾರಣ ವಚನದಲ್ಲಿ ಬಾಹ್ಯ ಬುದ್ಧಿ ಹೇಳೋ ನಲ್ಲದೆ, ಆಂತರಂಗದಲ್ಲಿ ಪ್ರೇರಿಸತಿದ್ದಿಲ್ಲ. ತನ್ನ ಮಾತು ದುರ್ಯೋಧನಾದಿಗಳು ಕೇಳಲಿಲ್ಲೆಂದು ಮಾತು ಹೊರಿಸಿ, ಹೊರಹೊರಟು, ರಾಜಮಂದಿರದಿಂದ ವಿದುರನ ಮನಿಗೆ ಕುಂತೀಸವೀಪಕ್ಕೆ ಬಂದನು. 'ತಿತ್ತೀ, ನಾ ಹೋಗಥೀನಿ. ನಿನ್ನ ಮುಕ್ಕಳಿಗೆ ಏನು ಬುದ್ಧಿ ಹೇಳತಿದ್ದಿ ಹೇಳಿಕಳುಹು. ದುರ್ಯೋಧನ ನನ್ನ ಮಾತು ಕೇಳೋ ಹಾಂಗೆ ಇಲ್ಲ. ರಾಜ್ಯ ಕೊಡೋಹಾಂಗಿಲ್ಲ' ಹೀಂಗೆ ಶ್ರೀಕೃಷ್ಣ ಕುಂತೀಗೆ ಅನಲಿಕ್ಕೆ, ವಿದುಳಾಖ್ಯಾನ ಹೇಳಿ, 'ಪಾಂಡವರಿಗೆ ಹೇಳು, ಕ್ಷತ್ರಿಯರಾಗಿ ಹುಟ್ಟಿದ್ದಕ್ಕೆ ಪರಾಕ್ರಮ ಮಾಡಿ ರಾಜ್ಯ ಸಂಪಾದಿಸರಿ.' ಹೀಂಗಂತ ತನ್ನ ಮುಕ್ಕಳಿಗೆ ಹೇಳಿಕಳುಹಿದಳು.

ಶ್ರೀಕೃಷ್ಣ ತನ್ನ ದಿವ್ಯ ರಥ ಏರಿಕೊಂಡು ಕರ್ಣಗೆ ಏಕಾಂತದಲ್ಲಿ ಹೇಳಿದ. 'ನೀನು ಕುಂತೀ ಮಗ. ಕನ್ಯಾವಸ್ಥೀಲಿ ಹುಟ್ಟಿದಿ. ಸರ್ವ ಸಾಮ್ರಾಜ್ಯ ನಿನಗೆ ಕೊಡಸ್ತೀನಿ. ಪಾಂಡವರ ಕಡಿಗೆ ಬಾ' ಎನಲಿಕ್ಕೆ, 'ದುರ್ಯೋಧನನ್ನ ಬಿಟ್ಟು ಮುಪ್ಪಿನಕಾಲದಲ್ಲಿ ಅಪಕೀರ್ತಿ ಹೊಂದಲಾರೆ. ಸಾವೋ ಕಾಲಕ್ಕೆ ದುರ್ನಾಮ ತಂದುಕೊಳ್ಳಲಾರೆ. ಬಹುಕಾಲ ಅವರ ಅನ್ನ ಉಂಡೀನಿ. ನಾ ರಾಜ್ಯ ಒಲ್ಲೆ' ಎಂದನು. ಕರ್ಣಗೆ ಆಂತರಂಗದಲ್ಲಿ ಪ್ರೇರಿಸಲಿಲ್ಲ. 'ದುರ್ಯೋಧನ ನನ್ನ ಭರವಸೀ ಮ್ಯಾಲೆ ಪಾಂಡವರ ಕೂಡ ವೈರಿತನ ಕಟ್ಯಾನೆ. ಕಡಿಗೆ ದುರ್ಯೋಧನನಿಂದ ಮಾನಿತನಾಗಿಹೀನಿ.' ಹೀಂಗೆನಲು ಅಶ್ವತ್ಥಾಮಗೆ ಹೇಳಿದ. 'ಪಾಂಡವರ ಕಡಿಗೆ ಬಾ. ಪಾಂಡವರು ನಿನ್ನ ಸಹಶ್ರುತರಿದ್ದಾರೆ. ಪಾಂಡವರ ಕಡಿಗೆ ಅಗು' ಎನಲಿಕ್ಕೆ, 'ನಮ್ಮ ತಂದಿ ದ್ರೋಣಾಚಾರ್ಯ ಇಹೋ ಪರಿಯಂತ ಪಾಂಡವರ ಕ್ಷೇಮ ಬಯಸೇನು. ಪಾಂಡವರು ನನ್ನ ತಂದೀನ್ನ ಕೊಂದ ಪಕ್ಷವೇ ನಾನು ಪಾಂಡವರ ಕೂಡ ಯುದ್ಧ ಮಾಡೇನು.' ಹೀಂಗೆಂದು ಅಶ್ವತ್ಥಾಮ ಮಾತನಾಡಿದವ್ಯಾಲೆ ಸ್ವಾಮಿ ಕಮಲೇಕ್ಷಣ ಹಸ್ತಿನಾವತಿಯಿಂದ ಉಪಪ್ಲಾವ್ಯನಗರಕ್ಕೆ ಬಂದನು.

ಕುಂತೀ ತನ್ನ ಮಕ್ಕಳಿಗೆ ಕ್ಷೇಮವಾಗಬೇಕೆಂದು ಕರ್ಣನ್ನ ಬೇಡಿಕೊಳ್ಳಲು ಬಂದಳು. ಕರ್ಣ ಭಾಗೀರಥೀ ಸ್ನಾನ ಮಾಡಿ ಸೂರ್ಯಾಭಿಮುಖನಾಗಿ ನಿಂತು ತಪಸ್ಸು ಮಾಡಥಾನೆ. ಹಿಂಭಾಗದಲ್ಲಿ ಕುಂತೀದೇವಿ ನಿಂತಳು. ಮಧ್ಯಾಹ್ನಕ್ಕೆ ಜಪ ಮುಗಿಯಿತು. ಅನಂತರ, 'ಹೇ ಕುಂತೀ ಇಲ್ಲಿಗೆ ಯಾಕೆ ಬಂದಿ?' ಎನಲು, 'ಎಲೋ ಅಪ್ಪಾ ಕರ್ಣ ನೀನು ನನ್ನ ಮಗನಾಗಬೇಕು. ಪಾಂಡವರು ನಿನ್ನ ತಮ್ಮಂದಿರು. ನನ್ನ ಮಕ್ಕಳನ್ನ ರಣರಂಗದಲ್ಲಿ ಕೊಲ್ಲಬ್ಯಾಡ' ಎಂದಳು. ತಾನು ಕುಂತೀ ಮಗನೆಂದು ಕೃಷ್ಣ ಹೇಳಿದ್ದಾನೆ, ಸತ್ಯವೆಂದು ಕರ್ಣ ಕುಂತೀ ಸಂಗಡ ಮಾತನಾಡಥಾನೆ. 'ನಿನಗೆ ಹ್ಯಾಂಗಾದರೂ ಐದು ಮಂದಿ ಮಕ್ಕಳು ಇರೋಹಾಂಗೆ

ಮಾಡೇನು. ನಿನ್ನ ಮಗ ಅರ್ಜುನ ಸತ್ತ ಪಕ್ಷವೇ, ನನ್ನ ಸಹವಾಗಿ ಐದು ಮಂದಿ ಮಕ್ಕಳು. ಅರ್ಜುನನ್ನ ಹೊರತು ನಾನು ದಾರನ್ನೂ ಕೊಲ್ಲೋಹಾಂಗೆ ಇಲ್ಲ.' ಹೀಂಗೆಂದು ಕುಂತಿಗೆ ಸಮಾಧಾನ ಮಾಡಿ ಕಳುಹಿಸಿಕೊಟ್ಟನು.

ಸ್ವಾಮಿ ಕಮಲೇಕ್ಷಣ ಉಪಪ್ಲಾವ್ಯನಗರಕ್ಕೆ ಬಂದು ಪಾಂಡವರಿಗೆ ಹಸ್ತಿನಾವತಿಯಲ್ಲಿ ಆದಂಥ ವರ್ತಮಾನ ವಿಸ್ತಾರ ಹೇಳಿ, 'ನನ್ನ ಮಾತು ದುರ್ಯೋಧನಾದಿಗಳು ಕೇಳೋಹಾಂಗೆ ಇಲ್ಲ. ರಾಜ್ಯ ಕೊಡೋಹಾಂಗೆ ಇಲ್ಲ. ಆಲಸ್ಯರಹಿತರಾಗಿ, ಶೀಘ್ರ ಕುರುಕ್ಷೇತ್ರಕ್ಕೆ ನಡಿಯಿರಿ' ಎಂದು ಶ್ರೀಕೃಷ್ಣನಾಜ್ಞೆವಾಗಲಿಕ್ಕೆ, ಪಾಂಡವರು ಏಳು ಅಕ್ಷೋಹಿಣಿ ಬಲದಿಂದ ಕುರುಕ್ಷೇತ್ರಕ್ಕೆ ಬಂದರು. ಜಯ ಉಳ್ಳಂಥ ಭೂಮಿಯಲ್ಲಿ ವಸ್ತ್ರಗೃಹಗಳ ಕಟ್ಟಿ ಇಳದರು. ಉಪಪ್ಲಾವ್ಯನಗರದಿಂದ ಪಾಂಡವರು ತೆರಳಲಿಕ್ಕೆ, ಹಸ್ತಿನಾವತಿಯಿಂದ ದುರ್ಯೋಧನ, ಹನ್ನೊಂದು ಅಕ್ಷೋಹಿಣಿ ಸೇನಾಬಲ ಕೊಂಡು ಯುದ್ಧಕ್ಕಾಗಿ ಕುರುಕ್ಷೇತ್ರಕ್ಕೆ ಬಂದನು, ಎಂಬಲ್ಲಿಗೆ ಶ್ರೀಮದಾಚಾರ್ಯರು ಹೇಳಿದ, ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಉದ್ಯೋಗಪರ್ವನಿರ್ಣಯಃ' ಎಂಬ ಇಪ್ಪತ್ತನಾಲ್ಕನೇ ಅಧ್ಯಾಯ ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೨೫

ಭೀಷ್ಮಪರ್ವಃ

ಈ ಇಪ್ಪತ್ತೈದನೇ ಅಧ್ಯಾಯದಲ್ಲಿ ಭೀಷ್ಮಪರ್ವ ಭಾರತಕಥ ಹೇಳಥಾರೆ. ಕುರುಕ್ಷೇತ್ರದಲ್ಲಿ ಕುರುಪಾಂಡವರು ಶುದ್ಧಾಂತ ಭೂಮಿಯಲ್ಲಿ ವಸ್ತ್ರಗೃಹಗಳ ಕಟ್ಟಿ, ಇತ್ತಂಡ ಸೇನಿ ಇಳಿಯಿತು. ಉಭಯಸೇನಿ ಸಮುದ್ರದೋಪಾದಿ ತೋರತಿಹೋದು. ಮಧ್ಯದಲ್ಲಿ ರಣಬೀದಿ. ಪಾಂಡವರಲ್ಲಿ ವ.ಂಬಿಗ ಭೀಮಸೇನ. ದುರ್ಯೋ.ದನಾದಿಗಳಲ್ಲಿ ಭೀಷ್ಮ ಮುಂಬಿಗ. ಹೀಂಗೆ ಚತುರಂಗಸೇನಿಯಿ:ಂದ ಇಳಿದದೆ. ಆ ವ್ಯಾಳ್ಯಾದಲ್ಲಿ ಯುದ್ಧ ಆರಂಭಿಸಬೇಕಾಗಿ ಅರ್ಜುನ ಕೃಷ್ಣಗೆ ಅಂತಾನೆ. 'ಎಲ್ಯೆ ಸ್ವಾಮಿ, ಕೌರವಸೇನಾಬಲಾನ ದೃಷ್ಟೀಲಿ ನೋಡಥೀನಿ. ಎರಡೂ ವಾಹಿನಿ ನಡುವೆ ನನ್ನ ರಥ ನಿಂದರಿಸು' ಎನಲಿಕ್ಕೆ, ಜನ್ಮಜರಾದಿ ದೋಷಗಳ ಮರ್ದಿಸುವಂಥ ಜನಾರ್ದನ ಅರ್ಜುನನ್ನ ಕೊಂಡುಹೋಗಿ, ಉಭಯಸೇನಿಗಳ ಮಧ್ಯದಲ್ಲಿ ನಿಂದರಿಸಲು, ದುರ್ಯೋಧನಾದಿಗಳ ಕಡಿಯಲ್ಲಿ ಕುರುವೃದ್ಧಪಿತಾಮಹರನ್ನು ಕಂಡನು. ದ್ರೋಣಾಚಾರ್ಯ, ಗುರುಪುತ್ರ ಅಶ್ವತ್ಥಾಮ, ಕೃಪಾಚಾರ್ಯ ಇವರೇ ಆದ ಬ್ರಾಹ್ಮಣೋತ್ತಮರನ್ನ ಕಂಡನು. ಭೂರಿಶ್ರವ, ಶಲ್ಯ ಮೊದಲಾದ ತಮ್ಮವರನ್ನ ಕಂಡನು. ಹಾಂಗೆ ಸೋದರತ್ತಿ ಮಕ್ಕಳು, ಸೋದರಮಾವ, ಅವರವರ ತಮ್ಮಂದಿರು, ಪುತ್ರರು, ಗೆಳಯರು ಸಮಸ್ತರನ್ನ ಕಂಡನು. 'ಇಷ್ಟೂ ಮುಂದಿ ಕೊಂದು ರಾಜ್ಯ ಸಂಪಾದಿಸಬೇಕಲ್ಲ! ರಾಜ್ಯ ನಮಗೆ ಹತ್ತದು. ಯುದ್ಧ ಮಾಡಿ ಕೊಲಿಗಡಕನೆಂದು ಕರಸಿಕೊಳ್ಳಲಾರೆ. ಜ್ಞಾತಿಕ್ಷಯ ಮಾಡಬೇಕಾಗತದೆ' ಎಂದು ಶೋಕಾರ್ಹನಾಗಿ ಗಾಂಡೀವ ಧನುಸ್ಸು ಬಿಟ್ಟುಕೊಟ್ಟು, ಮೂರ್ಛೆಯಿಂದ ಭೂತಳದಲ್ಲಿ ಬೀಳಲಿಕ್ಕೆ, 'ಎಲ್ಯೆ ಅರ್ಜುನ ಏನುಕಾರಣ ಮೂರ್ಛೆಯುಳ್ಳವನಾಗತಿದ್ದಿ!' ಸ್ವಾಮಿ ಸರ್ವಜ್ಞ ಶಿಖಾಮಣಿ ಸರ್ವರ ಅಭಿಪ್ರಾಯ ಒಲ್ಲರೂ ಸರಿಯೆ ಕೇಳಥಾನೆ. ಅರ್ಜುನ ತನ್ನ ಅಭಿಪ್ರಾಯ ಹೇಳಲಾಗಿ, ಸ್ವಾಮಿ ಕೇಳಿ 'ದುಷ್ಟರ ಕೊಲ್ಲೋದೆ ನರಧರ್ಮ. ದುಷ್ಟರ ಆಶ್ರಯಿಸಿ ದಾರಿದ್ದಾರೆ ಅವರನ್ನೂ ಕೊಲ್ಲಬೇಕು. ಕ್ಷತ್ರಿಯನಾಗಿ ಹುಟ್ಟಿ ಕ್ಷತ್ರಿಯಕರ್ಮ ಮಾಡದಿದ್ದರೆ, ದುಷ್ಟರ ದಂಡಿಸದಿದ್ದರೆ ಅವನಿಗೆ ಅಧೋಗತಿ ಆಗತದೆ. ವರ್ಣಾಶ್ರಮಧರ್ಮ ಶ್ರುತಿಸ್ಮೃತಿಗಳಲ್ಲಿ ಹೇಳಿದ ಪ್ರಕಾರ ಅಗತ್ಯ ಮಾಡಬೇಕು. ದೇಹ ಬಂದದ್ದಕ್ಕೆ ಸ್ವಚ್ಛಜ್ಞಾನ ತಿಳೀಬೇಕು. ಜ್ಞಾನದಿಂದ ಸುಕರ್ಮ ಮಾಡಿ ನಾರಾಯಣಗೆ ಅರ್ಪಿಸಬೇಕು. ಉಸಿರು ಬಿಡೋ ವ್ಯಾಪಾರ ಮೊದಲಾದ್ದು ಸ್ವಾಮೀ ಅಧೀನ. ಬ್ರಹ್ಮಾದಿ ಜಗತ್ತು ತದ್ದಾಸರು. ಹೀಂಗೆ

ನಿಶ್ಚಯಜ್ಞಾನ ತಿಳಿ. ಎಲೈ ಧನಂಜಯ, ದೇಹಕ್ಕೆ ನಾಶ ಉಂಟು. ಜೀವಕ್ಕೆ ನಾಶ ಇಲ್ಲ. ದೇಹವಿಯೋಗದಿಂದ ಮರಣ ಎನಸ್ತದೆ. ಇವರನ್ನೆಲ್ಲ ಕೊಲ್ಲಲಿಕ್ಕೆ ನೀನು ಏಷ್ಟರವ! ಸರ್ವ ಜಗತ್ತು ನಾ ಹುಟ್ಟಸ್ತೀನಿ. ನನಗೆ ಸರಿಬಾರದಿದ್ದರೆ ಸಂಹರಸ್ತೀನಿ. ಪ್ರಾಣಿಗಳಿಗೆ ಸಂಸಾರಬಂಧ, ಮೋಕ್ಷ ಕೊಡಥೀನಿ. ಬ್ರಹ್ಮಾದಿ ಜೀವರುಗಳಿಗೆ ನಾನು ಸುಖದುಃಖ ಕೊಡಥೀನಿ. ನನಗೆ ಸಮರೂ ಇಲ್ಲ, ಅಧಿಕರೂ ಇಲ್ಲ. ನಾನು ಸಮಾಧಿಕಶೂನ್ಯ, ಜ್ಞಾನಾನಂದ ಗುಣಸಾಗರ, ಅಪ್ರಾಕೃತ, ಸ್ವಗತಭೇದವರ್ಜಿತ, ದೋಷದೂರ, ಗುಣಪೂರ್ಣ, ರಮಾಬ್ರಹ್ಮಾದಿ ಜಗತ್ತು ನನ್ನಾಧೀನ. ಈ ಸರ್ವ ಜಗತ್ತು ಅಸ್ವತಂತ್ರವುಳ್ಳದ್ದು. ಇವರನ್ನೆಲ್ಲ ಕೊಲ್ಲದೆ ರಣರಂಗದಲ್ಲಿ ತಿರಗಿ-ಹೋಗಲಿಕ್ಕೆ ನೀ ಶಕ್ಯನಲ್ಲ. ದುರಾಗ್ರಹ ಮಾಡಬ್ಯಾಡ. ನನ್ನ ಅನುಗ್ರಹದಿಂದ ದಾರದಾರನ್ನ ಕೊಂದೀ, ಅವರನ್ನೆಲ್ಲ ಕೊಂದು ಕೃಷ್ಣಾರ್ಪಣವೆಂದು ಅರ್ಪಿಸು, ಮನಃಪೂರ್ವಕ ಅರ್ಪಿಸು. ನನ್ನಲ್ಲಿ ಭಕ್ತಿಯುಳ್ಳವನಾಗು. ನನ್ನ ಧ್ಯಾನ ವುಳ್ಳವರಿಗೆ ಮೃತ್ಯುಸ್ವರೂಪವಾದಂಥ ಸಂಸಾರದಿಂದ ಕಡಿಗೆ ಹಾಕಥೀನಿ. ಸಮುಸ್ತರ ಹೃತ್ಕಮಲದ ಮಧ್ಯದಲ್ಲಿದ್ದರೂ, ಅವರಾಧಾರದಲ್ಲಿ ನಾ ಇಹೋದಿಲ್ಲ. ಸರ್ವಜಗತ್ತು ನನ್ನ ಆಧಾರದಲ್ಲಿರತದೆ. ನಾ ಸರ್ವತ್ರ ವ್ಯಾಪ್ತನಾಗಿರಥೀನಿ. ನನ್ನ ಮೂಲರೂಪ, ಅಂತರ್ಯಾಮಿರೂಪ, ಅವತಾರರೂಪಕ್ಕೆ ಭೇದವಿಲ್ಲ. ನಾನು ನಿತ್ಯಾನಂದ, ನಿತ್ಯೋತ್ಸಾಹವುಳ್ಳಾತ. ನನಗೆ ಅನಿತ್ಯತ್ವ, ದೇಹಹಾನಿ, ದುಃಖಪ್ರಾಪ್ತಿ, ಅಪೂರ್ಣತ ಇಲ್ಲ. ನಾನು ಚತುರ್ವಿಧ ನಾಶರಹಿತ.' ಹೀಂಗಂತ ತನ್ನ ಮಹಿಮ ಹೇಳಿಕೊಂಡನು.

ಸ್ವಾಮಿ ಹೀಂಗೆ ಅನಲಿಕ್ಕೆ ಅರ್ಜುನ 'ಸ್ವಾಮಿ, ಸರ್ವತ್ರ ಇರಥೀನೆಂದು ಹೇಳಿಕೊಳ್ಳತಿ. ನಿನ್ನ ಸ್ವರೂಪ ನನಗೆ ತೋರಿಸು' ಎಂದಲ್ಲಿ ದಿವ್ಯ ಚಕ್ಷು ಕೊಟ್ಟ. ತನ್ನ ನಿಜರೂಪವಾದ ವಿಶ್ವರೂಪ ಅರ್ಜುನನಿಗೋಸ್ಕರ, ಯೋಗ್ಯತಾನುಸಾರ ತೋರಿಸಿದ್ದಾನೆ. ಸರ್ವಜಗತ್ತು ಸ್ವಾಮೀ ದಾಡಿ ಒಳಗೆ ಬಿದ್ದದೆ. ಸ್ವಾಮೀ ದಾಡೀ ಯೊಳಗೆ ಬಾಯಿ ಪಿಡಿಸೋಣ, ಭೀಷ್ಮದ್ರೋಣಾದಿಗಳು ಬಿದ್ದಾರೆ. ಇದನ್ನೆಲ್ಲ ದೃಷ್ಟೀಲಿ ಕಂಡು ಸಮುಸ್ತರೂ ಸಮೀಪ ಮರಣ ಉಳ್ಳವರೆಂದು ತಿಳಿದನು. ಸ್ವಾಮೀ ವಿಶ್ವರೂಪ ಕಂಡು ಅರ್ಜುನ, ಬಹಳ ಭಯ ಉಳ್ಳವನಾಗಿ ಕೃಷ್ಣನ್ನ ಬೇಡಿಕೊಂಡ. 'ಸ್ವಾಮಿ ನಿನ್ನ ಅದ್ಭುತರೂಪ ನೋಡಲಾರೆ. ಆಚ್ಛಾದಿಸಬೇಕು' ಎಂದು ಬೇಡಿ-ಕೊಳ್ಳಲಿಕ್ಕೆ, ಅರ್ಜುನನಿಂದ ಪ್ರಾರ್ಥಿತನಾಗಿ ದ್ವಿಭುಜವುಳ್ಳವನಾದ. 'ಎಲೋ ಅಪ್ಪಾ ಅರ್ಜುನ, ನೀನು ನಿಮಿತ್ತಮಾತ್ರ. ದ್ರೋಣ ಭೀಷ್ಮ ಜಯದ್ರಥ ಕರ್ಣ ಮೊದಲಾದವರನ್ನ ಕೊಲ್ಲೋ ಆತನು ನಾನೇ. ಎರಡನೇ ವಿಚಾರ ಮಾಡದೆ ರಣೋದ್ಯೋಗ ಮಾಡು' ಎಂದು ಕೃಷ್ಣ ಹೇಳಲಿಕ್ಕೆ, 'ಸ್ವಾಮಿ ನೀ ಹೇಳಿದ ಆಜ್ಞೆ ಶಿರಸಾವಹಿಸೇನು' ಎಂದು ಮಾತನಾಡಿದ. ಆಗ ಕುಂತೀಪುತ್ರನಾದ ಅರ್ಜುನ

ಪುರುಷೋತ್ತಮನಿಂದ ಶಿಕ್ಷಿತನಾಗಿ, ಗಾಂಡೀವಧನಸ್ಸನ್ನು ಕೊಂಡು, ಯುದ್ಧಕ್ಕೆ ನಿಂತನು. ತತ್ತ್ವಗಳಿಂದ ಬೋಧಿತನಾಗಿ, ತಾನು ನಿಮಿತ್ತಕಾರಣ ಮಾತ್ರ, ಸೃಷ್ಟಿ ಸಂಹಾರಕ್ಕೆ ಕಾರಣ ಶ್ರೀಕೃಷ್ಣನೆಂದು ತಿಳದು, ಧನುಸ್ಸನ್ನು ಟಂಕಾರ ಮಾಡಿ ವೈರಿಗಳ ಎದುರಿಗೆ ನಿಂದರಲಾಗಿ, ಭೀಮಸೇನ ಸಿಂಹನಾದ ಮಾಡತ ಸಕಲರಿಗೆ ಮುಂಬಿಗನಾಗಿ ಕೌರವಸೇನಿ ಎದುರಿಗೆ ನಿಂದರಲಾಗಿ, ರಣರಂಗದಿಂದ ಭೀಮಸೇನನ ಓಡಿಸಬೇಕಾಗಿ ಸಮಸ್ತರೂ ಬಾಣ ಮಳಿಗರೆದರು.

ಭೀಮಸೇನ ಅಷ್ಟೂ ಬಾಣಗಳ ತನ್ನ ದೇಹದಮ್ಯಾಲೆ ಧರಿಸಿಕೊಂಡು, ಸುಮ್ಮಗೆ ರಣಠಂಗದಲ್ಲಿ ನಿಂದರಲಾಗಿ, ಭೀಮಸೇನ ದೊಡ್ಡ ಪರಾಕ್ರಮಿ ಯುದ್ಧ ಮಾಡದೆ, ವೈರಿಗಳ ವಿನಾಶ ಮಾಡದೆ ಸುಮ್ಮನೆ ನಿಂತಾನೆಂದು, ಅಭಿಮನ್ಯು ಪ್ರತಿವಿಂಧ್ಯ ಮೊದಲಾದ ದ್ರೌಪದೀ ಐದು ಜನ ಮಕ್ಕಳು ಯುದ್ಧಕ್ಕೆ ಬಂದರು. ಭೀಮಸೇನ ಮೊದಲಿಗೆ ಏನುಕಾರಣ ಯುದ್ಧ ಮಾಡಲಿಲ್ಲೆಂದರೆ, ಜ್ಞಾತಿಗಳ ಅನ್ಯಾಯ, ಗಂಭೀರ ಬುದ್ಧಿ ಉಳ್ಳವರು ತಾಳಿಕೋಬೇಕು ಎಂದು, ತಾಳಿಕಿಸ್ವಭಾವ ತೋರಿಸಿದ್ದಾನೆ. ಅಭಿಮನ್ಯು ಪ್ರತಿವಿಂಧ್ಯ ಮೊದಲಾದವರು ಬಾಣ ಮಳಿಗರೆಯುತ ಬರಲಿಕ್ಕೆ, ದುರ್ಯೋಧನಾದಿಗಳು ಬಾಲಕರ ಮ್ಯಾಲೆ ಬಾಣದ ಮಳಿಗರೆದರು. ಚಿಕ್ಕವರು ಶಸ್ತ್ರಾಸ್ತ್ರದಿಂದ ಪೀಡಿತರಾಗ್ಯಾರೆಂದು ಭೀಮಸೇನ ಆಗ ಬಾಣಗಳ ಮಳಿಗರಿಯಹೊಕ್ಕನು. ಭೀಮಸೇನನ ಬಾಣಗಳು ಗರೀಪರಿಯಂತ ದೇಹದೊಳಗೆ ಮುಣಗೋವು. ಮರ್ಮಸ್ಥಳಗಳನ್ನು ಬಾಣಗಳು ಛೇದಿಸಿದವು. ಕೌರವಸೇನಿ ಬಹಳ ದುಃಖ ಉಳ್ಳದ್ದು ಆಯಿತು. ಭೀಮಸೇನನ ಬಾಣ ಅತಿ ದುಃಖಬಡಿಸಲು ಭೀಷ್ಮಗೆ ಶರಣುಹೊಕ್ಕರು. ಭೀಷ್ಮ ಅವರಿಗೆಲ್ಲ ದಿವ್ಯ ಮಂತ್ರೋಪದೇಶ ಮಾಡಿ, ಬಾಣಗಳು ತಮ್ಮಿಂದ ತಾವೇ ಉಚ್ಚಿಬೀಳೋಹಾಂಗೆ ಮಾಡಿದನು. ಅದರ ತರುವಾಯ ಕುರು ಪಾಂಡವರಿಗೆ ದ್ವಂದ್ವಯುದ್ಧವಾಯಿತು. ದ್ರೋಣಗೆ ಧೃಷ್ಟದ್ಯುಮ್ನಗೆ, ಸಾತ್ಯಕಿ ಕೃತವರ್ಮಗೆ, ದುಃಶ್ಯಾಸನ ಸಹದೇವಗೆ, ನಕುಲ ವಿಕರ್ಣಗೆ, ದ್ರೌಪದೀ ಐದು ಮಂದಿ ಮಕ್ಕಳು ದುರ್ಮುಖ ಮೊದಲಾದ ದುರ್ಯೋಧನನ ಐದು ಮಂದಿ ತಮ್ಮಂದಿರಿಗೆ, ಹೀಂಗೆ ದ್ವಂದ್ವಯುದ್ಧ ಅನೇಕ ಪ್ರಕಾರ ಆಯಿತು. ಧರ್ಮರಾಯನ ಪಕ್ಷಪಾತಿಗಳು ಸಮಸ್ತರೂ ಸೋತರು. ಸಾತ್ಯಕಿ ಸೋಲಲಿಲ್ಲ, ಕೃತವರ್ಮನ್ನ ಸೋಲಿಸಿದನು. ದ್ರೋಣ, ಭೀಷ್ಮ, ನರಕಾಸುರನ ಮಗ ಭಗದತ್ತ ಇವರು ತಮ್ಮತಮ್ಮ ಪರಾಕ್ರಮದಿಂದ ಪಾಂಡವರ ಸೇನಾನೆಲ್ಲ ಓಡಿಸಲಿಕ್ಕೆ, ಭೀಮಸೇನ ಮುಂಬಿಗನಾಗಿ ತಮ್ಮ ಸೇನಿ ಓಡಿಬಾಹೋದು ಬೆನ್ನಹಾಕಿಕೊಂಡು, ದ್ರೋಣ, ಭೀಷ್ಮ, ಭಗದತ್ತ, ಕೃಪಾಚಾರ್ಯ, ದ್ರೋಣಾದಿಗಳನ್ನು ಮುಷ್ಟಿಪೆಟ್ಟಿನಿಂದ ಸೋಲಿಸಿಬಿಡಲಿಕ್ಕೆ ಶಲ್ಯ, ವಿರಾಟರಾಯನ ಮಗ ಉತ್ತರಕುಮಾರನ್ನ ಕೊಂದು ಬಿಟ್ಟನು. ರಣರಂಗದಲ್ಲಿ ಉತ್ತರಕುಮಾರ ಸಾಯಲಿಕ್ಕೆ, ಸಮಸ್ತ ಪಾಂಡವಸೇನಿ

ಬೆನ್ನುಕೊಟ್ಟು ಓಡಹೊರ್ಕಿತು. ಅರ್ಜುನ ಅಭಿಮನ್ಯುನಿಂದ ಯುಕ್ತನಾಗಿ ಭೀಷ್ಮನ ಎದುರಿಗೆ ಬರಲಾಗಿ, ಭೀಷ್ಮ ತನ್ನ ಪರಾಕ್ರಮದಿಂದ ದ್ರುಪದರಾಯನ ಸೇನಾನೆಲ್ಲ ಓಡಿಸಿದ. ಅರ್ಜುನ ಭೀಷ್ಮನಲ್ಲಿ ಗುರುತ್ವ ಇಟ್ಟು, ಯುದ್ಧ ಮಾಡಲಿಲ್ಲ. ಅಭಿಮನ್ಯು ಶಸ್ತ್ರಾಸ್ತ್ರದಿಂದ ಕುರುಸೇನಿ ಓಡಿಸಿದ. ಪಿತಾಮಹನ ಕೂಡ ಅರ್ಜುನ ಯುದ್ಧ ಮಾಡಬಾರದೆಂದು ಸುಮ್ಮಗೆ ನಿಂತನು. ಭೀಮಾರ್ಜುನರು ರಣರಂಗದಲ್ಲಿ ಯುದ್ಧ ಮಾಡದೆ ಸ್ತಂಬದೋಪಾದಿ ಸುಮ್ಮಗೆ ನಿಂದರಥಾರೆ. ಯಾಕೆಂದರೆ, ಬೀಗರ ಮಗ ಉತ್ತರಕುಮಾರ ಸತ್ತ. ಮೊದಲಿಗೇ ಅಪಜಯವಾಯಿತು ತಮ್ಮ ಸೇನಿ ವೈರಿಗಳ ಕೂಡ ಪೆಟ್ಟು ತಿಂದು ಓಡತದೆ. ಅವತ್ತಿನ ಯುದ್ಧ ಸಾಕುಮಾಡಬೇಕೆಂದು ಧರ್ಮರಾಯ ತನ್ನ ಸೇನಾಬಲ ತಿರಗಿಸಿಕೊಂಡು ಶಿಬಿರಕ್ಕೆ ಹೋದನು.

ಅರ್ಜುನನ್ನ ದೂಷಿಸ್ತಾ 'ನಿನ್ನ ಪರಾಕ್ರಮ ಎತ್ತ ಹೋಯಿತು! ನಿವಾತ-ಕವಚ, ಪೌಲೋಮ, ಕಾಲಕೇಯರನ್ನ ಕೊಂದೀಯೆಂದು ಪೌರುಷ ಹೇಳಿ-ಕೊಳ್ಳತಿದ್ದಿ. ನಿನ್ನ ಪರಾಕ್ರಮ ಎತ್ತ ಹೋಯಿತು! ಉತ್ತರಕುಮಾರ ಸತ್ತ. ವೈರಿಗಳ ಮುಂದೆ ಅಪಹಾಸವಾಯಿತು. ಇಲ್ಲಿ ಏನುಕಾರಣ ಇದ್ದೀ, ರಣರಂಗ ಬಿಟ್ಟುಹೋಗು' ಈ ಪ್ರಕಾರ ಧರ್ಮರಾಯ ನಿಂದಾವಚನಗಳಾಡಲಿಕ್ಕೆ, ಶ್ರೀಕೃಷ್ಣ ಧರ್ಮರಾಯನ ಕೂಡ ಮಾತನಾಡಥಾನೆ. 'ನೀವು ಅಣ್ಣತಮ್ಮಂದಿರೊಳಗೆ ಜಗಳ-ವ್ಯಾಕೆ? ವೈರಿಗಳಿಗೆ ಅಪಹಾಸಕ್ಕೆ ಕಾರಣವಾಗತದೆ. ಒಂದು ದಿವಸ ಅಪಜಯ-ವಾದರೆ ಏನಾಯಿತು? ನಾಳೆ ಯುದ್ಧ ಮಾಡಥಾನೆ' ಎಂದು, ಈ ರೀತಿ ಉಭಯತರೊಳಗೆ ವಿರುದ್ಧ ಬೀಳೋಣ ನೀತವಲ್ಲವೆಂದು, ಶ್ರೀಕೃಷ್ಣ ಧರ್ಮ-ರಾಯನ್ನ ಸಮಾಧಾನ ಮಾಡಿದನು. ಅರ್ಜುನ ಕೋಪದಿಂದ ರಣರಂಗ ಬಿಟ್ಟ-ಹೋಗತಿದ್ದನು. ಅರ್ಜುನನ್ನ ಸಮಾಧಾನ ಮಾಡಿ ನಿಂದರಿಸಿದನು. ಭೀಷ್ಮ ತಾ ಹತ್ತು ದಿವಸ ಯುದ್ಧ ಮಾಡೇನೆಂದು, ದುರ್ಯೋಧನನ ಕೈಯ ಸೇನಾಪತಿತ್ವ ಇಸಗೊಂಡು ಪಟ್ಟಾಭಿಷೇಕ ಮಾಡಿಸಿಕೊಂಡನು. ಭೀಷ್ಮ, ಕುರುಪಾಂಡವ ಸೇನಿ ಒಳಗೆ ಮಹಾರಥಿಕರು, ಅರ್ಧರಥಿಕರು, ಇಂಥಿಂಥವರು ಇದ್ದಾರೆಂದು ಹೇಳತ ಬರಲಾಗಿ, ಕರ್ಣ ಅರ್ಧರಥಿಕನೆನಲು, ಕೋಪಾವಿಷ್ಟನಾಗಿ ಕರ್ಣ 'ಭೀಷ್ಮ ಒದಿಕೆರೋ ಪರಿಯಂತ ನಾನು ರಣರಂಗದಲ್ಲಿ ಯುದ್ಧ ಮಾಡುವುದಿಲ್ಲ' ಎಂದು ಕೋಪದಿಂದ ಜ್ವಲಸ್ತಾ ರಣರಂಗ ಬಿಟ್ಟುಹೋದನು. ದುರ್ಯೋಧನಗೆ ಅಧೈರ್ಯ ವಾಯಿತು. ಆಗ ಭೀಷ್ಮ ದುರ್ಯೋಧನಗೆ ಅಂದ, 'ಹೇ ದುರ್ಯೋಧನ, ಕರ್ಣ ಹೋದನೆಂದು ಖೇದ ಹೆಚ್ಚಿಕೋಬ್ಯಾಡ. ಕರ್ಣ ಹೋದರೆ ತಾನೇ ಹೋದ. ನಾನು ನಿನ್ನ ಭಾರ ವಹಿಸಿಕೊಂಡೀನಿ. ನಿತ್ಯ ಹತ್ತುಸಾವಿರ ರಥಿಕರನ್ನ ಕೊಂದೇನು' ಎಂದು ಶಪಥ ಮಾಡಿದನು. ಭೀಷ್ಮ ಅಸ್ತ್ರ ಬಲ್ಲವರೊಳಗೆ ದೊಡ್ಡ ಶ್ರೇಷ್ಠ. ತನ್ನ ಪ್ರತಿಜ್ಞೆ ಸತ್ಯ ಮಾಡಥಾನೆ. ಭೀಷ್ಮ ಭಯಂಕರ ಯುದ್ಧ ಮಾಡುವಾಗ, ಭೀಷ್ಮ

ತಮ್ಮ ಪಿತಾಮಹನೆಂದು ಗುರುತ್ವ ಇಟ್ಟು, ತೀವ್ರ ಯುದ್ಧ ಮಾಡದೇ ಇರಲಾಗಿ, ಪಾಂಡವರ ಸೇನಿ ಅಪಾರ ಸಾವತಿಹೋದು. ಇಷ್ಟು ಅಪಾರ ಸೇನಿ ಸತ್ತರೂ, ಭೀಷ್ಮನಮ್ಯಾಲೆ ಮೇರಿದಪ್ಪಿ ಯುದ್ಧ ಮಾಡಲಿಲ್ಲ. ಭೀಷ್ಮನ ತೀವ್ರ ಯುದ್ಧ ನೋಡಬೇಕಾಗಿ ಬ್ರಹ್ಮರುದ್ರಾದಿ ದೇವತಿಗಳು ಆಕಾಶಮಾರ್ಗದಲ್ಲಿ ನಿಂತು ನೋಡತಿಹೋರು. ಕೃಷ್ಣಾರ್ಜುನರು ಒಂದೇ ರಥದಲ್ಲಿ ಕುಳಿಥಾರೆ. ಧೃಷ್ಟದ್ಯುಮ್ನ ಸೇನಾನಾಯಕ, ಮುಂಬಿಗನಾಗಿ ವಿಚಿತ್ರ ಯುದ್ಧ ಮಾಡಥಾನೆ.. ಅರ್ಜುನ ತೀವ್ರ ಯುದ್ಧ ಮಾಡವಲ್ಲ. ಕೃಷ್ಣಗೆ ಸಿಟ್ಟು ಬಂತು. 'ಯುದ್ಧ ಮಾಡೆಂದು ಹಿತೋಪದೇಶ ಮಾಡೀನಿ. ಧರ್ಮರಾಯ ಅಂಬೋ ಮಾತು ಖರೆ. ನೀ ಯುದ್ಧ ಮಾಡೋದಿಲ್ಲವಲ್ಲ, ನಾ ಭೀಷ್ಮನ ಕೊಲ್ಲಥೀನಿ' ಎಂದು ಸ್ವಾಮಿ ಚಕ್ರ ಎತ್ತಿಕೊಂಡು, ಭೀಷ್ಮನ ವ್ಯೂಲೆ ತೆರಳಲಿಕ್ಕೆ, ಭೀಷ್ಮ ರಥ ಇಳಿದು ಸ್ವಾಮೀ ಸ್ತುತಿಗೈದ. ಪ್ರಥಮಸ್ಕಂಧದಲ್ಲಿ ಹೇಳೇದೆ. 'ಸ್ವಾಮೀ ನಿನ್ನ ಭಕ್ತರ ಪ್ರತಿಜ್ಞೆ ಸತ್ಯ ಮಾಡತಿ. ನಿನ್ನ ಕೈಯಿಂದ ಚಕ್ರ ಹಿಡಿಸ್ಯೇನೆಂದು ಪ್ರತಿಜ್ಞೆ ಮಾಡಿದ್ದೆ. ನನ್ನ ಮಾತು ಸತ್ಯ ಮಾಡಿದಿ.' ಹೀಂಗೆ ಭಕ್ತಿರಸದಿಂದ ಸ್ವಾಮೀ ಸ್ತುತಿ ಮಾಡಥಾನೆ. ಅಷ್ಟರೊಳಗೆ ಅರ್ಜುನ ಸ್ವಾಮಿ ಪಾದದ ವ್ಯೂಲೆ ಬಿದ್ದನು. 'ನಾನು ಅಪರಾಧಿ, ನಾನು ತಪ್ಪಿದೆ. ನನ್ನ ತಪ್ಪು ಕ್ಷಮಿಸು. ನಿನ್ನ ಅನುಗ್ರಹದಿಂದ ಯುದ್ಧ ಮಾಡೇನು.' ಈ ಪ್ರಕಾರ ಬೇಡಿಕೊಳ್ಳತಿಹ.

ಸ್ವಾಮಿ, ಅರ್ಜುನನ ಕೈಯ ಪ್ರಾರ್ಥಿತನಾಗಿ ಪಾಂಚಜನ್ಯ ಶಂಖ ಧ್ವನಿ ಮಾಡಿದನು. ಅರ್ಜುನ ದೇವದತ್ತ ಶಂಖ ಊದಿದನು. ಅರ್ಜುನ ಶಿಖಂಡೀ ಮುಂದೆ ಮಾಡಿಕೊಂಡು, ಭೀಷ್ಮನ ವ್ಯೂಲೆ ಬಾಣಪ್ರಯೋಗ ಮಾಡಲಿಕ್ಕೆ, ಅರ್ಜುನ, ಶಿಖಂಡಿ ಉಭಯತರ ಬಾಣಗಳಿಂದ, ಭೀಷ್ಮ ಬಹಳ ದುಃಖಿಬಡತಿಹ. 'ಅರ್ಜುನನ ಬಾಣಗಳು ನನ್ನ ಮರ್ಮಸ್ಥಳ ಛೇದಿಸಿ ಬಹಳ ದುಃಖ ಕೊಡತವೆ' ಅನ್ನತಿಹ. ಹೀಂಗೆ ಭೀಷ್ಮಾರ್ಜುನರ ಯುದ್ಧವಾಗತದೆ. ಅದೇ ವ್ಯೂಳ್ಯಾದಲ್ಲಿ ಭೀಮಸೇನ ಮುಂಬಿಗನಾಗಿ ದ್ರೋಣ ಭೀಷ್ಮರ ಸಾರಥಿಗಳನ್ನು ಕೊಂದುಬಿಟ್ಟನು. ರಥದ ಕುದುರಿಗಳು ಬಿಡಿಸಿಕೊಂಡು ಚಾವುಕಚಲ್ಲಿಹೋಗತವೆ. ಎರಡು ದಿವಸ ಭೀಷ್ಮ ಯುದ್ಧದಲ್ಲಿ ಗರುಡವ್ಯೂಹ ರಚಿಸಿಹ. ಅದಷ್ಟೂ ಕೆಡಿಸಿ, ಕುರಿಹಿಂಡಿನೊಳಗೆ ಸಿಂಹ ಹ್ಯಾಂಗೆ ಕದಡತದೆ, ಹಾಂಗೆ ಭೀಮಸೇನ ಕೌರವರ ದಂಡನ್ನೆಲ್ಲ ಕದಡತ ಹೋಗಿ, ದುರ್ಯೋಧನನ ಇಪ್ಪತ್ತೈದು ಮಂದಿ ತಮ್ಮಂದಿರನ್ನ ಕೊಂದನು. ಭೀಷ್ಮ ದ್ರೋಣ ಅಶ್ವತ್ಥಾಮ ಕೃಪಾಚಾರ್ಯ ಮೊದಲಾದ ಸಮಸ್ತ ವೀರರನ್ನ ಸೋಲಿಸಿ ಓಡಿಸಿಬಿಟ್ಟನು. ಎರಡು ದಿವಸ ದುರ್ಯೋಧನನ ಸೇನಿ ಬಹಳ ಸತ್ತಿತು. ಅಪಾರ ಸೇನಿ ನಾಲ್ಕೂ ದಿಕ್ಕಿಗೆ ಓಡಿಹೋಯಿತು. ದುರ್ಯೋಧನನ ಆಯುಧಗಳಿಲ್ಲ ಕಡದುಬಿದ್ದವು. ರಥಗಳೆಲ್ಲ ಛೇದಿಸಿಹೋದವು. ದುರ್ಯೋಧನ ವಿರಥನಾಗಿ ಬಾಣದ

ಪೆಟ್ಟು ತಿಂದು ಬಹಳ ಖಿನ್ನನಾದ. ಭೀಷ್ಮ ಯುದ್ಧ ಸಾಕುಮಾಡೆಂದು ಅಪಾರ ಸೇನಿ ಮುಂಡಿಸಿಕೊಂಡು ಶಿಬಿರಕ್ಕೆ ಹೋದನು. ಪಾಂಡವರು ವೈರಿಗಳ ಸೋಲಿಸಿ, ಜಯಶೀಲರಾಗಿ ತಮ್ಮ ಶಿಬಿರಕ್ಕೆ ಹೋದರು.

ದುರ್ಯೋಧನ, ತಮ್ಮಂದಿರು ಸತ್ತರೆಂದು ದುಃಖದಿಂದ, ತನ್ನ ಸೇನಿ ಎಲ್ಲ ಭಂಗವಾಗೇದೆಂಬೋ ದುಃಖದಿಂದ ಖಿನ್ನಮನಸ್ಸುಳ್ಳವನಾಗಿ ರಾತ್ರೀ ಭಾಗದಲ್ಲಿ ಭೀಷ್ಮನ ಬಳಿಗೆ ಬಂದು 'ಎಲೈ ಭೀಷ್ಮ ನಿನ್ನ ಪ್ರತಿಜ್ಞೆ ಹುಸಿ ಆಯಿತು ನಾವು ಸೋತೆವು. ಪಾಂಡವರು ಜಯಶೀಲರಾಗಿ ಹೋದರು' ಎನಲಿಕ್ಕೆ, "ಕೇಳಯ್ಯ ದುರ್ಯೋಧನ ಪಾಂಡವರು ಗೆದ್ದದ್ದು ಆಶ್ಚರ್ಯವಲ್ಲ. ಅವರು ದೇವಾಂಶರು, ಸಾಕ್ಷಾತ್ ಕೇಶವನೇ ಸಹಾಯನಿದ್ದಾನೆ. ಹದಿನಾಲ್ಕು ಲೋಕ ಗೆಲ್ಲುವಲ್ಲಿ ಅವರಿಗೆ ಸಾಮರ್ಥಿ ಉಂಟು. ಅಂಥಾ ಕೃಷ್ಣನ ಸಹಾಯ ಬೇಡಿಕೊಳ್ಳದೆ, ಹತ್ತು ಲಕ್ಷ ಮಕ್ಕಳ ಬೇಡಿಕೊಂಡು ಬಂದಿ. ಪಾಂಡವರು ಶ್ರೀಧರನಿಂದ ಪಾಲಿತರಾಗ್ಯಾರೆ. ಕೃಷ್ಣ ಅವತಾರ ಮಾಡಲಿಕ್ಕೆ ಕಾರಣವೇನೆಂದರೆ ಹೇಳಥೀನಿ ಕೇಳು. ಪುಷ್ಕರ-ದ್ವೀಪದಲ್ಲಿ ಮಾನಸ ಸರೋವರ ಅದೆ. ಅಲ್ಲಿ ಬ್ರಹ್ಮಾದಿ ದೇವತಿಗಳು ಬಂದಿದ್ದರು. ಅಷ್ಟದಿಕ್ಪಾಲಕರ ಸಹವಾಗೆ ಬಂದಿದ್ದರು. ಬ್ರಹ್ಮರಾಯ ದೇವತಿಗಳ ಕೈಯ ವಾಲ್ಗೈಸಿಕೊಳತಿಹ. ಅಲ್ಲಿಗೆ ನಾರಾಯಣ ಆಕಾಶಮಾರ್ಗದಿಂದ ಬಂದನು. ಬ್ರಹ್ಮರಾಯ ಮೂಲನಾರಾಯಣನ್ನ ಎದುರುಗೊಂಡು ಕರತಂದು, ಸ್ವಾಮಿಗೆ ಅನೇಕ ಪ್ರಕಾರ ಪೂಜಿ ಮಾಡಿ, ಬಿನ್ನಹ ಮಾಡಿದ್ದಾನೆ. 'ಸ್ವಾಮಿ, ಭೂದೇವಿ ಗೋರೂಪಳಾಗಿ ಬಹಳ ಖಿನ್ನಮುಖದಿಂದ ಅಸಜ್ಜನರ ಭಾರದಿಂದ ಪೀಡಿತ ಳಾಗಿದ್ದಾಳೆ. ಪಾಪಿಗಳು ಸಜ್ಜನರಿಗೆ ಉಪದ್ರವ ಕೊಡಥಾರೆ. ಮೇರು ಮಂದರಾಚಲ ಪರ್ವತಗಳು ತನಗೆ ಭಾರವಿಲ್ಲ. ಪಾಪಿಗಳು ತನಗೆ ಭಾರವಾಗಿದ್ದಾರೆ. ಈ ಭೂಭಾರ ಇಳುಹಬೇಕೆಂದು ಭೂದೇವಿ ಬೇಡಿಕೊಳ್ಳಥಾಳೆ. ಸ್ವಾಮಿ ನೀ ಧರ್ಮರಕ್ಷಕನಿದ್ದಿ. ಭೂಭಾರ ಇಳುಹಬೇಕು' ಎಂದಲ್ಲಿ, ಬ್ರಹ್ಮರಾಯನ ಕುರಿತು ಸ್ವಾಮಿ ಮೇಘ-ಗಂಭೀರ ವಾಕ್ಯದಿಂದ ಮಾತನಾಡಿದ್ದಾನೆ. 'ನಾನು ಕೃಷ್ಣಾವತಾರ, ವಸುದೇವನ ದೆಶಿಯಿಂದ ದೇವಕೀ ಉದರದಲ್ಲಿ ಮಾಡಥೀನಿ. ಮುಖ್ಯಪ್ರಾಣ ರುದ್ರಾದಿಗಳು ನೀವು ಅಂಶದಿಂದ ಹುಟ್ಟಿರಿ' ಎಂದು ದೇವತಿಗಳಿಗೆ ಹೇಳಿ ಸ್ವಾಮಿ ಆಕಾಶ-ಮಾರ್ಗದಿಂದ ವೈಕುಂಠಕ್ಕೆ ಹೋದನು. ಆ ಮೂಲನಾರಾಯಣ ಶ್ರೀಕೃಷ್ಣನಾಗಿ ಹುಟ್ಟಿದ್ದಾನೆ. ಬ್ರಹ್ಮರಾಯನ ಆಜ್ಞದ ಮ್ಯಾಲೆ, ಮುಖ್ಯಪ್ರಾಣ, ಭೀಮಸೇನನಾಗಿ ಹುಟ್ಟಿದ್ದಾನೆ. ಯಮ, ಧರ್ಮರಾಯನಾಗಿ ಹುಟ್ಟಿದ್ದಾನೆ. ದೇವೇಂದ್ರ ಅರ್ಜುನ ನಾಗಿ ಹುಟ್ಟಿದ್ದಾನೆ. ಅಶ್ವಿನೀದೇವತಿಗಳು ನಕುಲಸಹದೇವರಾಗಿ ಹುಟ್ಯಾರೆ. ಇವರಿಷ್ಟೂ ಮುಂದಿ ದೇವರ ಸೇವಿಗೆ ಅಂಗಭೂತರಾಗ್ಯಾರೆ. ಪಾಂಡವರು ದೇವತಿಗಳು, ಕಾರಣ ದುರ್ಯೋಧನ, ಪಾಂಡವರ ಕೂಡ ವೈರತ್ವ ಮಾಡಬ್ಯಾಡ. ನಿನ್ನ

ಕುರುಕುಲಕ್ಕೆ ಕ್ಷೇಮ ಬೇಕಾಗಿದ್ದರೆ, ಶ್ರೀಕೃಷ್ಣಗೆ ಶರಣುಹೋಗು. ಉಳುವರೀ ತಮ್ಮಂದಿರ ಸಹ ರಾಜ್ಯ ಆಳು." ಹೀಂಗಂತ ಭೀಷ್ಮ ದುರ್ಯೋಧನಗೆ ಹೇಳಿದನು.

ದುರ್ಯೋಧನನು ಕೃಷ್ಣ ನಾರಾಯಣನೆಂದು ತಿಳದು ಡಾಂಭಿಕತನದಿಂದ ನಮಸ್ಕಾರ ಮಾಡಿದನಲ್ಲದೆ ಮನಸಾ ಸ್ಮರಿಸಲಿಲ್ಲ. ತಾನು ಗಾಯದಿಂದ ಒಂದಿದ್ದ. ಭೀಷ್ಮ ಸಂಜೀವನ ಔಷಧ ಕೊಡಲು ಸಮಾಧಾನ ಉಳ್ಳವನಾಗಿ, ಆದೇ ರಾತ್ರಿಯಲ್ಲೆ ದುರ್ಯೋಧನ ದೀಪದ ಬೆಳಕಿನಿಂದ ತನ್ನ ಶಿಬಿರಕ್ಕೆ ಹೋದನು. ಮಾರನೇ ದಿವಸ ಯುದ್ಧ ಪ್ರಾರಂಭವಾಯಿತು. ದುರ್ಯೋಧನ, ನಾಚಿಕೆಲ್ಲದವ ಎರಡನೇ ದಿವಸ ಪೆಟ್ಟು ತಿಂದು, ಕೃಷ್ಣಾರ್ಜುನರು ನರನಾರಾಯಣರೆಂದು ತಿಳದೂ ಮೂರ್ಖಾಂತಃಕರಣ ಉಳ್ಳವನಾಗಿ ಯುದ್ಧಕ್ಕೆ ಮುಂಬಿಗನಾದನು. ಕುರುಪಾಂಡವರು ರಣರಂಗದಲ್ಲಿ ಬೆನ್ನುಕೊಟ್ಟು ಓಡುವವರಲ್ಲ. ಭೀಮಸೇನ ಮುಂಬಿಗನಾಗಿ ಹೋದನು. ಸೇನಾಪತಿ ಧೃಷ್ಟದ್ಯುಮ್ನ, ಕೌರವರ ಸೈನ್ಯದ ವ್ಯೂಹ ಸಮ್ಮೋಹನಾಸ್ತ್ರ ಬಿಡಲಿಕ್ಕೆ ಕರ್ಣ ಮೊದಲಾದವರೆಲ್ಲ ಮೂರ್ಛೆಯಿಂದ ಬಿದ್ದರು. ದ್ರೋಣ ವಿಜ್ಞಾನಾಸ್ತ್ರದಿಂದ ಸಕಲರನ್ನೂ ಎಚ್ಚರಿಸಿ ಧೃಷ್ಟದ್ಯುಮ್ನನ ಕೊಲ್ಲಲಿಕ್ಕೆ ಉದ್ಯುಕ್ತನಾದನು. ಅಷ್ಟರೊಳಗೆ ಭೀಮಸೇನ ಮುಂಬಿಗನಾಗಿ ದ್ರೋಣಾಚಾರ್ಯನ ಸಾರಥಿಯನ್ನು ಕೊಂದು, ವೈರಿಗಳನ್ನೆಲ್ಲ ಓಡಿಸಿಬಿಟ್ಟನು. ಧೃಷ್ಟದ್ಯುಮ್ನನ ಎದುರಿಗೆ ಕೃತವರ್ಮ ಬಂದು ಭಯಂಕರ ಯುದ್ಧ ಮಾಡಲಾಗಿ, ಯುದ್ಧಕಾಲದಲ್ಲಿ ಕೃತವರ್ಮನ ರಥ ಛೇದಿಸಲಿಕ್ಕೆ, ಕೃತವರ್ಮ ಪರಾಜಿತನಾಗಿ ಹೋದ. ಭೀಮಸೇನ ದುರ್ಯೋಧನಗೆ ಅತಿ ವಿಚಿತ್ರ ಯುದ್ಧವಾಯಿತು. ಯುದ್ಧದಲ್ಲಿ ದುರ್ಯೋಧನನ ರಥ ಛೇದಿಸಿಹೋಯಿತು. ಭೀಮಸೇನ ದುರ್ಯೋಧನನ ಕೊರಳಿಗೆ ಬಾಣದಿಂದ ಹೊಡಿಯುಲಿಕ್ಕೆ, ದುರ್ಯೋಧನ ರಕ್ತ ಕಾರಿ ಮೂರ್ಛಿತನಾಗಿ ಬೀಳಲಿಕ್ಕೆ, ಅರಸನ ತಲಿಕೊಯ್ದುಕೊಂಡುಹೋದಾರೆಂದು ಕೃಪಾಚಾರ್ಯ ತನ್ನ ರಥದೊಳಗೆ ಹಾಕಿಕೊಂಡು ಹೋದನು. ಭೀಮಸೇನ ದುರ್ಯೋಧನನ ಸೇನಾನೆಲ್ಲ ಓಡಿಸಿಬಿಟ್ಟನು. ಅರ್ಜುನನ ರಥ ಶ್ರೀಕೃಷ್ಣ ಮಹಾವೇಗದಿಂದ ನಡಸ್ತಿಹ. ಅರ್ಜುನ ಆ ಹೊತ್ತು ಇಪ್ಪತ್ತೈದುಸಾವಿರ ರಥಿಕರನ್ನು ಕೊಂದು ಯಮಲೋಕಕ್ಕೆ ಕಳುಹಿದನು. ಸಾತ್ಯಕೀ ಅರ್ಜುನನ ಬಳಿವಿಡಿದು, ದುರ್ಯೋಧನನ ಸೇನಿನೆಲ್ಲಾ ಓಡಸ್ತಿಹ. ಆ ವ್ಯಾಳ್ಯಾದಲ್ಲಿ ಭೂರಿಶ್ರವ ಬಂದು ಭಯಂಕರ ಯುದ್ಧ ಮಾಡಿದ. ಭೂರಿಶ್ರವ ಬಹಳ ತೀಕ್ಷ್ಣನಾಗಿ ಸಾತ್ಯಕೀ ಹತ್ತು ಮಂದಿ ಮಕ್ಕಳನ್ನೂ ಕೊಂದನು. ಶರೀರವೆಲ್ಲಾ ಸೀಳೋ ಅಂಥಾ ಬಾಣಗಳಿಂದ ಸಾತ್ಯಕಿ ಭೂರಿಶ್ರವ ಭಯಂಕರ ಯುದ್ಧ ಮಾಡಿ ಉಭಯತರೂ ವಿರಥರಾದರು. ಸಾತ್ಯಕಿ ವಿರಥನಾಗಿ ಖಡ್ಗ ಹಿಡಕೊಂಡು ನಿಂದಿರಲಿಕ್ಕೆ, ಭೂರಿಶ್ರವ ಸಾತ್ಯಕೀನ್ನ ಕೈಸೆರಿ ಕೊಂಡುಹೋದಾನೆಂದು ಭೀಮಸೇನ ತನ್ನ ರಥದೊಳಗೆ ಕೂಡ್ರಿಸಿಕೊಂಡನು. ಭೀಮಸೇನ ಕೊಂಡುಹೋದಾನೆಂದು ದುರ್ಯೋಧನ

ತನ್ನ ರಥದೊಳಗೆ ಭೂರಿಶ್ರವನ್ನ ಕೂಡ್ರಿಸಿಕೊಂಡು ಹೋದನು. ಅರ್ಜುನ ವಿಷ-ಸದೃಶ ತೀಕ್ಷ್ಣ ಬಾಣಗಳಿಂದ ಎಚ್ಚತಿಹ. ಯುದ್ಧದಲ್ಲಿ ಭೀಮಾರ್ಜುನರು ಬಹಳ ದರ್ಪ ಉಳ್ಳವರಾಗಿಹೋರು. ಅರ್ಜುನನ ಎದುರಿಗೆ ನಿಂದರಲಾರದೆ ಭೀಷ್ಮ, ರಾತ್ರಿಯಾಯಿತೆಂದು ಸೇನಾಪಹಾರ ಮಾಡಿಕೊಂಡು ಶಿಬಿರಕ್ಕೆ ಹೋದನು.

ನಾಲ್ಕನೇ ದಿವಸ, ದುರ್ಯೋಧನ ಭೀಷ್ಮನ್ನ ಮುಂದೆ ಮಾಡಿಕೊಂಡು, ಸೇನಾಬಲ ಕೊಂಡು ರಣಭೂಮಿಗೆ ಹೋದನು. ಪಾಂಡವರು ಸೇನಿಯಲ್ಲಿ ಭೀಮ-ಸೇನನ್ನ ಮುಂಬಿಗನ್ನ ಮಾಡಿಕೊಂಡು ಯುದ್ಧಕ್ಕೆ ಬಂದರು. ಭೀಮಸೇನ ತನ್ನ ಬಾಹುಪರಾಕ್ರಮದಿಂದ ರಥಿಕರನ್ನೆಲ್ಲ ಓಡಸ್ತಿಹ. ಅನೇಕ ಕುದರಿಗಳ ಕೊಂದು ಕೋದು ಬಿಸ್ಟತಿಹ. ಗಜ ತುರುಗದ ಮ್ಯಾಲೆ ಏರಿದಂಥ ಶೂರರನ್ನ ಹತಗೈತಿಹ. ಮಹಾರಥಿಕರನ್ನ ಓಡಸಲಿಕ್ಕೆ, ಅಶ್ವತ್ಥಾಮ ಭೀಷ್ಮ ದ್ರೋಣಾದಿಗಳು ಭೀಮಸೇನನ ಎದುರಿಗೆ ನಿಂದರಲಾರದೆ ಓಡಿಹೋದರು. ರಣರಂಗ, ಕೌರವರದು ಹಾಳು ಬಿತ್ತು. ಅಷ್ಟರೊಳಗೆ ನರಕಾಸುರನ ಮಗ ಭಗದತ್ತ ಕುಬೇರನವತಾರ, ಸುಪ್ರತೀಕವೆಂಬ ಆನಿ ಏರಿಕೊಂಡು, ವರಾಹದೇವರು ಕೊಟ್ಟಂಥ ಅಸ್ತ್ರವುಳ್ಳವನಾಗಿ, ಭೀಮಸೇನನ ಮ್ಯಾಲೆ ಬಾಣದ ಮಳಿಗರೆಯತ ಬರಲಿಕ್ಕೆ, ಭಗದತ್ತನ ಬಾಣ ಭೀಮಸೇನನ ದೇಹದಲ್ಲಿ ಪುಂಖಪರಿಯಂತ ಹೋಗಲಿಕ್ಕೆ, ತನ್ನ ತಂದೀಗೆ ಬಹಳ ವ್ಯಥಿ ಆಗತದೆಂದು ಘಟೋತ್ಕಚ ಬಂದು ಭೀಮಸೇನನ್ನ ಕೇಳಥಾನೆ. 'ನೀ ದೊಡ್ಡ ಪರಾಕ್ರಮಿ, ನೀಚನ ಕೂಡ ಯುದ್ಧ ಮಾಡುವುದು ನೀತವಲ್ಲ. ನಾ ನಿನ್ನ ಕುಮಾರ. ನನಗೆ ಆಜ್ಞಾಪಿ ಕೊಡಬೇಕು' ಎಂದು ಕೇಳಿ, ತನ್ನ ತಂದೀ ಕೈಯ ಆಜ್ಞೆ ಕೊಂಡು ಘಟೋತ್ಕಚ, ತನ್ನ ಮಾಯದಿಂದ ನಾಲ್ಕು ರೂಪ ಉಳ್ಳವನಾಗಿ, ನಾಲ್ಕು ಆನೀ ಮ್ಯಾಲೆ ಕುಳಿತು, ಭಗದತ್ತನ ಮ್ಯಾಲೆ ಬಾಣಪ್ರಯೋಗ ಮಾಡಲಿಕ್ಕೆ ಯತ್ನ ನಡಸಿದನು. ಭೀಮಸೇನ ಏನುಕಾರಣ ಯುದ್ಧ ಮಾಡೋದು ಬಿಟ್ಟ ಎಂದರೆ, ಭಗದತ್ತನಲ್ಲಿ ವರಾಹದೇವರ ಕೋರಿದಾಡಿ ಇಹೋದು. ವೈಷ್ಣವಾಸ್ತ್ರ ತನ್ನ ಪ್ರಾಣಕ್ಕೆ ಬಂದರೆ ವರಾಹಾಸ್ತ್ರ ಹಾಕ್ಯಾನು. ತಾ ವೈಷ್ಣವ, ವರಾಹದೇವರ ಅಸ್ತ್ರ ವ್ಯರ್ಥವಾಗಬಾರದು. ಸ್ವಾಮಿ ಸತ್ಯಸಂಕಲ್ಪ, ಒಮ್ಮಿ ಅಸ್ತ್ರ ಸುಳ್ಳುಮಾಡಿ ತನ್ನ ಉಳಿಸ್ಯಾನು. ಆದರೂ ತಾ ಮುಂದರಿದು ಹೋಗಬಾರದು. ಭಗದತ್ತ ವೈಷ್ಣವಾಸ್ತ್ರ ಮರತ ನ್ಯಾಳ್ಯಾದಲ್ಲೆ ಅವನ್ನ ಮರ್ದಿಸಬೇಕೆಂದು, ತನ್ನ ಮಗನ್ನ ಮುಂದು ಮಾಡಿದನು. ಘಟೋತ್ಕಚ ನಾಲ್ಕು ರೂಪ ಧರಿಸಿ ಭಗದತ್ತನ ಆನಿ ಮರ್ದಿಸಲಿಕ್ಕೆ, ಆನೀ ಪ್ರಾಣ ಹೋಗೋ ಸಮಯ ಬಂತು. ಆನೀ, ಪ್ರಾಣ ಹೋಗೋ ಸಮಯ ದಲ್ಲಿ ಕೆಟ್ಟ ಧ್ವನಿಯಿಂದ ಕೂಗಲಿಕ್ಕೆ, ಭಗದತ್ತಗೆ ಸಹಾಯವಾಗಬೇಕೆಂದು ಭೀಷ್ಮ ದ್ರೋಣಾದಿಗಳು ಬರಥಾರೆ. ಘಟೋತ್ಕಚನ ಹಿಂಭಾಗದಲ್ಲಿ ಭೀಮಸೇನನ್ನ ಕಂಡು, ಭೀಷ್ಮಾದಿಗಳು ಬಹಳ ಅಂಜಿಕೆ ಉಳ್ಳವರಾಗಿ, ಯುದ್ಧಕ್ಕೆ ಬರಲಿಕ್ಕೆ ಅಸ್ತಮಾನ-ವಾಯಿತು. ಭೀಷ್ಮ ಶಿಬಿರಕ್ಕೆ ಹೋದನು.

ಇನ್ನು ಐದನೇ ದಿವಸ, ಕೌರವ ಪಾಂಡವರು ಸನ್ನದ್ಧರಾಗಿ ನಿಂತರು. ಅರ್ಜುನನ ಮೊದಲನೆ ಮಗ, ನಾಗಕನ್ನಿಕೆ (ಉಲೂಪಿಕಾ) ಯಲ್ಲಿ ಹುಟ್ಟಿದವ, ಇರಾವಂತ, ಶಕುನಿಯು ಆರು ಮಂದಿ ಮಕ್ಕಳನ್ನೂ ಹೊಡದು ಬಿಟ್ಟನು. ಶಕುನೀ ಆರು ಮಂದಿ ಮಕ್ಕಳ ತಲಿ ಕಡಿಯಲಿಕ್ಕೆ, ದುರ್ಯೋಧನಾದಿಗಳು ಮತ್ತಷ್ಟು ಅಂಜಿಕೆ ಉಳ್ಳವರಾದರು. ಅಲಂಬುಸನೆಂಬ ರಾಕ್ಷಸನು ಇರಾವಂತನ ಕೂಡ ಯುದ್ಧಕ್ಕೆ ಮುಂಬಿಗನಾದನು. ರಾಕ್ಷಸ ತನ್ನ ಮಾಯಾಸರ್ಜನಿ ಮಾಡತ ಬರಲಿಕ್ಕೆ, ಇರಾವಂತ ಅವರಿಗೆ ಪ್ರತೀಕಾರ ಮಾಯಾ ತಾನೂ ಮಾಡಿದನು. ಉಭಯತರೂ ಬಹಳ ಪರಾಕ್ರಮಿಗಳು. ಅಪಾರ ರಾಕ್ಷಸರು ಅಶ್ವಾರೂಢರಾಗಿ ಯುದ್ಧಕ್ಕೆ ಬರಲಿಕ್ಕೆ, ಇರಾವಂತ ಅಪಾರ ರಾಕ್ಷಸರನ್ನೂ ಕೊಚ್ಚಿಬಿಡುವ. ಈ ಪ್ರಕಾರ ಉಭಯತರೂ ಮಾಯಾಸರ್ಜನಿ ಮಾಡಿದರು. ಇರಾವಂತ ಮಾತೃಭಾವ ಸರ್ಪಾ-ಕಾರನಾಗಿ ಹೋಗಲಿಕ್ಕೆ, ಅಲಂಬುಸ ರಾಕ್ಷಸ ಗರುಡನಾಗಿ ಇರಾವಂತನ ತುಂಡು-ತುಂಡು ಮಾಡಿ ಬಿಟ್ಟನು. ಅರ್ಜುನನ ಮಗ ಇರಾವಂತನ ಮರಣವಾರ್ತೆ ಕೇಳಿ, ಘಟೋತ್ಕಚ ತನ್ನ ತಮ್ಮ ಸತ್ತನೆಂದು ಕೋಪಾವಿಷ್ಟನಾಗಿ, ಸಿಂಹನಾದ ಮಾಡತ ಒದರತಲೇ ಬರಲಿಕ್ಕೆ ಭೂಕಂಪವಾಯಿತು. ಸಪ್ತದ್ವೀಪ, ಸಪ್ತಸಮುದ್ರ, ಮೇರು, ಮಂದರಾಚಲಗಳು ನಡುಗಿದವು. ಅಲಂಬುಸ ಘಟೋತ್ಕಚನ ಎದುರಿಗೆ ನಿಂದರ ಲಾರದೆ, ಸಮಸ್ತ ವೀರರ ಸಹಿತ ಓಡಿಹೋದನು. ಯುದ್ಧಕ್ಕೆ ಸೇನಾನಾಯಕರು ದಾರುದಾರೂ ಬಾರರು. ದುರ್ಯೋಧನ ತಾನೇ ಯುದ್ಧಕ್ಕೆ ಬಂದ. ದುರ್ಯೋ-ಧನ ಘಟೋತ್ಕಚನ ನಾಲ್ಕು ಮಂದಿ ಪ್ರಧಾನೇರನ್ನ ಕೊಂದನ್ತು. ಸೇನಿನೆಲ್ಲ ಓಡಿಸಲಿಕ್ಕೆ, ಘಟೋತ್ಕಚ ದುರ್ಯೋಧನನ ವ್ಯೂಹ ಬಾಣದ ಮಳಿಗರೆಯಲು, ದುರ್ಯೋಧನ ಒಂದು ಬಾಣದಿಂದ ವೈರಿಯನ್ನ ಹೊಡೆಯಲು, ಘಟೋತ್ಕಚ ತೂರ್ಖಿ ಉಳ್ಳವನಾಗಿ ಬೀಳತ, ಧೈರ್ಯ ಉಳ್ಳವನಾಗಿ ಮತ್ತೆ ಯುದ್ಧ ಮಾಡ ಹೊಕ್ಕನು ಘಟೋತ್ಕಚ ಭಯಂಕರ ಯುದ್ಧ ಮಾಡಲಿಕ್ಕೆ, ಅರಸು ರಾಕ್ಷಸನ ಕೈಯ ಸತ್ತರೆ ಸೇನಾ ಮುಣಗತದೆಂದು, ದ್ರೋಣ, ಶಲ್ಯ, ಅಶ್ವತ್ಥಾಮ, ಭೂರಿ-ಶ್ರವ, ಕೃತವರ್ಮ ಮೊದಲಾದವರು, ದುರ್ಯೋಧನನ ಪಕ್ಷವಾಗಿ ಬರಲಿಕ್ಕೆ, ಘಟೋತ್ಕಚ ಆಕಾಶಕ್ಕೆ ಹಾರಿ ಸ್ಥೂಲಸ್ಥೂಲ ಬಾಣಗಳ ಮಳಿಗರೆದನು. ಮಗನ ಕೂಡ ಬಹಳ ಮಂದಿ ಯುದ್ಧಕ್ಕೆ ಬಂದರೆಂದು, ಭೀಮಸೇನ ತಾನೂ ಯುದ್ಧಕ್ಕೆ ಬಂದನು. ದ್ರೋಣಾಚಾರ್ಯನ ವ್ಯೂಹ ಬಾಣದ ಮಳಿಗರೆಯಲಿಕ್ಕೆ, ಮೂರ್ಖಿ ಯಿಂದ ದ್ರೋಣ ರಥದೊಳಗೆ ಬಿದ್ದನು. ಅಶ್ವತ್ಥಾಮನ ರಥ ಪುಡಿಪುಡಿ ಮಾಡಿದನು. ಸಮಸ್ತ ಮಹಾರಥಿಕರೂ ವಿರಥರಾದರು. ಭೂಮೀವ್ಯೂಹ ನಿಂತ ಕೌರವರ ಸೇನಿನೆಲ್ಲ ಓಡಿಸಲಿಕ್ಕೆ, ಆಕಾಶಮಾರ್ಗದಿಂದ ಘಟೋತ್ಕಚ ಬಾಣ ಮಳಿಗರೆದದ್ದರಿಂದ ಉಭಯತರ ಬಾಣಗಳಿಂದ ಕೌರವಸೇನಿ ತಮ್ಮತಮ್ಮ ಶಿಬಿರದ ಪರಿಯಂತ

ಓಡಿಹೋಯಿತು. ರಣರಂಗ ಹಾಳುಬಿತ್ತು. ತಂದಿ ಮಕ್ಕಳು ಸಿಂಹನಾದ ಮಾಡತ ನಿಂದರಲಿಕ್ಕೆ, ದಿಕ್ಕುವಿದಿಕ್ಕುಗಳು ಸ್ವರಗೊಂಡು ಒದರತಾ ಇಹೋವು.

ಭೀಷ್ಮ, ದ್ರೋಣ ಇನ್ನು ಹಗಲೇ ಯುದ್ಧ ಸಾಕುಮಾಡಬಾರದೆಂದು ರಣ-ಭೂಮಿಗೆ ಬಂದರು. ದುರ್ಯೋಧನ ಭೀಷ್ಮನ ಸಮೀಪಕ್ಕೆ ಬಂದು, 'ಘಟೋತ್ಕಚ ಮಹಾ ಪ್ರಬಲನಾಗ್ಯಾನೆ. ಅವನ ಸಾಯಿಸೋ ಉಪಾಯ ಹೇಳು' ಎನಲಿಕ್ಕೆ, 'ಎಲೈ ದುರ್ಯೋಧನ, ನೀ ಅರಸು ರಾಕ್ಷಸನ ಎದುರಿಗೆ ಹೋಗಬ್ಯಾಡ' ಎಂದು ಅರಸಗೆ ಬುದ್ಧಿ ಹೇಳಿ, ಭಗದತ್ತನ ಕಳುಹಿದನು. ಭೀಷ್ಮನ ಅಪ್ಪಣೆಯಿಂದ ಭಗದತ್ತ ಘಟೋತ್ಕಚನ ವ್ಯೂಹ ಬಾಣದ-ಮಳಿಗರೆಯಲಿಕ್ಕೆ, ಘಟೋತ್ಕಚ ಬಾಣಗಳ ಈಡ್ಯಾಡಿದನು. ಭಗದತ್ತ ಬಾಣದಿಂದ ಪೀಡಿತನಾಗಿ, ಶೂಲಾಯುಧ ಹಾಕಲಿಕ್ಕೆ ಘಟೋತ್ಕಚ ಶೂಲಾಯುಧ ಕಬ್ಬು ಮುರಿದಂತೆ ಮುರದುಬಿಟ್ಟನು. ಭೀಮಸೇನ ತನ್ನ ಮಗನ್ನ ಸಂರಕ್ಷಿಸಬೇಕಾಗಿ, ಭಗದತ್ತ ಈ ವ್ಯೂಹ್ಯಾದಲ್ಲಿ ವರಾಹಾಸ್ತ್ರ ಮರತಾನೇಂದು ತಿಳದು ಎದುರಿಗೆ ಒಂದು ನಿಂದರಲಿಕ್ಕೆ, ಭಗದತ್ತ ತನ್ನ ಆನಿಗೆ ಅಂಕುಶಪೆಟ್ಟು ಹೊಡದು ಭೀಮಸೇನನ ವ್ಯೂಹ ಹಾಕಲಿಕ್ಕೆ ಭೀಮಸೇನ ಬಾಣಗಳಿಂದ ಹೊಡೆದ. ನಿಂದರಿಸಿ, ಸೇನಾನಾಯಕರ ಕುದುರಿಗಳ ಸಹ ಓಡಸ್ತಿಹ. ಭಗದತ್ತನ ಬಾಣಗಳಿಂದ ಭೀಮಸೇನನ ಕುದರಿಗಳು ಪೀಡಿತವಾಗಿಹೋವು. ಭೀಮಸೇನ ತನ್ನ ಗದಿಯಿಂದ ಸುಪ್ರತೀಕ ಎಂಬ ಆನಿಯನ್ನು ಕೊಲ್ಲಲಿಕ್ಕೆ, ಭಗದತ್ತ ಸಿಟ್ಟಿನಿಂದ ವರಾಹಾಸ್ತ್ರ ಹಾಕ್ಯಾನೆಂದು ಹಿಂದಕ್ಕೆ ತಿರಗಿ ಹೋಗಲಿಕ್ಕೆ, ಕೃಷ್ಣಾರ್ಜುನರು ಭೀಮಸೇನಗೆ ಸಹಾಯಕರಾಗಿ ರಥ ಓಡಿಸ್ತಲೇ ಒಂದರು. ಭಗದತ್ತ ತನಗೆ ಒದಕೋ ಅವಸ್ಥಿ ಉಳದಿಲ್ಲವೆಂದು ಬೆನ್ನ ಕೊಟ್ಟು ಓಡಲಿಕ್ಕೆ, ಭೀಮಾರ್ಜುನರು ಕೌರವಸೇನಿ ಮರ್ದಿಸತ ಹೋದರು. ಅವತ್ತು ಅಸ್ತಮಾನವಾಯಿತು. ಭೀಷ್ಮಾದಿಗಳು ತಮ್ಮ ಶಿಬಿರಕ್ಕೆ ಹೋದರು.

ರಾತ್ರೀಭಾಗದಲ್ಲ ದುರ್ಯೋಧನನು ಭೀಷ್ಮನ ಸಮೀಪಕ್ಕೆ ಬಂದು 'ಎಲೈ ಪಿತಾಮಹ, ನಿನ್ನ ಪ್ರತಿಜ್ಞಾ ವ್ಯರ್ಥವಾಯಿತು. ಪಾಂಡವರು ನಿನ್ನ ಮೊಮ್ಮಕ್ಕಳು. ಅವರನ್ನ ನೀ ಸ್ನೇಹದಿಂದ ಕೊಲ್ಲೋದಿಲ್ಲ. ನಮ್ಮ ಸೇನಿ ಕೊಲ್ಲಸ್ತಿದಿ. ನಾವು ಪರಾಜಿತರಾಗಬೇಕು, ಪಾಂಡವರು ಜಯಶೀಲರಾಗಬೇಕೆಂದು ನಿನ್ನ ಮನಸ್ಸಿನಲ್ಲಿದೆ. ನಾನು ಯುದ್ಧ ಮಾಡೋದಿಲ್ಲ' ಎಂದು ನಿಷ್ಠುರ ವಚನಗಳಾಡಲಿಕ್ಕೆ, 'ಎಲೈ ದುರ್ಯೋಧನ, ನಾವು ಯುದ್ಧದಲ್ಲಿ ಒದುಕಬೇಕೆಂದು ಇಚ್ಛಿ ಮಾಡುವುದಿಲ್ಲ. ನನಗೆ ನಿಷ್ಠುರ ವಚನಗಳಾಡಬ್ಯಾಡ. ನಾ ಶಕ್ತಿ ಮೀರಿ ಯುದ್ಧ ಮಾಡಥೀನಿ. ಪಾಂಡವರು ಸೋಲದಿದ್ದರೆ ನಾನು ಏನು ಮಾಡಲಿ! ನನ್ನ ಯುದ್ಧಪರೀಕ್ಷ ನಾಳೆ ಸೋಡು!' ಈ ಪ್ರಕಾರ ಭೀಷ್ಮ ದುರ್ಯೋಧನನ್ನ ಸಮಾಧಾನ ಮಾಡಿ ಕಳುಹಿಸಿ ಕೊಟ್ಟನು.

ಪುನಃ ಆರನೇ ದಿವಸ ಯುದ್ಧ ಪ್ರಾರಂಭವಾಯಿತು. ದುರ್ಯೋಧನನ ಕೈಯ ನಿಷ್ಠುರ ವಚನಗಳಾಡಿಸಿಕೊಂಡು, ಭೀಷ್ಮ ಸಿಂಹನಾದ ಮಾಡತ ಗರ್ಜಿಸತ, ಪಾಂಡವರ ಸೇನಿನೆಲ್ಲ ಮರ್ದಿಸತ ಬರಲಿಕ್ಕೆ, ಚೈದ್ಯ ಪಾಂಚಾಲದೇಶವರು, ಸಿಂಹನಿಂದ ಕ್ಷುದ್ರ ಮೃಗಗಳು ಹ್ಯಾಂಗೆ ಓಡತವೆ, ಹಾಂಗೆ ಓಡಿಹೋದರು. ಭೀಷ್ಮ ಬೆನ್ನತ್ತಿ ಹೋಗಥಾನೆ. ಸತ್ತಾನೆಂದು ಹಿಂಭಾಗದಲ್ಲಿ ದುರ್ಯೋಧನಾದಿಗಳು ಬರಕಿಹೋರು. ಪಾಂಡವರ ಸೇನಿ ನಾಲ್ಕೂ ದಿಕ್ಕಿಗೆ ಓಡತದೆ. ಅಷ್ಟರೊಳಗೆ ಅರ್ಜುನಪುತ್ರ ಅಭಿಮನ್ಯು ಭೀಷ್ಮನ ಎದುರಿಗೆ ಬರಲಿಕ್ಕೆ, ಅಲಂಬುಸ ರಾಕ್ಷಸ ಅಡ್ಡ ಬಂದು ಭಯಂಕರ ಯುದ್ಧ ಮಾಡಲಿಕ್ಕೆ, ಕೇಶವನ ಸೋದರಳಿಯ ಯುದ್ಧದಲ್ಲಿ ರಾಕ್ಷಸನ ಓಡಿಸಿಬಿಟ್ಟ. ಭೀಷ್ಮಗೆ ಅಭಿಮನ್ಯುಗೆ ಯುದ್ಧ ಆಗೋದರೊಳಗ, ಭೀಷ್ಮನ ರಕ್ಷಣಾರ್ಥ ದುರ್ಯೋಧನ ಎದುರಿಲಿ ನಿಂತನು. ಅಭಿಮನ್ಯುಗೆ ದುರ್ಯೋಧನಗೆ ಭಯಂಕರ ಯುದ್ಧ ಹತ್ತಿತು. ಅಭಿಮನ್ಯುನ ಧ್ವಜಸ್ತಂಬ ಕಡಿದುಹೋಯಿತು, ಸಾರಥಿ ಸತ್ತ. ಇಷ್ಟಾಗಲಿಕ್ಕೆ ಭೀಮಸೇನ ದುರ್ಯೋಧನನ ಕುದರಿ ಸಹ ರಥ ಪುಡಿಪುಡಿಗೈಯಲು, ಅರಸು ವಿರಥನಾದನೆಂದು ದ್ರೋಣಾಚಾರ್ಯ, ಅಶ್ವತ್ಥಾಮ, ಭಗದತ್ತ, ಚಿತ್ರಸೇನ ಮೊದಲಾದವರು, ದುರ್ಯೋಧನನ ಸಹಾಯವಾಗಿ ಬಂದರು. ಭೀಮಸೇನ ತನ್ನ ಗದಿಯಿಂದ ಬಂದವರನ್ನೆಲ್ಲ ಓಡಿಸಿಬಿಟ್ಟ. ಚಿತ್ರಸೇನ ಗದೀಪೆಟ್ಟು ತಪ್ಪಿಸಿಕೊಂಡು ರಥದಿಂದ ಇಳದು, ಜೀವ ಉಳಹಿಸಿಕೊಂಡು ಓಡಿಹೋಗಲಿಕ್ಕೆ, ದುರ್ಯೋಧನ ತನ್ನ ತಮ್ಮ ಉಳದನೆಂದು ಸಂತೋಷ ಉಳ್ಳವನಾದ. ಭೀಷ್ಮ ತೀಕ್ಷ್ಣನಾಗಿ ಪಾಂಡವರನ್ನೆಲ್ಲ ಓಡಿಸ್ತಿಹ. ಹಾಂಗೆ ಕರೂಷದೇಶದವರು ಮೊದಲಾದ ಪಾಂಡವರ ಪಕ್ಷಪಾತಿಗಳು, ಮಹಾರಥಿಕರು, ಹತ್ತುಸಾವಿರ ಮಂದಿಯನ್ನು ಕೊಂದನು. ರಥಿಕರೊಳಗೆ ಮಹಾಶ್ರೇಷ್ಠರನ್ನ ಕೊಂದು ಸಿಂಹನಾದ ಮಾಡತಿಹ. ಸಿಂಹನಿಂದ ನರಿಗಳು ಹ್ಯಾಂಗೆ ಓಡತವೆ, ಹಾಂಗೆ ಪಾಂಡವರ ಸೇನಿ ಓಡಲಿಕ್ಕೆ, ಭೀಷ್ಮನ ಕೀರ್ತಿ ಬಹಳ ಹೆಚ್ಚಿತು. ದ್ರೋಣ, ವಿರಾಟರಾಯನ ಮಗ ಶಂಖನ್ನ ಕೊಂದನು. ಸೇನಿ ಮೇಳನ ಮಾಡಿಕೊಂಡು ನಿಶಿ ಆಗಲಾಗಿ, ಭೀಷ್ಮ ದ್ರೋಣರು ಜಯಶೀಲರಾಗಿ ತಮ್ಮ ಶಿಬಿರಕ್ಕೆ ಹೋದರು. ಭೀಮಾರ್ಜುನರು ಕೌರವಸೇನಿ ಸಂಹರಿಸಿ ಜಯದಿಂದ ತಮ್ಮ ವಸ್ತ್ರಗೃಹಗಳಿಗೆ ಹೋದರು.

ಪಾಂಡವರು, ಭೀಷ್ಮನು ಕೊಲ್ಲೋ ಪರಾಕ್ರಮ ಕಂಡು, ಬಹಳ ಅಂಜಿಕಿ ಉಳ್ಳವರಾಗಿ, 'ನಾವು ಇನ್ನೇನು ಉಪಾಯ ಮಾಡುವ? ಭೀಷ್ಮ ಬಹಳ ತೀಕ್ಷ್ಣನಾಗ್ಯಾನೆ' ಎಂದು ಭೀಷ್ಮನ ಕೊಲ್ಲೋದಕ್ಕೆ ತಮ್ಮೊಳಗೆ ತಾವು ವಿಚಾರ ಮಾಡಿ, ರಾತ್ರೀಭಾಗದಲ್ಲಿ ತಮ್ಮಂದಿರ ಸಹವಾಗಿ ಧರ್ಮರಾಯ ಕೃಷ್ಣನ್ನ ಕೂಡಿಕೊಂಡು, ಭೀಷ್ಮನ ಸಮೀಪಕ್ಕೆ ಬಂದಿದ್ದಾರೆ. 'ಎಲೈ ಪಿತಾಮಹ, ಮಹಾ ತೀಕ್ಷ್ಣನಾಗಿ

ಯುದ್ಧ ಮಾಡಕಿದ್ದಿ. ನಿನ್ನ ಕೊಲ್ಲೋಣ ನಮ್ಮಿಂದಾಗದು. ನಿನ್ನ ವಧಿ ಉಪಾಯಗಳ ಹೇಳು' ಎಂದು ಕೇಳಿದರು. ಭೀಮಾರ್ಜುನರು ಭೀಷ್ಮನ್ನ ಕೊಲ್ಲೋದರಲ್ಲಿ ಸಮರ್ಥರಾದರೂ, ಭೀಷ್ಮ ಕುರುವೃದ್ಧ, ಹಿರಿಯನ ಆಜ್ಞೆ ಕೊಂಡು ಕೊಲ್ಲಬೇಕೆಂದು ಅಪ್ಪಣೆ ಬೇಡಲಿಕ್ಕೆ ಬಂದಾರೆ. ಕೃಷ್ಣ ಏನುಕಾರಣ ಬಂದನೆಂದರೆ, ಭೀಷ್ಮನ್ನ ಪ್ರೇರಿಸಿ, ವಧೋಪಾಯ ಹೇಳಿಸಬೇಕಾಗಿ ಹೋಗಿದ್ದನು. ಭೀಷ್ಮ ಧರ್ಮರಾಯನ್ನ ಕುರಿತು ಮಾತನಾಡಥಾನೆ. 'ಹೇ ಧರ್ಮರಾಯ, ನನಗೆ ಪ್ರತಿವೀರರು ಎದುರಿಗೆ ನಿಂತಪಕ್ಷವೇ ನಾನು ಯುದ್ಧ ಮಾಡೇನು. ನಿಮ್ಮಲ್ಲಿ ಶಿಖಂಡಿ ಇದ್ದಾನೆ. ಅವನನ್ನ ಮುಂದುಮಾಡಿಕೊಂಡು ಬಂದ ಪಕ್ಷವೇ ನಾನು ಯುದ್ಧ ಮಾಡುವ ಹಾಂಗೆ ಇಲ್ಲ. ನೀವು ಶಿಖಂಡಿ ಮುಂದುಮಾಡಿಕೊಂಡು ಬಾಣಪ್ರಯೋಗ ಮಾಡಿರಿ. ಅವೇ ನನ್ನ ವಧಿಗೆ ಉಸಾಯ' ಎಂದು ಭೀಷ್ಮ ಹೇಳಿದನು. ಅದೇ ರಾತ್ರೀಲಿ ಧರ್ಮರಾಯ ತನ್ನ ತಮ್ಮಂದಿರ ಸಹವಾಗಿ ಶಿಬಿರಕ್ಕೆ ಬಂದನು.

ಬೆಳಗಾದಮ್ಯಾಲೆ ಶಿಖಂಡಿ ಮುಂದುಮಾಡಿಕೊಂಡು—ಬೆನ್ನುಗೊಂಡು ಅರ್ಜುನ ಸಂರಕ್ಷಿಸತಿಹ, ಭೀಷ್ಮನ್ನ ದುಶ್ಶಾಸನ ಸಂರಕ್ಷಿಸತಿಹ, ಮಿಗಿಲಾದ ರಾಯರೆಲ್ಲ ಭೀಷ್ಮನ್ನ ರಕ್ಷಿಸತ ಬರತಿಹೋರು—ಅಷ್ಟೂ ರಾಯರ್ನ ಭೀಮಸೇನ ನಿವಾರಿಸ್ತಿಹ. ಸಾತ್ಯಕಿ ಎದುರಿಗೆ ಅಲಂಬುಸ ರಾಕ್ಷಸ ವಜ್ರಸದೃಶ ಬಾಣದಿಂದ ಹೊಡೆಹೊಕ್ಕನು. ಅದಕ್ಕೆ ಪ್ರತೀಕಾರ ಸಾತ್ಯಕಿ ಬಾಣಗಳ ಎಚ್ಚಲಿಕ್ಕೆ, ಅಲಂಬುಸ ಮಾಯಾಸರ್ಜನಿ ಮಾಡಿದ. ಸಾತ್ಯಕಿ ತನ್ನ ಬಾಣದಿಂದ ರಾಕ್ಷಸನ್ನ ಓಡಿಸಿಬಿಟ್ಟ. ಶಿಖಂಡೀನ್ನ ಹಿಂಭಾಗದಲ್ಲಿ ಅರ್ಜುನ ರಕ್ಷಿಸ್ತಿಹ. ಭೀಷ್ಮನ ಎದುರಿಗೆ ಶಿಖಂಡಿ ಮುಂದುಮಾಡಿಕೊಂಡು ಅರ್ಜುನ ತೀಕ್ಷ್ಣ ಬಾಣ ಹೊಡಿಯಲಾಗಿ, ಭೀಷ್ಮನ ಸಂರಕ್ಷಣಾರ್ಥ ದ್ರೋಣಾಚಾರ್ಯ, ಅಶ್ವತ್ಥಾಮ, ದುರ್ಯೋಧನ, ಭೂರಿಶ್ರವ, ಭಗದತ್ತ, ಶಲ್ಯ, ಸುಶರ್ಮ ಮೊದಲಾದವರು ಭೀಷ್ಮನ್ನ ವಹಿಸಿಕೊಂಡು ಯುದ್ಧಕ್ಕೆ ಬರಲಾಗಿ, ಭೀಮಸೇನ ತನ್ನ ಗದಿಯಿಂದ ಅಷ್ಟೂ ಮಂದೀನ್ನ ಓಡಿಸಿಬಿಟ್ಟನು. ಅಷ್ಟರೊಳಗೆ ಭಗದತ್ತ ಬಹಳ ಧೈರ್ಯ ಮಾಡಿ ಅರ್ಜುನನ್ನ ನಿರೋಧಿಸೇನಂದು ಬರಲಿಕ್ಕೆ, ಭೀಮಸೇನನ ಪೆಟ್ಟು ತಾಳಲಾರದೆ ಓಡಿಹೋದನು. ಇಷ್ಟಾಗಲಿಕ್ಕೆ ಧರ್ಮರಾಯ ನಕುಲ ಸಹದೇವರಿಂದ ಯುಕ್ತನಾಗಿ, ಭೀಷ್ಮನ ಎದುರಿಗೆ ಯುದ್ಧಕ್ಕೆ ಬಂದು ಹತ್ತು ಕುದರಿ ಕೊಂದುಬಿಟ್ಟನು. ಶಕುನಿಯನ್ನು ಸೋಲಿಸಿ, ರಾಯ ಭೀಷ್ಮನ ಎದುರಿಗೆ ನಡಿಯಲಿಕ್ಕೆ, ಅರಸು ಧರ್ಮರಾಯ ಯುದ್ಧಕ್ಕೆ ಹೋದನೆಂದು ವಿರಾಟರಾಯ, ದ್ರುಪದರಾಯ, ದ್ರೌಪದೀ ಐದೂ ಮಂದಿ ಮಕ್ಕಳು, ಪ್ರತಿವಿಂಧ್ಯ ಮೊದಲಾದವರು ಬಂದರು. ಧೃಷ್ಟದ್ಯುಮ್ನಗೆ ಜಯದ್ರಥಗೆ ಯುದ್ಧ ಹತ್ತಿತು. ಧೃಷ್ಟದ್ಯುಮ್ನ ವಜ್ರಸದೃಶ ಬಾಣ ಎಚ್ಚಿ, ಜಯದ್ರಥನ ಕುದರಿ ಸಾರಥಿ

ಸಾಯಗೊಟ್ಟು, ಅವನನ್ನ ಓಡಿಸಿಬಿಟ್ಟನು. ಅಲ್ಲಿಂದ ಭೀಷ್ಮನ ಎದುರಿಗೆ ಬಂದನು. ಪಾಂಚಾಲರು, ಧೃಷ್ಟದ್ಯುಮ್ನ, ಶಿಖಂಡೀ ಇವರುಗಳು ಭೀಷ್ಮನವ್ಯಾಲೆ ಬಾಣದ ಮಳಿಗರೆಯಲಿಕ್ಕೆ, ಶಿಖಂಡೀ ಸ್ತ್ರೀಪೂರ್ವಕನು, ಹೆಂಗಸಿನವ್ಯಾಲೆ ಕೈ ಮಾಡ-ಬಾರದೆಂದು—ತನ್ನ ಪ್ರತಿಜ್ಞೆ, ಹೆಂಗಸಿನ ಧ್ವನಿ ಹೆಂಗಸಿನ ಹೆಸರು ಇದ್ದವನವ್ಯಾಲೆ ಬಾಣ ಎಚ್ಚಬಾರದೆಂದು—ರಣರಂಗದಲ್ಲಿ ಭೀಷ್ಮ ಸುಮ್ಮಗೆ ನಿಂದರಲಿಕ್ಕೆ, ದುರ್ಯೋಧನನ ತಮ್ಮ ದುರ್ಮರ್ಷಣನೆಂಬುವ, ಕೋಪಾವಿಷ್ಟನಾಗಿ ಬಾಣದ ಮಳಿಗರೆಯುತ ಬರಲಿಕ್ಕೆ, ಅರ್ಜುನ ಶಿಖಂಡೀನ್ನ ಸಂರಕ್ಷಿಸತಿಹ. ಅಷ್ಟರೊಳಗೆ ದುಶ್ಶಾಸನ, ಶಿಖಂಡೀ ಬಲ ಮುರಿಯಬೇಕೆಂದು ಅರ್ಜುನನ ವ್ಯಾಲೆ ಬಾಣ-ಪ್ರಯೋಗ ಮಾಡತಿಹ. ಅರ್ಜುನ ದೊಡ್ಡ ಪರಾಕ್ರಮಿ, ತನ್ನ ಬಾಣಗಳಿಂದ ದುಶ್ಶಾಸನನ್ನ ನಿವಾರಿಸಿ, ಭೀಷ್ಮನ ಎದುರಿಗೆ ಹೋಗಲಿಕ್ಕೆ ಶಕ್ತನಾಗಲಿಲ್ಲ. ದುಶ್ಶಾಸನನ ಬಾಣಗಳು, ಪರ್ವತಸದೃಶ, ಅರ್ಜುನನವ್ಯಾಲೆ ಬೀಳತಿಹೋವು. ಅರ್ಜುನಗೂ ದುಶ್ಶಾಸನಗೂ ಸಮಯುದ್ಧವಾಗತಿಹೋದು. ಭಯಂಕರ ಯುದ್ಧ ಕಂಡು ದೇವತಿಗಳು ಆಕಾಶಮಾರ್ಗದಲ್ಲಿ ನೋಡತಿಹೋರು.

ಇಷ್ಟಾಗಲಿಕ್ಕೆ ವಿರಾಟ, ದ್ರುಪದ, ಕುಂತೀಭೋಜ, ದ್ರೌಪದೀ ಐದು ಮಂದಿ ಮಕ್ಕಳು, ಚೇಕಿತಾನರಾಯ, ಕೈಕೇಯದೇಶದವರೆಲ್ಲ ಕೂಡಿ ಭೀಷ್ಮಗೆ ಸಹಾಯವಾಗಿ ಬಂದಂಥಾವರನ್ನೆಲ್ಲ ಸೋಲಿಸಿ ಸೋಮದತ್ತ, ಭೂರಿಶ್ರವ, ಕರ್ಣ ಮೊದಲಾದವರನ್ನೂ ಸೋಲಿಸಿ, ಭೀಷ್ಮನ ಎದುರಿಗೆ ಬಂದರು. ಅಷ್ಟರೊಳಗೆ ಅರ್ಜುನ ದುಶ್ಶಾಸನನ್ನ ಮೀರಿ ವೈರಿಗಳ ಮರ್ದಿಸುವಂಥ ಬಾಣಗಳಿಂದ ಭೀಷ್ಮನ ವ್ಯಾಲೆ ಪ್ರಯೋಗ ಮಾಡಲಿಕ್ಕೆ, ಭೀಷ್ಮ ಸರ್ವರ ಕೈಯ ಬಾಣ ಎಚ್ಚಿಸಿಕೊಂಡು, ಗಾಯದಿಂದ ಪೀಡಿತನಾದರೂ, ಚೈದ್ಯ-ಪಾಂಚಾಲದೇಶದವರನ್ನ ತಾನು ಸಾಯೋ ದಿವಸ ಕೊಂದನು. ಪ್ರಳಯ-ಕಾಲದಲ್ಲಿ ಅಗ್ನಿ ಹ್ಯಾಂಗೆ ಕದಡತದೋ, ಅಭಿವೃದ್ಧವಾಗತದೋ, ಹಾಂಗೆ ಭೀಷ್ಮ ಪಾಂಡವರನ್ನೆಲ್ಲ ಕದಡತಿಹ, ಪ್ರಳಯಕಾಲದ ಮೃತ್ಯುವಿನಂತೆ ತೋರತಿಹ. ಈ ಪ್ರಕಾರ ಅಪಾರ ಸೈನ್ಯ ಮರ್ದಿಸತ ಬರಲಿಕ್ಕೆ, ಶ್ರೀಕೃಷ್ಣ ಅರ್ಜುನಗೆ ಆಜ್ಞಾಪಿಸಿದ. 'ಏನು ನೋಡಥಿ! ಮುತ್ಯನೆಂದು ಭಿಡೆ ಮಾಡತಿದ್ದಿ. ಮಾಡಬ್ಯಾಡ, ಧರ್ಮ-ರಾಯನ ಸೈನ್ಯ ಅಪಾರ ಬೀಳತದೆ. ಶೀಘ್ರ ಭೀಷ್ಮನ ಧನುಸ್ಸು ಛೇದಿಸು' ಎಂದು ಪ್ರೇರಿಸಿದ. ದೇವರ ವಚನ ಮೀರಲಿಕ್ಕೆ ವಶವಲ್ಲ ಎಂದು ಭೀಷ್ಮನ ಧನುಸ್ಸು, ಅರ್ಧಚಂದ್ರಾಕಾರ ಇದ್ದ ಬಾಣದಿಂದ, ಅರ್ಜುನ ಛೇದಿಸಲಾಗಿ, ಮತ್ತೆ ಧನುಸ್ಸು ಕೊಳ್ಳತಿಹ. ಅವನ್ನೆಲ್ಲ ಅರ್ಜುನ ಛೇದಿಸಿಬಿಡತಿಹ. ಹೀಂಗೆ ಎಂಟು ಬಿಲ್ಲು ಛೇದಿಸಿದನು. ಮತ್ತೆ ರಥದೊಳಗೆ ಧನುಸ್ಸು ಇಲ್ಲದ್ಹಾಂಗಾಯಿತು. ಅರ್ಜುನನ ವ್ಯಾಲೆ ಶಕ್ತಿ, ಖಡ್ಗ, ಚರ್ಮ, ಮಿಗಿಲಾದ ಆಯುಧಗಳ ಈಡ್ಯಾಡತಿಹ.

ಆಯುಧಗಳು, ಶಸ್ತ್ರಗಳು ದುರ್ಯೋಧನಾದಿಗಳು ತಂದುಕೊಡತಿಹೋರು ಭೀಷ್ಮ, ತಂದುಕೊಟ್ಟ ಆಯುಧಗಳನ್ನು ಅರ್ಜುನನ ವ್ಯೂಹ ಹಾಕಬೇಕೆಂಬೋದರೊಳಗೆ, ಅರ್ಜುನ ಅವನ್ನೆಲ್ಲ ಛೇದಿಸಿಬಿಡತಿಹ. ಭೀಷ್ಮ ಸಮಸ್ತರ ಕೈಯ ವಜ್ರಸದೃಶ ಬಾಣಗಳು ಎಚ್ಚಿಸಿಕೊಂಡನು. ಸರ್ವಾಂಗಕ್ಕೆ ಬಾಣಗಳು ನೆಟ್ಟವೆ. ಬಹಳ ಪರವಶನಾಗಿ, ಯುದ್ಧ ಮಾಡಲಿಕ್ಕೆ ಶಕ್ತಿ ಸಾಲದೆ, ಬಾಣಗಳಿಂದ ಪೀಡಿತನಾಗಿ, ಭೂತಳದಲ್ಲಿ ಶರಪಂಜರ ಹಾಸಿಗಿ ಉಳ್ಳವನಾಗಿ ಬಿದ್ದನು ಉತ್ತರಾಯಣ ಪರಿಯಂತ ಪ್ರಾಣತ್ಯಾಗ ಮಾಡದೆ, ಶರಪಂಜರ ದುಃಖ ಅನುಭವಿಸತ ರಣರಂಗದಲ್ಲಿ ಬಿದ್ದನು. ಭೀಷ್ಮ ಬೀಳುವಾಗ ದ್ರೋಣ ಭೀಮನ ಕೂಡ ಯುದ್ಧ ಮಾಡತಿದ್ದ. ಭೀಷ್ಮ ರಣರಂಗದಲ್ಲಿ ಬಿದ್ದನೆಂದು ವಾರ್ತಿ ಕೇಳಿ, ಬಹಳ ದೊಡ್ಡ ಸೇನಾನಾಯಕ ಬಿದ್ದನೆಂದು, ಶಸ್ತ್ರಾಸ್ತ್ರಗಳು ಅಲ್ಲೇ ಬಿಟ್ಟು, ದ್ರೋಣ ಅತಿವೇಗದಿಂದ ಭೀಷ್ಮನ ಸಮೀಪಕ್ಕೆ ಬಂದನು. ಸಮಸ್ತರೂ ಯುದ್ಧ ಬಿಟ್ಟು ಬಂದರು. ಹಾಂಗೆ ಪಾಂಡವರು ಇವತ್ತಿಗೆ ಯುದ್ಧ ಸಾಕುಮಾಡಬೇಕೆಂದು, ತಮ್ಮ ಮುತ್ಯನ ನೋಡಲಿಕ್ಕೆ ಬಂದರು. ಭೀಷ್ಮ ಬೀಳಲಿಕ್ಕೆ ಉಭಯಸೇನಿ ಹೊಡೆಗೆಡೆದು, ಸಮಸ್ತರೂ ಯುದ್ಧ ಬಿಟ್ಟುಬಂದು ಭೀಷ್ಮಗೆ ನಮಸ್ಕಾರ ಹಾಕಿದರು.

ಈ ಪ್ರಕಾರ ಸಮಸ್ತರೂ ನಮಸ್ಕಾರ ಮಾಡಲಿಕ್ಕೆ ಭೀಷ್ಮ ಮಾತನಾಡಥಾನೆ. 'ನನ್ನ ತಲಿ ಕೆಳಗೆ ಜೋಲತದೆ, ತಲಿಗಿಂಬು ಕೊಡು' ಎನಲಿಕ್ಕೆ, ದುರ್ಯೋಧನ, ದಿವ್ಯ ಮೃದುವಾದಂಥಾದ್ದು ತಂದುಕೊಡಲು 'ಎಲೋ ಮೂರ್ಖ, ಹಾಸಿಗೆಗೆ ಶಕ್ಯ ದಿಂಬು ಕೊಡಬೇಕು' ಎಂದು, 'ಅರ್ಜುನ, ತಲಿಗಿಂಬು ಕೊಡು' ಎನಲಿಕ್ಕೆ, ತನ್ನ ಬಾಣದಿಂದ ತಲಿಗಿಂಬು ಮಾಡಿಕೊಟ್ಟನು. ಅರ್ಜುನ ಬಾಣದ ತಲಿಗಿಂಬು ಮಾಡಿಕೊಟ್ಟದ್ದರಿಂದ ಭೀಷ್ಮಗೆ ವ್ಯಥಿ ಆಗಲಿಲ್ಲ. ಭೀಷ್ಮ ಮತ್ತೆ 'ನೀರಡಿಸೀನಿ, ಉದಕ ತಂದುಕೊಡು' ಎನಲಿಕ್ಕೆ, ದುರ್ಯೋಧನ ರತ್ನಖಚಿತ ಬಂಗಾರದ ಗಿಂಡಿ ಒಳಗೆ ಉದಕ ತಂದುಕೊಡಲು, 'ನನ್ನ ದೇಹಕ್ಕೆಲ್ಲ ಬಾಣಗಳು ಪೋಣಸವೆ. ಸೀತಳೋದಕ ಕುಡಿಯಲಿಕ್ಕೆ ಕೈಬಾರವು. ಎಲೋ ಅಪ್ಪ ಅರ್ಜುನ ನೀ ನೀರು ಕೊಡು' ಎನ್ನಲು, ಅರ್ಜುನ ವರುಣಾಸ್ತ್ರ ಅಭಿಮಂತ್ರಿಸಿ, ಭೂಮಿ ಸೀಳಿ, ಪರಿಮಳೋಪೇತ ಸ್ವಚ್ಛೋದಕ ಮೇಲಕ್ಕೆ ಪುಟದು, ಭೀಷ್ಮನ ಬಾಯೊಳಗೆ ಉದಕ ಬೀಳೋಹಾಂಗೆ ಮಾಡಿದ. ಅರ್ಜುನನ ಪರಾಕ್ರಮ ಕಂಡು, ಭೀಷ್ಮ ಬಹಳ ಸಂತುಷ್ಟನಾದ. ದುರ್ಯೋಧನನ ಕೂಡ ಪಿತಾಮಹ ಮಾತನಾಡಥಾನೆ. 'ಹೇ ದುರ್ಯೋಧನ, ಅರ್ಜುನನ ಸಾಮರ್ಥಿ ದೃಷ್ಟೀಲೆ ಕಂಡೀ. ನಿಮ್ಮ ಹನ್ನೊಂದು ಅಕ್ಷೋಹಿಣಿ ಒಳಗೆ ಅರ್ಜುನನ ಸದೃಶ ವೀರರು ದಾರಿದ್ದಾರೆ! ಅಸ್ತ್ರಜ್ಞರೊಳಗೆ ಅರ್ಜುನ ಶೂರ, ಪರಾಕ್ರಮಿ ಇದ್ದಾನೆ. ಭೀಮಸೇನನ ಅದ್ಭುತ ಪರಾಕ್ರಮ ಕಡಿಗೆ ನೋಡತಿದ್ದಿ. ಇವರಿಬ್ಬರೂ ಮಹಾ-

ಪ್ರಬಲರು. ಇವರಿಗೆ ಸಾರಥಿ ಎಂಥಾತ \ ಎಂದರೆ, ಅನಂತವೇದಪ್ರತಿಪಾದ್ಯ ಶ್ರೀಕೃಷ್ಣ, ಸಾರಥಿ ಇದ್ದಾನೆ. ಈತನ ಅದ್ಭುತ ಪರಾಕ್ರಮ, ಹಸ್ತಿನಾವತಿಗೆ ಸಂಧಾನಕ್ಕೆ ಬಂದಿದ್ದಾಗ, ಆ ಮಹಿಮಿ ನೋಡೀಯ. ಎಲೋ ದುರ್ಯೋಧನ, ನನ್ನ ಗುರುತು ಇರುವ ಹಾಂಗೆ ಯುದ್ಧ ಸಾಕುಮಾಡು. ಈ ಹತ್ತು ದಿವಸದಲ್ಲಿ ಸತ್ತವರಂತೂ ಸತ್ತುಹೋದರು. ಉಳದ ರಾಯರು ತಮ್ಮ ತಮ್ಮ ಜೀವ ಉಳಹಿಸಿ-ಕೊಂಡು ತಮ್ಮ ರಾಜಧಾನಿಗೆ ಹೋಗಿ ಹೆಂಡರುಮಕ್ಕಳ ಕೂಡಿಕೊಳ್ಳಲಿ, ವ್ಯರ್ಥ ಕೊಲ್ಲಿಸಬ್ಯಾಡ. ಭೀಷ್ಮ ಸಾಯಲಿಕ್ಕೆ ಯುದ್ಧ ಶಾಂತವಾಯಿತು. ಹೀಂಗೆ ಕೀರ್ತಿ ಕೊಡು. ಉಳವರಿ ತಮ್ಮಿಂದರ ಸಹವಾಗಿ ಸುಖದಲ್ಲಿರು. ಪಾಂಡವರಿಗೆ ವಾಸುದೇವ ಸಹಾಯನಿದ್ದಾನೆ. ಅವರ ಕೂಡ ದ್ವೇಷ ಕಟ್ಟಬ್ಯಾಡ. ಒಳಿತು ಬಳಸಿದ್ದರಿಂದ ನಿನ್ನ ಕುರುಕುಲಕ್ಕೆ ಅಭಿವೃದ್ಧಿ ಅದೆ. ಎಲೈ ಭರತಕುಲೋತ್ಪನ್ನ ! ನನ್ನ ವಚನ ಆದರ ಮಾಡು.' ಈ ಪ್ರಕಾರ ಭೀಷ್ಮ ಭೂಮಿಯಲ್ಲಿ ಶರಪಂಜರದ ಮ್ಯಾಲೆ ಮಲಗಿಕೊಂಡು ಮಾತನಾಡಲಿಕ್ಕೆ, ದುರ್ಯೋಧನಾದಿಗಳು, ಕೇಳದ-ಹಾಂಗೆ ತಮ್ಮ ಶಿಬಿರಕ್ಕೆ ಹೋದರು.

ಭೀಷ್ಮ ರಣರಂಗದಲ್ಲಿ ಬೀಳಲಿಕ್ಕೆ ಹಸ್ತಿನಾವತಿಯಲ್ಲಿ ಸಂಜಯ, ಧೃತ-

ರಾಷ್ಟ್ರಗೆ ' ನಿಮ್ಮ ತಂದಿ ಭೀಷ್ಮ ರಣರಂಗದಲ್ಲಿ ಬಿದ್ದ ' ಎಂತ ಹೇಳಿದನು. ಕುರು-ಕ್ಷೇತ್ರದಲ್ಲಿ ದಾರುದಾರು ಏನೇನು ಮಾಡಿದರು, ಶ್ರೀ ವೇದವ್ಯಾಸನ ಅನುಗ್ರಹದಿಂದ ದೃಷ್ಟಿಲೆ ಕಂಡಹಾಂಗೆ, ಅಂಧನೃಪನ ಮುಂದೆ ಹೇಳತ ಬರತಿಹ. ಪಾಂಡವರು ಆ ಹೊತ್ತು ಯುದ್ಧ ಶಾಂತಮಾಡಿ ಭೀಷ್ಮನ ಆಜ್ಞೆ ಕೊಂಡು ತಮ್ಮ ಶಿಬಿರಕ್ಕೆ ಹೋದರು. ಗತಲೋಚನರಾಯ ದಾವಾಗ ಭೀಷ್ಮ ಬಿದ್ದ ವಾರ್ತೆ ಕೇಳಿದನೋ ಆವಾಗಲೇ ಮೂರ್ಛಿತನಾಗಿ ' ಎಲೋ ಪಾಪಿ ದುರ್ಯೋಧನಾ ! ನೀ ಮಗನಲ್ಲ. ರಾಜ್ಯದ ನಿಮಿತ್ತ ನಮ್ಮ ತಂದಿ ಭೀಷ್ಮನ್ನ ಕೊಲ್ಲಿಸ್ದೀ ' ಎಂದು, ತಂದೀನ ನೆನಸಿ-ಕೊಂಡು ಬಹಳ ದುಃಖಿಬಡಹೊಕ್ಕನು. ಭೀಷ್ಮ ದೊಡ್ಡ ಪರಾಕ್ರಮಿ ಸಾಯಲಿಕ್ಕೆ, ಸಮುದ್ರದೊಳಗೆ ನೀರು ಕಡಿದರೆ ನಾವಿ ಹ್ಯಾಂಗೆ ಮುಣಗತದೆ, ಹಾಂಗೆ ಕುರುಸೇನಿ ಮುಣಗಿತೆಂದು ಧೃತರಾಷ್ಟ್ರ ಬಹಳ ಚಿಂತಿಯಿಂದ ಬಳಲಹೊಕ್ಕನು. ಪಾಂಡವರು ಭೀಷ್ಮನ್ನ ರಣರಂಗದಲ್ಲಿ ಕೆಡಹಾಕಿ ಬಹಳ ಜಯವುಳ್ಳವರಾದರು. ಸ್ವಾಮೀ ಅನುಗ್ರಹಕ್ಕೆ ದಾರು ಪಾತ್ರರಾಗಥಾರೆ ಅನರಿಗೆ, ಅರಿಷ್ಟ ನಿವೃತ್ತಿ, ಇಷ್ಟಪ್ರಾಪ್ತಿ ನಿಶ್ಚಯವಾಗಿ ಆಗತದೆ. ಹರಿಭಕ್ತರು ಸದಾ ಜಯಶೀಲರಾಗಿರಥಾರೆ. ಹರಿಭಕ್ತರಿಗೆ ಸದಾ ಸರ್ವಕಾಲದಲ್ಲಿ ಜಯ ಉಂಟೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ ' ಭೀಷ್ಮ-ಪರ್ವಃ ' ಎಂಬ ಇಪ್ಪತ್ತೈದನೇ ಅಧ್ಯಾಯ ಸಂಪೂರ್ಣವು.

ಶ್ರೀ ಮಧ್ವೇಶಾರ್ಪಣಮಸ್ತು

ಅಧ್ಯಾಯ ೨೬

ಶ್ರೀಕೃಷ್ಣಚರಿತೇ ದ್ರೋಣಪರ್ವನಿರ್ಣಯಃ

ಈ ಇಪ್ಪತ್ತಾರನೇ ಅಧ್ಯಾಯದಲ್ಲಿ ದ್ರೋಣಪರ್ವ ಭಾರತಕಥ ತಾತ್ಪರ್ಯ-ಪೂರ್ವಕ ಶ್ರೀಮದಾಚಾರ್ಯರು ಹೇಳಿದ್ದಾರೆ. ಭೀಷ್ಮಪತನವಾದಮ್ಯಾಲೆ ಇನ್ನು ಸೇನಾಪತಿ ಬೇಕಲ್ಲ, ದುರ್ಯೋಧನರಾಯ ದ್ರೋಣಾಚಾರ್ಯನ್ನ ಬೇಡಿಕೊಂಡ, ಸೇನಾಪತಿತ್ವ ಸ್ವೀಕಾರ ಮಾಡೆಂತ. ದ್ರೋಣ ಸಕಲವಿದ್ಯಾಸಂಪನ್ನ, ಪರಶುರಾಮನ ಶಿಷ್ಯ. ಸಮಸ್ತ ಭೂಪಾಲಕರೂ ದ್ರೋಣಾಚಾರ್ಯನ ಶಿಷ್ಯರಾಗಬೇಕು. ದ್ರೋಣ ಮಹಾ ಪರಾಕ್ರಮಿ ಎಂದು, ದುರ್ಯೋಧನ ಆತನ್ನ ಸೇನಾಪತಿತ್ವದಲ್ಲಿ ಅಭಿಷೇಕ ಮಾಡಿದನು. ದುರ್ಯೋಧನ ಕರ್ಣಗೆ ಹೇಳಿದ 'ನಿನ್ನ ಪ್ರತಿಜ್ಞೆ ಭೀಷ್ಮಪತನ ಪರಿಯಂತ ಯುದ್ಧ ಮಾಡೋದಿಲ್ಲವೆಂಬೋದು. ಭೀಷ್ಮ ರಣದಲ್ಲಿ ಬಿದ್ದ. ಇನ್ನು ನೀ ಯುದ್ಧ ಮಾಡು' ಎಂದು ಪ್ರಾರ್ಥಿಸಲಿಕ್ಕೆ, ಕರ್ಣ ಅವಶ್ಯ ಯುದ್ಧ ಮಾಡೇನೆಂದು ಹೇಳಿ, ಭೀಷ್ಮನ ಆಜ್ಞೆ ಕೇಳಲಿಕ್ಕೆ ಹೋದನು. 'ಕುರುಕುಲಕ್ಕೆ ಪಿತಾಮಹನೇ, ನನಗೆ ಯುದ್ಧ ಮಾಡಲಿಕ್ಕೆ ಅಪ್ಪಣೆ ಕೊಡು' ಎಂದು ಬೇಡಲಿಕ್ಕೆ, 'ಹೇ ಸೂರ್ಯಜ, ನೀ ಬಹಳ ಶೂರನಿದ್ದಿ. ಪರಾಕ್ರಮ ಮಾಡಿ ತೋರಿಸು. ಅವಶ್ಯ ಯುದ್ಧ .ಮಾಡು' ಎಂದು ಸೂರ್ಯಜಗೆ ಭೀಷ್ಮ ಅಪ್ಪಣೆ ಕೊಟ್ಟನು. ತರುವಾಯ ದ್ರೋಣಾಚಾರ್ಯನ ಹಿಂಭಾಗದಲ್ಲಿ ಮಿತ್ರಜ ಯುದ್ಧಕ್ಕೆ ತೆರಳಿದನು. ದುರ್ಯೋಧನ ದ್ರೋಣಾಚಾರ್ಯನ್ನ ಬೇಡಿಕೊಂಡ. 'ನಮ್ಮ ಸೇನಿ ಅಪಾರ ಸಾವತದೆ. ಪುನಃ ಯುದ್ಧ ಆಗದಹಾಂಗೆ ಧರ್ಮರಾಯನ್ನ ಕೈಸೆರಿ ಕೊಂಡು ಬರಬೇಕು' ಎಂದು ಪ್ರಾರ್ಥಿಸಲಿಕ್ಕೆ, ಧರ್ಮರಾಯನ್ನ ಕೈಸೆರಿ ಕೊಂಡು ಬರುವುದಾಗಿ ಆಚಾರ್ಯ ಶಪಥ ಮಾಡಿ ರಣರಂಗಕ್ಕೆ ಹೋದನು.

ದ್ರೋಣಾಚಾರ್ಯನ ಧನುಸ್ಸು ಯಾವಾಗಲೂ ಮಂಡಲಾಕಾರವಾಗಿ ಇಹೋದು. ಟಂಕಾರ ಮಾಡತ ಬರಲಾಗಿ, ಆಶ್ವತ್ಥಾಮ, ಕೃಪಾಚಾರ್ಯ, ಶಲ್ಯ, ಹೀಂಗೆ ಮೂರು ಮಂದಿ ಭೀಮಸೇನನ ಎದುರಿಗೆ ಬರಲಿಕ್ಕೆ, ಭೀಮ ತನ್ನ ಪರಾಕ್ರಮದಿಂದ ಈ ಮೂರು ಮಂದಿಯನ್ನೂ ನಿವಾರಿಸಿ ದ್ರೋಣನ ಸಮೀಪಕ್ಕೆ ಬರಲಿಕ್ಕೆ, ಭೀಮಸೇನನ ಬಳಿವಿಡಿದು ಅಭಿಮನ್ಯು, ಕುರುಸೇನೀನೆಲ್ಲ ಮರ್ದಿಸತ ಹೋಗತಿಹೋನು. ಇಷ್ಟಾಗಲಿಕ್ಕೆ ಪುನಃ ಶಲ್ಯ, ಗದಿ ಕೊಂಡು ಭೀಮಸೇನನ ಕೂಡ ಯುದ್ಧ ಮಾಡಹೊಕ್ಕನು. ಉಭಯ ವೀರರೂ ಬಲಿಷ್ಠರೊಳಗೆ ಮಹಾ ಪ್ರಬಲರು, ಸಿಂಹನಾದ ಮಾಡತ ಗದಾಯುದ್ಧ ಮಾಡಲಾಗಿ, ಉಭಯತರ ಯುದ್ಧ ಸಮವಾಯಿತು. ಭೀಮಸೇನ ಸಮಯುದ್ಧ ಮಾಡಬಾರದೆಂದು, ತನ್ನ ಗದಿಯಿಂದ

ಶಲ್ಯನ್ನ ಸೋಲಿಸಿ ಕೆಡಹಾಕಲಿಕ್ಕೆ, ಶಲ್ಯ ಮೊಣಕಾಲೂರಿ ಎದ್ದು ನಿಂದರೋದರೊಳಗೆ, ಕೃಪಾಚಾರ್ಯ ಬಂದು, ಶಲ್ಯ ಸತ್ತಾನೆಂದು ತನ್ನ ರಥದೊಳಗೆ ಕೂಡ್ರಿಸಿಕೊಂಡು ಹೋದನು. ತರುವಾಯ ಭೀಮಸೇನ ತನ್ನ ಗದೀಪೆಟ್ಟಿನಿಂದ ಕೌರವಸೇನೀನೆಲ್ಲ ಮರ್ದಿಸ್ತಿಹ. ಭೀಮನ ಗದೀಪೆಟ್ಟು ತಾಳಲಾರದೆ ಕೌರವಸೇನಿ ನಾಲ್ಕೂ ದಿಕ್ಕಿಗೆ ಓಡಿಹೋಗತಿಹೋದು. ದ್ರೋಣಾಚಾರ್ಯ ಭೀಮಸೇನನ ಆರ್ಭಟಕ್ಕೆ ನಿಂದರಲಾರದೆ, ' ಧರ್ಮರಾಯನು ಕೈಸೆರಿ ಸಿಕ್ಕಲಿಲ್ಲ, ದುರ್ಯೋಧನಗೆ ಇನ್ನೇನು ಮಾರಿ ತೋರಿಸಲಿ ! ' ಎಂದು ಬಹಳ ಖಿನ್ನನಾಗಿ, ಸೂರ್ಯ ಅಸ್ತಂಗತನಾದನೆಂದು ಸೇನಾಪಹಾರ ಮಾಡಿಕೊಂಡು ಶಿಬಿರಕ್ಕೆ ಹೋದನು. ಧರ್ಮರಾಯ ಆವತ್ತು ಕೈಸೆರಿ ಸಿಕ್ಕತಿದ್ದ. ಶ್ರೀಕೃಷ್ಣನ ಪ್ರೇರಣೆಯಿಂದ, ಭೀಮಾರ್ಜುನರು ತೀವ್ರ ಯುದ್ಧ ಮಾಡಿದ್ದರಿಂದ ದ್ರೋಣಗೆ ಶಕ್ಯವಾಗಲಿಲ್ಲ. ಆ ದಿವಸ ರಾಯಗೆ ಕ್ಷೇಮುವಾಯಿತು. ಭೀಮಾರ್ಜುನರು ಜಯಶೀಲರಾಗಿ, ಧರ್ಮರಾಯನ ಅರಿಷ್ಟ ಪರಿಹಾರ ಮಾಡಿ, ವಿಜಯವುಳ್ಳವರಾಗಲು, ಪಾಂಡವರು ತಮ್ಮ ಶಿಬಿರಕ್ಕೆ ಹೋದರು.

ದುರ್ಯೋಧನ ರಾತ್ರೀಭಾಗದಲ್ಲಿ, ದೀಪದ ಬೆಳಕೀಲಿ ದ್ರೋಣಾಚಾರ್ಯನ ಸಮೀಪಕ್ಕೆ ಬಂದು, ' ಎಲೋ ಬ್ರಾಹ್ಮಣ, ನೀ ಪಾಂಡವರ ಪಕ್ಷಪಾತಿ. ಧರ್ಮರಾಯನ ಕೈಸೆರಿ ಹಿಡತರಲಿಲ್ಲ. ನೀವು ಬ್ರಾಹ್ಮಣರಲ್ಲವೇ ! ಒಂದಿಷ್ಟು ಸ್ವಾರ್ಥ ತೋರಿದರೆ ಕಾರ್ಯವೆಲ್ಲ ಕೆಡಿಸಿಬಿಡೋವರು. ನಿಮ್ಮನ್ನ ನಂಬಬಹುದೇ ! ' ಎಂದು ಈ ಪ್ರಕಾರ ನಿಷ್ಠುರವಚನ, ದುರ್ಯೋಧನ ಆಡಲಿಕ್ಕೆ, ' ಎಲೋ ನರಾಧಿಪ ! ನಾನು ಬಹಳ ತೀವ್ರ ಯುದ್ಧ ಮಾಡಥೀನಿ. ಆದರೂ ಭೀಮಾರ್ಜುನರು ಅಡ್ಡ ಬಂದು ಬಾಣದ ಮಳಿಗರೆಯುತಲೇ ಬರಥಾರೆ. ವಾಸುದೇವನಿಂದ ಅರ್ಜುನ ರಕ್ಷಿತನಾಗ್ಯಾನೆ. ಅರ್ಜುನನ ಯುದ್ಧಚಾತುರ್ಯ ಬಹಳವದೆ. ಆದಕಾರಣ ಅರ್ಜುನ ಬಾರಥಾಂಗೆ ಸಂಶಪ್ತಕರ* ಕೂಡ ಬಹುದೂರ ಯುದ್ಧಕ್ಕೆ ಹಚ್ಚ್ಯ. ಅರ್ಜುನ ಪ್ರತಿಕೂಲನಾಗದಿದ್ದರೆ, ನಾ ಧರ್ಮರಾಯನ ಕೈಸೆರಿ ತರಥೀನಿ.' ಹೀಂಗಂತ ದ್ರೋಣಾಚಾರ್ಯ ಅನಲಿಕ್ಕೆ, ದುರ್ಯೋಧನ ಸುಶರ್ಮನ್ನ ಕರಸಿ, ' ನೀನು ಸಂಶಪ್ತಕರ ಕೂಡಿಕೊಂಡು, ಬಹುದೂರ ಅರ್ಜುನನ ಕರಕೊಂಡುಹೋಗಿ ಯುದ್ಧ ಮಾಡು ' ಹೀಂಗೆಂದು ಆಜ್ಞಾಪಿಸಿದ.

ಬೆಳಗಾದವ್ಯಾಲೆ, ಅರ್ಜುನನ್ನ ' ಯುದ್ಧಕ್ಕೆ ಬಾ ' ಎಂದು ಸಂಶಪ್ತಕರು ಹೇಳಿಕಳುಹಿದರು. ಕ್ಷತ್ರಿಯರು ಯುದ್ಧಕ್ಕೆ ಕರೆದರೆ ಒಲ್ಲೆನೆನಬಾರದು. ಸಂಶಪ್ತಕರ

---

* ಯುದ್ಧದಲ್ಲಿ ಶಪಥ ಮಾಡಿ ಯುದ್ಧ ಮಾಡುವವರಿಗೆ ಈ ಹೆಸರು ಸಲ್ಲುತ್ತದೆ. ಮಹಾಭಾರತ ಯುದ್ಧದಲ್ಲಿ ತ್ರಿಗರ್ತರಾಜನಾದ ಸುಶರ್ಮ, ಸತ್ಯೇಷು, ಸತ್ಯಕರ್ಮ, ಸತ್ಯದೇವ, ಸತ್ಯರಥ ಇವರಿಗೆ ಈ ಹೆಸರು ರೂಢಿಯಲ್ಲಿದೆ. ಈ ಐದೂ ಮಂದಿ ಅಣ್ಣತಮ್ಮಂದಿರು.

ರಣರಂಗ, ಆಗ್ನಿಕೋಣೆ ಕಡಿಗಿಹೋದು. ಅರ್ಜುನ ಅಗ್ನಿದಿಕ್ಕಿಗೆ ಹೋಗಿ, ಸಂಶಪ್ತಕರ ಕೂಡಾ ಭಯಂಕರ ಯುದ್ಧ ಮಾಡಹೊಕ್ಕ. ಅರ್ಜುನ ಬಹು ದೂರ ಯುದ್ಧಕ್ಕೆ ತೊಡಗಿರಲಿಕ್ಕೆ, ದ್ರೋಣಾಚಾರ್ಯ ಯುಧಿಷ್ಠಿರನ ಕೈಸೆರಿ ತಂದು, ದುರ್ಯೋಧನನ ಪ್ರೀತಿ ಬಡಸಬೇಕೆಂದು ಬಹು ಭಯಂಕರ ಯುದ್ಧ ಮಾಡತ, ಪಾಂಡವರ ಸೇನಿ ಮರ್ದಿಸತಾ ಹೋಗುವಾಗ, ಭೀಮಸೇನ ಸಿಂಹನಾದ ಮಾಡತ ಬರಲಿಕ್ಕೆ, ಭೀಮಸೇನನ್ನ ದ್ರೋಣನ ಎದುರಿಗೆ ನಿಂದರಸಬಾರದೆಂದು, ಆನಿ-ಹಿಂಡುಗಳ ತಂದು ನಿಂದರಸೋರು. ಭೀಮಸೇನ ತನ್ನ ಗದಿಯಿಂದ ಆನಿಹಿಂಡುಗಳ ಕಡಕಡದು ಬಿಷ್ಟತಿಹ. ಈತನ ಪರಾಕ್ರಮ ಕಂಡು ಭಯವುಳ್ಳವರಾಗಿ, ರಾಯರೆಲ್ಲಾ ಬೆನ್ನುಕೊಟ್ಟು ಓಡಹೊಕ್ಕರು. ದುರ್ಯೋಧನ ಭಗದತ್ತಗೆ ಆಜ್ಞಾಪಿಸಿದ. ಈ ವ್ಯಾಳ್ಯಾದಲ್ಲಿ ಹೋಗಿ ಪಂಥ ಗೆಲ್ಲಿಸಬೇಕೆಂದು ಹೇಳಲಾಗಿ, ಭಗದತ್ತ ಸುಪ್ರತೀಕ ಎಂಬ ಆನಿ ಏರಿಕೊಂಡು ಬರಲಿಕ್ಕೆ, ಭೀಮಸೇನನ ರಥದ ಕುದರಿಗಳು, ಆನೀ ಕಂಡು ಅಂಜಿ, ರಥ ಎಳಕೊಂಡು ಬಹು ದೂರ ಹೋದವು. ಅಷ್ಟರೊಳಗೆ ಸಾತ್ಯಕಿ, ಅಭಿಮನ್ಯು, ದ್ರೌಪದೀ ಐದು ಮಂದಿ ಮಕ್ಕಳು, ಪ್ರತಿವಿಂದ್ಯ ಮೊದಲಾದವರು ಭಗದತ್ತನ ಕೂಡ ಯುದ್ಧಕ್ಕೆ ಬರಲಾಗಿ, ಆನೀ ತನ್ನ ಸೊಂಡಲಿನಿಂದ ಅವರ ರಥಗಳನ್ನೆಲ್ಲಾ ಎತ್ತಿ ಆಕಾಶಕ್ಕೆ ಹಾರಿಸಿತು. ರಥಿಕರು ತಮ್ಮ ಜೀವ ಉಳಹಿಕೊಂಡು ಕೆಳಗೆ ಹಾರಿದರು. ರಥಗಳು ಪುಡಿಪುಡಿ ಆಗಿ ಕುದರಿಗಳು ಸತ್ತವು. ಇಷ್ಟಾಗಲಿಕ್ಕೆ, ಭೀಮಸೇನ ತನ್ನ ಕುದರಿಗಳಿಗೆ ಥೋಡಿ ಚಪ್ಪರಿಸಿ, ಭಗದತ್ತನ ಕೂಡ ಪುನಃ ಬಹಳ ಯುದ್ಧ ಮಾಡಹೊಕ್ಕ. ಭೀಮಸೇನನ ಪೆಟ್ಟಿನಿಂದ ಭಗದತ್ತ ಕ್ಲೇಶಿತನಾಗಿ ಭೀಮ-ಸೇನನ ಮ್ಯಾಲೆ ವರಾಹಾಸ್ತ್ರ ಹಾಕೇನೆಂದು ತನ್ನ ಅಸ್ತ್ರ ತೆಗೆದುಕೊಂಡೇನೆಂಬೋದರೊಳಗೆ, ಕೃಷ್ಣಾರ್ಜುನರು ರಥ ಓಡಸ್ತಾ ಅತಿವೇಗದಿಂದ, ಭೀಮಸೇನನ ಸಮೀಪಕ್ಕೆ ಬರಲಾಗಿ, ಸಂಶಪ್ತಕರು ಅಡ್ಡಗಟ್ಟಿದರು. 'ನಮಗೆ ಯುದ್ಧ ಕೊಡದೇ ಎತ್ತ ಹೋಗತಿದ್ದಿ? ಹೋಗಬ್ಯಾಡ' ಎಂದು, ಯುದ್ಧ ಮಾಡತ ಅಡ್ಡಾಗಲಿಕ್ಕೆ ಅರ್ಜುನ, ತ್ವಷ್ಟ್ರದೇವತಾಕವಾದಂಥ ಅಸ್ತ್ರ ಅಭಿಮಂತ್ರಿಸಿ ಸಂಶಪ್ತಕರ ಮ್ಯಾಲೆ ಹಾಕಲಿಕ್ಕೆ, ಸಂಶಪ್ತಕರು ಮೋಹದಿಂದ ಎಚ್ಚರಿಕೆ ಇಲ್ಲದವರಾಗಿ ತಮ್ಮೊಳಗೆ ತಾವೇ, ಕೃಷ್ಣ-ಅರ್ಜುನರು ಇವರೇ ಎಂದು ಕಡದಾಡಿ ಸಾಯಹೊಕ್ಕರು. ಅಜ್ಞಾನದಿಂದ ತಮ್ಮೊಳಗೆ ತಾವೇ ಯುದ್ಧ ಮಾಡಲಿಕ್ಕೆ, ಕೃಷ್ಣಾರ್ಜುನರು ಭೀಮಸೇನನ ಸಮೀಪಕ್ಕೆ ಬಂದರು.

ಭಗದತ್ತ, ಭೀಮಸೇನನ ಬಿಟ್ಟು ಬಾಣ ಮಳಿಗರೆಯತ ಪಾರ್ಥನ ಎದುರಿಗೆ ನಡದನು. ಅರ್ಜುನ ತನ್ನ ಪರಾಕ್ರಮದಿಂದ, ಆನೀ ಕುಂಭಸ್ಥಳದಲ್ಲಿ ಬಾಣಗಳ ಪೋಣಿಸಿ ಬಿಟ್ಟ. ಭಗದತ್ತ ಕೋಪಾವಿಷ್ಟನಾಗಿ ಅಂಕುಶದಿಂದ ಗಜಕ್ಕೆ ಹೊಡದು, ಕಿರೀಟಿ ರಥದ ಮ್ಯಾಲೆ ಆನೀ ನಡಸಲಿಕ್ಕೆ, ಶ್ರೀಕೃಷ್ಣ ಆನಿಗೆ ಪಾಸರಿಕಿ ಹಾಕಿ

ಹಿಡೀಲಿಕ್ಕೆ, ಆನಿ ತನ್ನ ಸೊಂಡಲಿನಿಂದ ಹಿಡೀಲಿಕ್ಕೆ ಬರಲಿಕ್ಕೆ, ಶ್ರೀಕೃಷ್ಣ, ಚಾತುರ್ಯದಿಂದ ಮನೋವೇಗದ ಹಾಂಗೆ ರಥ ತಿರಗಸ್ತಿಹ. ಅರ್ಜುನ ಅತಿ ತೀಕ್ಷ್ಣ ಬಾಣಗಳಿಂದ, ಸುಪ್ರತೀಕ ಎಂಬ ಆನಿಯನ್ನು ಬಾಣಗಳಿಂದ ಮುಚ್ಚಿಬಿಟ್ಟ. ಭಗದತ್ತನ ಆಯುಧ ಛೇದಿಸಿಬಿಟ್ಟ. ಅಂಕುಶದ ವಿನಃ ಆಯುಧ ಇಲ್ಲಧಾಂಗಾಯಿತು.

ಭಗದತ್ತ ಗಾಯದಿಂದ ಪೀಡಿತನಾಗಿ ವರಾಹಾಸ್ತ್ರ ಅಂಕುಶಕ್ಕೆ ಮುಂತ್ರಿಸಿ, ಅರ್ಜುನನ ಮ್ಯಾಲೆ ಬಿಸ್ಟಲಿಕ್ಕೆ, ಚಕ್ರಧಾರಿ ಶ್ರೀಕೃಷ್ಣರೂಪೀ ನಾರಾಯಣ ಅಂಕುಶ ತನ್ನ ಕೊರಳಿಗೆ ಹಾಕಿಕೊಳ್ಳಲು, ಸ್ವಾಮಿಗೆ ವೈಜಯಂತಿಮಾಲೆಯಪ್ಪಂದೆ ತೋರಿತು. ಅರ್ಜುನ ಶ್ರೀಕೃಷ್ಣನ ಕೇಳಥಾನೆ. 'ನನ್ನ ಮ್ಯಾಲೆ ಅಂಕುಶ ಈಡ್ಯಾಡಿದ್ದು, ನೀ ಏನುಕಾರಣ ಧರಿಸಿದಿ?' ಎಂದು ಕೇಳಲಾಗಿ, "ಎಲೋ ಪಾರ್ಥ ಸರ್ವ ಜಗತ್ತು ನಾ ಧರಿಸೀನಿ. ಅಂಕುಶ ಧರಿಸಿದ್ದು ಆಶ್ಚರ್ಯ ಪಡಬೇಡ, ಗೀತ ಉಪದೇಶ ಮಾಡಿದ್ದೆ. ಅದೆಲ್ಲ ಮುಸಳಿಸಿಹೋಯಿತೆ! ನಾ ಸಮಾಧಿಕಶೂನ್ಯ, ನನ್ನ ಮಹಿಮಿ ಚೆನ್ನಾಗಿ ತಿಳಿ. ಅಂಕುಶ ಧರಿಸಿದ ಕಾರಣ ಹೇಳಥೀನಿ ಕೇಳು. ಪ್ರಳಯಕಾಲದಲ್ಲಿ ನಾನು ವಃಟಲನಾರಾಯಃಣರೂಪದಿಂದ ಇರಥೀನಿ. ಜಗತ್ಸೃಷ್ಟಿ ಮಾಡಬೇಕಾಗಿ ವಾಸುದೇವ, ಅನಿರುದ್ಧ, ಸಂಕರುಷಣ, ಪ್ರದ್ಯುಮ್ನ ಹೀಂಗೆ ನಾಲ್ಕು ಅವತಾರ ಮಾಡಥೀನಿ. ವಾಸುದೇವ ಮೋಕ್ಷಪ್ರದ. ಸಂಕರುಷಣ ಪ್ರಳಯ ಮಾಡಥಾನೆ. ಪ್ರದ್ಯುಮ್ನ ಪಾಲನಿ ಮಾಡಥಾನೆ. ಅನಿರುದ್ಧ ಸೃಷ್ಟಿ ಮಾಡಥಾನೆ. ಹೀಂಗೆ ನಾಲ್ಕು ವಾಸುದೇವಾದಿ ಅವತಾರ ಆದಮ್ಯಾಲೆ ಮತ್ಸ್ಯಾದಿ ಹತ್ತು ಅವತಾರ ಮಾಡಥೀನಿ. ವರಾಹಾವತಾರ ಮಾಡಿ ಭೂಮಿ ಪ್ರೀತಿಬಡಿಸಬೇಕಾಗಿ, ಭೂಮಿಯಲ್ಲಿ ಭೂರೂಪಳಾದಂಥ ಲಕ್ಷ್ಮೀ ಆವೇಶ ಇಟ್ಟು, ಭೂದೇವಿ ಭೋಗ ಮಾಡಿ ನರಕಾಸುರನ ಹಡದೆ. ಭೂಮಿ ನನ್ನ ಬೇಡಿಕೊಂಡಳು. 'ನನ್ನ ಮಗ ಅವಧ್ಯನಾಗಬೇಕು' ಎಂದು ಪ್ರಾರ್ಥಿಸಲಾಗಿ, ನರಕಾಸುರಗೆ ವರಾಹಾಸ್ತ್ರ ಕೊಟ್ಟಿ. ಅಸ್ತ್ರ ಇದ್ದಕಾರಣ ಸ್ವರ್ಗಾದಿ ಲೋಕಕ್ಕೆ ಧಾಳಿ ಹಾಕಿ, ದೇವತಿಗಳಿಗೆ ದುಃಖಬಡಿಸುವ. ಅಂಥಾ ನರಕಾಸುರನ್ನ ನಾ ಕೊಂದೆ. ವರಾಹಾಸ್ತ್ರ ನರಕಾಸುರನ ಮಗ ಭಗದತ್ತನಲ್ಲಿತ್ತು. ಆದಕಾರಣ ಅವಧ್ಯತ್ವ ಐದಿದ. ಬಹಳ ಪ್ರಬಲನಾಗಿಹ. ನನ್ನ ಹೊರ್ತು ದಾರವ್ಯಾಲೆ ವರಾಹಾಸ್ತ್ರ ಬಿದ್ದೀತು, ಅವರ ನಾಶವೇ ಮಾಡೀತು. ತಸ್ನಿಮಿತ್ತ ಭೀಮುಸೇನನ ಮ್ಯಾಲೆ ಈ ಅಸ್ತ್ರ ಬಿಟ್ಟಾನೆಂದು ಅತಿವೇಗದಿಂದ ಬಂದೆನು. ನಿನ್ನಮ್ಯಾಲೆ ಈಡ್ಯಾಡಲಿಕ್ಕೆ, ನಿನ್ನ ಕ್ಷೇಮದಗೋಸ್ಕರ ವರಾಹಾಸ್ತ್ರ ನನ್ನ ಕೊರಳಲ್ಲಿ ಧರಿಸಿದೆ. ಭಗದತ್ತನ ಸಾಮರ್ಥಿ ಅಷ್ಟೂ ಹೋಯಿತು. ಇನ್ನು ಅವಗೆ ಅವಧ್ಯತ್ವ ಇಲ್ಲ. ನೀ ಇನ್ನು ಬಾಣಗಳ ಹೊಡಿ" ಎಂದು ಹೇಳಲಾಗಿ, ಅರ್ಜುನ ಭಗದತ್ತಗೆ ಬಾಣ ಹೊಡಿಯಲಿಕ್ಕೆ, ಬಾಣ ಎದಿಗೆ ತಾಕಿ ಭೂತಳದಲ್ಲಿ ಬಿದ್ದನು. ಆನಿಗೆ ಕುಂಭಸ್ಥಳದಲ್ಲಿ ಬಾಣದಿಂದ ಎಚ್ಚಲು ಭಗದತ್ತ, ಸುಪ್ರತೀಕ ಗಜ ಇಬ್ಬರೂ ಪರ್ವತಸದೃಶ ಭೂತಳದಲ್ಲಿ ಬಿದ್ದರು.

ಭಗದತ್ತ ಸಾಯಲಿಕ್ಕೆ ಅಚಲ, ವೃಷಭ ಬಾಣ ಎಚ್ಚತ ಬರಲಿಕ್ಕೆ, ಶಕುನಿ ಕಪಟದಿಂದ ಮಾಯಾಸರ್ಜನಿ ಮಾಡಲಿಕ್ಕೆ, ಅವರನ್ನೆಲ್ಲ ಅರ್ಜುನ ಓಡಿಸಿಬಿಟ್ಟ. ಅಷ್ಟರೊಳಗೆ ದ್ರೋಣಪುತ್ರ ಅಶ್ವತ್ಥಾಮ ಬಂದು ಮಾಹಿಷ್ಮತೀ ಪಟ್ಟಣದ ದಮು-ಘೋಷರಾಯನ ಕೊಂದುಬಿಟ್ಟನು. ದಮುಘೋಷರಾಯ ಸಾಯಲಿಕ್ಕೆ ಭೀಮ-ಸೇನ ಅಶ್ವತ್ಥಾಮನ ಕುದರೀ ಸಾಯಗೊಟ್ಟ. ಮತ್ತೆ ಕೌರವಸೇನಿನೆಲ್ಲ ಓಡಿಸಿಬಿಟ್ಟ. ಭೀಮಾರ್ಜುನರ ಬಾಣಗಳಿಂದ ಕೌರವಸೇನಿ ಎಲ್ಲ ಪೀಡಿತವಾಗಿ ಬೆನ್ನುಕೊಟ್ಟು ಓಡಹೊಕ್ಕಿತು. ದ್ರೋಣಾಚಾರ್ಯ ಖಿನ್ನನಾದ. 'ಅರಸು ದುರ್ಯೋಧನ ನನಗೆ, ಸಿಟ್ಟಿಗೆ ಬಂದು ಬೈದಾನು. ರಾಯಗೆ ಇನ್ನೇನು ಮಾರಿ ತೋರಿಸಲಿ' ಎಂದು ಮಹಾಪ್ರಬಲ ಭಗದತ್ತರಾಯ ಸತ್ತುಹೋದ. 'ಇವ ಸತ್ತರೂ ಸಾಯಲಿ ಧರ್ಮ-ರಾಯ ಕೈಸೆರಿ ಸಿಕ್ಕಲಿಲ್ಲ. ದುರ್ಯೋಧನ ನನಗೆ ಬೈದಾನು' ಎಂದು ಚಿಂತಸ್ತ ಸೇನಾಪಹಾರ ಮಾಡಿಕೊಂಡು ಅಸ್ತಮಾನವಾದಕಾರಣ ಶಿಬಿರಕ್ಕೆ ತಿರಗಿ ಬಂದನು. ದುರ್ಯೋಧನ ದ್ರೋಣಾಚಾರ್ಯಗೆ ಬಹಳ ಸಿಟ್ಟು ಮಾಡಿದನು. 'ಎಲ್ಲೆ ಅರಸೇ ನಮ್ಮ ಪ್ರತಿಜ್ಞಾ ಹುಸಿ ಆಗೇದೆ. ನೀನು ಏನು ಆಡಿದ್ದೂ ನಮಗೆ ಥೋಡೆ. ಧರ್ಮ-ರಾಯನ ಕೈಸೆರಿ ತರಬೇಕೆಂದು ಮುಂದರಿದು ಹೋಗಲಿಕ್ಕೆ, ಕೃಷ್ಣಾರ್ಜುನರು ಅಡ್ಡ ಬರಥಾರೆ. ಬೆಳಗಾಗಲಿ, ನಾಳೆ ಧರ್ಮರಾಯನ್ನ ಕೈಸೆರಿ ತಾರದೇಹೋದರೆ ಪಾಂಡವರ ಸದೃಶ ವೀರಪರಾಕ್ರಮಿ ಒಬ್ಬನ್ನ ಕೊಂದೇನು' ಎಂದು, ದುರ್ಯೋಧನನ ಎದುರಿಗೆ ಶಪಥ ಮಾಡಿದನು.

ಹೀಂಗೆ ಎರಡು ದಿವಸ ಹೋಗಲಾಗಿ, ಮೂರನೇ ದಿವಸ ಯುದ್ಧರಂಗದಲ್ಲಿ ಪದ್ಮವ್ಯೂಹ ರಚನಿ ಮಾಡಿದ. ಪರಶುರಾಮ ಕೊಟ್ಟಂಥ ವಿದ್ಯಾದಿಂದ ದ್ರೋಣ ತೀಕ್ಷ್ಣನಾಗಿಹ. ಅರ್ಜುನ ಸಂಶಪ್ತಕರ ಕೂಡ, ಯುದ್ಧಕ್ಕೆ ಬಹು ದೂರ ಹೋಗಿರಲಿಕ್ಕೆ, ಭೀಮಸೇನ ತನ್ನ ಪ್ರಾಜ್ಞಬಲದಿಂದ ವ್ಯೂಹ ಸೀಳಬಲ್ಲ, ಆದರೂ ಕಾರ್ಯಕರ್ಮ ಆದದ್ದು' ಮಾಡೋದಿಲ್ಲ. ಆದಕಾರಣ ಭೀಮಸೇನ ವೈಷ್ಣವಮಂತ್ರ ಜಪಸ್ತಿಹ. ಪದ್ಮವ್ಯೂಹ ಸೀಳಿದ್ದಿಲ್ಲ. ಇಂಥಾ ದುರ್ಗಮವಾದ ವ್ಯೂಹ ಯಾರು ಸೀಳ್ಯಾರು! ಅರ್ಜುನ ಬಹು ದೂರ ಯುದ್ಧಕ್ಕೆ ಹೋಗ್ಯಾನೆ. ಆದಕಾರಣ ಧರ್ಮರಾಯ ಅಭಿಮನ್ಯುನ ಕರದು ಆಜ್ಞಾಪಿಸಿದ. 'ನಿಮ್ಮ ತಂದಿ ನಿನಗೆ ಅಸ್ತ್ರ-ವಿದ್ಯ ಕಲಿಸ್ಯಾನೆ. ಆ ಮಂತ್ರಸಾಮರ್ಥಿಯಿಂದ ಮಾರ್ಗ ಬಿಡಿಸು. ನಾವು ನಿನ್ನ ಬಳಿವಿಡಿದು ಬಂದೇವು' ಎನಲಿಕ್ಕೆ, ಅಭಿಮನ್ಯು, ತನ್ನ ತಂದಿ ಕಲಿಸಿದ ವಿದ್ಯಡಿಂದ ಮಾರ್ಗ ಬಿಡಸ್ತಾ ಹೋಗತಿಹ. ಪಾಂಡವರು ಆತನ ಬೆನ್ನುಗೊಂಡು ಹೋಗ-ತಿಹೋರು. ಹೀಂಗೆ ಹೋಗಲಿಕ್ಕೆ, ಜಯದ್ರಥ ಅಭಿಮನ್ಯುನ ಒಳಗೆ ಹೋಗಬಿಟ್ಟು, ಪಾಂಡವರಿಗೆ ಮಾರ್ಗ ಅಡ್ಡಗಟ್ಟಿದ. ಪಾಂಡವರು ಜಯದ್ರಥನ ಕೊಂದು ಒಳಗೆ ಹೋಗೋವಲ್ಲಿ ಸಮರ್ಥರಾದರೂ—ಕೃಷ್ಣನ ಚಿತ್ತಾಭಿಪ್ರಾಯ ಭೀಮಸೇನ ಬಲ್ಲ

—ಮಹಾರುದ್ರನ ವಚನ ಸತ್ಯ ಮಾಡಬೇಕಾಗಿ ಭೀಮಸೇನ ಜಯದ್ರಥನ್ನ ನಿವಾರಿಸಿದ್ದಿಲ್ಲ. ಪಾಂಡವರಿಗೆ, ಜಯದ್ರಥಗೆ ಯುದ್ಧ ಹತ್ತಲಿಕ್ಕೆ, ಭೀಮಸೇನ ಮಹಾ ತೀಕ್ಷ್ಣನಾಗಿ ಯುದ್ಧ ಮಾಡಿದನು. ಅಭಿಮನ್ಯು ಮಾರ್ಗ ನೋಡತ, ದುರ್ಯೋಧನನ ಸೇನಿನೆಲ್ಲ ಕದಡತಿಹ. ಅಶ್ವತ್ಥಾಮ ದ್ರೋಣ ಕೃಪಾಚಾರ್ಯ ದುರ್ಯೋಧನ ಕರ್ಣ ಮೊದಲಾದವರು ಯುದ್ಧಕ್ಕೆ ಬಂದು, ಅಭಿಮನ್ಯುನ ವ್ಯೂಹ ಬಾಣ ಮಳಿಗರೆಲಿಕ್ಕೆ, ಅಭಿಮನ್ಯು ಮಹಾ ತೀಕ್ಷ್ಣನಾಗಿ, ಅಸ್ತ್ರಸಾಮರ್ಥಿಯಿಂದ ದುರ್ಯೋಧನನ ಮಗ ಲಕ್ಷಣನ ತಲಿ ಕಡದು ಬಿಷ್ಟನು. ಅದೇ ತಲೀ ದುರ್ಯೋಧನನ ವ್ಯೂಹ ಈಡ್ಯಾಡಿದನು. ಬೃಹದ್ಬಲರಾಯ ಅಕ್ಷೋಹಿಣಿ ಸೈನ್ಯಬಲದಿಂದ, ಹತ್ತುಮುಂದಿ ಮಹಾರಥಿಕರ ಕೂಡಿಕೊಂಡು ಅಭಿಮನ್ಯುನ ವ್ಯೂಹ ಬಂದನು. ಇಷ್ಟೂ ಮುಂದಿ ಕೂಡಿ ಅಭಿಮನ್ಯುನ ಕೊಂದರೆ ಕೃಷ್ಣ, ತನ್ನ ಸೋದರಳಿಯನ್ನ ಕೊಂದರೆಂದು ಸಮುಸ್ತರನ್ನೂ ಕೊಂದಾನೆಂದು ಭಯದಿಂದ, ಸರ್ವರೂ ಕೂಡಿ ಕರ್ಣಗೆ ಅಂದರು. 'ಹೇ ಕರ್ಣ ನಿನಗೆ ದಾರ ಅಂಜಿಕೀನೂ ಇಲ್ಲ. ಅರ್ಜುನನ ವೈರಿ ಇದ್ದಿ. ಅಭಿಮನ್ಯು ಬಹಳ ಭಯಂಕರ ಯುದ್ಧ ಮಾಡಥಾನೆ. ಪಾರ್ಥಾತ್ಮಜನ ಕೊಂದರೆ ನಿನ್ನ ಕೀರ್ತಿ ಹೆಚ್ಚತದೆ' ಹೀಂಗೆಂದಲ್ಲಿ, ಕರ್ಣ ಮಹಾ ತೀಕ್ಷ್ಣನಾಗಿ ಅಭಿಮನ್ಯುನ ಬಿಲ್ಲು ಛೇದಿಸಿದನು. ಕೃಪಾಚಾರ್ಯ ಸಾರಥಿಯನ್ನ ಕೊಂದನು. ದ್ರೋಣ, ರಥದ ಕುದರಿ ಹತಗೈದ. ಇಷ್ಟಾದವ್ಯೂಹ ಕರ್ಣನ ಮುಂದುಮಾಡಿ-ಕೊಂಡು, ಸಮುಸ್ತರೂ ಕೂಡಿ ಅಭಿಮನ್ಯುನ ಕೈಸೆರಿ ಕೋಬೇಕಾದರೆ, ಕೃಷ್ಣನ ಅಂಜಿಕಿ ಇಹೋದು. ಅಷ್ಟರೊಳಗೆ ದುಶ್ಶಾಸನನ ಮಗ ಬಂದು ಅಭಿಮನ್ಯುನ ಕೂಡ ಯುದ್ಧ ಮಾಡಿದನು. ಗದಾಯುದ್ಧದಲ್ಲಿ ಒಮ್ಮಿಲೇ ಇಬ್ಬರೂ ಸತ್ತರು. ಅರ್ಜುನನ ಮಗ, ದುಶ್ಶಾಸನನ ಪುತ್ರ ಇಬ್ಬರೂ ಮೃತರಾದರೂ, ಶೋಕ ಹತ್ತಿಟ್ಟ, ಪಾಂಡವರ ಮಗ ದೊಡ್ಡ ಪರಾಕ್ರಮಿ ಅಭಿಮನ್ಯು ಸತ್ತನೆಂದು ಸಂತೋಷದಿಂದ ಸಮುಸ್ತರೂ ಸಿಂಹನಾದ ಮಾಡಹೊಕ್ಕರು.

ಅಭಿಮನ್ಯು ಹತವಾದ ವಾರ್ತಿ ಧರ್ಮರಾಯ ಕೇಳಿ, ಯುದ್ಧ ಮಾಡಲಿಕ್ಕೆ ಹೊತ್ತು ಇದ್ದರೂ, ಚಿಕ್ಕಾತನ ಮರಣದುಃಖದಿಂದ ಯುದ್ಧ ಮಾಡೋದು ಬಿಟ್ಟು, 'ಅಭಿಮನ್ಯುನ ಸಂಹಾರಕ್ಕೆ ಕಾರಣ ಜಯದ್ರಥ. ನಾವೆಲ್ಲ ಬಾಲಕನ ಬೆನ್ನುಗೊಂಡು ಹೋಗಲಿಕ್ಕೆ, ಈ ಪಾಪಿ ಜಯದ್ರಥ ಅಡ್ಡ ಬಂದ. ಅದರಿಂದ ಅಭಿಮನ್ಯು ಸತ್ತ' ಎಂದು ನಿಟ್ಟುಸಿರು ಹಾಕತ ಯುದ್ಧ ಶಾಂತಿ ಮಾಡಿ, ಮಗ ಸತ್ತ ದುಃಖದಿಂದ ಖಿನ್ನನಾಗಿ ಯುದ್ಧ ಇಲ್ಲದೇ ಬಳಲತ ರಥದ ವ್ಯೂಹ ಕುಳಿತನು. ಅಷ್ಟರೊಳಗೆ ರಾಯನ ಸಮಾಧಾನಾರ್ಥವಾಗಿ, ಸತ್ಯವತೀ ಕುಮಾರ ವೇದವ್ಯಾಸ ಬಂದು ಧರ್ಮ-ರಾಯಗೆ ಬಹಳ ಸಮಾಧಾನ ಮಾಡಿದನು. ಆ ಹೊತ್ತು ಧರ್ಮರಾಯ ಮಗ ಸತ್ತ ದುಃಖದಿಂದ ಯುದ್ಧ ಸಾಕುಮಾಡಿ ಶಿಬಿರಕ್ಕೆ ಹೋದ. ಅರ್ಜುನಗೆ ಮಗನ

ಮೃತ್ಯುವಾರ್ತೆ ಆರಿಕೆಲ್ಲ. ಜಯದ್ರಥನ ಕಾರಣದಿಂದ ಮಗ ಮೃತನಾದನೆಂದು ಕೇಳಿ ಶೋಕಬಟ್ಟು, 'ನಾಳೆ ಅಸ್ತಮಾನ ಆಗೋದರೊಳಗೆ ಜಯದ್ರಥನ ಕೊಂಜೇನು. ಇಲ್ಲವೇ ನಾ ಅಗ್ನಿಪ್ರವೇಶವಾದೇನು' ಎಂತ ಪ್ರತಿಜ್ಞೆ ಮಾಡಿದ. ಮಗನ್ನ ನೆನಸಿ-ಕೊಂಡು ಅರ್ಜುನ ಬಹಳ ಕ್ಲೇಶ ಬಡತಿರಲು, ಶ್ರೀಕೃಷ್ಣ ಬಹಳ ಪ್ರಕಾರ ಸಮಾಧಾನ ಮಾಡಿದ. ಯುದ್ಧಶ್ರಮದಿಂದ, ಮಗ ಹೋದ ದುಃಖದಿಂದ ನೊಂದು, ಅರ್ಜುನ ಗಾಢನಿದ್ರೆ ಗೈಯಲು, ಸ್ವಾಮಿ ಗುರುದ್ವಾರದಿಂದ ಪ್ರಸನ್ನನಾಗಥೀನೆಂದು ತಿಳಿಸಬೇಕಾಗಿ, ಸ್ವಪ್ನದಲ್ಲಿ ಅರ್ಜುನನ ಕೊಂಡು ಕೈಲಾಸಗಿರಿಗೆ ಹೋಗಿ, ಮೊದಲು ಕೊಟ್ಟ ಅಸ್ತ್ರಗಳಿಗೆ, ರುದ್ರನ ಮುಖಕಮಲದಿಂದ ವೀರ್ಯವತ್ತು ಕೊಡಿಸಿದ. ರುದ್ರನ ವರದಿಂದ ಕವಚಗಳು, ಅಸ್ತ್ರಗಳು ಮಹಾ ಉಲ್ಬಣವಾದವು. ಕೈಲಾಸ ದಿಂದ ಪಾರ್ಥನ ಕೂಡಿಕೊಂಡು ಶಿಬಿರಕ್ಕೆ ಬರಲು, ತನ್ನ ತಂಗಿಗೆ ಸಮಾಧಾನ ಮಾಡಬೇಕಾಗಿ, ಉಪಪ್ಲವಕ್ಕೆ ಸ್ವಾಮಿ ಹೋಗಿ. ಅಭಿಮನ್ಯು ಸತ್ತ ಪಾರ್ಥ ಸ್ವಪ್ನದಲ್ಲಿ ಸುಭದ್ರಾಗೆ ಹೇಳಿ, ಶೋಕ ಮಾಡಬ್ಯಾಡವೆಂದು ಬಹಳ ಸಮಾಧಾನ ಮಾಡಿದ್ದಾನೆ.

ಬೆಳಗಾಯಿತು, ಅರ್ಜುನ ಯುದ್ಧಕ್ಕೆ ಹೊರಡಬೇಕೆಂದು, ರಥಕ್ಕೆ ಕುದರಿಗಳ ಕಟ್ಟಿ, ಯಾವತ್ತೂ ಸಿದ್ಧಮಾಡಿ, ಸ್ವಾಮಿ ಸವ್ಯಸಾಚಿ ಸಮೀಪಕ್ಕೆ ಬಂದ. ಹೀಂಗೆ, ಸ್ವಾಮಿ ಕ್ರೀಡಾದಿ ಗುಣವಿಶಿಷ್ಟ, ತನ್ನ ಮನ ಬಂದಹಾಂಗೆ ಚರಿತ್ರಗಳ ಮಾಡಥಾನೆ. ಕಿರೀಟಿ ಜಯದ್ರಥನ ಕೊಲ್ಲಲೋಸುಗ ಪ್ರತಿಜ್ಞೆ ಮಾಡಿದ್ದು, ಕೌರವಸೇನಿ ಒಳಗೆ ತಿಳಿಯಿತು. ತಂಗಿ ವಿಧವಿ ಆದಾಳೆಂದು, ದುರ್ಯೋಧನ ದ್ರೋಣಾಚಾರ್ಯಗೆ ಶರಣು ಬಂದ. 'ಎಲ್ಲೆ ವಿಪ್ರೋತ್ತಮ, ಪಾಂಡವರೊಳಗೆ ದೊಡ್ಡ ಪ್ರಬಲನನ್ನು ಕೊಂದೇ-ನೆಂದದ್ದಕ್ಕೆ ಸತ್ಯ ಮಾಡಿದಿ. ಅಭಿಮನ್ಯುನ ಕೊಂದು ನಮಗೆ ಸಂತೋಷಪಡಿಸಿದಿ. ಭೀಭತ್ಸು ನಾಳೆ ಜಯದ್ರಥನ್ನ ಕೊಲ್ಲೋದಕ್ಕೆ ಶಪಥ ಮಾಡ್ಯಾನಂತೆ, ಸತ್ಯ ಮಾಡ್ಯಾನು. ಜಯದ್ರಥಗೆ ಬಹು ದೂರ ಹಾಕಿ, ನೀ ಯುದ್ಧಕ್ಕೆ ಮುಂಬಿಗನಾಗಿ, ನಮ್ಮ ತಂಗಿ ವಿಧವಿ ಆಗಥಾಂಗೆ ಮಾಡು' ಎಂದು ದ್ರೋಣಾಚಾರ್ಯರ್ಗೆ ಬಹಳ ಬೇಡಿಕೊಳ್ಳಲು, 'ನನ್ನ ಪ್ರಯತ್ನ ನಡದಷ್ಟು ಮಾಡಿ, ನಿನ್ನ ಬೀಗ ಜಯದ್ರಥನ್ನ ಪೋಷಿಸೇನು' ಎಂದು ದ್ರೋಣ ವಚನ ಕೊಟ್ಟ.

ನಾಲ್ಕನೇ ದಿವಸ ಶಕಟವ್ಯೂಹ ರಚನಿ ಮಾಡಿ ದ್ರೋಣ ಮುಂಬಿಗನಾದ. ತರುವಾಯ ದ್ರೋಣನ ಹಿಂದೆ ಅಶ್ವತ್ಥಾಮ, ಕೃಪಾಚಾರ್ಯ, ಕರ್ಣ, ಶಲ್ಯ ಮೊದಲಾದವರು ನಿಂತರು. ಇವರ ಹಿಂದೆ ಜಯದ್ರಥ ನಿಂತನು. ಅರ್ಜುನ ಆ ದಿವಸ ಸಂಶಪ್ತಕರ ಕೂಡ ಯುದ್ಧ ಮಾಡೋದು ಬಿಟ್ಟು, ಜಯದ್ರಥನ್ನ ಕೊಲ್ಲ-ಬೇಕೆಂದು ಬಂದಿಹೋನು. ಕೇಶವನಿಂದ ರಕ್ಷಿತನಾಗಿಹ ಅರ್ಜುನ ರಣರಂಗದಲ್ಲಿ ಬಾಹೋದ್ದು ಕಂಡು, ದುರ್ಯೋಧನನ ತಮ್ಮ ದುರ್ಮರ್ಷಣ ವಿಜಯಗೆ ಆಡ್ಡ

ಬಂದ.. ಶ್ವೇತವಾಹನ ಶಕಟವ್ಯೂಹಕ್ಕೆ ಪ್ರದಕ್ಷಿಣೆ ಮಾಡಿ, 'ದ್ರೋಣನ ಆಜ್ಞೆ ಕೋಬೇಕು ಕಾಲ ಹೋದೀತು. ಸೂರ್ಯ ಅಸ್ತಂಗತನಾಗೋದರೊಳಗೆ ಜಯದ್ರಥನ ಸಂಹರಿಸಬೇಕು. ಶೀಘ್ರ ಪ್ರಸನ್ನೀಕರಿಸಿಕೋಬೇಕು' ಎಂದು ಪ್ರದಕ್ಷಿಣೆ ಮಾಡಲಿಕ್ಕೆ ದ್ರೋಣ ಮಾರ್ಗ ಬಿಟ್ಟ. ಸ್ವಾಮಿ, ಮನೋವೇಗದಪ್ಪಂದೆ ರಥ ನಡಸ್ತಿಹ. ಸವ್ಯಸಾಚಿ ಬಾಣಗಳಿಂದ ಎಚ್ಚಲಿಕ್ಕೆ, ಬಾಣದಕಿಂತ ರಥ ಮುಂದಾಗತಿಹೋದು. ಕೃತವರ್ಮ ಮಾರ್ಗ ಅಡ್ಡಗಟ್ಟಲಿಕ್ಕೆ, ಧನಂಜಯ ಕೃತವರ್ಮನ ಗೆದ್ದು, ಕೌರವಸೇನಿ ಕಡಿಡತಾ ಬರಲಿಕ್ಕೆ, ಸಂಶಪ್ತಕರು ಚಂಚಲ ಮನಸ್ಸುಳ್ಳವರಾದರು. ದೊಡ್ಡ ಮದ್ದಾನಿ ಸರೋವರ ಕದಡಿಧಾಂಗೆ ಇಂದ್ರನ ಮಗ ಸೇನಿ ಕದಡತ ಮರ್ದಿಸತ ಬರಲಿಕ್ಕೆ, ಸ್ವರ್ಗದಲ್ಲಿ ಇಂದ್ರ ಉಪೇಂದ್ರರು ಹ್ಯಾಂಗೆ ಒಪ್ಪಸ್ಥಾರೋ, ಹಾಂಗೆ ಕೃಷ್ಣಾರ್ಜುನರು ರಣರಂಗದಲ್ಲಿ ಒಪ್ಪತಿಹೋರು. ಶ್ವೇತವಾಹನ ಸೇನಿನೆಲ್ಲ ಸೀಳಿಸೀಳಿ ಬಿಸ್ಟತಿಹ. ಸುದಕ್ಷಿಣಸ್ನ, ಅಂಬಷ್ಟನ್ನ ಹತಗೈದ, ಶ್ರುತಾಯುಧ ಎಂಬುವನು ಮಡದನು.

ಶ್ರುತಾಯುಧ ವರುಣನ ಮಗ. ವರುಣನಿಂದ ನದಿಯಲ್ಲಿ ಹುಟ್ಟಿದ್ದ. ವರುಣ, ತನ್ನ ಮಗನಗೋಸ್ಕರ ದಿವ್ಯ ಗದಾ ಕೊಟ್ಟಿದ್ದ. ಅಂಥಾ ಶ್ರುತಾಯುಧ ಅರ್ಜುನನ ಬಾಣದಿಂದ ಪೀಡಿತನಾಗಿ ವಿರಥನಾದ. ಶ್ರುತಾಯುಧ ಅರ್ಜುನನ ರಥದ ಮ್ಯಾಲೆ ಹಾರಿ ಬಂದು, ಹರಿ ಮ್ಯಾಲೆ ಗದಾ ಈಡ್ಯಾಡಲಿಕ್ಕೆ, ಅದೇ ಗದಾ ತಿರಗಿ ಶ್ರುತಾಯುಧಗೆ ತಾಗಿ ತಲಿ ನೂರು ಹೋಳು ಆಯಿತು. ಯುದ್ಧ ಮಾಡುವವರ ಮ್ಯಾಲೆ ಗದಾ ಹಾಕಲಿಕ್ಕೆ ವರುಣ ಹೇಳಿದ್ದ. ಶ್ರುತಾಯುಧ, ಅದೃಷ್ಟನಾಮಕ ಪರಮಾತ್ಮನ ಮಾಯಾದಿಂದ, ಮಾತು ನೆನಪಿಗೆ ತಾರದೆ, ಕೇಶವನ ಮ್ಯಾಲೆ ಗದಾ ಹಾಕಲಿಕ್ಕೆ, ತನ್ನ ತಲೀನೆ ನೂರು ಹೋಳಾಗಿ, ತನ್ನ ಪಾಪಕರ್ಮದಿಂದ ರಣರಂಗದಲ್ಲಿ ಸತ್ತುಬಿದ್ದ.

ಶಲ್ಯನ ಮಹಾ ತೀಕ್ಷ್ಣನಾಗಿ ಬಹಳ ಮಂದಿ ವೀರರ ಕೊಲ್ಲತಾನೆ. ದಾರೂ ಅಡ್ಡ ಬರವಲ್ಲರು. ಸಮಸ್ತರೂ ಬೆನ್ನುಕೊಟ್ಟು ಓಡಿಬಾಹೋದು ಕಂಡು, ದುರ್ಯೋಧನ ದ್ರೋಣಾಚಾರ್ಯನ ಮ್ಯಾಲೆ ಬಹಳ ಸಿಟ್ಟಿಗೆ ಬಂದ. 'ಶಿಷ್ಯನ ಮ್ಯಾಲಿನ ಸ್ನೇಹದಿಂದ ಹ್ಯಾಂಗೆ ಮಾರ್ಗ ಕೊಟ್ಟೆ?' ಈ ಪ್ರಕಾರ ಬಹಳ ಸಿಟ್ಟಿಗೆ ಬಂದು ಮಾತನಾಡಿದ. ತನ್ನ ಸೇನಿ ಬಹಳ ಸಾಯೋದು ಕಂಡು, ಬಹಳ ಸಿಟ್ಟಿಗೆ ಬಂದು ಖಿನ್ನನಾಗಲಿಕ್ಕೆ, ದ್ರೋಣಾಚಾರ್ಯ ದುರ್ಯೋಧನಗೆ ದಿವ್ಯ ಕವಚ ಅಭಿಮಂತ್ರಿಸಿ ದೇಹಕ್ಕೆ ತೊಡಿಸಿ, 'ನಮ್ಮ ಮಂತ್ರಸಾಮರ್ಥ್ಯಿಂದ ನಿನಗೆ ಭಯವಿಲ್ಲ. ಅರ್ಜುನನ ಕೂಡ ಯುದ್ಧ ಮಾಡಿ ಜಯಶೀಲನಾಗು' ಎಂದನು. ಈ ಪ್ರಕಾರ, ದ್ರೋಣನಿಂದ ಅಭಿಮಂತ್ರಿತ ಕವಚ ತೊಟ್ಟುಕೊಂಡು, ದುರ್ಯೋಧನ ಅರ್ಜುನನ ಮ್ಯಾಲೆ ಬಾಣ ಮಳಿಗರೆಯತ ಬಂದ. ಅರ್ಜುನ ಬಹಳ ಭಯಂಕರವಾದ ತೀಕ್ಷ್ಣ

ಬಾಣಗಳ ಬಿಡಲಿಕ್ಕೆ, ದುರ್ಯೋಧನನ ಕವಚ ಸೀಳವಲ್ಲದು. ಅರ್ಜುನ ಕೋಪಾವಿಷ್ಟನಾಗಿ ಅತಿಭಯಂಕರ ಬಾಣ ಬಿಡಲಾಗಿ, ಅಶ್ವತ್ಥಾಮ ಅಡ್ಡ ಬಂದು ಅರ್ಜುನನ ಬಾಣಗಳನ್ನೆಲ್ಲ ಛೇದಿಸಿಬಿಟ್ಟ. ಪಾರ್ಥ, ಕೃಷ್ಣನ ಸಹಾಯದಿಂದ ದುರ್ಯೋಧನನ ಕುದರಿಗಳನ್ನೆಲ್ಲ ಸಾಯಗೊಟ್ಟನು. ದುರ್ಯೋಧನನ ಅಂಗೈಯೊಳಗೆ ಬಾಣಗಳ ಪೋಣಿಸಿಬಿಟ್ಟನು. ಕಿರೀಟಿ ಕೂಡ ಕೌರವ, ಅಶ್ವತ್ಥಾಮ, ಕರ್ಣ ಮೊದಲಾದವರು ಒಹಳ ಭಯಂಕರ ಯುದ್ಧ ಮಾಡತಿಹೋರು. ಎರಡನೇ ದೃಷ್ಟಾಂತ ಕೊಟ್ಟೀನೆಂದರೆ ಇಲ್ಲ, ಈ ಪ್ರಕಾರ ಕುರುಪಾಂಡವರ ಇತ್ತಂಡ ಸೇನಿ ನುಗ್ಗಾಗತಿಹೋದು.

ಅರ್ಜುನ ಕೌರವರ ಸೇನಿ ಸವರತ ಬರಲು ದ್ರೋಣ, ಪಾಂಡವರ ದಂಡಿನೊಳಗೆ ವೀರಭೂಪಾಲಕರ ತಲಿಗಳ ಕಡದು ಬಿಸ್ಟತಿಹ. ನೋಡಿದರೆ ದ್ರೋಣ ತಾ ಮುದುಕ, ಸಿಂಹ ನರಿಗಳ ಹಿಂಡು ಹ್ಯಾಂಗೆ ಓಡಸ್ತದೆ, ಹಾಂಗೆ ಪ್ರಾಯದವ ನೋಪಾದಿ ಪಾಂಡವರ ಸೇನಾವಾಹಿನೀ ಓಡಸ್ತಿಹ. ಧರ್ಮರಾಯನ ಕೈಸೆರಿ ತರಬೇಕೆಂದು ದ್ರೋಣ ಮುಂದಕ್ಕೆ ಹೋಗಥಾನೆ. ದ್ರುಪದರಾಯನ ಮಗ ಸತ್ಯಜಿತರಾಯ ಅಡ್ಡ ಬಂದು ಯುದ್ಧ ಕೊಡಲಿಕ್ಕೆ, ದ್ರೋಣ ತೀವ್ರ ಯುದ್ಧದಿಂದ ಸತ್ಯಜಿತನ್ನ ಸ್ವರ್ಗಕ್ಕೆ ಕಳುಹಿ, ಧರ್ಮರಾಯನ ಸಮೀಪಕ್ಕೆ ಬರಲಿಕ್ಕೆ, ರಾಯ ತನ್ನ ಶಕ್ತ್ಯನುಸಾರ ಯುದ್ಧ ಕೊಡಲಿಕ್ಕೆ, ರಾಯನ ಬಾಣದಿಂದ ದ್ರೋಣನ ರಥ ಛೇದಿಸಿತು. ಕುದರಿಗಳುಸತ್ತವು ಭೂಮೀವ್ಯಾಲಿ ದ್ರೋಣ, ಧರ್ಮರಾಯ ವಿರಥರಾಗಿ ನಿಂತರು. ಇನ್ನು ಗುರುವಿನ ಕೂಡ ಯುದ್ಧ ಮಾಡಬಾರದೆಂದು, ರಾಯ ಕೈ ವ್ಯಾಲಿತ್ತಿಕೊಂಡು ಶಸ್ತ್ರಾಸ್ತ್ರಗಳ ಬಿಟ್ಟುಕೊಟ್ಟನು. ದ್ರೋಣಾಚಾರ್ಯ ರಾಯನ ಹಿಡಿಯಲಿಕ್ಕೆ ಮೇರೆದಪ್ಪಿ ಬರಲಿಕ್ಕೆ, ದ್ರೋಣನ ಎದುರಿಗೆ ಧರ್ಮರಾಯ ನಿಂದರಲಾರದೆ, ನಕುಲ ಸಹದೇವರ ರಥ ಏರಿಕೊಂಡು ಬೆನ್ನುಕೊಟ್ಟು ಓಡಲಿಕ್ಕೆ, ಅರಸು ಮುರದುಹೋಗೋಣ, ಚಿಕ್ಕ ಸತೋವರ ಆನಿ ಹ್ಯಾಂಗೆ ಕದಡತದೆ, ಹಾಂಗೆ ದ್ರೋಣ ಪಾಂಡವರ ಸೇನಾ ಕದಡತ, ವೀರರ ತಲಿಗಳ ಕಡೀತಾ ಬರಲಿಕ್ಕೆ, ಶಿಶುಪಾಲನ ಮಗ ಧೃಷ್ಟಕೇತು, ಜರಾಸಂಧನ ಮಗ ಸಹದೇವ, ತಮ್ಮ ಶಕ್ತಿ ಮೀರಿ ಭಾರದ್ವಾಜನ ಕೂಡ ಬಹಳ ಯುದ್ಧ ಕೊಟ್ಟರು. ದ್ರೋಣಾಚಾರ್ಯ ದಾರನ್ನೂ ಲೆಕ್ಕಿಸದೆ, ಧೃಷ್ಟಕೇತು, ಸಹದೇವರ ತಲಿ ಕಡದುಬಿಟ್ಟನು.

ಈ ಪ್ರಕಾರ ದ್ರೋಣ, ಪಾಂಡವರ ಸೇನಿ ಸಂಹಾರ ಮಾಡಲಿಕ್ಕೆ, ಭೀಮು. ಸೇನ ದುರ್ಯೋಧನನ ಸೇನಿ ಹೊಕ್ಕ. ವೀರಾಧಿವೀರರ ತಲಿ ಕಡದು ಬಿಸ್ಟತಿಹ. ಇತ್ತಂಡವಾಹಿನಿ ಬಹಳ ಬೀಳತಿಹೋದು. ಅಷ್ಟರೊಳಗೆ ಅಲಂಬುಸ ರಾಕ್ಷಸ ಬಹಳೇ ತೀಕ್ಷ್ಣನಾಗಿ ಅದೃಶ್ಯದಿಂದ ಭೀಮುಸೇನನ ಬಲಕ್ಕೆಲ್ಲ ನೋಯುಸ್ತಿಹ. ತನ್ನ ಭೃತ್ಯರೆಲ್ಲ ದುಃಖಬಡೋದು ಕಂಡು, 'ಭೀಮುಸೇನ ಅಸ್ತ್ರಜ್ಞನಲ್ಲ ಎಂದು ಲೋಕವ್ಯವಹಾರವವೆ, ಇನ್ನು ನನ್ನ ಸಾಮರ್ಥಿ ನೋಡು' ಎಂದು ಯಾದವ-

ಶ್ರೇಷ್ಠನ ಆಜ್ಞೆ ಕೊಂಡು, ಭೀಮಸೇನ ತಾ ಕಾವ್ಯಕರ್ಮದವನಲ್ಲದಿದ್ದರೂ, ದೇವರಾಜ್ಞೆ ಮೀರಲೊಶವಲ್ಲಾದಕಾರಣ, ತ್ವಷ್ಟ್ರದೇವತಾಕವಾದ ಅಸ್ತ್ರ ಜಪಿಸಿ ಅಲಂಬುಸನ ಮ್ಯಾಲೆ ಬಿಡಲಿಕ್ಕೆ, ಅದೃಶ್ಯವಾದ ರಾಕ್ಷಸನ ದೇಹ ಸೀಳಿ, ಭೂಮೀ ಒಳಗೆ ಹೋಗತಿಹೋದು. ಸೆಟ್ಟು ತಾಳಲಾರದೆ ಅಲಂಬುಸ ಓಡಿಹೋದ. ದ್ರೌಪದೀಪುತ್ರರ ಬಾಣದಿಂದ ಸೋಮದತ್ತನ ಮಗ ಶಲಸೆಂಬವ `ಸತ್ತ. ಅಲಂಬುಸಗೆ, ಘಟೋತ್ಕಚಗೆ ಯುದ್ಧ ಹತ್ತಿತು. ಆಕಾಶಮಾರ್ಗದಲ್ಲಿ ಬಹಳ ಭಯಂಕರ ಯುದ್ಧ ಮಾಡಿ, ಅಲಂಬುಸನ ಕೊರಳಿಗೆ ಕೈಹಾಕಿ ಕೆಡಹಿ, ಘಟೋತ್ಕಚ ತನ್ನ ಕಾಲಿನಿಂದ ಒರಸ್ತಿಹ. ಒರಸಿ ಸಾಯಕುಟ್ಟಿದನು. ಕೃತವರ್ಮ ತೀಕ್ಷ್ಣವಾದ ಬಾಣಗಳ ಬಿಡತ ಸಮುಸ್ತರನ್ನೂ ಗೆದ್ದನು. ಸಮುಸ್ತರನ್ನೂ ಗೆಲ್ಲೋ ಸಾಮರ್ಥ್ಯ ಎಲ್ಲಿತ್ತೆಂದರೆ, ಕೃತವರ್ಮ ದ್ವಾರಾವತಿಯಲ್ಲಿ ಕೃಷ್ಣನ ಸೇವಿ ಬಹಳೇ ಮಾಡಿದ್ದ. ಸ್ವಾಮಿ ಕಮುಲೇಕ್ಷಣ, ಭಕ್ತನ ಸೇವಿಗೆ ತುಷ್ಟನಾಗಿ, ಕ್ಷಣಮಾತ್ರದಲ್ಲಿ ಸಮುಸ್ತರನ್ನೂ ಗೆಲ್ಲೆಂದು ವರವು ಕೊಟ್ಟಿದ್ದನು. ಆದಕಾರಣ ಸಮುಸ್ತರನ್ನೂ ಗೆದ್ದನು. ಭೀಮಸೇನ ಕೃತವರ್ಮನ ಎದುರಿಗೆ ಹೋಗಿಲ್ಲ. ಸಾತ್ಯಕಿ ಕೃತವರ್ಮನ ಗೆದ್ದನು. ಸ್ವಾಮೀ ವರವು ಇದ್ದು, ಹ್ಯಾಂಗೆ ಸಾತ್ಯಕಿ ಕೃತವರ್ಮನ್ನ ಸೋಲಿಸಿದನೆಂದರೆ 'ಯಾದವರ ಹೊರ್ತು' ಎಂದು ಸ್ವಾಮಿ ವರವು ಕೊಟ್ಟಿದ್ದ. ಅದರಿಂದ ಸಾತ್ಯಕೀ ಕೈಯ ಸೋತ. ಇದಾದಮ್ಯಾಲೆ ರಥ ಏರಿಕೊಂಡು ಹಿಂದಕ್ಕೆ ತಿರುಗಿದನು.

ಅರ್ಜುನಗೆ ಬಲ ಹೆಚ್ಚಿಸಿಕೊಡಬೇಕಾಗಿ, ಅದೇ ವ್ಯಾಳ್ಯಾದಲ್ಲಿ, ಸ್ವಾಮಿ ಪಾಂಚಜನ್ಯ ಶಂಖ ಊದಿದನು. ಶಂಖಧ್ವನಿ ಸತ್ಯಲೋಕ ಪರಿಯಂತ ಹೋಯಿತು. ಸಕಲ ಜಗತ್ತು ನಡಗಹೊಕ್ಕಿತು. ಬ್ರಹ್ಮ ರುದ್ರ ಇಂದ್ರ ಮೊದಲಾದ ದೇವತಿಗಳೆಲ್ಲ ಬಹಳ ಭಯದಿಂದ ಚಂಚಲವಾಗತಿಹೋರು. ಪ್ರಳಯಕಾಲದಲ್ಲಿ ಸರ್ವಜಗತ್ತು ಹ್ಯಾಂಗೆ ನಡಗತದೆ, ಹಾಂಗೆ ಹದಿನಾಲ್ಕು ಲೋಕದವರೆಲ್ಲ ತಲ್ಲಣಿಸತಿಹೋರು. ಸ್ವಾಮೀ ಪಾಂಚಜನ್ಯ ಶಂಖಧ್ವನಿಯಿಂದ, ಅರ್ಜುನನ ದೇವದತ್ತ ಶಂಖದ ಸಪ್ಪಳ ಕೇಳಸದು. ಧರ್ಮರಾಯ ಬಹಳ ಅಂಜಿ, 'ಅರ್ಜುನನ ದೇವದತ್ತ ಶಂಖದ ಧ್ವನಿ ಕೇಳಸವಲ್ಲದು. ಶ್ರೀಕೃಷ್ಣನ ಪಾಂಚಜನ್ಯ ಶಂಖಧ್ವನಿ ಕೇಳಸತದೆ. ಅರ್ಜುನ ಸತ್ತಿದ್ದಾನಾದಕಾರಣ, ಕೃಷ್ಣ ತಾನೇ ಯುದ್ಧ ಮಾಡತಿದ್ದಾನಾದೀತು. ನಮ್ಮ ಅರ್ಜುನಗೆ ಏನು ಅವಸ್ಥೀ ಆಗಿದ್ದೀತೋ, ಎಲೈ ಸಾತ್ಯಕಿ, ನಿಮ್ಮ ಗುರುವಿನ ಕ್ಷೇಮ ತಿಳದು ಬಾ. ಎತಲಾಸಿಕೆ ಫಲ್ಗುಣ ಬದುಕಿದ್ದ ಪಕ್ಷವೇ, ಅರ್ಜುನಗೆ ಸಹಕಾರಿಯಾಗಿ ನೀ ಯುದ್ಧ ಮಾಡು.' ಈ ಪ್ರಕಾರ ಧರ್ಮರಾಯನ ಆಜ್ಞೆ ಆಗಲಿಕ್ಕೆ, ವೈರಿಗಳ ಸೇನಿ ಸೀಳಿ, ಅರ್ಜುನನ ಸಮೀಪಕ್ಕೆ ಹೋಗೋದಕ್ಕೆ ತನಗೆ ಸಾಮರ್ಥ್ಯ ಬರಲೆಂದು, ಸಾತ್ಯಕಿ ಬ್ರಾಹ್ಮಣರಿಗೆ ಯಥೇಷ್ಟ ದಾನಧರ್ಮ ಮಾಡಿ, ಆಶೀರ್ವಾದ ಕೊಂಡಿರಲಾಗಿ, ನರನಾರಾಯಣರಲ್ಲಿ ಹೋಗಬೇಕು, ಒಬ್ಬನೆ

ಹೋಗಲಾರನೆಂದು, ಭೀಮಸೇನನು ಕಳುಹುತ ಹೋದನು. ಕೌರವಸೇನ ಮುಂಭಾಗ ಸೀಳಿ ಸಾತ್ಯಕಿ, ಒಳಗೆ ಪ್ರವೇಶನಾದಮ್ಯಾಲೆ ಭೀಮಸೇನ ಹಿಂದಕ್ಕೆ ತಿರಗಿದನು.

ಸಾತ್ಯಕಿ ಸೈನ್ಯ ಸೀಳಿ ಹೋಗುವಾಗ, ದ್ರೋಣ ನಿವಾರಿಸಿದ್ದಿಲ್ಲ. ಏನು ಕಾರಣವೆಂದರೆ, ಸಾತ್ಯಕಿ ಅರ್ಜುನನ ಶಿಷ್ಯ, ಫಲ್ಗುಣ ತನ್ನ ಶಿಷ್ಯನಾದಕಾರಣ; ತನ್ನ ಶಿಷ್ಯನ ವ್ಯಾಲಿನ ವಾತ್ಸಲ್ಯದಿಂದ ಸಾತ್ಯಕಿಯನ್ನ ನಿವಾರಿಸಿದ್ದಿಲ್ಲ. ಮಾರ್ಗ ಕೊಡಲು, ವಿಪ್ರಾಶೀರ್ವಾದದಿಂದ, ಯಾದವಪತಿ ಅನುಗ್ರಹದಿಂದ ಕೌರವಸೇನಿನೆಲ್ಲ ಮದ್ದಾನಿಯೋಪಾದಿ ಕದಡತ ಒಳಗೆ ಪ್ರವೇಶವಾದನು. ಸಾತ್ಯಕಿ ಕೌರವರ ಸೇನಿ ಸೀಳತ ಹೋಗಲಾಗಿ, ಭೀಮಸೇನಗೆ, ಧರ್ಮರಾಯನ ರಕ್ಷಿಸೆಂತ ಹೇಳಿ ಒಳಗೆ ಹೊಕ್ಕ. ಕೃತವರ್ಮಗೆ, ಸಾತ್ಯಕಿಗೆ ಭಯಂಕರ ಯುದ್ಧವಾಯಿತು. ಯುದ್ಧದಿಂದ ಎರಡನೇ ಶಬ್ದ ಕೇಳಸದು. ಸಾತ್ಯಕಿ, ಕೃತವರ್ಮನ ಸೋಲಿಸಿ, ಆತನ ರಥ ಮುರಿ ಹೆಟ್ಟಿ, ಕುದರಿಗಳ ಸಾಯಬಡದು, ಮುಂದಕ್ಕೆ ಹೋಗಥಾನೆ. ಶೂರಪರಾಕ್ರಮರು ಅಡ್ಡ ಬರಲು, ಅವರ ತಲಿಗಳ ಕಡದುಬಿಟ್ಟನು. ಕೌರವಸೇನಿ ಬಾಣಗಳ ಮಳಿ ಗರೆಯುತ ನಿಂದರಲಿಕ್ಕೆ, ಸಾತ್ಯಕಿ ಅವರನ್ನ ಲೆಕ್ಕಿಸದೆ, ದುರ್ಯೋಧನನ ಸೇನಿನೆಲ್ಲ ಕದಡತ ಹೋಗಲಿಕ್ಕೆ, ಜಲಸಂಧ ಬರಲು, ಅವನನ್ನ ಕೊಂದುಬಿಟ್ಟನು. ಮದ್ದಾನಿ ಸರೋವರ ಕದಡಿಸೋಪಾದಿ, ಸೇನಿ ಕದಡತಿಹ. ಆನೀ ಕುಂಭಸ್ಥಳ ಸೀಳಿ ಬಿಸ್ಟತಿಹ. ಇಷ್ಟಾಗಲಿಕ್ಕೆ ಪರ್ವತದೇಶದ ರಾಯರು, ಸಾತ್ಯಕಿ ವ್ಯಾಲೆ ಕಲ್ಲುಗಳ ಮಳಿಗರೆಯತ ಬಂದರು. ಅವರ ಲೆಕ್ಕಿಸದೆ ಸಾತ್ಯಕಿ ಬಹಳ ಭಯಂಕರನಾಗಿ, ಕೌರವಸೇನಿನೆಲ್ಲ ಸಂಹರಿಸತ, ಕೃಷ್ಣಾರ್ಜುನರ ಸಮೀಪಕ್ಕೆ ಹೋಗಲಿಕ್ಕೆ, ಭೂರಿಶ್ರವ ಸಾತ್ಯಕಿ ಕೂಡ ಯುದ್ಧಕ್ಕೆ ಬಂದನು. ಉಭಯರಿಗೂ ಬಹಳ ಭಯಂಕರ ಯುದ್ಧವಾಗಿ, ಪರಸ್ಪರ ರಥಗಳು ಛೇದಿಸಿಹೋದವು, ಸಾರಥಿಗಳು ಸತ್ತರು. ಧನುರ್ಬಾಣಗಳು ಛೇದಿಸಿಹೋದವು. ಆಗ ಸಾತ್ಯಕಿ, ಭೂರಿಶ್ರವ ಖಡ್ಗ ಚರ್ಮ ಕೊಂಡು ಪರಸ್ಪರ ಯುದ್ಧ ಮಾಡಿದರು. ಆಯುಧಪೆಟ್ಟುಗಳ ತಪ್ಪಿಸ್ತಿಹೋರು. ಸೋಮದತ್ತನ ಮಗ ಭೂರಿಶ್ರವನ್ನ ಸಾತ್ಯಕಿ ಕೆಡಹಾಕಿದನು. ಭೂರಿಶ್ರವ ಸಾತ್ಯಕಿ ವ್ಯಾಲೆ ಕೋಪಾವಿಷ್ಟನಾಗಿ, ತನ್ನ ಸಾಮರ್ಥಿಯಿಂದ ಸಾತ್ಯಕಿಯನ್ನ ಕೆಡಹಾಕಿ, ಕೂದಲ ಹಿಡದು, ತನ್ನ ಅಂಗಾಲಪೆಟ್ಟಿನಿಂದ ಮರ್ದಿಸಿ, ಕೊರಳ ಛೇದಿಸಬೇಕೆಂದು ಉದ್ಯುಕ್ತ ನಾಗಲಿಕ್ಕೆ, ಯಾದವಪತಿ ಶ್ರೀಕೃಷ್ಣ ಕಂಡು ಅರ್ಜುನಗೆ ಹೇಳಿದ.

ರಣರಂಗದಲ್ಲಿ ಬಹು ದೂರ ಯುದ್ಧವಾಗೋದು ಶ್ರೀಕೃಷ್ಣ ತಾ ಏನು ಬಲ್ಲ ಎಂದರೆ, ಸ್ವಾಮಿ ವಿಶ್ವಚಕ್ಷು, ಸಕಲರ ಮನೋವೃತ್ತಿ ಬಲ್ಲನಾದಕಾರಣ ಫಲ್ಗುಣಗೆ ಹೇಳಿದ. 'ನೋಡಿದ್ಯಾ ಎಲೈ ಅರ್ಜುನ, ನಿನ್ನ ಶಿಷ್ಯಗೆ ಏನು ಅವಸ್ಥೀ ಆಗ್ಯೇದೆ! ಆಲಸ್ಯರಹಿತನಾಗಿ ನಿನ್ನ ಶಿಷ್ಯನ್ನ ರಕ್ಷಿಸು' ಎಂದು ಕೃಷ್ಣನ ಆಜ್ಞೆ ಆಗಲು,

ಅದೇ ಕ್ಷಣದಲ್ಲಿ ದಾವ ತೋಳಲ್ಲಿ ಭೂರಿಶ್ರವ ಶಿರಚ್ಛೇದನ ಮಾಡತಿದ್ದ, ಅದೇ ತೋಳು ಛೇದಿಸಿದ. ತೋಳು ಕೆಳಗೆ ಬಿತ್ತು. ಭೂರಿಶ್ರವ ತೋಳು ಛೇದಿಸಿಕೊಂಡು ಪಾರ್ಥನ ಕೂಡ ಮಾತನಾಡಿದ. 'ನೀ ಧರ್ಮಿಷ್ಟನಾಗಿ ಬಹಳ ಅಧರ್ಮ ಮಾಡಿದಿ. ಶೂರರ ಧರ್ಮ ನೀ ಮಾಡಲಿಲ್ಲ. ನಾ ಆನ್ಯಾಸಕ್ತನಾಗಿರಲಿಕ್ಕೆ ನನ್ನ ತೋಳು ಛೇದಿಸಿದ್ದೀ. ಇಷ್ಟು ದಿವಸ ನಿನ್ನನ್ನು ಶೂರನೆಂದು ತಿಳಿದಿದ್ದೆ. ಕೃಷ್ಣನ ಮಾತು ಕೇಳಿ ಬಹಳೇ ಅನ್ಯಾಯ ಮಾಡಿದಿ.' ಈ ರೀತಿ ಕಿರೀಟಿ ಕೂಡ ಮಾತನಾಡಿ, ನಾರಾಯಣನಲ್ಲಿ ಭಕ್ತಿ ಎರಗಿಸಿ, ಬಾಣದ ಹಾಸಿಕೇ ಮ್ಯಾಲೆ, 'ಇನ್ನೇನ ಬಪಕಲಿ!' ಎಂದು ಯೋಗಧ್ಯಾನ ಮಾಡತ ಮಲಗಿದನು. ಅಸುರಾವೇಶ ಹೋಯಿತು. ಆ ವ್ಯಾಳ್ಯಾದಲ್ಲಿ ಸಾತ್ಯಕಿ ಬಂದು, 'ಭೂರಿಶ್ರವ ನನ್ನ ವೈರಿ ಇದ್ದಾನೆ. ಇವನ ತಲಿ ಕೊಯ್ಯುಬೇಕು' ಎಂದು ಖಡ್ಗ ಉಚ್ಚಿಕೊಂಡು ಹೋಗಲಿಕ್ಕೆ ನರನಾರಾಯಣರು ನಿವಾರಿಸಿದರು. 'ಭೂರಿಶ್ರವ ಯೋಗಧ್ಯಾನದಿಂದ ತಾನೇ ಸಾಯಥಾನೆ, ಕೊಲ್ಲಬ್ಯಾಡ' ಎಂದು ಹೇಳಲಿಕ್ಕೆ, ಸಾತ್ಯಕಿ ಬಿಟ್ಟನು. ಕೃಷ್ಣ, ಅರ್ಜುನ ಸಾತ್ಯಕಿಗೆ ದಿವ್ಯ ರಥ, ಸಾರಥಿ, ಆಯುಧಗಳ ಕೊಟ್ಟನು. ಬಹಳ ಶ್ರಮದಿಂದ ಕೃಷ್ಣಾರ್ಜುನರ ಸಮೀಪಕ್ಕೆ ಸಾತ್ಯಕಿ ಹೋದನು.

ಅರ್ಜುನನ ರಥದ ಕುದರಿಗಳು ಬಹಳ ನೀರಡಿಸಿಹೋವು. ನೀರು ಕುಡಿಸಬೇಕಾದರೆ ಉದಕವಿಲ್ಲ. ಸ್ವಾಮಿ ಆಜ್ಞದ ಮ್ಯಾಲೆ, ಅರ್ಜುನ ವರುಣಾಸ್ತ್ರ ಪ್ರಯೋಗದಿಂದ ದಿವ್ಯೋದಕ ಸರೋವರ ಮಾಡಿದನು. ಆಗ ಸರ್ವೋತ್ತಮ ದೇವತಿ, ಬ್ರಹ್ಮಾದಿಗಳಿಗೆ ಒಡಿಯ ಸಾರಥಿಯು ಕರ್ಮ ತೋರಿಸಬೇಕಾಗಿ, ರಥಕ್ಕೆ ಕಟ್ಟಿದ್ದ ಕುದರಿಗಳ ಬಿಟ್ಟು, ಬಾಣಗಳು ಕಿತ್ತಿ, ಮೋಕ್ಷ ಕೊಡುವಂಥ ಕೈಕಮಲಗಳಿಂದ ಕುದರಿಗಳನ್ನೆಲ್ಲ ತೊಳದು, ಪುನಃ ರಥಕ್ಕೆ ಕಟ್ಟಿ, ರಥದಮ್ಯಾಲೆ ಏರಿಕೊಂಡು ನಡಸಹೊಕ್ಕನು. ಸಾತ್ಯಕಿ ಕೃಷ್ಣಾರ್ಜುನರ ಸಮೀಪಕ್ಕೆ ಹೋದಮ್ಯಾಲೆ, ಧರ್ಮರಾಯ ಬಹಳ ಚಿಂತಿಯುಳ್ಳವನಾಗಿ, ಭೀಮಸೇನನ ಕೂಡ ಮಾತನಾಡಿದ. 'ಎಲೋ ಅಪ್ಪ ಭೀಮಸೇನ,' ಗಾಂಡೀವಧನುಸ್ಸಿನ ಶಬ್ದ ಕೇಳೋದಿಲ್ಲ. ಪಾಂಚಜನ್ಯಶಂಖಧ್ವನಿ ಕೇಳಸ್ತದೆ. ಸಾತ್ಯಕಿ ಹೋಗಿದ್ದಾನೆ. ಗುರುಶಿಷ್ಯರಿಗೆ ಕ್ಷೇಮವದೋ ಇಲ್ಲವೋ ತಿಳಿಯದು. ಬಹಳಕ್ಕೆ ಗುರುಶಿಷ್ಯರಿಗೆ ಕ್ಷೇಮವಿಲ್ಲವೇ ಹೋಗಿದ್ದೀತು. ಆದಕಾರಣ, ನಮ್ಮ ಸ್ವಾಮಿ ಯಾದವಪತಿ ತಾನೇ ಯುದ್ಧ ಮಾಡತಿದ್ದಾನು. ನೀ ಹೋಗಿ, ಶ್ವೇತವಾಹನನ ಕ್ಷೇಮ ತಿಳೋಹಾಂಗೆ ಸಿಂಹನಾದ ಮಾಡು. ನಿನ್ನ ಸಿಂಹನಾದದಿಂದ ಒದಿಕ್ಯಾರೆಂದು ತಿಳಿದೇನು.' ಹೀಂಗೆಂದು ಧರ್ಮರಾಯ ಅನಲಿಕ್ಕೆ ಭೀಮಸೇನ ಮಾತನಾಡಿದ. 'ರಾಯ, ಅರ್ಜುನಗೆ ಅಕ್ಷೇಮ ಚಿಂತಿಸಬ್ಯಾಡ. ಸಾಕ್ಷಾತ್ಪರದೇವತಿ ಶ್ರೀಕೃಷ್ಣ ಸಹಾಯನಿದ್ದಾನೆ. ಬ್ರಹ್ಮರುದ್ರಾದಿ ದೇವತಿಗಳು ಒಕ್ಕಟ್ಟಾಗಿ ಬರಲ್ಯಾಕೆ, ಅರ್ಜುನನ್ನ ದಾರೂ ಗೆಲ್ಲಲಾರರು. ನಮ್ಮ ತಮ್ಮ ಅರ್ಜುನ ವಾಸುದೇವನಿಂದ

ಪಾಲಿತನಾಗ್ಯಾನೆ. ಸರ್ವಥಾ ಅರ್ಜುನ ಸಾತ್ಯಕೇರಿಗೆ ಭಯವಿಲ್ಲ. ನೀ ಹಿರಿಯ, ನಿನ್ನ ಆಜ್ಞೆ ಮೀರಲಿಕ್ಕೆ ಬಾರದು. ಆವಶ್ಯ ಕೃಷ್ಣಾರ್ಜುನರ ಸಮೀಪಕ್ಕೆ ಹೋದೇನು. ಆದರೂ ನಾ ನಿನ್ನ ಬಿಟ್ಟು ಹೋಗೋದು ಉಚಿತವಲ್ಲ. ಬಿಟ್ಟುಹೋದೇನೆ ದ್ರೋಣ ನಿನ್ನ ಕೈಸೆರಿ ಕೊಂಡುಹೋದಾನು. ದುರ್ಯೋಧನನ ಮುಂದೆ ನಿನ್ನ ಕೈಸೆರಿ ತರಥೀನೆಂದು ಶಪಥ ಮಾಡ್ಯಾನೆ. ಆದಕಾರಣ ನಿನ್ನ ಹಿಡೀಬೇಕೆಂದು ಜಪಸ್ತಾನೆ.' ಹೀಂಗೆ ಭೀಮಸೇನ ಆಡಲಿಕ್ಕೆ, ರಾಯ ಅಂಥಾನೆ. 'ನನ್ನ ಸಮೀಪದಲ್ಲಿ ಸೇನಾಪತಿ ಧೃಷ್ಟದ್ಯುಮ್ನ, ನಿನ್ನ ಮಗ ಘಟೋತ್ಕಚರಿದ್ದಾರೆ. ಇಂಥಾ ಪರಾಕ್ರಮರು ಇರಲಿಕ್ಕೆ, ನಾ ದ್ರೋಣನ ವಶನಾಗೋದಿಲ್ಲ. ನನ್ನ ಪ್ರೀತಿಬಡಿಸಬೇಕೆಂಬ ಇಚ್ಛ ಇದ್ದರೆ, ಹೋಗಿ ಅರ್ಜುನನ್ನ ಸಾತ್ಯಕೀನ್ನ ರಕ್ಷಿಸು. ಅವರು ಕ್ಷೇಮದಲ್ಲಿದ್ದ ಪಕ್ಷಪೇ ನೀ ಸಿಂಹನಾದ ಮಾಡೋದರಿಂದ, ಕ್ಷೇಮದಲ್ಲಿದ್ದಾರೆಂದು ಸಮಾಧಾನವುಳ್ಳವ ನಾದೇನು. ಜಯದ್ರಥ ಸಾಯಲಿಕ್ಕೆ ಸಿಂಹನಾದ ಮಾಡು. ಸತ್ತನೆಂದು ತಿಳದೇನು' ಎಂದು ರಾಯ ಹೇಳಲಿಕ್ಕೆ, 'ಬಹಳ ಒಳ್ಳೀದು' ಎಂದು, ಅಣ್ಣನ ಆಜ್ಞೆ ಕೊಂಡು ಹೋಗುವಾಗ ಘಟೋತ್ಕಚ, ಧೃಷ್ಟದ್ಯುಮ್ನರಿಗೆ 'ನಮ್ಮ ರಾಯನ ರಕ್ಷಿಸರಿ' ಎಂದು ಹೇಳಿ ತೆರಳಿದನು. ಧೃಷ್ಟದ್ಯುಮ್ನ ಭೀಮನ ಕೂಡ ಮಾತನಾಡಿದನು.

'ಧರ್ಮರಾಯನ ಕೈಸೆರಿ ಕೊಂಡುಹೋದಾರೆಂಬ ಚಿಂತಿ ಮಾಡಬ್ಯಾಡ. ದ್ರೋಣನ ಮೃತ್ಯು ನಾನಿದ್ದೀನಿ. ರಾಯನ್ನ ಕೈಸೆರಿ ಕೊಡೋಹಾಂಗೆ ಇಲ್ಲ. ನೀ ರಾಯನ ಆಜ್ಞೆದಂತೆ ಮಾಡು' ಎನಲಿಕ್ಕೆ, ಭೀಮಸೇನ ಆಗ ಗದಾ ಹಿಡಕೊಂಡು ಕೌರವಸೇನೀ ವ್ಯಾಲೆ ಬಾಣದ ಮಳಗರೆಯುತ ನಡದನು.

ದ್ರೋಣಾಚಾರ್ಯ ಭೀಮಸೇನನ ವ್ಯಾಲೆ ಅಪಾರ ಬಾಣಗಳ ಬಿಟ್ಟ, ಭೀಮಸೇನನ ಕೂಡ ಮಾತನಾಡಿದ. 'ಅರ್ಜುನ ನನ್ನ ಶಿಷ್ಯನಾದ ಪ್ರಯುಕ್ತ ರಣರಂಗದೊಳಗೆ ಮುಮುತಿಯಿಂದ ಬಿಟ್ಟೆ. ಸಾತ್ಯಕಿ ಅರ್ಜುನನ ಶಿಷ್ಯನಾದ ಕಾರಣ ರಣರಂಗದಲ್ಲಿ ಬಿಟ್ಟುಕೊಟ್ಟೆ. ದುರ್ಯೋಧನ ಜಯದ್ರಥನ್ನ ರಕ್ಷಿಸೋದಕ್ಕೆ ದಾರನ್ನೂ ಒಳಗೆ ಬಿಡಬಾರದೆಂದು ನನ್ನ ಕೈಯ ಪ್ರತಿಜ್ಞೆ ಕೊಂಡಾನೆ. ಅರ್ಜುನ ನನ್ನಲ್ಲಿ ಗುರುತ್ವ ಇಟ್ಟಕಾರಣ ಮೋಹದಿಂದ ಒಳಗೆ ಬಿಟ್ಟೆ. ನೀ ಉನ್ಮತ್ತನಿದ್ದೀ. ನಿನಗೆ ನಾ ಮಾರ್ಗ ಕೊಡೋಹಾಂಗಿಲ್ಲ. ನನ್ನ ಪರಾಕ್ರಮ ನೋಡು' ಎಂದು ದ್ರೋಣ ಮಾತನಾಡಲಿಕ್ಕೆ, ಭೀಮ ತನ್ನ ಗದಾ ಎತ್ತಿ ದ್ರೋಣನ ರಥದವ್ಯಾಲೆ ಹಾಕಿದನು. 'ಹೇ ದ್ರೋಣಾಚಾರ್ಯ, ಇಷ್ಟು ದಿವಸ ನೀ ನನ್ನ ಗುರುವು, ನಮ್ಮ ತಂದೀ ಸ್ಥಳದಲ್ಲಿ ನಿನ್ನ ತಿಳದು, ನಿನ್ನಲ್ಲಿ ಗುರುತ್ವ ಇಟ್ಟು, ಯುದ್ಧ ಮಾಡಿದ್ದಿಲ್ಲ. ಇನ್ನು ನನ್ನ ಪರಾಕ್ರಮ ನೋಡು' ಎಂದು ದ್ರೋಣಗೆ ಹೇಳಿ, ತನ್ನ ಗದೀ ಪೆಟ್ಟಿನಿಂದ, ದ್ರೋಣಾಚಾರ್ಯನ ಸಾರಥಿ ಕುದರಿ ಸಾಯಗೊಟ್ಟನು, ಧ್ವಜಸ್ತಂಭ ಕೆಡಹಾಕಿದನು. ರಥದ ಕೂಬರ ಪುಡಿಪುಡಿ ಮಾಡಿದನು. ದ್ರೋಣ ತನ್ನ ಪ್ರಾಣ

ಉಳಿಸಿಕೊಂಬೊ ನಿಮಿತ್ತ ಕೆಳಗೆ ಹಾರಿಕೊಳ್ಳಲು, ಮತ್ತೆ ದುರ್ಯೋಧನ ಸಾರಥೀ ಸಹಿತ ಒಂದು ರಥ ತಂದುಕೊಟ್ಟ. ದುರ್ಯೋಧನನಿಂದ ಬಂದ ರಥ ಏರಿಕೊಂಡು, ಉತ್ತಮಾಸ್ತ್ರಗಳು ಅಭಿಮಂತ್ರಿಸಿ, ಭೀಮಸೇನನ ವ್ಯಾಲೆ ಮಳಿಗರೇತ ಹೋದನು. ಭೀಮಸೇನ ಅಷ್ಟಕ್ಕೂ ತಲಿ ಒಡ್ಡಿ, ಪ್ರಾಣಿಗಳು ಮಳಿಧಾರಿಗೆ ತಲಿ ಕೊಟ್ಟಂತೆ ಹೋಗಿ, ದ್ರೋಣನ ರಥ ತನ್ನ ಕೈಲಿ ಹಿಡದು, ಆಕಾಶಮಾರ್ಗಕ್ಕೆ ಈಡ್ಯಾಡಿದನು. 'ಎಲೈ ದ್ರೋಣಾಚಾರ್ಯ, ನೀ ಗುರುವಿದ್ದಿ ಎಂದು ಇವತ್ತಿಗೆ ಕೊಲ್ಲಲಿಲ್ಲ. ನಿನ್ನ ಕೊಲ್ಲೋ ಸಾಮರ್ಥ್ಯ ನನಗದೆ.' ಹೀಂಗೆ ಭೀಮಸೇನ ದ್ರೋಣನ ಕೂಡ ಮಾತನಾಡಿದನು.

ಅಷ್ಟರೊಳಗೆ ವಿಶೋಕ, ಭೀಮಸೇನನ ಸಾರಥಿ, ರಥ ತಂದು ನಿಂದರಿಸಿದನು. ದ್ರೋಣನ ರಥ, ಭೀಮಸೇನ ವ್ಯಾಲಕ್ಕೆ ಹಾರಿಸಿದಾಗ ಪುಡಿಪುಡಿ ಆಗಿತ್ತಲ್ಲ, ದುರ್ಯೋಧನ ಮತ್ತೆ ಒಂದು ರಥ ತಂದು ನಿಂದರಿಸಿದ್ದ. ದುರ್ಯೋಧನ ಕಳುಹಿದ ರಥ ದ್ರೋಣ ಏರಿಕೊಂಡು, ಧರ್ಮರಾಯನ ಕೈಸೆರಿ ತರೋದಕ್ಕೆ ಪಾಂಡವರ ಸೇನಿನೆಲ್ಲ ಕದಡತಲೇ ಬಂದ. ಬ್ರಾಹ್ಮಣನ ತೀಕ್ಷ್ಣ ಬಾಣಗಳ ತಾಳಲಾರದೆ, ಪಾಂಡವಸೇನಿ ಚಾಮುಕಚೆಲ್ಲಿ ನಾಲ್ಕೂ ಕಡಿಗೆ ಓಡಿಹೋಗತಿಹೋದು. ಅನಿತರೊಳಗೆ ಸೇನಾಪತಿ ಧೃಷ್ಟದ್ಯುಮ್ನ ದ್ರೋಣನ ಎದುರಿಗೆ ಯುದ್ಧಕ್ಕೆ ಬರಲಿಕ್ಕೆ. ದುರ್ಯೋಧನನ ಸೇನಿ ನಾಲ್ಕೂ ಕಡಿಗೆ ಓಡಿಹೋಗತಿಹೋದು. ದ್ರೋಣ ಧೃಷ್ಟದ್ಯುಮ್ನ ಉಭಯರೂ, ಗೆಲ್ಲಲೋಸುಗ ಬಹಳ ಯುದ್ಧ ಮಾಡಲಿಕ್ಕೆ, ಭೀಮಸೇನ ದುರ್ಯೋಧನನ ಸೇನಿನೆಲ್ಲ ಕದಡತ ಹೋಗತಿಹ. ಭೀಮಸೇನನ ಎದುರಿಗೆ ದುರ್ಯೋಧನನ ತಮ್ಮಂದರು, ವಿಂದ ಅನುವಿಂದರು ಮೊದಲಾಗಿ ಹನ್ನೆರಡು ಮಂದಿ ಬರಲಿಕ್ಕೆ, ಭೀಮಸೇನ ಲೀಲಾಮಾತ್ರದಲ್ಲಿ ಅವರನ್ನೆಲ್ಲ ಕಡದುಬಿಟ್ಟನು. ಹನ್ನೆರಡು ಮಂದಿ ಸಾವೋಣ, ದುರ್ಯೋಧನ ತಮ್ಮಗೆ ಪೊಗಳಬೇಕಾಗಿ, ಸತ್ಯವ್ರತರಾಯ, ಜಯನೆಂಬಾತ, ವೃಂದಾರಕ, ಪೌರವ, ಪುರುಮಿತ್ರ ಇವರೇ ಮೊದಲಾದವರನ್ನು ಕಳುಹಿದನು. ಅವರು ಬಾಣಗಳ ಎಚ್ಚತಾ ಬರಲಿಕ್ಕೆ, ಭೀಮಸೇನ ಅದೇ ಬಾಣಗಳಿಂದ ಅವರನ್ನೆಲ್ಲ ಕೊಂದುಬಿಟ್ಟನು. ಇಂಥಾ ಅದ್ಭುತ ಯುದ್ಧ ಕಂಡು ಭೀಮಸೇನನ ಎದುರಿಗೆ, ಉಳದವರು ನಿಂದರಲಾರದೆ ನಾಲ್ಕೂ ದಿಕ್ಕಿಗೆ ಓಡಿಹೋಗತಿಹೋರು. ಸಿಂಹ, ಕ್ಷುದ್ರಮೃಗಗಳ ಹ್ಯಾಂಗೆ ಓಡಸ್ತದ, ಹಾಂಗೆ ಭೀಮಸೇನ ಕೌರವಸೇನಿ ಮರ್ದಿಸತ ಓಡಸ್ತಾ ಹೋಗತಿಹ. ಭೀಮಸೇನ ಸಾತ್ಯಕಿಯನ್ನು ಐದಿದನು. ಭೀಮಸೇನನ ಎದುರಿಗೆ ನಿಂದರಲಾರದೆ, ಕೃತವರ್ಮ ಓಡಿ ಹೋದನು. ಅನಿಗಳನ್ನೆಲ್ಲ ಹಿಂಡುಹಿಂಡುಗಟ್ಟಿ ಓಡಸ್ತಿಹ. ಕೌರವಸೇನಿ ಮರ್ದಿಸಿ ಯವುದೇವರ ಮನಿಗೆ ಕಳುಹಿ, ಪರಾಕ್ರಮಿಯಾದ ಭೀಮಸೇನ ಕೃಷ್ಣಾರ್ಜುನರ ಬಳಿಗೆ ಹೋದ.

ಅರ್ಜುನ, ಸಾತ್ಯಕಿ ಬದುಕ್ಯಾರೆಂದು ಧರ್ಮರಾಯಗೆ ತಿಳಿಯೋದರಗೋಸ್ಕರ ವೃಕೋದರ ಸಿಂಹನಾದ ಮಾಡಿದನು. ಭೀಮಸೇನನ ಸಿಂಹನಾದ ಧರ್ಮರಾಯ ಕೇಳಿ ಬಹಳೇ ಪ್ರೀತನಾದ. ವೃಕೋದರನ ಸಿಂಹನಾದದಿಂದ ಬಹುಮಂದಿ ಎದಿ ಒಡದು ಸತ್ತರು. ಕೆಲವರು ಬಹಳ ಅಂಜಿಕೊಂಡರು. ಕೆಲವರು ಅಶುದ್ಧ ಮೂತ್ರ ಗೈದರು. ಇನ್ನೇನು, ಎತ್ತ ಹೋಗುವ ಎಂಬುವರು ಕೆಲವರು. ಕರ್ಣನ ಸಹಾಯ ದಿಂದ ದುರ್ಯೋಧನನ ತಮ್ಮಂದರು ವಿಕರ್ಣ ಚಿತ್ರಸೇನ ಮೊದಲಾದವರು ಯುದ್ಧಕ್ಕೆ ಬಂದರು. ಭೀಮಸೇನ ತನ್ನ ಗದಿಯಿಂದ ಕರ್ಣನ ರಥ ಪುಡಿಪುಡಿ ಮಾಡಿ ಬಿಟ್ಟನು. ಭೀಮಸೇನನ ಗದೀಪೆಟ್ಟು ತಾಳಲಾರದೆ, ಕರ್ಣ ಗಾಯದಿಂದ ಬಹಳ ಪೀಡಿತನಾಗಿ, ಓಡಿಹೋಗಿ ಔಷಧ ಉಪ್ಯಾಯವಾನ ಮಾಡಿಕೊಂಡು, ದುರ್ಯೋಧನನ ತಮ್ಮಂದರ ಸಹವಾಗಿ, ಭೀಮಸೇನನ ಎದುರಿಗೆ ಬಂದು ಯುದ್ಧ ಮಾಡಲಾಗಿ, ಭೀಮಸೇನ ಕರ್ಣನ ರಥ ಕುದರೀ ಸಾರಥಿ ಬಾಣಗಳು ತುಣುಕು-ತುಣುಕು ಮಾಡಿ, ಕರ್ಣನ ಎದುರಿಗೇ ದುರ್ಯೋಧನನ ಇಪ್ಪತ್ತುಮೂರು ಮಂದಿ ತಮ್ಮಂದರ ತಲಿ ಕಡಿದು ಬಿಟ್ಟನು. ವಿಕರ್ಣ ಚಿತ್ರಸೇನ ಮೊದಲಾದವರು ಸತ್ತರು. ಕರ್ಣಗೆ ಸಹಕಾರಿಯಾಗಿ ಬಂದವರು ತಿರಗಲಾಗಿ, ಕರ್ಣ ಧನುರ್ಬಾಣ ರಥ ಕುದರಿ ಇಲ್ಲದೇ ವಿರಥನಾಗಿ, ವೃಕೋದರನ ಪೆಟ್ಟು ತಾಳಲಾರದೆ ಓಡಿಹೋದ.

ಕರ್ಣ, ಈ ಪ್ರಕಾರ ಭೀಮಸೇನನ ಎದುರಿಗೆ ಇಪ್ಪತ್ತೊಂದು ಖ್ಯಾಪಿ ಸೋತು ಪ್ರಾಣ ಉಳಹಿಕೊಂಡು, ಬೆನ್ನುಕೊಟ್ಟು ಓಡಿಹೋಗಿ, ಮಂತ್ರೌಷಧಗಳಿಂದ ಉಪ್ಯಾಯ ಮಾಡಿಕೊಂಡು, 'ಇನ್ನು ದುರ್ಯೋಧನಗೆ ಹ್ಯಾಂಗೆ ಮಾರಿ ತೋರಿಸಲಿ' ಎಂದು ಅಳಹೊಕ್ಕ. ಇಪ್ಪತ್ತೊಂದು ಸಾರಿ ಸೋತು, ಇಪ್ಪತ್ತೆರಡನೇ ಸಾರಿಗೆ, ಪರಶುರಾಮ ಕೊಟ್ಟಂಥ ಅಭೇದ್ಯ ಅಛೇದ್ಯ ರಥ ಏರಿಕೊಂಡು, ಪರಶು-ರಾಮ ಕೊಟ್ಟ ವಿಜಯ ಧನುಸ್ಸು ಹಿಡಕೊಂಡು, 'ಭೀಮಸೇನನ ಕೊಂಪೇನು' ಎಂದು, ಬಹಳ ಸಿಟ್ಟುಳ್ಳವನಾಗಿ, ಅಕ್ಷಯ ಬತ್ತಳಿಕೆಯಿಂದ ಬಾಣಗಳು ತೆಗೆದು, ಬಾಣದ ಮಳಿಗರೆಯತಲೇ ಬಂದ. ಭೀಮ ಕರ್ಣರ ಬಾಣದಿಂದ ಆಕಾಶವೆಲ್ಲ ವ್ಯಾಪಿಸಿಹೋಯಿತು. ದಿಕ್ಕುಗಳು ಕಾಣಬಾರದಾಂಗಾದವು. ಆಕಾಶ ತೋರದು. ಉಭಯರೂ ಬಹಳ ಸಿಟ್ಟುಳ್ಳವರಾಗಿ, ರಕ್ತಗಣ್ಣಿನಿಂದ ಹುಬ್ಬುಗಂಟಿಕ್ಕಿ ಬಹಳ ಯುದ್ಧ ಮಾಡತಿಹೋರು. ಕರ್ಣಗೆ ಸಹಜ ಕವಚ ಕುಂಡಲ ಇದ್ದರೂ ತಾ ಕೊಲ್ಲಲಿಕ್ಕೆ ಸಮರ್ಥನೆಂದು ತೋರಿಸಲೋಸುಗ ಭಯಂಕರ ಯುದ್ಧ ಮಾಡತಿಹ. ಭೀಮಸೇನ ತನ್ನ ಬಾಣದಿಂದ ಕವಚ ಕುಂಡಲ ಛೇದಿಸಿಬಿಟ್ಟ.

ಕರ್ಣ ಯುದ್ಧಕ್ಕೆ ಬಾಹಾಗ ಸ್ಪರ್ಧಿಯಿಂದ ಬಂದಿದ್ದಿಲ್ಲ. ಇದು ನೋಡಿ, 'ನಮ್ಮ ಸ್ವಾಮಿ ಪರಶುರಾಮದೇವರ ವಚನ ಹುಸಿ ಮಾಡಬಾರದು, ಸ್ವಾಮಿ ಸತ್ಯಸಂಕಲ್ಪ, ಭಕ್ತವತ್ಸಲ, ತನ್ನ ವಚನ ಒಮ್ಮಿಗೆ ಹುಸಿ ಮಾಡಿ, ನಮ್ಮಂಥ

ಭಕ್ತರಿಗೆ ಜಯ ತಂದುಕೊಟ್ಟಾನು. ಆದರೂ ನಮಗೆ ಸ್ವಧರ್ಮವಲ್ಲ. ದೇವರ ವಚನ ಮನ್ನಿಸಬೇಕು. ವೈರಿಗೆ ಅವಕಾಶ ಮಾಡಿಕೊಡಬೇಕು' ಎಂದು ಭೀಮಸೇನ, ಗದಾ ಈಡ್ಯಾಡದೆ ಸುಮ್ಮಗೆ ಜಡಪ್ರಾಯನೋಪಾದಿ ನಿಂದರಲಿಕ್ಕೆ, ಕರ್ಣ ತನ್ನ ಬಾಣದಿಂದ ಭೀಮಸೇನನ ರಥ ಛೇದಿಸಿ, ಧನುರ್ಬಾಣಗಳು ಕೊಂಡುಹೋದ. ಇಷ್ಟಾಗಲಿಕ್ಕೆ ಭೀಮಸೇನ ಹಾರಿಹೋಗಿ ಕರ್ಣನ ರಥದಲ್ಲಿ ಕೂಡ್ರಲಿಕ್ಕೆ, ಭೀಮಸೇನ ತನ್ನ ರಥದೊಳಗೆ ಬಂದನೆಂದು ಬಹಳ ಭಯವುಳ್ಳವನಾಗಿ ರಥದ ಕೂಬರದೊಳಗೆ ಅಡಗಿಕೊಂಡ. ಅಂಜಿದಂಥಾವನ ಮ್ಯಾಲೆ ಕೈ ಮಾಡಬಾರದೆಂದು, ತನ್ನ ಶಕ್ತಿ ಪ್ರಕಟವಾಡಿಕೊಟ್ಟ. ನಿರಾಯುಧನಾಗಿ ಕರ್ಣನ ರಥದೊಳಗೆ ಹಾರಿಕೊಂಡಿದ್ದ. ಕರ್ಣ ಒಯ್ದುಂಥ ಬಿಲ್ಲು ಮೊದಲಾಗಿ ಕೈಲಿ ಹಿಡಿಯದೆ, ಕರ್ಣಗೆ ಪರಶುರಾಮ ಕೊಟ್ಟ ಬಿಲ್ಲು ಬಾಣ ಕೊಳ್ಳದೆ ಭೀಮಸೇನ ಹಿಂದಕ್ಕೆ ತಿರಗಿಬಂದನು.

ಭೀಮಸೇನ ಸರ್ವಸಮರ್ಥ, ಸರ್ವವೂ ಅಪಲಾಪ ಮಾಡಿಕೊಂಡು ಬಾಹ. ಆದರೂ ಪರಾಕ್ರಮ ತೋರಿಸಲಿಲ್ಲ. ಯಾಕೆಂದರೆ ತನ್ನ ತಮ್ಮನಾದ ಅರ್ಜುನನ ಕೈಯಿಂದ ಕರ್ಣನ ಕೊಲ್ಲಿಸಿ, ಅರ್ಜುನನ ಪ್ರತಿಜ್ಞೆ ಗೆಲ್ಲಿಸಬೇಕಾಗಿ ತಾ ಕೊಂದಿದ್ದಿಲ್ಲ. ಈಗ್ಗೆ ಕರ್ಣಗೆ ಸ್ಪರ್ಧಿಯಿಲ್ಲ. ಪರಶುರಾಮದೇವರ ವಚನ ಸಲ್ಲಿಸಬೇಕಾಗಿ ಹಿಂದಕ್ಕೆ ತಿರಗಿ ಬಂದ. ಕರ್ಣ ವೈಷ್ಣವನಿದ್ದಾನೆ, ಕೊಲ್ಲೋ ಕೀರ್ತಿ ಫಲ್ಗುಣಗೆ ಬರಲೆಂದು, ಕರ್ಣಗೆ ಅವಕಾಶ ಕೊಡಬೇಕಾಗಿ ದೂರ ಹೋಗಿ ನಿಂತನು ಕರ್ಣ ಬಾಣಗಳು ಹಿಂಡುಹಿಂಡುಗಟ್ಟಿ ಭೀಮಸೇನನ ಮ್ಯಾಲೆ ಬಿಡಲಿಕ್ಕೆ, ಭೀಮಸೇನ ರಣರಂಗದಲ್ಲಿ ಸತ್ತ ಆನಿಗಳ ಹರಗಿ ಮಾಡಿಕೊಂಡು ಹಿಡದು, ಕರ್ಣನ ಬಾಣಕ್ಕೆ ಒಡ್ಡಿಕೊಂಡು ನಿಂದರಲಿಕ್ಕೆ, ಆನಿಗಳ ಪುಡಿಪುಡಿ ಮಾಡಿದನು. ಸೂರ್ಯಜಗೆ ಬಹಳ ಕೋಪ ಹುಟ್ಟಿತು. ಕಣ್ಣುಗಳನ್ನು ಕೆಂಪು ಮಾಡಿಕೊಂಡು, ವೃಕೋದರನ ಸಮೀಪಕ್ಕೆ ಬಂದು ಬಿಲ್ಲಿಲಿ ಚುಚ್ಚುತ 'ತೂಬರ' ಎಂದು ನಿಷ್ಠುರವಚನ ಆಡಿದ್ದಾನೆ. ಈ ವಚನದಿಂದ ಭೀಮಸೇನ ತನ್ನ ಕೊಂದಾನೆಂದು ಬಲ್ಲ. ಆದರೂ ದುರ್ಯೋಧನನ ಪ್ರೀತಿ ಸಂಪಾದಿಸಬೇಕಾಗಿ, ಭೀಮಸೇನನ ಕೊರಳಿಗೆ ಧನುಸ್ಸು ಹಾಕಿ, ಸಣ್ಣ ವಚನಗಳು ಆಡಲಿಕ್ಕೆ, ಈ ಅವಸ್ಥೀನೆಲ್ಲ ದೂರದಿಂದ ಕಂಡು ಅರ್ಜುನ ಸೂರ್ಯಜನ ಮ್ಯಾಲೆ ಬಾಣಗಳು ಈಡ್ಯಾಡಿದನು. ಅರ್ಜುನನ ಬಾಣಗಳು ಕರ್ಣನ ಮರ್ಮಸ್ಥಳವನ್ನು ಛೇದಿಸಿದವು. ಕರ್ಣ ಪೀಡಿತನಾಗಿ ಬಹು ದೂರ ಓಡಿಹೋದನು. ಭೀಮಸೇನ ತನ್ನ ರಥದೊಳಗೆ ಕುಳಿತನು.

ದೇವೇಂದ್ರ ಕೊಟ್ಟ ಶಕ್ತ್ಯಾಯುಧ ಹಾಕಲಿಕ್ಕೆ ಕರ್ಣ ಇಚ್ಛಾ ಮಾಡಲಿಲ್ಲ. ಏನು ಕಾರಣವೆಂದರೆ, ತನ್ನ ತಾಯಿ ಕುಂತೀಗೆ ವಚನ ಕೊಟ್ಟಿದ್ದ, 'ನಿನ್ನ ಮಕ್ಕಳೊಳಗೆ ಅರ್ಜುನನ ವ್ಯತಿರಿಕ್ತ ದಾರನ್ನೂ ಕೊಲ್ಲೋದಿಲ್ಲ' ಎಂದು ಪ್ರತಿಜ್ಞಾಪೂರ್ವಕ ವಚನ ಕೊಟ್ಟಿದ್ದ. ಶಕ್ತ್ಯಾಯುಧ ಭೀಮಸೇನನ ಮ್ಯಾಲೆ ಹಾಕಿದರೂ

ಸರಿಯೆ, ಭೀಮಸೇನಗೆ ಏನೂ ಆಗೋಹಾಂಗೆ ಇದ್ದಿಲ್ಲ. ಅಶ್ವತ್ಥಾಮ ನಾರಾಯಣಾಸ್ತ್ರ ಬಿಟ್ಟ. ಭೀಮಸೇನನ ತಲೀಮ್ಯಾಲೆ ಉರೀತಿಹೋದು. ನಾರಾಯಣನ ಮುಖ್ಯ ಭಕ್ತನಾದಕಾರಣ; ಭೀಮಸೇನಗೆ ಲೇಶಮಾತ್ರ ವ್ಯಥಿ ಆಗಲಿಲ್ಲ. ಶಸ್ತ್ರಾಸ್ತ್ರಗಳು ಏನು ಹಾಕಿದರೂ ವೃಕೋದರನ ಕೇಶಗಳೂ ಕೊಂಕು ಆಗುವುದಿಲ್ಲ. ಅಂಥಾ ದೇಹವುಳ್ಳ ಭೀಮಸೇನ ಕರ್ಣನ ರಥದೊಳಗೆ ಹೋಗಿದ್ದ. ತನ್ನ ತಮ್ಮನ ವೈರಿಯ ನಾಗಬಾಣ ಮತ್ತು ಶಕ್ತ್ಯಾಯುಧ ಏನುಕಾರಣ ಕೊಂಡುಬರಲಿಲ್ಲ ಬಹಳ ದಡ್ಡತನ ಮಾಡಿದ ಹೀಂಗೆ ದಾರಾದರೂ ಅಂದರೂ, ದೇವರ ಅಭಿಪ್ರಾಯ, ಶಕ್ತ್ಯಾಯುಧದಿಂದ ಘಟೋತ್ಕಚ ಸಾಯಬೇಕೆಂಬೋದು, ಆದಕಾರಣ ಆಯುಧ ಕೊಂಡುಬರಲಿಲ್ಲ. ಕರ್ಣ ಅರ್ಜುನನ ಎದುರಿಗೆ ಯುದ್ಧಕ್ಕೆ ಬಾಹಾಗ, ಬಿಲ್ಲು ರಥ ಪರಶುರಾಮದೇವರು ಕೊಟ್ಟಿದ್ದು, ಇಳದ ಸ್ಥಳದಲ್ಲಿ ಬಿಟ್ಟುಬಂದು, ಮತ್ತೊಂದು ರಥ ಏರಿಕೊಂಡು, ಶಕ್ತಿರಥ ಎಂಬ ಆಯುಧ ಹೋದರೆ, ತನ್ನ ಜೀವ ವೃತ್ತಿಗೆ ಇಲ್ಲದಾದೀತು ಎಂದು ಶಿಬಿರದಲ್ಲಿಟ್ಟ, ಕೃಷ್ಣಾರ್ಜುನರ ಸಮೀಪಕ್ಕೆ ಬಾಹ. ಆ ವ್ಯಾಳ್ಯಾದಲ್ಲಿ ಕರ್ಣ ಅದೇ ಆಯುಧ ಕೊಂಡು, ನರನಾರಾಯಣರ ಸಮೀಪಕ್ಕೆ ಬರಲು, ಉಭಯರೂ ತಪ್ಪುಕ್ಕೆ ಬದೀಲೆ ಬರಗೊಡದ ಹಾಂಗೆ, ಸಾತ್ಯಕಿಗೆ ಸ್ವಾಮಿ ತನ್ನ ರಥ ಕೊಟ್ಟು ಕರ್ಣನ ಎದುರಿಗೆ ಕಳುಹಿದ. ಕರ್ಣಗೆ ಬಹಳ ಸಿಟ್ಟು ಬಂದು, ತಾವು ಬಾರದೇ, ತನ್ನನ್ನ ಉದಾಸೀನ ಮಾಡಿ, ಅರ್ಜುನ ತನ್ನ ಶಿಷ್ಯ ಅಲ್ಪಶಕ್ತಿಯುಳ್ಳ ಸಾತ್ಯಕೀನ ಕಳುಹಿಕೊಟ್ಟಾನೆಂದು, ಸ್ಪರ್ಧಿಯಿಂದ ಯುದ್ಧ ಮಾಡಲಿಕ್ಕೆ, ಕೃಷ್ಣನ ರಥದ ಮಹಿಮೆಯಿಂದ ಸಾತ್ಯಕಿ ಬಹಳ ಜಯವುಳ್ಳವನಾಗಿ ಕರ್ಣನ ರಥ ಛೇದಿಸಿಬಿಟ್ಟನು. ಮತ್ತು ಕರ್ಣ ಭೀಮಸೇನನ ವ್ಯಾಳೆ ಬಂದು, ತೂಬರ ಎಂದು ನಿಷ್ಠುರವಚನಗಳಾಡಲಿಕ್ಕೆ ಭೀಮಸೇನಗೆ ಬಹಳ ಸಿಟ್ಟು ಹುಟ್ಟಿತು.

ತೂಬರ ಎಂದರೆ ಏನಂದಲ್ಲಿ— ಪರಶುರಾಮದೇವರ ಆಜ್ಞೆ ತನಗಿದ್ದಕಾರಣ, ದ್ರೋಣ ತನ್ನ ಶಿಷ್ಯರಿಗೆ ಆಜ್ಞಾಪಿಸಿಹ. 'ನೀವು ನಿಮ್ಮ ಒಳಗೆ ಪ್ರತಿಜ್ಞೆ ಮಾಡಿಕೊಳ್ಳಿ. ನಿಮ್ಮ ಪ್ರತಿಜ್ಞೆ ಲೋಕೋಪದ್ರವ ಆಗಬಾರದು. ವೈರಿಗಳಿಗೆ ವಿಧಿರೂಪವಾಗಿರಬೇಕು. ಧರ್ಮಕ್ಕೆ ವಿರುದ್ಧವಾಗಬಾರದು. ಇಂಥಾ ಪ್ರತಿಜ್ಞೆ ಮಾಡಿಕೊಳ್ಳಿ' ಹೀಂಗೆ ದ್ರೋಣನ ಆಜ್ಞೆಯಿಂದ ತಮ್ಮತಮ್ಮ ಮನಸ್ಸಿನಲ್ಲಿ ಪ್ರತಿಜ್ಞೆ ಮಾಡಿಕೊಂಡಿಹೋರು. ಭೀಮಸೇನ 'ನನಗೆ ದಾರಾದರೂ ತೂಬರ ಎಂದರೆ ಅವರನ್ನೆಲ್ಲ ಕೊಲ್ಲಬೇಕು, ಹೀಂಗೆ ನನ್ನ ವ್ರತ ಇಹೋದು. ನನಗೆ ಯುಧೀಷ್ಠ ಗಡ್ಡ ಮೀಸಿ ಇಹೋವು. ನಾ ತೂಬರನೆಂದರೆ ನನಗೆ ದಾರೂ ಅನ್ನರು.' ಅರ್ಜುನಗೆ ಏಕಾಂತದಲ್ಲಿ 'ನನಗೆ ಈ ಶಬ್ದ ಅಂದವರಿಗೆ ಕೊಂದೇನು' ಎಂದು ಆಡಿದ ಮಾತು, ದುರ್ಯೋಧನ ಅಡಗಿಕೊಂಡು ವಿದ್ಯಾಭ್ಯಾಸಕಾಲದಲ್ಲಿ ಕೇಳಿಕೊಂಡಿದ್ದ. ದುರ್ಯೋಧನ ಆ ಮಾತು ಕರ್ಣಗೆ ಹೇಳಿದ್ದ. ಅರ್ಜುನನ ಪ್ರತಿಜ್ಞೆ, ದಾರು

ಗಾಂಡೀವ ಧನುಸ್ಸು ಬಿಷ್ಟೆಂದ್ರವರು ಅವರನ್ನ ಕೊಲ್ಲಬೇಕು. ವಿದ್ಯಾಭ್ಯಾಸಕಾಲದಲ್ಲಿ ಈ ಪ್ರತಿಜ್ಞೆ ಮಾಡಿದ್ದರು. ನಾರದ 'ನಿನಗೆ ಗಾಂಡೀವ ಧನುಸ್ಸು ಬಂದೀತು' ಎಂದು ಹೇಳಿದ್ದರಿಂದ, ಫಲ್ಗುಣ ಶ್ರೇಷ್ಠಋಷೀ ಮಾತಿನ ವಿಶ್ವಾಸದಿಂದ ಈ ಪ್ರತಿಜ್ಞೆ ಗೈದನು.

ಭೀಮಸೇನಗೆ ಕರ್ಣ ತೂಬರ ಎಂದದ್ದಕ್ಕೆ ಸಿಟ್ಟು ಬಂದು, ಕರ್ಣನ ಕೊಲ್ಲಲಿಕ್ಕೆ ಉದ್ಯುಕ್ತನಾಗಲಿಕ್ಕೆ, 'ಎಲೈ ಅಣ್ಣಾ, ನಿನ್ನ ಆಜ್ಞೆಯಿಂದ ಕರ್ಣನ ಕೊಲ್ಲಥೀನಿ.' ಹೀಂಗಂತ ಅರ್ಜುನ ಭೀಮಸೇನನ ಸ್ತಂಭಿಸಿ, ಕರ್ಣನ ಎದುರಿಗೆ ಹೋಗಿ, 'ಎಲೋ ರಾಧೇಯ, ನಮ್ಮ ಅಣ್ಣಗೆ ಹ್ಯಾಂಗೆ ತೂಬರ ಎಂದಿ? ಇದೊಂದು ಅಪರಾಧ, ಇದಲ್ಲದೆ ನಮ್ಮ ಅಭಿಮನ್ಯುನ ಸಮಸ್ತರೂ ಕೂಡಿ ಕೊಂದಿದ್ದೀರಿ. ಈ ಕ್ಷಣ ನಿನ್ನ, ನಿನ್ನ ಮಗನ್ನ ಕೊಲ್ಲಥೀನಿ' ಎಂದು ಬಾಣ ಮಳಿಗರೆಯಲಿಕ್ಕೆ, ಅಶ್ವತ್ಥಾಮ ಕರ್ಣಗೆ ಸಹಾಯನಾಗಿ ಅರ್ಜುನನ ನಿವಾರಿಸಲಿಕ್ಕೆ ಭಯಂಕರ ಯುದ್ಧ ಮಾಡಿದ. ಈ ಪ್ರಕಾರ ಅತಿ ಭಯಂಕರ ಯುದ್ಧ ಮಾಡಲಿಕ್ಕೆ ಸೂರ್ಯ ಕೆಂಪುವರ್ಣನಾದ. ಅರ್ಜುನಗೆ ಶೀಘ್ರ ಜಯವಾಗಬೇಕೆಂದು ಸ್ವಾಮಿ ಲಕ್ಷ್ಮೀಪತಿ ತನ್ನ ಚಕ್ರಕ್ಕೆ ಆಜ್ಞೆ ಕೊಟ್ಟು, ಕಗ್ಗತ್ತಲಿ ಕವಿಸಿದ. ಸೂರ್ಯ ಅಸ್ತಂಗತನಾದನೆಂದು ಇತ್ತಂಡ ಸೇನಿ ತಮ್ಮ ಶಿಬಿರಕ್ಕೆ ಹೋಯಿತು. ಅರ್ಜುನನ ಪ್ರತಿಜ್ಞೆ ಭ್ರಷ್ಟವಾಯಿತು. ಜಯದ್ರಥ ಅಭಿಮನ್ಯುನ ಮರಣಕ್ಕೆ ಕಾರಣನಾಗ್ಯಾನೆ. ನಾಳೆ ಅಸ್ತಮಾನಕ್ಕೆ ಜಯದ್ರಥನ್ನ ಕೊಲ್ಲಬೇಕು, ಇಲ್ಲವೇ ಅಗ್ನಿಪ್ರವೇಶ ಮಾಡಬೇಕೆಂಬ ಪ್ರತಿಜ್ಞೆ ಅರ್ಜುನ ಮಾಡಿದ್ದ. ಸೂರ್ಯ ಅಸ್ತಂಗತನಾದ, ಫಲ್ಗುಣ ಅಗ್ನಿಯಲ್ಲಿ ಬೀಳೋದು ನೋಡಬೇಕೆಂದು ಸಮಸ್ತರೂ ಬಂದರು. ಜಯದ್ರಥನೂ, ಪಾರ್ಥನ ಪ್ರತಿಜ್ಞೆ ಭ್ರಷ್ಟವಾಯಿತೆಂದು, ನೋಡಬಂದಿದ್ದ. ಅಗ್ನಿ ಹೊತ್ತಿಕ್ಕೆ ಕುಂಡದೊಳಗೆ ಬೀಳಬೇಕು, ಅಷ್ಟರೊಳಗೆ ಜನಾರ್ದನನ ಆಜ್ಞೆದಿಂದ ಅರ್ಜುನ ಜಯದ್ರಥನ ತಲಿ ಕಡದು, ಭೂಮೀಮ್ಯಾಲೆ ಕೆಡಹಾಕದೆ ಬಾಣಕ್ಕೆ ಬಾಣ ಪೋಣಿಸಿ ಆಕಾಶ. ಮಾರ್ಗದಲ್ಲಿ ತಲಿ ನಿಂದರಸಿ, ಗರುಡಧ್ವಜನ ಕೇಳಿದ. 'ಎಲೈ ಸ್ವಾಮಿ, ಈ ತಲಿ ನೆಲಕ್ಕೆ ಬಿಷ್ಟಬ್ಯಾಡವೆಂದು ಹೇಳಿದ್ದಿ. ಈ ಪಾಪಿ ದುರಾತ್ಮನ ತಲಿ ಎಲ್ಲಿ ಕೆಡ. ಹಾಕಲಿ?' ಎಂದು ಕೇಳಿದಲ್ಲಿ ದೇವರು ಮಾತನಾಡಥಾನೆ. "ಜಯದ್ರಥನ ತಂದಿ ಪುತ್ರಗೆ ವರವು ಕೊಟ್ಟಿದ್ದಾನೆ. 'ನಿನ್ನ ತಲಿ ದಾರಿಂದ ನೆಲಕ್ಕೆ ಬಿದ್ದೀತು ಅವರ ಶಿರಸ್ಸು ಸಹಸ್ರ ಹೋಳಾಗಲಿ' ಎಂದು ವರವು ಕೊಟ್ಟಿದ್ದಾನೆ. ಮಗನ ತಲೀ ತಂದೀ ಕೈಯಿಂದ ಬೀಳೋಹಾಂಗೆ ಮಾಡು." ಹೀಂಗೆಂದು ಯಾದವಶ್ರೇಷ್ಠನ ಆಜ್ಞೆ ಆಗಲಿಕ್ಕೆ, ಜಯದ್ರಥನ ತಂದಿ ಸಾಯಂಕಾಲ ಸಂಧ್ಯಾವಂದನಿ ಮಾಡತ ಇರಲು, ಆತನ ಕೈಯೊಳಗೆ ತಲಿ ಬೀಳಲು, ಅಂಜಿ ಭೂಮೀಮ್ಯಾಲೆ ಬಿಷ್ಟಲಿಕ್ಕೆ, ಜಯದ್ರಥನ ತಂದೀ ತಲಿ ಸಹಸ್ರ ಹೋಳಾಯಿತು.

ಇಷ್ಟಾಗಲಿಕ್ಕೆ, ರಣರಂಗದಲ್ಲಿ ಕಗ್ಗತ್ತಲಿ ಬಿದ್ದಿತ್ತಲ್ಲ ಅದನ್ನ ಸ್ವಾಮಿ ಪರಿಹಾರ ಮಾಡಿದನು. ಸೂರ್ಯನ ಪ್ರಕಾಶ ನೋಡಿ, 'ಕೃಷ್ಣ ಕಪಟಿ ಇದ್ದಾನೆ. ಕಪಟತನದಿಂದ ಜಯದ್ರಥನ್ನ ಅರ್ಜುನನ ಕೈಯಿಂದ ಕೊಲ್ಲಿಸಿದ್ದಾನೆ ಎಂದು ಸಮಸ್ತ ಸೇನಿ 'ಅಕಟಕಟ ಹಾ! ಹಾ!' ಎಂದು ಶಬ್ದ ಮಾಡಿದರು. ಇಷ್ಟಾಗಲಿಕ್ಕೆ ಭೀಮಸೇನ ಸಿಂಹನಾದ ಮಾಡಿದನು. ಅರ್ಜುನ ಒಬ್ಬನೆ ಯುದ್ಧ ಮಾಡಥಾನೆಂದು ಸಾತ್ಯಕಿ ತಾನೂ ಬಂದಿದ್ದನು. ಸ್ವಾಮಿ ಅರ್ಜುನನ್ನ ಜಯಶೀಲನ್ನ ಮಾಡಿ ಜಯದ್ರಥನ್ನ ಕೊಂದನೆಂದು ಸಂತೋಷದಿಂದ ಪಾಂಚಜನ್ಯಶಂಖ ಊದಿದನು. ಅರ್ಜುನ ದೇವದತ್ತಶಂಖ ರವ ಮಾಡಿದ. ಎರಡೂ ಶಬ್ದ ಕೇಳಿ ಧರ್ಮರಾಯ ಆನಂದಬಟ್ಟ. ದುರ್ಯೋಧನ ತನ್ನ ಬಲ ಮುರೀತೆಂದು ದುಃಖಬಟ್ಟ. ಅಶ್ವತ್ಥಾಮನ ಸಮೀಪಕ್ಕೆ ಬಂದು 'ನಿಮ್ಮಂಥ ವೀರರ ಸಹಾಯ ನಮಗಿದ್ದು ಜಯದ್ರಥ ಸತ್ತುಹೋದ.' ಹೀಂಗಂತ ತನ್ನ ದುಃಖ ಹೇಳಿಕೊಳ್ಳಲಾಗಿ, ಅಶ್ವತ್ಥಾಮ ಪಾಂಡವರನ್ನೆಲ್ಲ ಸಂಹರಿಸೇನೆಂದು ಮುಂಬಿಗನಾದ. ಜಯದ್ರಥ ಸತ್ತಕಾರಣ, ಕರ್ಣ ಕೋಪಾವಿಷ್ಟನಾಗಿ, ದುರ್ಯೋಧನನ ಸಂತೋಷಗೈಸಲು ತಾನೂ ಮುಂಬಿಗನಾದ. ಪಾಂಡವರ ಸೇನಿನೆಲ್ಲ ಇಬ್ಬರೂ ಓಡಸ್ತ ಬರಲು, ಸೇನಾಪತಿ ಧೃಷ್ಟದ್ಯುಮ್ನ ತನ್ನ ಸೇನಿಯಿಂದ ಯುಕ್ತನಾಗಿ, ಕೌರವಸೇನಿನೆಲ್ಲ ಮರ್ದಿಸತ ಬರಲು ಸೇನಿಯೆಲ್ಲ ನಾಲ್ಕೂ ದಿಕ್ಕಿಗೆ, ನಾಲ್ಕೂ ಕೋಣಿಗೆ ಓಡಿ ಹೋಯಿತು.

ದುರ್ಯೋಧನ ಬಹಳ ಕೋಪಾವಿಷ್ಟನಾಗಿ, ಜಯದ್ರಥನ ಮರಣದುಃಖದಿಂದ ಪಾಂಡವರನ್ನೆಲ್ಲ ತಾ ಕೊಂಬೇನೆಂದು, ಬಾಣದ ಮಳಿಗರೆಯುತಲೆ ಬಂದ. ದುರ್ಯೋಧನಗೆ ಎದುರಾಗಿ ಪಾಂಡವರ ಪುತ್ರರು, ಪ್ರತಿವಿಂಧ್ಯ ಮೊದಲಾದವರು, ಒಂದೇ ಕಡಿ ಒಕ್ಕಟ್ಟಾಗಿ ದುರ್ಯೋಧನಗೆ ಬಾಣ ಎಚ್ಚಿ, ಕೌರವೇಂದ್ರನ ಬಾಣಗಳ ಕಡದುಬಿಡೋರು. ದುರ್ಯೋಧನ ಬಾಣಗಳು ಕಡಿಸಿಕೊಂಡು ಜ್ವಲಸ್ತ, ಪುನಃ ಬಾಣಗಳ ಕೊಂಡು ಪಾಂಡವರ ಮ್ಯಾಲೆ ಪ್ರಯೋಗ ಮಾಡಲಿಕ್ಕೆ, ಪಾಂಡವರೆಲ್ಲ ವಿಳಿತರಾಗಿ ಯುದ್ಧ ಮಾಡಲಾಗಿ, ಅರಸು ತಾನೇ ಬಹುಮುಂದಿ ಕೂಡ ಯುದ್ಧ ಮಾಡಥಾನೆಂದು, ಶ್ರೀಮದಗೋಸ್ಕರ ದ್ರೋಣ, ಕರ್ಣ, ಮೊದಲಾದವರು ಬಾಣ-ಪ್ರಯೋಗ ಮಾಡತ ಬಂದರು. ಆ ವ್ಯಾಳ್ಯಾದಲ್ಲಿ, ದುರ್ಯೋಧನ ಕರ್ಣನ ಕೂಡ ಮಾತನಾಡಿದ. 'ಭೀಮಸೇನನ ಕೊಂದೇನೆಂದು ಶಪಥ ಮಾಡಿದ್ದಿ. ನಿನ್ನ ವಚನ ಸತ್ಯ ಮಾಡಬೇಕಾಗಿ, ನನ್ನ ಕಣ್ಣಮುಂದೆ ಭೀಮಸೇನನ ಕೊಂದುಬಿಡು.' ಹೀಂಗಂತ ಕೌರವ, ಸೂರ್ಯಜಗೆ ಅನಲಿಕ್ಕೆ, 'ಎಲೈ ಅರಸೇ, ಭೀಮಸೇನ ದೊಡ್ಡ ಪರಾಕ್ರಮಿ ಇದ್ದಾನೆ. ಇಂದ್ರಾದಿ ದೇವತೆಗಳು ಒಕ್ಕಟ್ಟಾಗಿ ಬಂದರೂ ಭೀಮಸೇನನ ಕೊಲ್ಲಲಾರರು. ಆತನ ಗದೀಪೆಟ್ಟಿನಿಂದ ನಾ ಸತ್ತುಹೋಗಿದ್ದೆ. ದೈವೇಚ್ಛೆಯಿಂದ

ಬದಕಿ ಬಂದೆ. ಭೀಮಸೇನನ ಕೊಲ್ಲಲಿಕ್ಕೆ ನಾ ಸಮರ್ಥನಲ್ಲ. ಆದರೂ, ನೀ ಅರಸು ಇದ್ದಿ. ನಿನ್ನ ಆಜ್ಞೆ ಮೀರಲಿಕ್ಕೆ ಬಾರದು. ನಿನ್ನ ಅನ್ನ ಕಡಿಗಿಂದ ಕಡಿಗೆ ಉಂಡದ್ದಕ್ಕೆ, ಈ ರಣರಂಗದಲ್ಲಿ ನನ್ನ ಶಕ್ತಿ ಮೀರಿ ಯತ್ನ ಮಾಡೇನು. ಜಯಾಪ-ಜಯ ದೇವರ ಅಧೀನ.' ಈ ಪ್ರಕಾರ ಕರ್ಣ ತನ್ನ ಪೂರ್ವೋತ್ತರ ವೃತ್ತಾಂತ ಹೇಳಿಕೊಂಡನು.

ಕರ್ಣ ಹೀಗೆ ಹೇಳಿಕೊಳ್ಳಲು, ದುರ್ಯೋಧನ ಕೋಪದಿಂದ ಜ್ವಲಸ್ತ ದ್ರೋಣನ ಕೂಡ ಮಾತನಾಡಿದ. 'ಎಲ್ಯೆ ವಿಪ್ರೋತ್ತಮ ನಿನ್ನ ಪ್ರತಿಜ್ಞೆ ವ್ಯರ್ಥವಾಯಿತು. ವ್ಯೂಹರಚನಿ ಮಾಡಿ ದಾರನ್ನೂ ಒಳಗೆ ಬಿಡಬಾರದೆಂದು ನೀವು ಮಾಡಿದ್ದಿ. ಅರ್ಜುನ ನಿನ್ನ ಪ್ರೀತಿಯ ಶಿಷ್ಯ ಆದಪ್ರಯುಕ್ತ ಮಾರ್ಗ ಕೊಟ್ಟು ಜಯದ್ರಥನ ಕೊಲ್ಲಿಸಿದಿ. ಹಾಂಗೇ ಸಾತ್ಯಕಿ, ಭೀಮಸೇನನ್ನ ಒಳಗೆ ಬಿಟ್ಟ. ಶಿಷ್ಯರ ವಾತ್ಸಲ್ಯದಿಂದ ಮೂರು ಮಂದೀನ್ನ ಬಿಟ್ಟ ಕಾರಣ ಜಯದ್ರಥ ಸತ್ತ. ಅವನ ಮೃತ್ಯುವಿಗೆ ಕಾರಣ ನೀನೇವೆ' ಎಂದು ಆಚಾರ್ಯನಿಗೆ ನಿಷ್ಠುರವಚನ-ಗಳಾಡಲಿಕ್ಕೆ, 'ಎಲೋ ರಾಯ! ನನಗೆ ಇಂಥಾ ಮಾತೆ! ಈಗ್ಯೆ ರಾತ್ರಿ ಆಯಿತಲ್ಲ, ಆದರೂ ಇವತ್ತು ನಾ ಕವಚ ಸಡಲಸೋ ಹಾಂಗಿಲ್ಲ. ಇವತ್ತು ಸಂಪೂರ್ಣ ಯುದ್ಧ ಮಾಡಿ ಜಯ ತಂದುಕೊಟ್ಟೇನು. ನನ್ನ ಮಗನ ಕೈಯಿಂದ ಪ್ರತಿಜ್ಞೆ ಮಾಡಿಸು. ಪಾಂಚಾಲರನ್ನ ಉಳಸಧಾಂಗೆ ಮಾಡು. ಅಶ್ವತ್ಥಾಮಗೆ ಹೇಳಿ ಕೊಲ್ಲಿಸಿಬಿಡು. ದ್ರುಪದರಾಯಗೆ ಮಕ್ಕಳು, ಮೊಮ್ಮಕ್ಕಳಿಂದ ತಿಲೋದಕ ಆಗಧಾಂಗೆ ಪಾಂಚಾಲರನ್ನ ನಿರ್ವಂಶ ಮಾಡು. ದೌಹಿತ್ರಸಂತಾನ ಉಳಸಧಾಂಗೆ ನನ್ನ ಮಗಗೆ ಹೇಳು' ಎಂದು ದ್ರೋಣ ದುರ್ಯೋಧನಗೆ ಹೇಳಿದ. ತಾ ರಾತ್ರೀ ಯುದ್ಧಕ್ಕೆ ಆರಂಭ ಮಾಡಿದ.

ಕುರುಪಾಂಡವರ ಹದಿನೆಂಟು ಅಕ್ಷೋಹಿಣಿ ಸೇನಿ ಒಳಗೆ ಎಷ್ಟು ಸಂಹಾರ-ವಾಗಿತ್ತು, ಎಷ್ಟು ಉಳದಿತ್ತೆಂದರೆ ಕೌರವರ ಕಡೀಗೆ ಐದು ಅಕ್ಷೋಹಿಣಿ, ಪಾಂಡವರ ಕಡೀಗೆ ಎರಡು ಅಕ್ಷೋಹಿಣಿ ಸತ್ತಿತು. ಉಳದದ್ದು ಐದು ಅಕ್ಷೋಹಿಣಿ ಪಾಂಡವರ ಕಡೀಗೆ, ಆರು ಅಕ್ಷೋಹಿಣಿ ಕೌರವರ ಕಡೀಗೆ, ಅಂತೂ ಹನ್ನೊಂದು ಅಕ್ಷೋಹಿಣಿ ಉಳೀತು. ಕೌರವರ ಕಡಿಗೆ ಐದು ಅಕ್ಷೋಹಿಣಿ ದಾರು ದಾರು ಕೊಂದರು ಎಂದರೆ, ಭೀಮಸೇನ ಮೂರು ಅಕ್ಷೋಹಿಣಿ ಕೊಂದ, ಎರಡು ಅಕ್ಷೋಹಿಣಿ ಅರ್ಜುನ ಹತ-ಮಾಡಿದ. ಫಲ್ಗುಣನ ಹದಿನಾರನೇ ಪಾಲು ಅಭಿಮನ್ಯು ಸಾತ್ಯಕಿ ಸಹ ಸಂಹಾರ ಮಾಡಿದರು. ಭೀಮಸೇನನ ಮೂರು ಅಕ್ಷೋಹಿಣಿ ಒಳಗೆ, ಹತ್ತರಲ್ಲಿ ಒಂದು ಪಾಲು ಘಟೋತ್ಕಚ ಮೊದಲಾದವರು ಹತಗೈದರು. ಪಾಂಡವರ ಎರಡು ಅಕ್ಷೋಹಿಣಿ ಒಳಗೆ ದಾರುದಾರು ಕೊಂದರೆಂದರೆ, ಎರಡು ಅಕ್ಷೋಹಿಣಿ ಒಳಗೆ ನಾಲ್ಕು ಪಾಲು ಮಾಡಲು ಮೂರು ಪಾಲು ಭೀಷ್ಮ, ದ್ರೋಣರು ಕೊಂದರು. ಅಶ್ವತ್ಥಾಮನು

ಮೂರು ಪಾಲಿನೊಳಗೆ ಹತಗೈದ. ಉಳದ ಒಂದು ಪಾಲು ಭೂರಿಶ್ರವ ಮೊದಲಾದವರು ಕೌರವರ ಸೇನಿ ಕೂಡಿ ಕೊಂದರು. ಈ ಪ್ರಕಾರ ಆ ದಿವಸಕ್ಕೆ ಏಳು ಅಕ್ಷೋಹಿಣಿ ಹತವಾಯಿತು. ಹನ್ನೊಂದು ಅಕ್ಷೋಹಿಣಿ ಉಳಿಯಿತು.

ರಾತ್ರೀ ಭಾಗದಲ್ಲಿ ದುರ್ಯೋಧನನ ಸೇನಿನೆಲ್ಲ. ಭೀಮಸೇನ ಓಡಸ್ತಾಹೋಗಲಾಗಿ, ಕರ್ಣ ಭೀಮಸೇನನ ಎದುರಿಗೆ ಬಂದನು. ಮಿತ್ರಜ ನೋಡತಿರಲಾಗಿ, ಕೌರವನ ತಮ್ಮಂದರು ದುರ್ಮರ್ಷಣ, ವಿಕರ್ಣ ಇಬ್ಬರನ್ನ ಗದಿಯಿಂದ ಹೊಡದು, ರಥದಿಂದ ಕೆಡಹಾಕಿ, ಭೀಮಸೇನ ತನ್ನ ಕಾಲೀಲಿಂದ ಒರಸಲಿಕ್ಕೆ, ದುರ್ಮರ್ಷಣ, ವಿಕರ್ಣ ಇಬ್ಬರ ಮೇದಸ್ಸು ಏನೂ ಕಾಣಧಾಂಗಾಯಿತು. ಅವರ ರಥ ಪುಡಿಪುಡಿ ಆಯಿತು. ಶವ ಸಹ ಕಾಣಧಾಂಗಾಯಿತು. ಇಷ್ಟಾಗಲಿಕ್ಕೆ ಕರ್ಣನ ಕುರಿತು ಭೀಮಸೇನ ಮಾತನಾಡಿದ. 'ಎಲೋ ಕರ್ಣ, ನನ್ನ ಸಾಮರ್ಥಿ ನೀ ಅರಿತವನಲ್ಲ. ವಿಕರ್ಣ ದುರ್ಮರ್ಷಣರನ್ನು ಹ್ಯಾಂಗೆ ಕಾಲಪೆಟ್ಟಿನಿಂದ ಒರಸಿದೆ, ಅದರಪ್ಪಂದೆ ನಿನ್ನ ಒರಸಿಬಿಟ್ಟೀನು. ಆದರೂ ನನ್ನ ಇಚ್ಛಾದಿಂದ ಜೀವಂತನಾಗಿದ್ದೀ. ಏನು ಕಾರಣವೆಂದರೆ, ನನ್ನ ತಮ್ಮ ಅರ್ಜುನನಿಂದ ನಿನ್ನ ಕೊಲ್ಲಿಸಬೇಕಾಗೇದೆ.' ಹೀಂಗೆ ಭೀಮ ಮಾತನಾಡಲಿಕ್ಕೆ, ಕಲಿಂಗದೇಶದ ಅರಸು, ಭೀಮಸೇನನ ಎದುರಿಗೆ ಬಂದನು. ಭೀಮಸೇನ ತನ್ನ ಮುಷ್ಟೀಪೆಟ್ಟಿನಿಂದ ಕಲಿಂಗದೇಶದ ಅರಸನ್ನ ಕೊಂದುಬಿಟ್ಟನು. ಕಲಿಂಗದೇಶದ ಅರಸು ಸತ್ತಮ್ಯಾಲೆ, ಭೀಮಸೇನ ಪುನಃ ಕರ್ಣನ ಕೂಡ ಮಾತನಾಡಿದ. 'ಎಲೋ ಕರ್ಣ, ನನ್ನ ಅಶಕ್ತನಂತ ತಿಳಿಯುಬ್ಯಾಡ. ಕಲಿಂಗದೇಶದ ಅರಸು ಸತ್ತದ್ದು ಪ್ರತ್ಯಕ್ಷ ನೋಡಿದಿ. ಅದರಪ್ಪಂದೆ ನಿನ್ನನ್ನ ಕೊಲ್ಲಲಾಪೆ. ಆದರೂ ನಾ ಕೊಲ್ಲೋದಿಲ್ಲ.' ಅದೇ ವ್ಯಾಳ್ಯಾದಲ್ಲಿ ಕೇತುವುಂತನೆಂಬವನ್ನ ಭೀಮಸೇನ ಕೊಂದ. ಸೃಗಾಲ ವಾಸುದೇವನ ಮಗ ಶಕ್ರದೇವ ಎಂಬವನ್ನ ಹತಗೈದ. ಶ್ರುತಾಯುಧನ್ನ ಕೊಂದ. ಇದು ರಾತ್ರೀ ಯುದ್ಧವಲ್ಲ. ಭೀಷ್ಮಪರ್ವದಲ್ಲಿ ಸಿಂಹಾವಲೋಕನನಿಂದ ಭೀಷ್ಮ ಯುದ್ಧ ಮಾಡ್ಯಾನೆಂದು ಹೇಳಥಾರೆ.

ರಾತ್ರೀ ವ್ಯಾಳ್ಯಾದಲ್ಲಿ ಕರ್ಣ ತನ್ನ ಶಕ್ತಿ ಎಂಬ ಆಯುಧ ಭೀಮಸೇನನ ವ್ಯಾಲೆ ಹಾಕಿ ಮಾತನಾಡಿದ. 'ಎಲೋ ಭೀಮಸೇನ, ನನ್ನ ದಿವ್ಯ ಶಕ್ತಿ ನಿನ್ನ ವ್ಯಾಲೆ ಹಾಕೆಲ್ಲ. ಏನು ಕಾರಣವೆಂದರೆ, ನಿಮ್ಮ ತಾಯಿ ಕುಂತೀದೇವಿಗೆ, ಅರ್ಜುನನ್ನ ಹೊರ್ತು ದಾರನ್ನೂ ಕೊಲ್ಲುವದಿಲ್ಲವೆಂದು ಅಭಯವಚನ ಕೊಟ್ಟೀನಿ. ಆದ್ದರಿಂದ ಆವೋಘ ಬಾಣ ನಿನ್ನ ವ್ಯಾಲೆ ಹಾಕಿಲ್ಲ.' ಹೀಂಗಂತ ಮಾತನಾಡಲಿಕ್ಕೆ, ಭೀಮಸೇನ ಶಕ್ತ್ಯಾಯುಧ ಬಾಹೋದು ಕೈಲಿ ಹಿಡದು, ತಿರಗಿ ಕರ್ಣನ ವ್ಯಾಲೆ ಹಾಕಲಿಕ್ಕೆ, ಕರ್ಣನ ದೇಹಕ್ಕೆ ಆಯುಧ ತಾಕಿ, ತೋಳು ಕಡದು, ಭೂಮಿ ಸೀಳಿ ಭೂಮಿಯೊಳಗೆ ಹೊಕ್ಕಿತು. 'ಎಲೋ ಕರ್ಣ ಆವೋಘ ಶಕ್ತ್ಯಾಯುಧ

ನನ್ನ ಮ್ಯಾಲೆ ಹಾಕಿದ ಪಕ್ಷವೇ, ಅವೇ ಅವೋಘ ಶಕ್ತಿ ಕೈಲಿ ಹಿಡದು ನಿನ್ನ ಮ್ಯಾಲೆ ಹಾಕುವೆ. ಅದೇ ಬಾಣದಿಂದ ನೀ ಮರಣ ಐದೀಯ.' ಆ ಶಕ್ತ್ಯಾಯುಧ ಹಿಡಿವಾಗ ವೃಕೋದರ ಆಕಾಶಮಾರ್ಗಕ್ಕೆ ಹಾರಿಕೊಂಡಿದ್ದ. ಪುನಃ ಕರ್ಣನ ಮ್ಯಾಲೆ ಹಾಕಿ, ತನ್ನ ರಥದೊಳಗೆ ಕುಳಿತನು. ಕರ್ಣನ ರಥದ ಮ್ಯಾಲೆ ಭೀಮಸೇನ ಗದಿ ಈಡ್ಯಾಡಲಿಕ್ಕೆ, ಕರ್ಣ ಸ್ಥೂಲಕರ್ಣನ ಮಂತ್ರ ಜಪಿಸಿ, ತನ್ನ ಗದಿ ಈಡ್ಯಾಡಿದನು. ಗದಿ ಭೀಮಸೇನನ ಸಮೀಪಕ್ಕೆ ಬಂತು. ಭೀಮಸೇನ ಅದನ್ನ ಲೆಕ್ಕಿಸದೆ, ತನ್ನ ಗದಿ ಹಿಡಕೊಂಡು ಕರ್ಣನ ಸಮೀಪಕ್ಕೆ ಹೋಗಿ, ರಥದ ಕೂಬರ ಗದಿಯಿಂದ ಪುಡಿಪುಡಿ ಮಾಡಿದನು. 'ಇದೇ ರೀತಿ ನಿನ್ನ ಪುಡಿಪುಡಿ ಮಾಡಲಾಪೆ. ಆದರೂ, ಅರ್ಜುನನಿಂದ ಕೊಲ್ಲಿಸಬೇಕಾಗೇದೆ. ಅದ್ದರಿಂದ ಉಳಹಿದೆ.' ಹೀಂಗಂತ ಮಾತನಾಡಿ, ಕರ್ಣ ನೋಡನೋಡತಿರಲಿಕ್ಕೆ ಸೇನಿನೆಲ್ಲ ಅಪಾರ ಕೊಲ್ಲಲಿಕ್ಕೆ, ತನಗೆ ನಿವಾರಿಸೋದಕ್ಕೆ ಶಕ್ತಿ ಸಾಲದೆ ಕರ್ಣ, ಭೀಮಸೇನನ ಬಿಟ್ಟುಕೊಟ್ಟು ನಕುಲ-ಸಹದೇವರೆದುರಿಗೆ ನಡದನು. ಸಹದೇವನ ರಥ ಛೇದಿಸಿ, ಕೊರಳಿಗೆ ಬಿಲ್ಲು ಹಾಕಿ, 'ಎಲೋ ಪಾಂಡುಪುತ್ರ, ನೀವು ಜ್ಞಾತಿಕ್ಷಯ ಮಾಡ-ಥೀರಿ. ನಿಮ್ಮ ಮಾರಿಗಳು ನೋಡಬಾರದು.' ಈ ಪ್ರಕಾರ ನಿಂದಾವಚನಗಳಾಡತ ದುಃಖ ಬಡಸ್ತಿಹ. ಸಹದೇವ ಕೈಕೆಳಗೆ ಸಿಕ್ಕಿಬಿದ್ದನು. ಕರ್ಣ ಸಹದೇವನ್ನ ಕೊಂದಿದ್ದಿಲ್ಲ. ಏನು ಕಾರಣವೆಂದರೆ, ಕುಂತಿಗೆ 'ಅರ್ಜುನ ಹೊರ್ತಾಗಿ ನಿನ್ನ ಮಕ್ಕಳೊಳಗೆ ದಾರನ್ನೂ ಕೊಲ್ಲೋದಿಲ್ಲ' ಎಂದು ಹೇಳಿದ್ದರಿಂದ, ಸಹದೇವ ಕರ್ಣನ ಕೈಕೆಳಗೆ ಸಿಕ್ಕಿದ್ದರೂ ಕೊಂದಿದ್ದಿಲ್ಲ.

ಅಶ್ವತ್ಥಾಮ ರಣರಂಗದಲ್ಲಿ ಮಹಾ ಕುಶಲ. ಪಾಂಡವರ ಸೈನ್ಯದಲ್ಲಿ, ಮೃತ್ಯುದೇವತಿ ಹ್ಯಾಂಗೆ ಬೆನ್ನು ಹತ್ತಥಾಳೆ, ಹಾಂಗೆ ಅಶ್ವತ್ಥಾಮ ಸಂಚಾರ ಮಾಡಲಿಕ್ಕೆ, ಅರ್ಜುನ ಸಹಿತವಾಗಿ ಸೇನಿ ಆರ್ತವಾಗಿಹೋದು. ಪಾಂಡವರ ಸೇನಿ ರಣರಂಗದಲ್ಲಿ ನಿಂದರಲಾರದು: ಇಷ್ಟಾಗಲಿಕ್ಕೆ ಭೀಮಸೇನನ ಮಗ ಘಟೋತ್ಕಚ ಅಶ್ವತ್ಥಾಮನ ಕೂಡ ಮಾತನಾಡಿದ. 'ವ್ಯರ್ಥ ಏನುಕಾರಣ ಸೇನಿ ಕೊಲ್ಲತಿದ್ದಿ. ನನ್ನ ಕೂಡ ಯುದ್ಧಕ್ಕೆ ಬಾ' ಎಂದು ಅಶ್ವತ್ಥಾಮನ ಕರೆಯಲಿಕ್ಕೆ, ಅಶ್ವತ್ಥಾಮ ಮಾತನಾಡಿದ. 'ಎಲೋ ಘಟೋತ್ಕಚ, ನೀ ಬಾಲಕನಿದ್ದಿ, ಎಲೋ ಕರುವೆ, ನೀ ನನ್ನ ಮಗನಾಗಬೇಕು. ಮಗ ತಂದೀ ಕೂಡ ಯುದ್ಧ ಮಾಡ-ಬಾರದು. ಭೀಮಸೇನ, ನಾವು ಸಶ್ರೋತ್ರರು. ನನ್ನ ಗೆಳಿಯನ ಮಗನೇ ನನ್ನ ಮಗ. ವ್ಯರ್ಥ ನನ್ನ ಕೂಡ ಯುದ್ಧ ಮಾಡಿ ಸಾಯಬ್ಯಾಡ. ಜೀವ ಉಳಹಿಸಿ ಕೊಂಡ್ಹು ತಿರಗಿ ಹೋಗು.' ಹೀಂಗೆ ಅಶ್ವತ್ಥಾಮ ಹೇಳಲಿಕ್ಕೆ, ಘಟೋತ್ಕಚ ಮಾತನಾಡಿದ. 'ನೀ ನನ್ನ ಹಡದಿಲ್ಲ. ನೀ ನನ್ನ ತಂದೀ ಗೆಳಿಯನಾಗಬೇಕು. ಅದಕ್ಕೆ ಬಹುಮಾನ ಮಾಡಬೇಕು, ಖರಿಯೆ. ಆದರೂ ವೈರಿಪಕ್ಷಪಾತಿ ಆದವ್ಯಾಲೆ,

ವೈರಿ ಕೂಡ ಹ್ಯಾಂಗೆ ಯುದ್ಧ ಮಾಡಥೀನಿ, ಹಾಂಗೆ ನಿನ್ನ ಕೂಡ ವೈರಿ ಸಹಾಯ-ದಾತನೆಂದು ಯುದ್ಧ ಮಾಡಥೀನಿ.' ಈ ಪ್ರಕಾರ ಘಟೋತ್ಕಚ ಮಾತನಾಡಲಿಕ್ಕೆ, 'ನಾ ಚಿಕ್ಕವನೆಂದು ಬಹುಮಾನ ಕೊಟ್ಟರೆ ನನ್ನ ವೈರಿಯಂತಿದಿ. ಇನ್ನು ನಿನ್ನ ದಂಡಿಸಬೇಕು' ಎಂದು, ಅಶ್ವತ್ಥಾಮ ಇಂದ್ರಚಾಪಸದೃಶ ಬಾಣಪ್ರಯೋಗ ಮಾಡಲಿಕ್ಕೆ, ಘಟೋತ್ಕಚ ತನ್ನ ಸೇನಿ ಒಂದು ಅಕ್ಷೋಹಿಣಿ, ಮಹಾ ತೀಕ್ಷ್ಣ ರಾಕ್ಷಸರ ಕೂಡಿಕೊಂಡು ಯುದ್ಧದಲ್ಲಿ ಗುರುಸುತಗೆ ಕ್ಷೋಭಿಸಿದನು. ಅಶ್ವತ್ಥಾಮಗೂ, ಭೀಮನ ಮಗಗೂ ರಾತ್ರೀಲಿ ಭಯಂಕರ ಯುದ್ಧ ಹತ್ತಿ, ಎರಡನೇ ಶಬ್ದ ಕೇಳಿಸದು. ರಾತ್ರೀಲಿ ಮತ್ತಷ್ಟು ಕಾಳ ಕವಿದಿಹೋದು. ನಕ್ಷತ್ರಗಳು ಕಾಣಿಸಧಾಂಗಾದವು. ಅಶ್ವತ್ಥಾಮ ದೊಡ್ಡ ಪರಾಕ್ರಮಿ, ಒಂದು ಕ್ಷಣಮಾತ್ರದಲ್ಲಿ ಒಂದು ಲಕ್ಷ ರಾಕ್ಷಸರ ಕೊಂದುಬಿಟ್ಟನು. ಅದೇ ಕ್ಷಣದಲ್ಲಿ ಘಟೋತ್ಕಚನ ಮಗ, ಅಂಜನವರ್ಮ ಎಂಬವನ್ನ ಕೊಂದನು. ಅಪಾರ ರಾಕ್ಷಸರು, ಹಾಂಗೆ ಮಗ ಸತ್ತ ದುಃಖದಿಂದ ಘಟೋತ್ಕಚ ಬಹಳ ಕೋಪಾವಿಷ್ಟನಾಗಿ, ಅಶ್ವತ್ಥಾಮನ್ನ ಬಾಣದಿಂದ ಹೊಡಿಯಲಿಕ್ಕೆ, ಗುರುಪುತ್ರ ಮೂರ್ಛೆಯುಳ್ಳವನಾಗಿ, ಎಚ್ಚೆತ್ತ ತರುವಾಯ ಭೀಮನ ಮಗಗೆ ಬಾಣದಿಂದ ಹೊಡಿಯಲಿಕ್ಕೆ, ಘಟೋತ್ಕಚ ಮೂರ್ಛಾಗತನಾಗಲು, ಸಾರಥಿ ತಿರಗಿಸಿ ರಥ ಇಂಬಡಿಯಾಗಿ ನಿಲ್ಲಲು, ಅಶ್ವತ್ಥಾಮ ಪಾಂಚಾಲರನ್ನೆಲ್ಲ ಸಂಹರಿಸ್ತಾ ಹೋದನು. ಮತ್ತು ಎಚ್ಚರದಿಂದ ಘಟೋತ್ಕಚ ಕೌರವ-ಸೇನಿನೆಲ್ಲ ಸಂಹರಿಸತಲೇ ಹೋದನು. ಈತನ ಬಾಣದಿಂದ ಕುರುಸೇನಿ ಬಹಳ ಬಳಲತಿಹೋದು.

ಇಷ್ಟಾಗಲಿಕ್ಕೆ ಕರ್ಣ ತನ್ನ ಅಮೋಘ ಶಕ್ತಿ ಕೊಂಡು, ಅರ್ಜುನನ ಮ್ಯಾಲೆ ಬರಲಿಕ್ಕೆ, ಸ್ವಾಮಿ ಅವ್ಯಾಹತಷಡ್ಗುಣೈಶ್ವರ್ಯಸಂಪನ್ನನಾದಂಥ ಶ್ರೀಕೃಷ್ಣ ಘಟೋತ್ಕಚನ ಕುರಿತು, 'ನೀನು ನೀಚರ ಕೂಡ ಯುದ್ಧ ಮಾಡಿದ್ದರಿಂದ, ನಿನ್ನ ಪರಾಕ್ರಮ ಪ್ರಖ್ಯಾತಿಗೆ ಬಾರದು. ನೀ ಭೀಮಸೇನನ ಮಗನಾಗಿ ಪ್ರಖ್ಯಾತ ಪರಾಕ್ರಮ ಮಾಡಿ ಹೆಸರಾಗು. ನಿನಗೆ ಒಂದು ವ್ಯಾಪಾರ ಹೇಳಥೀನಿ. ಕರ್ಣನ ಎದುರಿಗೆ ಹೋಗಿ ನಿನ್ನ ಶೂರತ್ವ ಪ್ರಸಿದ್ಧಮಾಡು' ಎಂದು ಹೇಳಲಿಕ್ಕೆ, ದೇವರ ಆಜ್ಞೆ ಕೊಂಡು, ಕರ್ಣನ ಎದುರಿಗೆ ಬರಲಿಕ್ಕೆ, ಘಟೋತ್ಕಚನ ತೀವ್ರ ಪರಾಕ್ರಮ ಕಂಡು, ಸಹಕಾರಿಯಾಗಿ ದ್ರೋಣ ದುರ್ಯೋಧನಾದಿಗಳು ಒಕ್ಕಟ್ಟಾಗಿ, ಘಟೋತ್ಕಚನ ಪೆಟ್ಟು ತಾಳಲಾರದೆ, ಕರ್ಣನ ಮುಂಬಿಗನ್ನ ಮಾಡಿಕೊಂಡು ಬಾಣಪ್ರಯೋಗ ಮಾಡತಿಹೋರು 'ನೀವೆಲ್ಲ ನನ್ನ ಹಿಂಭಾಗದಲ್ಲಿ ಸಹಾಯ-ವಾಗಿಹೋದು' ಎಂದು ಹೇಳಿ, ಕರ್ಣ ಸ್ವಾರ್ಥಿಯಿಲ್ಲದೆ ಬಾಣಪ್ರಯೋಗ ಮಾಡತಿಹೋನು. ಘಟೋತ್ಕಚಗೆ ಕರ್ಣಗೆ ಒಂದು ಕಡಿ ಯುದ್ಧ ಹತ್ತಿತು. ಮತ್ತೆ ಒಂದು ಕಡಿ ಭೀಮ-ಅಶ್ವತ್ಥಾಮರಿಗೆ ಯುದ್ಧ ಆಯಿತು. ಮತ್ತೆ ಒಂದು

ಕಡಿ ಕೃತವರ್ಮನ ಕೂಡ ಕೃಷ್ಣಾರ್ಜುನರು ಯುದ್ಧಗೈತಿಹೋರು. ಈ ಪ್ರಕಾರ ನಾಲ್ಕೂ ಕಡಿಗೆ ಭಯಂಕರ ಯುದ್ಧವಾಗತಿಹೋದು.

ಜಟಾಸುರನ ಮಗ ಅಲಂಬಲನೆಂಬಾತ, ದುರ್ಯೋಧನನ ಗೆಳಿಯನಾಗಬೇಕು, ಘಟೋತ್ಕಚನ ವ್ಯಾಲೆ ಬಾಣ ಎಚ್ಚತ ಬರಲಿಕ್ಕೆ, ಘಟೋತ್ಕಚ ಅಲಂಬಲರಾಕ್ಷಸನ್ನ ಕೈಸೆರಿ ಹಿಡದು, ಭೂಮೀ ವ್ಯಾಲೆ ಅಪ್ಪಳಿಸಿ, ಅವನ ತುರಬು ಹಿಡದು, ತಲಿ ಕೆತ್ತಿ ದುರ್ಯೋಧನನ ಎದಿಗೆ ಈಡ್ಯಾಡಿದನು. ಘಟೋತ್ಕಚನ ಅದ್ಭುತ ಪರಾಕ್ರಮ ಕಂಡು, ಅಲಂಬಲರಾಕ್ಷಸ ಸತ್ತದ್ದರಿಂದ, ಕುರುಸೇನಿಯೆಲ್ಲ ಹಾಹಾಕಾರ ಮಾಡಿತು. ಅಲಂಬಲ ಸಾಯಲಿಕ್ಕೆ, ಅಲಾಯುಧನೆಂಬ ರಾಕ್ಷಸ, ಉಗ್ರ ಪರಾಕ್ರಮವುಳ್ಳ ಘಟೋತ್ಕಚನ್ನ ಕೊಲ್ಲಬೇಕೆಂದು, ಮಹಾ ತೀಕ್ಷ್ಣನಾಗಿ ಬರಲಿಕ್ಕೆ ಅವನ ತಲೀನ ಕೆತ್ತಿ, ದುರ್ಯೋಧನನ ಎದಿಗೆ ಘಟೋತ್ಕಚ ಹೊಡದನು. ಮೊದಲಿಗೇ ಅಲಾಯುಧರಾಕ್ಷಸಗೆ ಭೀಮಸೇನಗೆ ಯುದ್ಧ ಹತ್ತಿತ್ತು. ತನ್ನ ಮಗನ ಪರಾಕ್ರಮ ಪ್ರಸಿದ್ಧವಾಗಬೇಕೆಂದು ಭೀಮಸೇನ ರಾಕ್ಷಸನ್ನ ಕೊಂದಿದ್ದಿಲ್ಲ. ಈಗ ಘಟೋತ್ಕಚನಿಂದ ಇವನೂ, ಅಪಾರ ರಾಕ್ಷಸರೂ ಸಂಹಾರ ಆದರು. ದೊಡ್ಡ ಪರಾಕ್ರಮೇರು ಬೀಳತಿಹೋರು. ಘಟೋತ್ಕಚನ ಪೆಟ್ಟು ತಾಳಲಾರದೆ ಕರ್ಣನ್ನ ಬೇಡಿಕೋತಿಹೋರು. ' ಇವ ದೊಡ್ಡ ಮೃತ್ಯು ಇದ್ದಾನೆ. ಶಕ್ತ್ಯಾಯುಧ ಏನುಕಾರಣ ಬಚ್ಚಿಟ್ಟಿದ್ದಿ? ಆಯುಧ ಹಿಡಂಬೀ ಮಗನ ವ್ಯಾಲೆ ಹಾಕು' ಎಂದು, ಮೂರುಮೂರು ಖ್ಯಾಪಿ ಹೇಳಿದರೂ ಕರ್ಣ ಕೇಳವಲ್ಲ. ಅರ್ಜುನನ ನಿಮಿತ್ತ ಬಚ್ಚಿಟ್ಟುಕೊಂಡಿಹ. ಸಮಸ್ತರೂ ಬಹು ಖ್ಯಾಪಿ ಬೇಡಿಕೊಂಡರು. ' ಘಟೋತ್ಕಚ ನಮಗೆ ಬಹಳ ದೊಡ್ಡ ಮೃತ್ಯು ಇದ್ದಾನೆ. ಆಯುಧ ಏನುಕಾರಣ ಬಚ್ಚಿಟ್ಟಿದ್ದಿ? ಇವನಿಂದ ನಾವು ಉಳದಪಕ್ಷವೇ, ಅರ್ಜುನನ ಕೊಲ್ಲಬೇಕಲ್ಲ! ಈಗ ಬಂದ ಮೃತ್ಯು ಪರಿಹರಿಸು. ಇಂಥಾ ಪರಾಕ್ರಮಿ ನಮ್ಮಿಂದ ರಣರಂಗದಲ್ಲಿ ಸತ್ತಮ್ಯಾಲೆ ಅರ್ಜುನ ನಮಗೇನು ಮಾಡಲಾಪ! ಶಕ್ತ್ಯಾಯುಧ ಘಟೋತ್ಕಚನ ವ್ಯಾಲೆ ಹಾಕು ' ಎಂದು ಬಹು ನುಂದಿ ಬೇಡಿಕೊಂಡರು

ಸರ್ವರಿಂದ ಪ್ರಾರ್ಥಿತನಾಗಿ ಆಯುಧ ಘಟೋತ್ಕಚನವ್ಯಾಲೆ ಈಡ್ಯಾಡಿದನು. ಶಕ್ತ್ಯಾಯುಧ ನಾಲ್ಕು ದಿಕ್ಕು, ವಿದಿಕ್ಕು ಜ್ವಲಸ್ತಾ, ಮೃತ್ಯುದೇವತಿ ಅಪ್ಪಂದೆ ಬರತಿಹೋದು. ಆ ಆಯುಧ ಘಟೋತ್ಕಚನ ಎದಿಗೆ ತಾಕಿ, ಎದಿ ಸೀಳಿತು. ಘಟೋತ್ಕಚ ಶಕ್ತ್ಯಾಯುಧದಿಂದ ಮೃತನಾಗಿ, ಕೌರವಸೈನ್ಯದೊಳಗೆ ಬಿದ್ದನು. ಬಿದ್ದ ಪೆಟ್ಟಿಗೆ ಕೌರವಸೇನಿಯೊಳಗೆ ರಥ ಕಾಲಾಳು ಆನಿ ಕುದರೆಗಳು ಅಪಾರ, ಪುಡಿಪುಡಿ ಆಗಿ ಸತ್ತುಹೋದವು. ಘಟೋತ್ಕಚ ಕುರುಸೇನಿಯೊಳಗೆ ಬಿದ್ದದ್ದರಿಂದ ಒಂದು ಅಕ್ಷೋಹಿಣಿ ಸೈನ್ಯ ಸತ್ತಿತು. ತಮ್ಮ ಸೇನಿ ಸತ್ತರೂ ಬಂದಂಥ ಅರಿಷ್ಟ ಪರಿಹಾರವಾಯಿತೆಂದು ಕೌರವಸೇನಿ ತಮ್ಮತಮ್ಮ ಆಯುಧಗಳ ಜ್ವಲಸ್ತಾ ಸಂತೋಷ ಉಳ್ಳದ್ದಾಯಿತು.

ಕೇಶವ ಅರ್ಜುನನ ರಥದ ವ್ಯೂಹ ಕೂತಿದ್ದನಲ್ಲ, ಶಕ್ತ್ಯಾಯುಧದಿಂದ ಘಟೋತ್ಕಚ ಸತ್ತನೆಂಬ ವಾರ್ತೆ ಕೇಳಿ ಸಂತೋಷದಿಂದ ಕುಣಿಕುಣಿದಾಡತಿಹ. ಬಹಳ ಸ್ನೇಹದಿಂದ ಅರ್ಜುನನ್ನ ಘಳಿಘಳಿಗ್ಯೆ ಅಪ್ಪಿಕೋತಿಹ. ಸಂತೋಷದಿಂದ ಸ್ವಾಮಿ ಪಾಂಚಜನ್ಯ ಶಂಖ ಊದಿದನು. ಅರ್ಜುನ ಸ್ವಾಮೀನ್ನ ಕೇಳಿದ, 'ನೀನು ನಮ್ಮ ವೈರಿಯಲ್ಲ. ನಮ್ಮ ಅಣ್ಣನ ಮಗ ದೊಡ್ಡ ಪರಾಕ್ರಮಿ ಘಟೋತ್ಕಚ ಸಾಯಲಿಕ್ಕೆ, ವೈರಿಗಳು ನಗೋಹಾಂಗೆ, ಏನುಕಾರಣ ಸಂಭ್ರಮ ಬಡತಿದ್ದಿ? ನಮ್ಮ ಬಲವೆಲ್ಲ ಮುರಿಯಿತು. ಈ ಪ್ರಕಾರ ಯಾಕೆ ಮಾಡತಿದ್ದಿ?' ಎಂದಲ್ಲಿ, 'ಹೇ ಅರ್ಜುನ ಸಕಲ ಜೀಲಾಭದೊಳಗೆ ಬದಕೋಣವೇ ದೊಡ್ಡ ಲಾಭ. ತಾ ಒಬ್ಬ ಬದಕಿದರೆ ಅನೇಕ ಮಕ್ಕಳ ಕಂಡಾನು. ನೀ ಬದಕಿದೆಂದು ನಗಥೀನಿ.' ಹೀಂಗಂತ ಸ್ವಾಮಿ ಅಂದನು. ಘಟೋತ್ಕಚನ ಮೃತವಾರ್ತೆ ಧರ್ಮರಾಯ ಕೇಳಿ, ತುಟಿ ನಡಗಸ್ತ ಕೋಪದಿಂದ ಕರ್ಣನ ಕೊಂವೇನೆಂದು, ಖಡ್ಗ ಎತ್ತಿಕೊಂಡು, ರಾಯ ಕರ್ಣನ ವ್ಯೂಹ ಹೋಗಲಿಕ್ಕೆ, ಅನಂತವೇದಪ್ರತಿಪಾದ್ಯ ಸತ್ಯವತೀಸುತ ವೇದ-ವ್ಯಾಸ, ರಾಯನ ಸಮೀಪಕ್ಕೆ ಬಂದು, 'ಹೇ ಧರ್ಮರಾಯ, ಏನುಕಾರಣ ಕೋಪಾವಿಷ್ಟನಾಗಿದ್ದಿ? ದೈವೇಚ್ಛೆಯಿಂದ ನಿನ್ನ ತಮ್ಮ ಅರ್ಜುನ ಬದಕಿದ. ಮಗನ ಕಂಡೀ, ತಮ್ಮನ ಕಂಡೀಯ? ಗಂಡಹೆಂಡರಿಗೆ ಆಯುಷ್ಯ ಇದ್ದರೆ ಸಾಕು, ನುಂದೆ ಮಕ್ಕಳಾದಾರು. ಒಂದೇ ಉದರದಲ್ಲಿ ಹುಟ್ಟಿದಂಥ ಭ್ರಾತೃರು ದೊರಕ-ಲರಿಯರು. ಅರ್ಜುನ ಬದಕಿದನೆಂದು ಸಂತೋಷ ಹಚ್ಚಿಕೊ.' ಈ ಪ್ರಕಾರ ವೇದವ್ಯಾಸ ಧರ್ಮರಾಯಗೆ ಹೇಳಿ ತಿರೋಭೂತನಾದ.

ಘಟೋತ್ಕಚ ಸಾಯಲಿಕ್ಕೆ, ಭೀಮಾರ್ಜುನರು ಒಂದೇ ಕಡೀಲಿ, ದೀಪದ ಬೆಳಕೀಲಿ ರಾತ್ರಿ ಕೌರವಸೇನಿ ಪುಡಿಪುಡಿ ಮಾಡತಲೇ ನಡದರು. ಭೀಮಾರ್ಜುನರ ಬಾಣಗಳು ಹತ್ತೂ ದಿಕ್ಕಿಗೆ ವ್ಯಾಪಿಸಿಹೋವು. ಇತ್ತಂಡ ಸೇನಿಗಳು ಬಹಳ ನಿದ್ರಿಯಿಂದ ಪೀಡಿತವಾಗಿಹೋವು. ನಿದ್ರಿಯಿಂದ ಸಕಲ ಸೇನಿ ಬಳಲೋದು ಕಂಡು, ಅರ್ಜುನ ಬಹಳ ಕೃಪಾಳುವಾಗಿ, ಸಕಲ ಸೇನಿಗೆಲ್ಲ ಚಂದ್ರೋದಯ ಸರಿಯಂತ ನಿದ್ರೆಗ್ಯೈರೆಂದು ಅಪ್ಪಣಿ ಕೊಟ್ಟ. ಈ ಪ್ರಕಾರ ಫಲ್ಗುಣನ ಆಜ್ಞೆ ಆಗಲು, ಸಕಲರೂ ಸಂತೋಷದಿಂದ ತಮ್ಮ ಶ್ರಮ ಪರಿಹರಿಸ್ತ ಬಹುಕಾಲ ಬದಕೆಂದು ಅರ್ಜುನಗೆ ಆಶೀರ್ವಾದ ಕೊಟ್ಟು, ತಾನೀವ್ಯೂಹ, ಕುದರೀವ್ಯೂಹ, ರಥದವ್ಯೂಹ ಇಹೋರು, ವಾಹನಗಳ ವ್ಯೂಹೀ ಮಲಗಿದರು. ಚಂದ್ರೋದಯ ಆಗೋತನಕ ನಿದ್ರಿಗ್ಯೈದರು. ಚಂದ್ರೋದಯವಾಗಲು ಸಕಲ ಸೇನಾವಾಹಿನಿ ಎಚ್ಚರ ಉಳ್ಳದ್ದಾಗಿ ಪುನಃ ಯುದ್ಧ ಆರಂಭಿಸಿತು ಸಾತ್ಯಕಿ ಎದುರಿಗೆ ಸೋಮದತ್ತ ಭೂರಿ ಇಬ್ಬರು ಬಂದು ಬಹು ಪರಾಕ್ರಮ ಮಾಡಿ ಸಾತ್ಯಕಿಯಿಂದ ಇಬ್ಬರೂ ಸತ್ತರು. ಅವ್ವರೊಳಗೆ ಬಾಹ್ಲೀಕರಾಯ ಬಹಳ ಕೋಪಾವಿಷ್ಟನಾಗಿ, ಸಾತ್ಯಕೀ ಕೂಡ

ಯುದ್ಧ ಮಾಡಿ ವಿರಥನ್ನ ಮಾಡಿದ. ಆದೇ ಕ್ಷಣದಲ್ಲಿ ಸಾತ್ಯಕಿಯನ್ನ ಕೊಲ್ಲ-ಬೇಕೆಂದು ಬಾಣ ಎಚ್ಚಲಿಕ್ಕೆ, ಭೀಮಸೇನ ಬಾಣ ತುಣಕುತುಣಕು ಮಾಡಿದ್ದರಿಂದ, ಬಾಹ್ಲೀಕ ಬಹಳ ಕೋಪದಿಂದ ಜ್ವಲಸ್ತ, ಶತಘ್ನಿ ಎಂಬ ಆಯುಧ ಭೀಮಸೇನನ ಮ್ಯಾಲೆ ಹಾಕಲಿಕ್ಕೆ, ಭೀಮಸೇನ ಮೂರ್ಛೆಯಿಂದ ಬಿದ್ದನು. ಒಂದಿಷ್ಟು ಎಚ್ಚರಿಕೆ ಉಳ್ಳವನಾಗಿ, ಬಾಹ್ಲೀಕರಾಯಗೆ ಹೊಡದನು. ಉಭಯರೂ ಮೂರ್ಛೆಗೈದರು. ಬಾಹ್ಲೀಕರಾಯ ಮೊದಲಿಗೆ ಭೀಮಸೇನನ್ನ ಬೇಡಿಕೊಂಡಿದ್ದ. 'ಎಲೈ ಭೀಮ-ಸೇನ ನಿಮಗೆಲ್ಲ ನಾ ಮೂಲಪುರುಷನಿದ್ದೀನಿ. ರಣರಂಗದಲ್ಲಿ ಮುಂದೆ ನೀನೇ ನನ್ನ ಕೊಲ್ಲಬೇಕು. ವೈಷ್ಣವೋತ್ತಮನ ಕೈಯಿಂದ ಮರಣವಾದರೆ ಉತ್ತಮ ಲೋಕ-ವಾದೀತು. ನಿನಗೆ ಕೀರ್ತಿ ಬರತದೆ.' ಹೀಂಗಂತ ಪೂರ್ವದಲ್ಲಿ ಬೇಡಿಕೊಂಡಿರಲಾಗಿ, 'ನಾ ಸುಮ್ಮಗೆ ಕೊಲ್ಲೋ ಹಾಂಗೆ ಇಲ್ಲ. ನಿನ್ನಿಂದ ನಾ ಬಹಳ ವ್ಯಥಿ ಉಳ್ಳವ ನಾದರೆ, ಆಗ ನಿನ್ನ ಕೊಂದೇನು' ಎಂತ ಭೀಮಸೇನ ಹೇಳಿದ್ದ. ಆದಕಾರಣ ಭೀಮಸೇನನಿಂದ ಬಾಹ್ಲೀಕರಾಯ ಸತ್ತನು. ಕುರುಕುಲಕ್ಕೆಲ್ಲ ಮೂಲಪುರುಷ ಸತ್ತನೆಂದು, ಕರ್ಣ, ದುರ್ಯೋಧನ ಮೊದಲಾದವರು, ದ್ರೋಣನ ಮುಂದುಮಾಡಿ-ಕೊಂಡು, ಭೀಮಸೇನನ ಎದುರಿಗೆ ಬಂದು ಬಾಣ ಮಳಿಗರೆದರು. ಧೃಷ್ಟದ್ಯುಮ್ನ ತನ್ನ ಸೇನಿ ಕೊಂಡು ದ್ರೋಣನ ಎದುರಿಗೆ ಬಾಣದ ಮಳಿಗರೆಯುತಲೇ ಬಂದ. ಸಮಸ್ತರ ಕೂಡ ಅರ್ಜುನ ಬಹಳ ಭಯಂಕರ ಯುದ್ಧ ಮಾಡತಿಹ. ಆ ಹೊತ್ತು ರಾತ್ರೀಲಿ ಒಂದು ಅಕ್ಷೋಹಿಣಿ ಬಲ ಸತ್ತಿತು. ಇಷ್ಟಾಗಲಿಕ್ಕೆ ಬೆಳಗಾಯಿತು.

ದ್ರೋಣಾಚಾರ್ಯ ಪಾಂಚಾಲರ ಬಲದೊಳಗೆ ಹೊಕ್ಕು ಸೇನಿನೆಲ್ಲ ಕದಡತ, ರಥ ಕುದರೀ ಕಾಲಾಳು ಮುಂದೀನೆಲ್ಲ ಪುಡಿಪುಡಿ ಮಾಡತಿಹ. ದ್ರೋಣನಿಂದ ಪಾಂಡವರ ಸೇನಿ ಹತವಾಗಿಹೋದು. ದ್ರೋಣ ವೃದ್ಧನಾದರೂ, ಪ್ರಾಯದವ-ನೋಪಾದಿ ಉಗ್ರವಾದ ಧನುಸ್ಸು ಹಿಡಕೊಂಡು, ಕುಲಾಲಚಕ್ರದಪ್ಪಂದೆ ತಿರಗತಿಹ. ಅರ್ಬುದ ಕಾಲಾಳು ಮುಂದಿ ಹಾಂಗೆ ಅನಿ ಕುದರಿಗಳು ಕೊಂದುಬಿಟ್ಟನು. ರಥಗಳೆಲ್ಲ ಪುಡಿಪುಡಿ ಆದವು. ಆ ಯುದ್ಧದೊಳಗೆ ದ್ರೋಣ, ದ್ರುಪದ ವಿರಾಟ-ರಾಯನ್ನ ಕೊಂದುಬಿಟ್ಟ. ಧೃಷ್ಟದ್ಯುಮ್ನನ ಕೊಂದೇನೆಂದು, ದ್ರೋಣ ಹರ-ಹರದು ಬರತಿಹ. ಭೀಮಸೇನ ರಕ್ಷಿಸತಿಹ. ಧೃಷ್ಟದ್ಯುಮ್ನ ಭೀಮಸೇನನಿಂದ ರಕ್ಷಿತನಾಗಿ, ದ್ರೋಣಗೆ ಬಾಣಗಳು ಹೊಡೀಲಿಕ್ಕೆ, ದ್ರೋಣ ಮೂರ್ಛೆಯುಳ್ಳವ ನಾಗಿ ಕೂಡ್ರಬೀಕಲಿಕ್ಕೆ, ಧೃಷ್ಟದ್ಯುಮ್ನ ಧನುರ್ಬಾಣದಿಂದ ಯುಕ್ತನಾಗಿ, ದ್ರೋಣನ ರಥದೊಳಗೆ ಹೋಗಲಿಕ್ಕೆ, ದ್ರೋಣ ಎಚ್ಚರವುಳ್ಳವನಾಗಿ, ಸಮೀಪದಲ್ಲಿ ಬಂದಂಥವರಿಗೆ ಎಚ್ಚೋ ಬಾಣಗಳಿಂದ ಹೊಡೆಯಲು, ಪೆಟ್ಟು ತಾಳಲಾರದೆ ಧೃಷ್ಟದ್ಯುಮ್ನ ಹಿಂದಕ್ಕೆ ರಥ ತಿರಗಿಸಿದ. ಆಚಾರ್ಯ ದಿವ್ಯರಥ ಏರಿಕೊಂಡು ಅಗ್ನ್ಯಸ್ತ್ರ ಅಭಿಮಂತ್ರಿಸಿ ಪಾಂಚಾಲರನ್ನೆಲ್ಲ ಕೊಂದುಬಿಟ್ಟ. ಆಗಲೇ

ಪುರಜಿತರಾಯನ ಹತಗೈದ. ಕುಂತೀಭೋಜರಾಯನ ಸಂಹರಿಸಿದ. ದ್ರೋಣಗೆ ಸಹಕಾರಿಯಾಗಿ, ಅಶ್ವತ್ಥಾಮ ಬಂದಾನೆಂದು, ಭೀಮಾರ್ಜುನರು ಅಶ್ವತ್ಥಾಮನ ಕೂಡ ಯುದ್ಧ ಮಾಡತಿಹೋರು. ಶಲ್ಯ ಕೃತವರ್ಮ ಬಾಣಗಳು ಎಚ್ಚತ ಬರಲು, ಭೀಮಾರ್ಜುನರು ತಮ್ಮ ಬಾಣಗಳಿಂದ ನಿವಾರಿಸತಿಹೋರು. ಜಯತ್ಸೇನ, ಮಗಧ ದೇಶದ ಅರಸು ಸತ್ತರು. ಆದೇ ಯುದ್ಧದಲ್ಲಿ ಮಾಲವದೇಶದ ಅರಸಿನ ಆನಿ ಅಶ್ವತ್ಥಾಮನೆಂಬೋದು ಭೀಮಸೇನ ಕೊಂದುಬಿಟ್ಟನು. ಅವತ್ತು ಭೀಮಸೇನ ಬಹು ಹಿಂಡುಹಿಂಡು ಆನಿಗಳ ಕೊಂದನು.

ದ್ರೋಣಾಚಾರ್ಯ ಬಹಳ ತೀಕ್ಷ್ಣನಾಗಿ ಪಾಂಡವರ ಸೇನಿನೆಲ್ಲ ಕದಪತಿಹ. ಸೇನಿ ಬಹಳ ಆರ್ತವಾಗಿಹೋದು. ಆ ವ್ಯಾಳ್ಯಾದಲ್ಲಿ ಯಾದವಪತಿ, ಧರ್ಮರಾಯನ ಸವೀಪಕ್ಕೆ ಬಂದು, "ಎಲೈ ಧರ್ಮರಾಯ ಕೇಳು. ಅಶ್ವತ್ಥಾಮ ನಿನ್ನ ಮಗ ಸತ್ತನೆನ್ನು, ದ್ರೋಣ ಕೇಳೋಹಾಂಗೆ. ದ್ರೋಣನ ಪ್ರತಿಜ್ಞೆ ಇಹೋದು— 'ಸತ್ಯಮನ ಉಳ್ಳಾತನ ಮುಖದಿಂದ ನನ್ನ ಮಗ ಅಶ್ವತ್ಥಾಮ ಸತ್ತನೆಂದು ಕೇಳಿದರೆ ನನಗೆ ಮರಣವೆಂತ ತಿಳೀರಿ. ಅಶ್ವತ್ಥಾಮ ಬದಕಿಹೋ ಪರಿಯಂತ ಯುದ್ಧ ಮಾಡೇನು. ದುರ್ವಾರ್ತಿ ಮಗನದು ಕೇಳಿದ ಘಳಿಗ್ಯೆ ಯೋಗಧ್ಯಾನದಿಂದ ದೇಹ ವಿಯೋಗ ಮಾಡೇನು.' ಹೀಂಗೆ ತನ್ನ ಮರಣ ಮೊದಲೇ ದ್ರೋಣಾಚಾರ್ಯ ಹೇಳಿ-ಕೊಂಡಿದ್ದ. ಆದಕಾರಣ, ಹೇ ಧರ್ಮರಾಯ ಅಶ್ವತ್ಥಾಮ ಸತ್ತನೆನ್ನು." ಈ ಪ್ರಕಾರ ಶ್ರೀಕೃಷ್ಣ ಘಳಿಘಳಿಗ್ಯೆ ಧರ್ಮರಾಯನ್ನ ಪ್ರಾರ್ಥಿಸತಿಹ. ಧರ್ಮರಾಯ ಹುಸೀ ಆಡಲಾರ. ಸ್ವಾಮಿ ನಿರ್ಬಂಧ ಮಾಡತಿಹ. ದೇವರ ವಚನ ಮೀರಲಾರದೆ 'ಅಶ್ವತ್ಥಾಮ ಹತ' ಎಂದು ದ್ರೋಣ ಕೇಳೋಹಾಂಗೆ ಒದರಿದ. 'ಧರ್ಮರಾಯ ನೀ ಸುಳ್ಳು ಆಡೋ ಆತನಲ್ಲ. ನನ್ನ ಮಗ ಅಶ್ವತ್ಥಾಮ ಸತ್ತದ್ದು ಖರೇವೆ?' ಎಂದು ದ್ರೋಣ ಕೇಳಲಿಕ್ಕೆ, ಧರ್ಮರಾಯ ತನ್ನೊಳಗೆ ತಾನೇ 'ಕುಂಜರ' ಎಂದುಕೊಂಡನು. ನಾನಾದರೂ ಅಶ್ವತ್ಥಾಮನೆಂಬೋ ಆನಿ ಸತ್ತಿತೆಂಥೀನಿ, ಬ್ರಹ್ಮಹತ್ಯ ದೋಷ ಬರಬ್ಯಾಡವೆಂದು ಸಮಾಧಾನ ಮಾಡಿಕೊಂಡ. ದ್ರೋಣಾಚಾರ್ಯ ಪುತ್ರಹತ್ಯ ವಾರ್ತೀ ಕೇಳಿ, 'ಇನ್ನು ನನ್ನ ಬದುಕೋಣ ಏತಕ್ಕೆ' ಎಂದು ವೈರಾಗ್ಯವುಳ್ಳವನಾಗಿ, ಯೋಗಧ್ಯಾನಕ್ಕೆ ಕುಳಿತಿರಲಿಕ್ಕೆ, ಭೀಮಸೇನ ದ್ರೋಣಗಂದ, 'ನೀ ಬ್ರಾಹ್ಮಣ, ಕ್ಷತ್ರಿಯಧರ್ಮ ಹಿಡಕೊಂಡು ಬಹುಮಂದೀನ್ನ ಕೊಂದಿದ್ದಿ. ಇನ್ನು ಯುದ್ಧ ಸಾಕುಮಾಡು. ಪರರ ಧರ್ಮ ವಹಿಸಿದ್ದಕ್ಕೆ ಪ್ರಾಯಶ್ಚಿತ್ತ ತಗೋ.' ಹೀಂಗೆಂದು ಭೀಮಸೇನ ಹೇಳಿದನು. ಆಂತರಿಕ್ಷದಲ್ಲಿ ದೇವತಿಗಳು ದ್ರೋಣಗಂದರು, 'ಇನ್ನು ಯುದ್ಧ ಸಾಕುಮಾಡಿ ಪರಲೋಕಕ್ಕೆ ಬಾ' ಎಂದು ಕರದರು. ದ್ರೋಣ ದೇವತಿಗಳಿಂದ ಪ್ರಾರ್ಥಿತನಾಗಿ, ವೈರಾಗ್ಯಭಾಗ್ಯದಿಂದ 'ಬಹುಮಂದಿ ಕ್ಷತ್ರಿಯರನ್ನ ಕೊಂದೆನಲ್ಲ! ನಾ ಬ್ರಾಹ್ಮಣನಾಗಿ ವಿರಾಟ, ದ್ರುಪದ ಮುಂತಾದವರನ್ನೆಲ್ಲ ಕೊಂದೆನಲ್ಲ!

ನನ್ನಿಂದ ಸತ್ತಂಥವರು ಕೃಷ್ಣಾರ್ಪಣವು. ನಾ ಅಸತ್ಯಪಕ್ಷವಾಗಿದ್ದೆ. ಇಂಥಾ ಪಾಪಗಳಿಗೆಲ್ಲ ನಾರಾಯಣಸ್ಮರಣೆ ಮಾಡಿ ಪ್ರಾಯಶ್ಚಿತ್ತ ಮಾಡಿಕೊಂಡೇನು' ಎಂದು, ಯೋಗಧ್ಯಾನದಿಂದ ವಾಸುದೇವನ ಧ್ಯಾನ ಮಾಡತ, ದ್ರೋಣಾಚಾರ್ಯ ತನ್ನ ಬೃಹಸ್ಪತೀಲೋಕಕ್ಕೆ ಆಕಾಶಮಾರ್ಗದಿಂದ, ವಿಮಾನ ಏರಿಕೊಂಡು ಹೋಗುವಾಗ, ಕೃಷ್ಣದೇವರು 'ದ್ರೋಣ ಹೋಗೋದನ್ನು ಸಮಸ್ತರೂ ನೋಡಿರಿ' ಎಂದು ತೋರಸ್ತಿಹೋನು. ಕೃಪಾಚಾರ್ಯ ಇದನ್ನ ಕಂಡ.

ಧೃಷ್ಟದ್ಯುಮ್ನ ದ್ರೋಣನ ವಿಯೋಗವಾರ್ತಿ ಕೇಳಿ, ' ಈ ಬ್ರಾಹ್ಮಣ ನನ್ನ ತಂದೀ ದ್ರುಪದರಾಯನ್ನ ಕೊಂದಾನೆ. ಇವನ್ನ ಕೊಲ್ಲಬೇಕು' ಎಂದು ಖಡ್ಗ ಚರ್ಮ ಕೊಂಡು ನಡದನು. 'ಹೆಣನ್ನ ಏನು ಕೊಲ್ಲತಿದಿ' ಎಂದು ಪಾಂಡವರು ನಿವಾರಿಸಿ, 'ಸಿಟ್ಟಿನಿಂದ ಹೋಗಬ್ಯಾಡ' ಎನಲಿಕ್ಕೆ, ಧೃಷ್ಟದ್ಯುಮ್ನ ದ್ರೋಣನ ಶಿರಚ್ಛೇದನ ಮಾಡಿ, ತನ್ನ ರಥ ಏರಿಕೊಂಡು ತಿರಗಿ ನಡದನು. ದ್ರೋಣ ಸಾಯಲಿಕ್ಕೆ, ಕೃಪಾಚಾರ್ಯಗೆ ಬಹಳ ವ್ಯಥಿ ಆಯಿತು. ಅರ್ಜುನ ಧೃಷ್ಟದ್ಯುಮ್ನನ ಬಹಳ ನಿಂದಿಸಹೊಕ್ಕ. 'ಹೆಣನ್ನ ಕೊಲ್ಲೋವನೇ ಬ್ಯಾರೆ, ಶೂರನಲ್ಲ.' ಹೀಂಗೆ ವರ್ಮ ಎತ್ತಿ ಮಾತನಾಡಲಿಕ್ಕೆ, 'ಭೂರಿಶ್ರವನ್ನ ನೀ ದಾವ ಧರ್ಮದಿಂದ ಕೊಂದಿ!' ಹೀಂಗೆ ಪರಸ್ಪರ ವರ್ಮ ಕರ್ಮ ಎತ್ತಿ ನಿಂದಿಸಲಿಕ್ಕೆ, 'ಇವ ನಮ್ಮ ನ್ಯಾನ ಪೂರ್ಣ ಎತ್ತಬೇಕೆ!' ಎಂದು ಗದಾ ಖಡ್ಗ ಚರ್ಮ ಎತ್ತಿಕೊಂಡು, ಅರ್ಜುನ ಧೃಷ್ಟದ್ಯುಮ್ನನ ವ್ಯೂಲೆ ಬರಲಿಕ್ಕೆ, 'ನಿಮ್ಮೊಳಗೆ ನೀವು ಇದೇನು ಯುದ್ಧ ಮಾಡಥೀರಿ, ಬಿಡಿಸು' ಎಂದು ಭೀಮಸೇನಗೆ ಶ್ರೀಕೃಷ್ಣನ ಆಜ್ಞೆ ಆಗಲಿಕ್ಕೆ, ಭೀಮಸೇನ ಯುದ್ಧ ಬಿಡಿಸಿದನು. ಪರಸ್ಪರ ದೂಷಣ ಆಡತಿದ್ದರಲ್ಲ, ವಾಸು-ದೇವನಿಂದ ಶಿಕ್ಷಿತರಾಗಿ ಮೊದಲಕಿಂತ ಸ್ನೇಹ ಉಳ್ಳವರಾದರು.

ಅಶ್ವತ್ಥಾಮ ಬಹು ದೂರ ಯುದ್ಧ ಮಾಡಲಿಕ್ಕೆ ಹೋಗಿದ್ದ. ತಂದೀ ಸತ್ತ ವಾರ್ತಿ ಕೇಳಿ, 'ಪಾಂಡವರು ನಮ್ಮ ವೈರಿಗಳು, ಪ್ರತ್ಯಕ್ಷ ನಮ್ಮ ತಂದೀನ್ನ ಕೊಂದಾರೆ. ಇನ್ನು ಬಹುಮಂದಿ ವೈರಿಗಳ ಕೊಲ್ಲಬೇಕು' ಎಂದು, ನಾರಾಯಣಾಸ್ತ್ರ ಅಭಿಮಂತ್ರಿಸಿ ಪಾಂಡವರ ಸೈನ್ಯದ ವ್ಯೂಲೆ ಬಿಡಲಿಕ್ಕೆ, ನಾರಾಯಣಾಸ್ತ್ರ ಪ್ರಜ್ವಲಸ್ತ ಬರಲಿಕ್ಕೆ, ಸಕಲರೂ ನಾಲ್ಕೂ ದಿಕ್ಕಿಗೆ ಓಡಿಹೋಗತಿಹೋರು. ಧರ್ಮ-ರಾಯ ಸಮಸ್ತ ಸೇನಿಗೆ ಆಜ್ಞಾಪಿಸಿದ. 'ನಿಮ್ಮ ಪ್ರಾಣ ಉಳಸಿಕೊಂಡು, ನಿನ್ನ ಕಂಡಬುದ್ಧಿ ಕಂಡಕೊಳ್ಳರಿ' ಎಂದು ಹೇಳಿದನು. 'ನಾನು ನನ್ನ ತಮ್ಮಂದರ ಸಹವಾಗಿ ನಾರಾಯಣಾಸ್ತ್ರದಲ್ಲಿ ಮಗ್ನನಾಗೀನಿ.' ಹೀಂಗಂತ ಧರ್ಮರಾಯ ಉದ್ಗಾರ ಮಾಡಲಿಕ್ಕೆ ಶ್ರೀಕೃಷ್ಣದೇವರು ಸಕಲ ಸೇನಿಗೂ ಹೇಳಿದ. 'ಓಡಬ್ಯಾಡರಿ. ಬದಕ-ಬೇಕೆಂಬೋ ಅಪೇಕ್ಷೆ ಇದ್ದರೆ, ನಮಸ್ಕಾರ ಮಾಡರಿ' ಎಂದೆನಲಿಕ್ಕೆ, ಸಮಸ್ತ ಭೂಪಾಲಕರೂ ಶಸ್ತ್ರಾಸ್ತ್ರ ಬಿಟ್ಟುಕೂಟ್ಟು, ಅಸ್ತ್ರಕ್ಕೆ ನಮಸ್ಕಾರ ಮಾಡಿ ಕ್ಷೇಮ ಉಳ್ಳವರಾದರು.

ಭೀಮಸೇನ ಕಾಮ್ಯಕರ್ಮ ಮಾಡೋ ಆತನಲ್ಲ. ಆದಕಾರಣ ಅಸ್ತ್ರಕ್ಕೆ ನಮಸ್ಕರಿಸಲಿಲ್ಲ. ಭೀಮಸೇನನ ಮ್ಯಾಲೆ ನಾರಾಯಣಾಸ್ತ್ರ ಉರೀತಿಹೋದು. ಅದರಿಂದ ಅಗ್ನಿ ಮ್ಯಾಲೆ ಅಗ್ನಿ ಇಟ್ಟಹಾಂಗೆ ಆಗಿಹೋದು. ಆಣ್ಣಗೆ ಅಗ್ನಿ ಶಾಂತವಾಗಬೇಕು, ತನ್ನ ಸೇವಿ ಮುಟ್ಟಿಸಬೇಕಾಗಿ, ಅರ್ಜುನ ವರುಣಾಸ್ತ್ರ ಅಭಿಮಂತ್ರಿಸಿ, ಸ್ನೇಹದಿಂದ ಭೀಮಸೇನನ ಸುತ್ತುಗಟ್ಟಿದನು. ವರುಣಾಸ್ತ್ರದಿಂದ ನಾರಾಯಣಾಸ್ತ್ರ ಶಾಂತವಾಗಬಲ್ಲದೆ! ಆದಕಾರಣ ಶ್ರೀಕೃಷ್ಣದೇವರು ಒಂದು ಉಪಾಯ ರಚಿಸಿದ. ನಾರಾಯಣಾಸ್ತ್ರ ವ್ಯರ್ಥವಾಗಬಾರದು, ಭೀಮಸೇನಗೆ ಕ್ಷೇಮವಾಗಬೇಕಾಗಿ, ಕೃಷ್ಣಾರ್ಜುನರು ಭೀಮಸೇನನ ರಥದಮ್ಯಾಲೆ ಕುಳಿತರು. ಅರ್ಜುನ ನಾರಾಯಣಾಸ್ತ್ರದಿಂದ ಸುಡಲಿಲ್ಲವೇ ಎಂದರೆ, ಅರ್ಜುನ ಶ್ರೀಕೃಷ್ಣನಿಂದ ಪಾಲಿತನಾಗಿಹ. ನರಾವೇಶ ಇದ್ದದ್ದರಿಂದ ಕ್ಷೇಮವಾಯಿತು. ಕೃಷ್ಣಾರ್ಜುನರು ಭೀಮಸೇನನ ರೆಟ್ಟೀ ಹಿಡದು, ರಥದಿಂದ ಕೆಳಗಿಳಸಿ, ಭೀಮಸೇನನ ಆಯುಧಗಳನ್ನೆಲ್ಲ ಕಸಗೊಂಡರು. ಭೀಮಸೇನ ಶುದ್ಧ ಕ್ಷತ್ರಿಯ. ಕ್ಷತ್ರಿಯಧರ್ಮದಲ್ಲಿ ರತನಾಗಿಹ. ಆದಕಾರಣ ಅಸ್ತ್ರಕ್ಕೆ ನಮನಗೈಯಲಿಲ್ಲ. ಭೀಮಸೇನ ಸಕಲ ಸೇನಿಗೂ ಹೇಳತಿಹ, 'ಈ ವಿಷಯದಲ್ಲಿ ಕೃಷ್ಣನಾಜ್ಞೆ ಕೇಳಬ್ಯಾಡಿ. ಕಾಮ್ಯಕರ್ಮ ಮಾಡಬ್ಯಾಡಿ, ಒಳ್ಳೀದಲ್ಲ. ಅಸ್ತ್ರಕ್ಕೆ ನಮಸ್ಕಾರ ಮಾಡಬ್ಯಾಡಿ, ಓಡಿಹೋಗಬ್ಯಾಡಿ, ಯುದ್ಧ ಮಾಡಿ' ಎಂದು ಸ್ವಧರ್ಮ ಹೇಳತಿಹ, ಅಸ್ತ್ರಕ್ಕೆ ನಮನ ಮಾಡಬ್ಯಾಡವೆಂದದ್ದಕ್ಕೆ, ನಮಸ್ಕಾರಕ್ಕೆ ಯೋಗ್ಯವಾದರೂ, ಫಲಾಪೇಕ್ಷ, ಬದುಕಬೇಕೆಂದು ಮಾಡಬಾರದು, 'ವೈರಿ ಬಿಟ್ಟಂಥ ಅಸ್ತ್ರಕ್ಕೆ ನಮಸ್ಕಾರ ಮಾಡಬ್ಯಾಡರಿ' ಎಂದು ಭೀಮಸೇನ ಒದರತಿಹ. ಅಸ್ತ್ರಾಭಿಮಾನಿ ದಾರೆಂದರೆ ವಾಯುದೇವರು. ಅಸ್ತ್ರದಲ್ಲಿ ನಾರಾಯಣ ಸ್ವರೂಪವಿಹೋದು. ಭೀಮಸೇನ ತನ್ನ ಮನಸ್ಸಿನಿಂದ ನಾರಾಯಣಾಸ್ತ್ರಕ್ಕೆ ನಮಸ್ಕಾರ ಮಾಡತಿಹ. ವಾಸುದೇವನ ಅಸ್ತ್ರ ವ್ಯರ್ಥವಾಗಬಾರದು. ಅಸ್ತ್ರಕ್ಕೆ ಅವೋಘತ್ವ ಬರಬೇಕು. ಭೀಮಸೇನ ಕ್ಷೇಮವಾಗೋದರಗೋಸ್ಕರ ಶಸ್ತ್ರ ತೆಗೆದುಕೊಂಡು ರಥದಿಂದ ಕೆಳಗಿಳಿಸಿದರು. ಶಸ್ತ್ರ ಕಸಗೊಂಡದ್ದರಿಂದ ನಾರಾಯಣಾಸ್ತ್ರ ಶಾಂತವಾಯಿತು.

ಇಷ್ಟು ಕರ್ತವ್ಯ ಮಾಡಿ ರಥ-ಮುಂದಕ್ಕೆ ನಡಸಲಿಕ್ಕೆ ದುರ್ಯೋಧನ ಅಶ್ವತ್ಥಾಮನ್ನ ಬೇಡಿಕೊಂಡ. 'ಎಲೈ ಪರಾಕ್ರಮಿ ಅಶ್ವತ್ಥಾಮ, ಈಗ ನಾರಾಯಣಾಸ್ತ್ರ ಹಾಕಿದಿ. ಇನ್ನೊಮ್ಮಿ ಬಿಡು' ಎನಲಿಕ್ಕೆ, 'ನನಗೆ ಇನ್ನು ವೀರ್ಯವಿಲ್ಲ. ವೀರ್ಯ ಹೋಯಿತು. ಘಳಿಘಳಿಗ್ಯೆ ಬಾರದು.' ಹೀಂಗಂತ ಮಾತನಾಡಿ, ತಂದೀ ಸತ್ತ ದುಃಖದಿಂದ ಕೋಪಾಗ್ನಿ ಜ್ವಲಸ್ತ ಅಶ್ವತ್ಥಾಮ, ಧೃಷ್ಟದ್ಯುಮ್ನ ಸಾತ್ಯಕಿ ಎದುರಿಗೆ ಬಂದು, ಇಬ್ಬರಿಗೂ ತನ್ನ ಬಾಣದಿಂದ ಹೊಡದು ಕೆಡಹಾಕಲಿಕ್ಕೆ, ಇಬ್ಬರೂ ಮೂರ್ಛಿ ಉಳ್ಳವರಾಗಿ ಬಿದ್ದರು. ಅಷ್ಟರೊಳಗೆ ಭೀಮಸೇನ, ಗದಿ

ಕೊಂಡು ಅಶ್ವತ್ಥಾಮನ ಎದುರಿಗೆ ಬರಲಿಕ್ಕೆ, ಭೀಮಸೇನನ ರಥದ ರಶ್ಮಿ ಅಶ್ವತ್ಥಾಮ ಛೇದಿಸಿಬಿಟ್ಟ. ರಥದ ಕುದರಿಗಳು ಬಿಡಿಸಿಕೊಂಡು ಓಡಹೊಕ್ಕವು. ಹಿಡತಂದು ರಥಕ್ಕೆ ಕಟ್ಟಿಹಾಕಿದ. ಆಷ್ಟರೊಳಗೆ ಅರ್ಜುನ ಬಂದ. ಅಶ್ವತ್ಥಾಮ ಅರ್ಜುನನ ಮ್ಯಾಲೆ ಆಗ್ನ್ಯಸ್ತ್ರ ಹಾಕಿದ. ಪಾರ್ಥ ಅಶ್ವತ್ಥಾಮನ ಕೈಕೆಳಗೆ ಸಿಕ್ಕುಬಿದ್ದಿದ್ದ. ಶ್ರೀಹರಿಯಿಂದ ರಕ್ಷಿತನಾಗಿ ಕಡಿಗೆ ಬಂದ. ಅಶ್ವತ್ಥಾಮ ಅರ್ಜುನನ ಕೊಲ್ಲ-ಬೇಕೆಂದು ಬಹಳ ಪ್ರಯತ್ನ ಮಾಡಿದ. ಶ್ರೀಶನ ಮುಂದೆ ಏನು ಯತ್ನ ನಡದೀತು! ತನ್ನ ಸಾಹಸ ವ್ಯರ್ಥವಾದಕಾರಣ, ಅಶ್ವತ್ಥಾಮ ಧನುರ್ಬಾಣಗಳ ಬಿಟ್ಟುಕೊಟ್ಟ. ಕೃಷ್ಣಾರ್ಜುನರ ಎದುರಿಗೆ ನಿಂದರಲಾರದೆ ಓಡಿಹೋದ. ಆಗ ವೇದವ್ಯಾಸ ಪ್ರತ್ಯಕ್ಷನಾಗಿ, ಅಶ್ವತ್ಥಾಮನ ಕೂಡ ಮಾತನಾಡಿದ. 'ನೀ ಸಾಕ್ಷಾತ್ ಮಹಾರುದ್ರನ ಅವತಾರ. ದೇವತಾಕಾರ್ಯ ಸಾಧಿಸಬೇಕಾಗಿ ಬಲವಂತವಾಗಿ ಹುಟ್ಟಿದಿ. ಕಾರ್ಯ ಸಂಪಾದಿಸದೇ ಹೀಂಗೆ ಹೋಗಬ್ಯಾಡ. ಯುದ್ಧ ಮಾಡಿ ನಿನ್ನ ಹೆಸರು ಪ್ರಸಿದ್ಧ ಮಾಡು.' ಹೀಂಗೆ ವೇದವ್ಯಾಸ ಹೇಳಲಿಕ್ಕೆ, ತಂದಿ ಸತ್ತನೆಂದು ಬಹಳ ದುಃಖ ಬಡತಿಹ. ದುಃಖ ತುಂಬಿದ್ದರಿಂದ, 'ಯುದ್ಧ ಮಾಡಲಿಕ್ಕೆ ಸಮಾಧಾನವಿಲ್ಲ. ಇಂದಿಗೆ ನಾ ಯುದ್ಧ ಮಾಡಲಾರೆ' ಎಂದು ಹೇಳಿ ವೇದವ್ಯಾಸಗೆ ನಮಸ್ಕಾರ ಮಾಡಿದನು. ಆಗ್ಗೆ ಇನ್ನೂ ಹೊತ್ತಿದ್ದರೂ ಅಶ್ವತ್ಥಾಮ ಪಾಂಡವರಿಗೆ ಅಂಜಿ, ತಂದೀ ಸತ್ತ ಕ್ಲೇಶದಿಂದ ಬಹಳ ಖಿನ್ನನಾಗಿ, ಮಾರಿ ತಗ್ಗಿಸಿಕೊಂಡು ದಾರ ಕೂಡನೂ ಮಾತನಾಡದೆ ವಿಮನಸ್ಕನಾಗಿ ಶಿಬಿರಕ್ಕೆ ತೆರಳಿದ.

ಅಶ್ವತ್ಥಾಮ ಶಿಬಿರಕ್ಕೆ ತೆರಳಲಿಕ್ಕೆ, ಇನ್ನೂ ಯುದ್ಧಕ್ಕೆ ಹೊತ್ತಿದ್ದರೂ ದ್ರೋಣನ ಮರಣವಾದ ಕಾರಣ, ಸರ್ವರೂ ಅಶ್ವತ್ಥಾಮನ ಬಳಿವಿಡಿದು ಶಿಬಿರಕ್ಕೆ ಹೋದರು. ಪಾಂಡವರು ಶ್ರೀಕೃಷ್ಣನಿಂದ ಪಾಲಿತರಾಗಿ, ವಿಜಯದಿಂದ ಒಬ್ಬರ ಕೈಮ್ಯಾಲೆ ಒಬ್ಬರು ಕೈ ಹೊಡಿಯುತ, ತಮ್ಮ ಹರ್ಷ ಹೊರಚೆಲ್ಲುತ, ಶ್ರೀಹರಿಸ್ತೋತ್ರ ಮಾಡುತ, ಕಮಲೇಕ್ಷಣನಿಂದ ಯುಕ್ತರಾಗಿ, 'ಸ್ವಾಮಿ ದೊಡ್ಡ ಅರಿಷ್ಟ ಪರಿಹರಿಸಿ ಪರಮಾನುಗ್ರಹ ಮಾಡಿದಿ' ಎಂದು, ಸಮಸ್ತರೂ ಸ್ತೋತ್ರ ಮಾಡುತ ಶಿಬಿರಕ್ಕೆ ಹೋದರೆಂಬಲ್ಲಿಗೆ; ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯ-ನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ, 'ಶ್ರೀಕೃಷ್ಣಚರಿತೇ ದ್ರೋಣಪರ್ವ ನಿರ್ಣಯಃ' ಎಂಬ ಇಪ್ಪತ್ತಾರನೇ ಅಧ್ಯಾಯವು ಸಂಪೂರ್ಣವು.

ಶ್ರೀ ಮಧ್ವೇಶಾರ್ಪಣಮಸ್ತು

ಅಧ್ಯಾಯ ೨೭

ಶ್ರೀಕೃಷ್ಣಚರಿತ್ರೇ ಕರ್ಣವಧಃ

ಈ ಇಪ್ಪತ್ತೇಳನೇ ಅಧ್ಯಾಯದಲ್ಲಿ ಕರ್ಣಪರ್ವ ಭಾರತ ಕಥ, ಶ್ರೀಮುದಾ. ಚಾರ್ಯರು ಸಂಗ್ರಹಿಸಿ ಹೇಳಥಾರೆ. ದ್ರೋಣಾಚಾರ್ಯನು ಸತ್ತಮ್ಯಾಲೆ, ಇನ್ನು ಯಾರಿಗೆ ಸೇನಾಪತಿತನ ಕೊಡಬೇಕೆಂದು, ಗುರುಪುತ್ರ ಅಶ್ವತ್ಥಾಮನ ಕೂಡ ವಿಚಾರ ಮಾಡಿ, ಆತನ ಆಜ್ಞೆ ಕೊಂಡು, ದುರ್ಯೋಧನ ಕರ್ಣನ್ನ ಸೇನಾಪತಿಯಾಗಿ ಅಭಿಷೇಕ ಮಾಡಿದನು. ಕರ್ಣ ಸೇನಾಪತಿಯಾಗಿ, ಪರಶುರಾಮ ಕೊಟ್ಟಂಥ ರಥ ಏರಿಕೊಂಡು, ಯುದ್ಧಸಾಮಗ್ರಿ ಕೊಂಡು, ಪಾಂಡವರ ಕೂಡ ಯುದ್ಧ ಮಾಡ-ಬೇಕೆಂದು ರಣರಂಗಕ್ಕೆ ಬಂದ. ಭೀಮಸೇನ ಕರ್ಣನ ಕೂಡ ಯುದ್ಧ ಮಾಡಲು, ಪರ್ವತಸದೃಶ ಆನಿ ಏರಿಕೊಂಡು ಬರುವಾಗ, ಸೂರ್ಯಸೋಪಾದಿ ಹೊಳೀತಿಹ. ಸೂರ್ಯ ಉದಯಪರ್ವತ ಏರಿದರೆ ಹ್ಯಾಂಗೆ ಒಪ್ಪಥಾನೋ, ಹಾಂಗೆ ಭೀಮಸೇನ ರಣರಂಗದಲ್ಲಿ ಒಪ್ಪತಿಹ. ಭೀಮಸೇನ ಈ ಪ್ರಕಾರ ಸನ್ನದ್ಧನಾಗಿ ರಣರಂಗದಲ್ಲಿ ನಿಂತನು. ಈತನ ಎದುರಿಗೆ ಕ್ಷೇಮದೂರ್ತರಾಯ ಬಂದು, ಭೀಮಸೇನ ಏರಿದ ಆನಿಗೆ ಬಾಣಗಳಿಂದ ಮುಚ್ಚಿಬಿಟ್ಟನು. ಭೀಮಸೇನ, ಮುಚ್ಚಿದ ಬಾಣಗಳು ಪರಿಹರಿಸಿ, ಕ್ಷಣಮಾತ್ರದಲ್ಲಿ ಕ್ಷೇಮದೂರ್ತರಾಯನ ಕೊಂದುಬಿಟ್ಟನು. ಭೀಮ-ಸೇನ ದುರ್ಯೋಧನನ ಪಕ್ಷಪಾತಿ ರಾಯರ ಸೇನಿನೆಲ್ಲ ಕ್ಷೋಬಿಸ್ತಿಹ. ದುರ್ಯೋಧನನ ಸೇನಿ, ಭೀಮಸೇನನ ಬಾಣಗಳಿಂದ ಕಂಪಿತವಾಗಿ, ನಾಲ್ಕೂ ದಿಕ್ಕಿಗೆ ಓಡಿ-ಹೋಯಿತು. ಅಶ್ವತ್ಥಾಮ ಭೀಮಸೇನನ ಎದುರಿಗೆ ಬಂದು ಭಯಂಕರ ಯುದ್ಧ ಮಾಡಿದ. ಭೀಮಸೇನ, ಅಶ್ವತ್ಥಾಮರ ಯುದ್ಧಸದೃಶ ಎರಡನೇ ಯುದ್ಧ ನೋಡಿಲ್ಲ. ಈ ಯುದ್ಧಕ್ಕೆ ದೃಷ್ಟಾಂತ ಕೊಟ್ಟೀನೆಂದರೆ ಇಲ್ಲ. ಉಭಯರ ಯುದ್ಧ ನೋಡಲಿಕ್ಕೆ ದೇವತಿಗಳು ಬಹಳ ಆಶ್ಚರ್ಯ ಬಡತಿಹೋರು. ಹಿಂದೆ ಇಂಥಾ ಯುದ್ಧ ಆಗಿಲ್ಲ, ಮುಂದೆ ಆಗದು. ಯುದ್ಧ ಬಹಳ ರಮ್ಯ. ಇಬ್ಬರೂ ಜ್ಞಾನಸಂಪನ್ನರು, ಬಲವಂತರು, ಇವರ ಸದೃಶ ದಾರೂ ಇಲ್ಲ. ಉಭಯರ ಬಾಣಗಳಿಂದ ವ್ಯಾಪಿಸಿ, ಈ ಗಗನ ತುಂಬಿಹೋದು. ದಿಕ್ಕುಗಳು ಕಾಣಬಾರಥಾಂಗಾದವು. ಅವಕಾಶ ಇಲ್ಲದೆ ಬಾಣ ಮಳಿಗರೆಯತ ಇಹೋರು.

ಭೀಮ-ಅಶ್ವತ್ಥಾಮರ ಯುದ್ಧ. ಕಂಡು ಮಹಾರಥಿಕರೆಲ್ಲ ಅಂಜಿದರು. ಭೀಮಸೇನ ಅಶ್ವತ್ಥಾಮನ ಬಿಲ್ಲು ಛೇದಿಸಿದ. ಅಶ್ವತ್ಥಾಮ ದಿವ್ಯಾಸ್ತ್ರಗಳನ್ನೆಲ್ಲ ಭೀಮಸೇನನ ಮ್ಯಾಲೆ ಪ್ರಯೋಗ ಮಾಡತಿಹ. ಬಂದಂಥ ಅಸ್ತ್ರಗಳ ಭೀಮಸೇನ ನಿವಾರಸ್ತಿಹ. ಭೀಮಸೇನನ ಬಾಣದಿಂದ ಅಶ್ವತ್ಥಾಮ ಮೂರ್ಛಿಯುಳ್ಳವನಾಗಿ

ಬಿದ್ದು, ಅಷ್ಟುಮಾತ್ರಕ್ಕೆ ಎಚ್ಚತ್ತು ಭೀಮಸೇನನ ಮ್ಯಾಲೆ ಬಾಣಪ್ರಯೋಗ ಮಾಡಲಿಕ್ಕೆ ಪರವಶನಾದ. ಅಶ್ವತ್ಥಾಮ, ಭೀಮಪೇನನೆ ಕೂಡ ಯುದ್ಧ ಮಾಡಲಾರದೆ, ಬೆನ್ನುಕೊಟ್ಟು ಓಡಿಹೋದಮ್ಯಾಲೆ, ಭೀಮಸೇನ ತಾ ಮ್ಯಾಡಿದ ಯುದ್ಧ-ಶ್ರಮ ಪರಿಹರಿಸಿಕೊಂಡು, ಕೈಲಿ ಗದಾ ಹಿಡಕೊಂಡು, ಸಿಂಹನಾದ ಮಾಡತ ತೆರಳುವಾಗ, ಆನೀ ಕುಂಭಸ್ಥಳಗಳು ಸೀಳತಿಹ. ದಿಕ್ಕುಗಳು ಪ್ರತಿಶಬ್ದ ಕೊಡತಿಹೋವು. ಭೀಮಸೇನ ದುರ್ಯೋಧನನ ಸೇನೀ ಒಳಗೆ ಹೊಕ್ಕ. ತನ್ನ ಗದೀಪೆಟ್ಟಿನಿಂದ ಸೇನಿ ಸಂಹರಸ್ತಿಹ. ಈ ಪ್ರಕಾರ ಮಾಡತ ನಡದನು.

ಧರ್ಮರಾಯಗೆ, ದುರ್ಯೋಧನಗೆ ಯುದ್ಧ ಹತ್ತಿತು. ಧರ್ಮರಾಯ ತನ್ನ ಬಾಣಗಳಿಂದ ದುರ್ಯೋಧನನ ರಥ ಛೇದಿಸಿಬಿಟ್ಟ. ದುರ್ಯೋಧನ ವಿರಥನಾಗಿ, ಗದಿ ಈಡ್ಯಾಡಲಿಕ್ಕೆ, ರಾಯನ ರಕ್ಷಿಸಬೇಕಾಗಿ ಅಷ್ಟರೊಳಗೆ ವೃಕೋದರ ಬಂದ. ಅರಸು ವಿರಥನಾಗಿ ನಿಂತನೆಂದು ಕೃಪಾಚಾರ್ಯ ಬಂದು, ಭೀಮಸೇನನ ಕೂಡ ಯುದ್ಧ ಥರವಲ್ಲವೆಂದು ಬುದ್ಧಿ ಹೇಳಿ, ದುರ್ಯೋಧನನ ತನ್ನ ರಥದೊಳಗೆ ಕೂಡ್ರಿಸಿಕೊಂಡು ಹಿಂದಕ್ಕೆ ತಿರಗಿದನು. ನಕುಲಗೆ, ಕರ್ಣಗೆ ಯುದ್ಧ ಹತ್ತಿತು. ಸೂರ್ಯಜನ ಬಾಣದಿಂದ ನಕುಲ ವಿರಥನಾಗಿ ಓಡಲಿಕ್ಕೆ, ಕರ್ಣ ನಕುಲನ ಬೆನ್ನಟ್ಟಿ ಹೋಗಿ, 'ಭೀಮಾರ್ಜುನರ ತಮ್ಮನಾಗಿ ಬೆನ್ನುಕೊಟ್ಟು ಓಡಥಾರೆ! ಎದುರಿಗೆ ನಿಂತು ಯುದ್ಧ ಮಾಡು' ಎಂದು, ನಕುಲನ ಕೊರಳಿಗೆ ಬಿಲ್ಲು ಹಾಕಿ, 'ಕುಲವಿನಾಶಕರಿದ್ದೀರಿ' ಎಂದು ನಿಷ್ಠುರವಚನಗಳಾಡಿ ದುಃಖಬಡಸ್ತಿಹ, ಅದಲ್ಲದೇ ಕೊಂದಿದ್ದಿಲ್ಲ. ಕುಂತೀದೇವಿಗೆ, ಅರ್ಜುನನ ವ್ಯತಿರಿಕ್ತ ದಾರನ್ನೂ ಕೊಲ್ಲೋದಿಲ್ಲವೆಂದು ವಚನ ಕೊಟ್ಟಿದ್ದರಿಂದ ಕೊಲ್ಲಲಿಲ್ಲ. ವಿಂದಾನುವಿಂದರಿಗೆ, ಸಾತ್ಯಕಿಗೆ ಬಹಳ ಭಯಂಕರ ಯುದ್ಧ ಹತ್ತಿತು. ವಿಂದಾನುವಿಂದರು ಉತ್ತಮವಾದಂಥ ಬಾಣಗಳಿಂದ ಸಾತ್ಯಕೀನ್ನ ವ್ಯಥಿಬಡಿಸಿದರು. ಸಾತ್ಯಕಿ ಬಹಳ ಪರಾಕ್ರಮದಿಂದ ಯುದ್ಧ ಮಾಡಿ, ಅನುವಿಂದನ ಶಿರಚ್ಛೇದ ಮಾಡಿದನು. ವಿಂದಗೆ ಸಾತ್ಯಕಿಗೆ ತೀವ್ರ ಯುದ್ಧ ಹತ್ತಿತು. ಯುದ್ಧದಿಂದ ಎರಡನೇ ಶಬ್ದ ಕೇಳಿಸದು ಪರಸ್ಪರ ವಿರಥರಾದರು. ಯುದ್ಧಚಾತುರ್ಯದಿಂದ ಬಹಳ ಶ್ರಮಬಟ್ಟು, ಖಡ್ಗ ಚರ್ಮ ಉಳ್ಳವರಾಗಿ, ಆಕಾಶಮಾರ್ಗದಲ್ಲಿ ಗಿಡಗ ಹ್ಯಾಂಗೆ ಹಾರತದೆ, ಹಾಂಗೆ ಸಾತ್ಯಕಿ ವಿಂದ ಯುದ್ಧ ಮಾಡತಿಹೋರು. ಯುದ್ಧದಿಂದ ಚರ್ಮಗಳು ಛೇದಿಸಿಹೋದವು. ವಿಂದ, ಸಾತ್ಯಕಿ ಖಡ್ಗ ಉಳ್ಳವರಾಗಿ ಬಹಳ ಯುದ್ಧ ಮಾಡಿದರು. ಸಾತ್ಯಕಿ ಹೊರಕೈಯಿಂದ ಖಡ್ಗದಲ್ಲಿ ಹೊಡೀಲಿಕ್ಕೆ, ವಿಂದನ ತಲಿ ಕುಂಡಲಸಹಿತವಾಗಿ, ಭೂತಳದಲ್ಲಿ ಬಿತ್ತು. ವಿಂದಾನುವಿಂದರ ಸಾತ್ಯಕಿ ಕೊಂದನೆಂದು 'ಭಲಾ ಸಾತ್ಯಕಿ! ಬಹಳ ಪರಾಕ್ರಮ ಮಾಡಿದಿ' ಎಂದು ಸಮಸ್ತರೂ ಹೊಗಳ ಹೊಕ್ಕರು. ಬಹುಮಂದಿ ವೀರರು ಸಾತ್ಯಕಿಗೆ ಬಹುಮಾನ ಮಾಡಿದರು. ಸಾತ್ಯಕಿ ಸಕಲರಿಂದ ಹೊಗಳಿಸಿಕೊಂಡು, ಕೌರವಸೇನಿನೆಲ್ಲ ಕಂಪಸ್ತ ಯುದ್ಧ ಮಾಡತ ನಡದನು.

ಇಷ್ಟಾಗಲಿಕ್ಕೆ, ನಮ್ಮ ಭಾವ ದ್ರೋಣನ್ನ ಧೃಷ್ಟದ್ಯುಮ್ನ ಕೊಂದಾನೆ, ಧೃಷ್ಟದ್ಯುಮ್ನನನ್ನ ಕೊಲ್ಲಬೇಕೆಂದು, ಕೃಪಾಚಾರ್ಯ ಬಹಳ ಭಯಂಕರನಾಗಿ ಬರಲಿಕ್ಕೆ, ಧೃಷ್ಟದ್ಯುಮ್ನ ರಕ್ಷಿಸಬೇಕೆಂದು ಭೀಮಸೇನನ್ನ ಶರಣು ಹೊಕ್ಕ. ಭೀಮಸೇನ ಧೃಷ್ಟದ್ಯುಮ್ನನ ಬೆನ್ನುಹತ್ತಿಕೊಂಡು, ಅಂಜಬ್ಯಾಡವೆಂದು ಅವಗೆ ಅಭಯ ಕೊಟ್ಟನು. ಇಷ್ಟಾಗಲಿಕ್ಕೆ ಕರ್ಣ ಪಾಂಡವರ ಸೇನಿ ಹೊಕ್ಕು, ಸೇನಿನೆಲ್ಲ ಕದಡತ ಬರಲಾಗಿ, ಅರ್ಜುನ ಕೃಷ್ಣನ ಸಹಾಯ ಉಳ್ಳವನಾಗಿ, ಕರ್ಣನ ಮ್ಯಾಲೆ ಬಾಣ ಮಳಿಗರೆವುತಲೇ ಬಂದ. ಕರ್ಣಾರ್ಜುನರಿಗೆ ಬಹಳ ತೀಕ್ಷ್ಣ ಯುದ್ಧ ಆಯಿತು. ಯುದ್ಧದ ಶಬ್ದದಿಂದ ಎರಡನೇ ಶಬ್ದ ಕೇಳಿಸಧಾಂಗಾಯಿತು. ಬಾಣಗಳಿಂದ ಗಾಢಾಂಧಕಾರ ಬಿದ್ದಿಹೋದು. ಕರ್ಣಾರ್ಜುನರ ಯುದ್ಧಕ್ಕೆ ಎರಡನೇ ದೃಷ್ಟಾಂತ ಕೊಟ್ಟೀನೆಂದರೆ ಇಲ್ಲ. ಬಾಣಗಳು ಪುಂಖಪರಿಯಂತ ಮುಣಗಿಹೋವು. ಅರ್ಜುನ ದೊಡ್ಡ ಪರಾಕ್ರಮಿ, ಕ್ಷಣಮಾತ್ರದಲ್ಲಿ ಕರ್ಣನ ಸೋಲಿಸಿಬಿಟ್ಟನು ಕರ್ಣ ಮೊದಲನೇ ದಿವಸದ ಯುದ್ಧದಲ್ಲಿ ಪಾಂಡವರ ಸೇನಿನೆಲ್ಲ ಮರ್ದಿಸಲಿಕ್ಕೆ, ಅರ್ಜುನ ರಣರಂಗದಲ್ಲಿ ವಿಮನಸ್ಕನಾಗಿ, ಕರ್ಣನ ರಥ ಛೇದಿಸಿದನು. ಕರ್ಣ ವಿರಥನಾಗಿ ಭೀಮಾರ್ಜುನರ ಎದುರಿಗೆ ನಿಂದರಲಾರದೆ, ಅರ್ಜುನನ ಕೈಯ ಪೆಟ್ಟು ತಿಂದು, ಪರಾಜಿತನಾಗಿ ಸೇನಾಪಹಾರ ಮಾಡಿಕೊಂಡು ಶಿಬಿರಕ್ಕೆ ಬಂದನು.

ಕರ್ಣ ದುರ್ಯೋಧನನ ಸಮೀಪಕ್ಕೆ ಹೋಗಲು ರಾಯ ಅಂಥಾನೆ. 'ನೀ ಶೂರನಂತ ಬಹಳ ತಿಳಿದಿದ್ದೆ. ದೇವೇಂದ್ರನ ಮಗ ಅರ್ಜುನನ ಕೈಯ ಸೋತು ಅಪಾರ ಸೇನಿ ಕೊಲ್ಲಿಸಿದಿ. ನೀನು ಬೆನ್ನು ಕೊಟ್ಟು ಓಡಿಬಂದಿ. ನಿನ್ನ ಶೂರತ್ವ ಎಲ್ಲಿ ಹೋಯಿತು!' ಹೀಂಗಂತ ದುರ್ಯೋಧನ ಕೇಳಲಾಗಿ, ಕರ್ಣ ಮಾತನಾಡಥಾನೆ. 'ರಾಯ, ನಾ ಸೋತುಬಂದೆನೆಂದು ಸಿಟ್ಟು ಮಾಡಬ್ಯಾಡ. ನನ್ನಲ್ಲಿ ಯುದ್ಧಸಾಮಗ್ರಿ, ಪರಶುರಾಮದೇವರು ಕೊಟ್ಟದ್ದು ಬಹಳ ಅವೆ. ಸಾರಥಿ ದೊಡ್ಡವ ಇಲ್ಲ ಎಂದು ವಿಮನಸ್ಕನಾಗೀನಿ. ಅರ್ಜುನಗೆ ಕೃಷ್ಣ ಹ್ಯಾಂಗೆ ಸಾರಥಿ ಇದ್ದಾನೆ, ಹಾಂಗೆ ನನಗೆ ಸಾರಥಿ ಇಲ್ಲಾದ ಕಾರಣ, ಯುದ್ಧಕಾಲ್ದಲ್ಲಿ ಚಿಂತಿಗೆ ಒಳಗಾದೆ. ರಾಯ, ನಾ ಶೂರನಲ್ಲೆಂದು ತಿಳೀಬ್ಯಾಡ. ನನಗೆ ಶೂರ ಸಾರಥಿ ಆದರೆ ಪಾಂಡವರ ಸೇನಿನೆಲ್ಲ ಮುರದು ಬಿಸ್ಟೀನು' ಎಂದು ಎರಡು ಭುಜಗಳು ಚಪ್ಪರಿಸಿ ಕೊಳ್ಳತ ಮಾತನಾಡಥಾನೆ. 'ನನ್ನಂಥ ಶೂರ, ಅರ್ಜುನನ ಕೈಯ ಸೋಲಬೇಕೆ! ಸೋಲು ಗೆಲವು ಉಂಟಾದದ್ದು. ಎಲೈ ಅರಸೇ ಚಿಂತಿ ಮಾಡಬ್ಯಾಡ. ನನಗೆ ಒಬ್ಬ ಸಾರಥಿಯನ್ನು ಮಾಡಿಕೊಡು. ನನ್ನ ಶೂರತ್ವ ವಿಚಾರ ಮಾಡು. ನಾಳೆ ಬೆಳಿಗ್ಗೆ ಅರ್ಜುನನ್ನ ಸೋಲಿಸ್ತೀನಿ. ದಾರಿಂದಲೂ ಛೇದಿಸಲಾಗದಂಥ ದಿವ್ಯ ರಥವದೆ. ಪರಶುರಾಮ ಕೊಟ್ಟಂಥ ಅಭೇದ್ಯ ಧನಸ್ಸು ಅದೆ. ಪರಶುರಾಮದೇವರು ಕಲಿಸಿದಂಥ ವಿದ್ಯ ನನ್ನಲ್ಲದೆ. ನಾನಂತೂ ಶೂರ. ನನಗೆ ಪ್ರಬಲ ಸಾರಥಿ ಇಲ್ಲ. ಕೃಷ್ಣನ

ಸದೃಶ ಸಾರಥಿ ನಮ್ಮ ಸೈನ್ಯದೊಳಗೆ ದಾಗೂ ಇಲ್ಲ. ನಮ್ಮ ಮುಂದೀ ಒಳಗೆ ಸಾರಥ್ಯಕರ್ಮ ಮಾಡಲಿಕ್ಕೆ ಪ್ರಬಲ, ಶಲ್ಯನಿದ್ದಾನೆ. ಶೂರ ಶಲ್ಯನ ಕರಸಿ ನನಗೆ ಸಾರಥಿ ಮಾಡಿಕೊಟ್ಟು, ನನ್ನ ಶೂರತ್ವ ಪರೀಕ್ಷ ಮಾಡು.' ಹೀಂಗಂತ ಕರ್ಣ ಅಂದನು.

ದುರ್ಯೋಧನ ಶಲ್ಯನ ಕರಸಿ, ಬಹಳ ನಮ್ರಭಾವದಿಂದ, ಕರ್ಣನ ಸಾರಥಿ ಆಗಬೇಕೆಂದು ಶಲ್ಯನ್ನ ಬೇಡಿಕೊಳ್ಳಲಾಗಿ, 'ನಾ ರಾಜಾಧಿರಾಜ ದೊಡ್ಡವ, ನಿನ್ನ ಪ್ರೀತಿಗೋಸ್ಕರ ಸೋದರಳಿಯಂದರಿಗೆ ಸಹಾಯನಾಗದೆ ನಿನ್ನ ಸಮೀಪಕ್ಕೆ ಬಂದರೆ, ಸೂತಜಾತಿ ಕರ್ಣಗೆ ಸಾರಥಿ ಆಗೆಂದು ಹ್ಯಾಂಗೆ ಮಾತನಾಡಿದಿ! ಕರ್ಣನಂಥವರು ನನಗೆ ಸಾರಥಿ ಆಗಬೇಕು. ನನ್ನಂಥವನ್ನ ಸಾರಥಿ ಆಗಬೇಕೆಂಬೋ ನಿಂದಿತವಚನ, ನಿನ್ನ ಮುಖದಲ್ಲಿ ಹ್ಯಾಂಗೆ ಬಂತು! ಕರ್ಣನಂಥ ಭೃತ್ಯರು ನನ್ನ ಸಮೀಪದಲ್ಲಿ ಇದ್ದಾರೆ. ಕುಲದಲ್ಲಿ ಶುದ್ಧನಲ್ಲ, ಸೂತಜಾತಿ ಕರ್ಣನ ಸಾರಥಿಕರ್ಮ ನಾ ಮಾಡಬೇಕೆ! ನನಗೆ ತಕ್ಕ ಮಾತು ಆಡಲಿಲ್ಲ, ನೀಚನ ಸೇವಿ ನನಗ ಹ್ಯಾಂಗೆ ಹೇಳದಿ!' ಎಂದು ನಿಂದಾವಚನಗಳಾಡಿದ. ಶಲ್ಯ ತನಗೆ ಏನು ನಿಂದಾವಚನ ಆಡಿದರೂ, ದುರ್ಯೋಧನ ಕೋಪಕ್ಕೆ ಬಾರದೆ, ಬಹಳ ನಮ್ರಭಾವದಿಂದ ಶಲ್ಯನ್ನ ಸಮಾಧಾನ ಮಾಡಿದ್ದಾನೆ. 'ರಥಿಕನ ನೋಡಲಿಕ್ಕೆ ಸಾರಥಿ ಬಹಳ ದೊಡ್ಡವ, ಅರ್ಜುನನ ನೋಡಲಿಕ್ಕೆ ಕೃಷ್ಣ ನೀಚನಲ್ಲ. ಅಂಥಾ ಕೃಷ್ಣ ಫಲ್ಗುಣಗೆ ಸಾರಥಿ ಆಗಿದ್ದಾನೋ ಇಲ್ಲವೋ? ಸಾರಥಿಯಲ್ಲಿ ಮುಖ್ಯ, ಧೈರ್ಯ ಚಾತುರ್ಯಜ್ಞಾನ ಇರಬೇಕು. ನಿನ್ನಲ್ಲಿ ಸಕಲ ಗುಣಗಳೂ ಅವೆ. ಕರ್ಣನಕಿಂತ ನೀ ದೊಡ್ಡವ. ತ್ರಿಪುರಸಂಹಾರಕಾಲಕ್ಕೆ, ಬ್ರಹ್ಮದೇವರ ನೋಡಲಿಕ್ಕೆ ರುದ್ರ ನೀಚನಾದರೂ, ಮಹಾರುದ್ರಗೆ ಬ್ರಹ್ಮದೇವರು ಸಾರಥಿಕರ್ಮ ಮಾಡ್ಯಾನೆ.' ಈ ಪ್ರಕಾರ ಬಹು ದೃಷ್ಟಾಂತಗಳ ಕೊಟ್ಟು, ದುರ್ಯೋಧನ ಶಲ್ಯನ್ನ ಬಹಳ ಬೇಡಿಕೊಂಡು ಸಮಾಧಾನ ಮಾಡಲಾಗಿ, ಶಲ್ಯ ತಾ ದೊಡ್ಡವನೆಂದು ತಿಳದು, ಸಮಸ್ತರ ಕೈಯ ಹೊಗಳಿಸಿಕೊಂಡು, ಕರ್ಣನ ಸಾರಥ್ಯಕರ್ಮ ಮಾಡಲಿಕ್ಕೆ ಅಂಗೀಕಾರ ಮಾಡಿದನು.

ಕರ್ಣ ಶಲ್ಯಗೆ ಅಂದ, 'ಶೀಘ್ರ ಅರ್ಜುನನ ಎದುರಿಗೆ ರಥ ನಡಸಬೇಕು. ನಡಸಿದ ಪಕ್ಷವೇ ನಿನ್ನ ಅಭೀಷ್ಟ ನಾನು ಮಾಡಿಕೊಟ್ಟೀನು.' ಹೀಂಗೆಂದು ಶಲ್ಯಗೆ ಕರ್ಣ ಅನಲಿಕ್ಕೆ, ಶಲ್ಯ ಮಾತನಾಡಿದ. 'ಎಲೋ ಕರ್ಣ ನಾನಂತು ರಥ ನಡಿಸೇನು. ಸಾಯಲಿಕ್ಕೆ ಹೋಗಬೇಕಾದರೆ ಅರ್ಜುನನ ಎದುರಿಗೆ ನಡಿ. ಅರ್ಜುನನ ಪರಾಕ್ರಮ ನೀ ಕಡಿಗೆ ಕೇಳಿ ಕಂಡಿದಿ. ದೇವೇಂದ್ರಗೇ ಮಣಿದು ಬರತಿದ್ದಿಲ್ಲ! ಅಂಥಾ ನಿವಾತಕವಚರ, ಪೌಲೋಮ-ಕಾಲಕೇಯರ ಕೊಂದ. ದೇವೇಂದ್ರನ ಲೆಕ್ಕಿಸದೆ, ಖಾಂಡವವನ ದಹನ ಮಾಡಿ, ಅಗ್ನಿಗೆ ತುಷ್ಟಿ ಬಡಿಸಿದ. ಶರಪಂಜರ ಹನ್ನೆರಡು ಯೋಜನ ಮುನೀ ಕಟ್ಟಿ, ಸಮಗ್ರ ಖಾಂಡವವನ ದಹನ ಮಾಡ್ಯಾನೆ.

ಅರ್ಜುನ ವೀರ, ಪರಾಕ್ರಮಿ ಇದ್ದಾನೆ, ದೊಡ್ಡ ಶೂರ. ಅಂಥಾ ಅರ್ಜುನನ್ನ ಮನುಷ್ಯನಾದವ ಗೆಲ್ಲಲಾರ. ನಿಮಗೇ ಪ್ರತ್ಯಕ್ಷವಾಗೇದೆ, ಉತ್ತರ ಗೋಗ್ರಹಣದಲ್ಲಿ, ಷಡ್ರಥಿಕರ ಒಬ್ಬನೇ ಸೋಲಿಸಿ, ಪೃಷ್ಠದ ಮ್ಯಾಲಿನ ವಸ್ತ್ರನೆಲ್ಲಾ ಸೆಳಕೊಂಡು-ಹೋದ! ವಿರಾಟನಗರದಿಂದ ಸೋತು ಬಂದೀರಿ. ಗಂಧರ್ವನ ಕೈಯಿಂದ ದುರ್ಯೋಧನನ್ನ ಬಿಡಿಸ್ಯಾನೆ. ಅರ್ಜುನ ಹಂಸಪಕ್ಷಿ, ನೀ ಕಾಗೀಸದೃಶ. ವ್ಯರ್ಥ ಸಾಯಬ್ಯಾಡ. ಅರ್ಧರಥಿಕನೆಂದು ಭೀಷ್ಮನ ಕೈಯ ವ್ಯರ್ಥ ನಿಂದಿಸಿಕೊಂಡೀಯ! ಸಿಂಹಗೆ ನರಿಗೆ ಯುದ್ಧ ಹ್ಯಾಂಗೆ ಕೂಡೀತು! ಶೀಘ್ರ ಸಾಯಬೇಕಾದರೆ, ಅರ್ಜುನನ ಎದುರಿಗೆ ರಥ ನಡಿಸ್ಯೇನು. ಯಮದೇವರ ದರ್ಶನಕ್ಕೆ ಹೋದೇನೆಂದರೆ, ಈಗಲೇ ರಥ ನಡಿಸ್ಯೇನು.' ಹೀಂಗೆಂದು ಶಲ್ಯ ಕರ್ಣಗೆ ನಿಂದಾವಚನಗಳಾಡಿದನು.

ಹೀಂಗೆ ನಿಂದಾವಚನಗಳಾಡಲಿಕ್ಕೆ ಕರ್ಣ ಕೋಪಾವಿಷ್ಟನಾಗಿ, ಶಲ್ಯನ್ನ ನಿಂದಿಸಲಿಕ್ಕೆ ತಾ ಶಕ್ತನಲ್ಲಾದಕಾರಣ, ಶಲ್ಯನ ದೇಶಕ್ಕೆ ನಿಂದಿಸಹೊಕ್ಕ. 'ನಿಮ್ಮ ದೇಶದವರು ನಿಂತು ಮೂತ್ರ ಹೊಯಿಥಾರೆ. ನಿಂತು ಶೌಚ ಮಾಡಥಾರೆ. ನೀವು ಅಪವಿತ್ರ ದೇಶದವರು. ಒಳ್ಳೇ ಸ್ತುತಿ ಮಾಡಲಿಕ್ಕೆ ಬರಬೇಕಲ್ಲ!' ಹೀಂಗೆಂದು ಕರ್ಣ ನಿಂದಾವಚನ ಮಾತನಾಡಲಾಗಿ, 'ಎಲೋ ಕರ್ಣ, ದೇಶಾಚಾರ ಉಂಟು. ದೇಶದೇಶದಲ್ಲಿ ಒಳ್ಳೇವರೂ ಕೆಟ್ಟವರೂ ಉಂಟು.' ಈ ಪ್ರಕಾರ ಶಲ್ಯ ಧರ್ಮ-ರಾಯನ ಹಿತದಗೋಸ್ಕರ, ಕರ್ಣಗೆ ನಿಂದಾವಚನಗಳಾಡಿ, ಸ್ಪರ್ಧಿ ಹುಟ್ಟಿಸಿಕೊಟ್ಟ. ಶಲ್ಯ ಪ್ರಬಲನಿದ್ದಾನೆಂದು ತಿಳದು ಕರ್ಣ, ಶಲ್ಯನ್ನ ಅನುಸರಿಸಿ ನಿಂದಾವಚನಕ್ಕೆ ಪ್ರತಿ ಉತ್ತರ ನಡಸದೇ ಶಾಂತಿಯುಳ್ಳವನಾಗಿ, ಅರ್ಜುನನ ಎದುರಿಗೆ ಹೋಗಲಿಕ್ಕೆ, ಅಶ್ವತ್ಥಾಮ, ಕೃಪಾಚಾರ್ಯ, ದುರ್ಯೋಧನ ಮೊದಲಾದವರು, ಕರ್ಣನ ರಕ್ಷಿಸತಾ ಹಿಂಭಾಗದಲ್ಲಿ ಹೋಗತಿಹೋರು. ಭೀಮಸೇನ ಧೃಷ್ಟದ್ಯುಮ್ನ, ಸಾತ್ಯಕಿ ಮೊದಲಾದವರು ಅರ್ಜುನನ ರಕ್ಷಿಸತಾ ಬರತಿಹೋರು.

ಕರ್ಣ ತನ್ನ ಬಾಣಗಳಿಂದ ಪಾಂಡವರ ಸೇನಿ ಸೀಳತ, ಅರ್ಜುನನ ಬಿಟ್ಟು, ಧರ್ಮರಾಯನ ಸವೀಪಕ್ಕೆ ಹೋಗಿ, ಕೊರಳಿಗೆ ಬಿಲ್ಲುಹಾಕಿ ವ್ಯಥಿ ಬಡಸತಿಹ. ನಿಷ್ಠುರ ವಚನಗಳಾಡತಿಹ. ಧರ್ಮರಾಯನ ರಥ ಛೇದಿಸಿಬಿಟ್ಟ. 'ಹೇ ಧರ್ಮರಾಯ, ಕೃಷ್ಣಾರ್ಜುನರ ಸಹಾಯದಿಂದ ಬಹಳ ಗರ್ವತನ ನಿನಗೆ ಬಂದದೆ. ನಿನ್ನ ಕಣ್ಣ ಮುಂದೇ ಕೃಷ್ಣಾರ್ಜುನರ ಕೊಲ್ಲಥೀನಿ. ನಿನ್ನ ಸೊಕ್ಕು ಈ ಹೊತ್ತು ಮುರೀಥೀನಿ.' ಹೀಂಗೆ ನಿಂದಾವಚನದಿಂದ ರಾಯನ ಬಾಧಿಸತಿರಲಾಗಿ, ಭೀಮಸೇನ ದುರ್ಯೋಧನನ ರಥ ಧನುರ್ಬಾಣ ಛೇದಿಸಿ ನಿಂದಾವಚನದಿಂದ ಬಹಳ ದುಃಖಬಡಸ್ತಿಹ. ಇದನ್ನ ಶಲ್ಯ ಕಂಡು ಕರ್ಣಗೆ ಹೇಳಿದ, 'ದುರ್ಯೋಧನಗೆ ಏನು ಅವಸ್ಥಿ ಆಗೇದೆ ನೋಡು. ದುರ್ಯೋಧನಗೆ ಅತ್ಯಾವಸ್ಥಿ ಬಂದದೆ. ಅರಸು ಸತ್ತಮ್ಯಾಲೆ ಯುದ್ಧ ಯಾತಕ್ಕೆ ಬಂದೀತು! ಈಗ ಯಮದೇವರ ಮನಿಗೆ ಹೋಗೋ ಸಮಯ ಬಂದದೆ. ಶೀಘ್ರ

ಅರಸನ ರಕ್ಷಿಸು ನಡಿ' ಎನಲಿಕ್ಕೆ, ಕರ್ಣ, ಭೀಮಸೇನನ ನಿವಾರಿಸಬೇಕಾಗಿ ಭೀಮಸೇನನ ಎದುರಿಗೆ ನಡೆದನು.

ಭೀಮಸೇನ ಕೋಪಾವಿಷ್ಟನಾಗಿ, ಕೆಂಪುಕಣ್ಣು ಮಾಡಿಕೊಂಡು, ಧರ್ಮರಾಯನ ರಕ್ಷಣಾರ್ಥ ಸಾತ್ಯಕಿ ಧೃಷ್ಟದ್ಯುಮ್ನರನ್ನ ಕಳುಹಿಸಿಕೊಟ್ಟು, ಪ್ರಳಯಕಾಲದಲ್ಲಿ ನರಸಿಂಹನ ರೂಪ ಹ್ಯಾಂಗಿರತದೆ, ಹಾಂಗೆ ತೀಕ್ಷ್ಣರೂಪದಲ್ಲಿ, ತನ್ನ ಕೋಪದಿಂದ ಕಿಡಿಗಳ ಉದರಸ್ತಾ ನಿಂತನು. ಪ್ರಳಯಕಾಲದಲ್ಲಿ ಜಗತ್ತು ನುಂಗಿ ಕುಣಿದಾಡುವಂಥ ಮಹಾರುದ್ರನ ನುಂಗಲಿಕ್ಕೆ, ನರಸಿಂಹ ಹ್ಯಾಂಗೆ ಉದ್ಯುಕ್ತನಾಗಥಾನೋ, ಹಾಂಗೆ ಭೀಮಸೇನ ಕರ್ಣನ ಕೊಲ್ಲಲಿಕ್ಕೆ ಸನ್ನದ್ಧನಾಗಿ, ರಥದಿಂದ ಇಳದು ನಡೆಗಾಲಿಲಿ ಹೋಗುವಾಗ, ಈತನ ಅದ್ಭುತರೂಪ, ಕುರುಪಾಂಡವರ ಇತ್ತಂಡ ಸೇನಿ ಕಣ್ಣೀಲೆ ಕಂಡು ನೋಡಲಾರದೆ, ಚಾವುಕ ಚೆಲ್ಲಿ ಅಂಜಿ, ರಣರಂಗ ಬಿಟ್ಟು ಓಡಿಹೋಯಿತು. ರಣಭೂಮಿ ಹಾಳು ಬಿತ್ತು. ಕರ್ಣ ಬೆನ್ನುಕೊಟ್ಟು ಓಡಿದ್ದಿಲ್ಲ. ಭೀಮಸೇನ ತನ್ನ ಎದುರಿಗೆ ಬರಥಾನೆಂದು ಬಾಣಗಳು ಎಚ್ಚತಿಹ. ಕರ್ಣನ ಬಾಣ ಲೆಕ್ಕಿಸದೆ, 'ಕರ್ಣ ನಮ್ಮ ಸ್ವಾಮೀ ನಿಂದಾ ಮಾಡಿದ್ದಾನೆ. ಕರ್ಣನ ನಾಲಿಗಿ ಕಿತ್ತೇನು' ಎಂತ ಅವನ ರಥಮೊಳಗೆ ಏರಿಬರಲಿಕ್ಕೆ, ಶಲ್ಯ ಭೀಮಸೇನನ್ನ ಬೇಡಿಕೊಂಡ. 'ನಿನ್ನ ಅದ್ಭುತ ಪರಾಕ್ರಮ ನಾ ಕರ್ಣನ ಮುಂದೆ ಹೇಳಲಿಲ್ಲ. ಅರ್ಜುನನ ಶೂರತ್ವ ಕರ್ಣಗೆ ಹೇಳೀನಿ. ಕರ್ಣ ನನ್ನ ಮಾತು ಮನಸ್ಸಿಗೆ ತಾರದೇ, ಕೇಳದೇ ಯುದ್ಧಕ್ಕೆ ಬಂದಾನೆ. ನೀನಾದರೂ ನಿನ್ನ ಪ್ರತಿಜ್ಞೆ ಸತ್ಯ ಮಾಡೀ ಖರೆ, ಕರ್ಣನ ನಾಲಿಗಿ ಛೇದಿಸೋದು ನಿನಗೆ ಅಶಕ್ಯವಲ್ಲ. ಅರ್ಜುನನ ಪ್ರತಿಜ್ಞೆ ಸತ್ಯ ಮಾಡು. ಕರ್ಣನ ಬಿಟ್ಟುಕೊಡು' ಎಂದು ಬಹಳವಾಗಿ ಬೇಡಿ. ಕೊಳ್ಳಲಿಕ್ಕೆ, ಶಲ್ಯನ ಮಾತು ಲೆಕ್ಕಿಸವೆ, ಭೀಮಸೇನ ಮೇರಿದಪ್ಪಿ ಹರಹರದು ಬಾಹೋದು ಕಂಡು ಕರ್ಣ ಮೂರ್ಛೆಯಿಂದ ಬಿದ್ದಿದ್ದ, ಅಂಥಾ ಕರ್ಣನ ಕೊಂಡು ಬೆನ್ನುಕೊಟ್ಟು ಶಲ್ಯ ಓಡಿ ಬಂದ. ಭೀಮಸೇನನಿಂದ ಮೂರು ಅಕ್ಷೋಹಿಣಿ ಸೈನ್ಯ ಚಂಚಲಗೊಂಡಿತು.

ಅಶ್ವತ್ಥಾಮ ಪಾಂಡವರ ಸೇನಿನೆಲ್ಲ ಮರ್ದಿಸಿ, ನಕುಲ ಸಹದೇವ ಧರ್ಮರಾಯರ ರಥ ಛೇದಿಸಿಬಿಟ್ಟ. ಪುನಃ ಪಾಂಡವರ ಸೇನಿನೆಲ್ಲ ದುಃಖ ಬಡಸ್ತ, ಅರಗುಡಸ್ತ ಅಶ್ವತ್ಥಾಮ ಬರಲಾಗಿ, ಧರ್ಮರಾಯ ಅಂದನು. 'ನಾವು ಕ್ಷತ್ರಿಯರು ಯುದ್ಧ ಮಾಡುವದು ನಮಗೆ ನೀತವದೆ. ನೀ ಬ್ರಾಹ್ಮಣ, ನಮ್ಮ ಗುರುಪುತ್ರನಾಗಿ, ಏನುಕಾರಣ ನಮ್ಮ ಸೇನಿ ಸಂಹರಿಸತಿದೀ? ಇಂಥಾ ಅಧರ್ಮ ಕೊಲಿಗಡಕತನ ಮಾಡಬ್ಯಾಡ.' ಹೀಂಗಂತ ಧರ್ಮರಾಯ ಬೇಡಿಕೊಳ್ಳಲಾಗಿ, ಅಶ್ವತ್ಥಾಮ ನಕ್ಕು, ರಾಯನ ಬಿಟ್ಟುಕೊಟ್ಟು ಕೃಷ್ಣಾರ್ಜುನರ ಎದುರಿಗೆ ಹೋಗಿ, ಅರ್ಜುನನ ಕೂಡ ಯುದ್ಧ ಮಾಡಿದ್ದಾನೆ. 'ಎಲೋ ಗುರುದ್ರೋಹಿ, ನನ್ನೆದುರಿಗೆ ಯುದ್ಧಕ್ಕೆ ಬಾ'

ಎಂದು, ಹೂಂಕಾರ ಮಾಡಿ ಕರಿಯಲಿಕ್ಕೆ, ತಾ ಕ್ಷತ್ರಿಯ, ಯುದ್ಧಕ್ಕೆ ಕರೆದರೆ ಒಲ್ಲೆ ನೆನಬಾರದು. ಬರಥೀನೆಂಬ ಧನಸ್ಸು ಮ್ಯಾಲಕ್ಕೆ ಎತ್ತಿದ. ಗಾಂಡೀವ ಧನಸ್ಸು ಹೆದೆಗೂಡಿಸಿ, ಫಲ್ಗುಣ ಕೃಷ್ಣನ ಕೂಡ ಮಾತನಾಡಥಾನೆ. 'ಎಲೈ ಸ್ವಾಮಿ, ಸಂಶಪ್ತಕರು ನನ್ನನ್ನು ಯುದ್ಧದಿಂದ ಸುತ್ತುಗಟ್ಟಿದ್ದಾರೆ. ಅಶ್ವತ್ಥಾಮನಾದರೂ ಯುದ್ಧಕ್ಕೆ ಕರೀಥಾನೆ. ದಾರ ಕೂಡ ಯುದ್ಧ ಮಾಡಲಿ?' ಎಂದು ಕೇಳಲಿಕ್ಕೆ, ಶ್ರೀಹರಿ ಅಶ್ವತ್ಥಾಮನ ಎದುರಿಗೆ ರಥ ನಡಸಿದನು. ಅಸ್ತ್ರಜ್ಞರೊಳಗೆ ಅಶ್ವತ್ಥಾಮ-ಅರ್ಜುನರು ಬಹಳ ದೊಡ್ಡವರು. ಯುದ್ಧ ನೋಡಲು ರೋಮಾಂಚವಾಗಬೇಕು. ದ್ರೌಣಿ-ಇಂದ್ರಾತ್ಮಜರು ಬಾಣಗಳಿಂದ ದಿಕ್ಕುಗಳನ್ನೆಲ್ಲ ವ್ಯಾಪಿಸಿದರು. ಸೂರ್ಯನ ರಶ್ಮಿ ಕಾಣಥಾಂಗೆ ಗಾಢಾಂಧಕಾರ ಬಿತ್ತು. ಅಶ್ವತ್ಥಾಮ ಅರ್ಜುನನ ಕುದರೀ ರೋಮರೋಮಗಳಿಗೆ ಬಾಣ ಪ್ರೋಣಿಸಿ ಬಿಟ್ಟ. ಅರ್ಜುನನ ರೋಮರೋಮಕ್ಕೆ, ಮರ್ಮಸ್ಥಳಕ್ಕೆ ಬಾಣಗಳು ಎಸೆದು, ಮರ್ಮಸ್ಥಳ ಛೇದಿಸಿ, ಬಹಳ ದುಃಖಬಡಿಸ-ಹೊಕ್ಕ. ಧ್ವಜಸ್ತಂಭಕ್ಕೆ, ರಥಕ್ಕೆ ಬಾಣಗಳ ಪಂಜರ ಕಟ್ಟಿ ಬಿಟ್ಟ. ಅರ್ಜುನ ಅಲ್ಲಾಡಲಿಕ್ಕೆ ಶಕ್ಯವಿಲ್ಲದೆ ಮೂರ್ಛೆಯಿಂದ ಬೀಳಲಿಕ್ಕೆ, ಶ್ರೀಕೃಷ್ಣ ಅರ್ಜುನನ ಅಪ್ಪಿಕೊಂಡು ಎಚ್ಚರಿಸಿದನು.

ಅರ್ಜುನ ತನ್ನ ಸಾಮರ್ಥಿಯಿಂದ ಬಾಣಪ್ರಯೋಗ ಮಾಡಲಿಕ್ಕೆ, ಅಶ್ವತ್ಥಾಮ ಪುನಃ ತನ್ನ ಅಸ್ತ್ರದಿಂದ ಕಿರೀಟಿ ಹೆದೆ ಛೇದಿಸಿಬಿಟ್ಟ. ಅರ್ಜುನ ಬಿಲ್ಲಿಗೆ ಮತ್ತೊಂದು ಹೆದೆಗೂಡಿಸಿ, ಖುರವಾದಂಥ ಬಾಣಗಳಿಂದ ಅಶ್ವತ್ಥಾಮನ ಸಾರಥೀನ ಕೊಂದು-ಬಿಟ್ಟನು. ಸಾರಥಿ ಇಲ್ಲದ್ದರಿಂದ ಆ ಕರ್ಮ ತಾನೇ ಮಾಡತ ಬಾಣದಿಂದ ಅರ್ಜುನನಿಗೆ ಪಂಜರ ಕಟ್ಟಿ ಬಿಟ್ಟ. ಪುನಃ ವಾಸುದೇವ ಅರ್ಜುನನ ಅಪ್ಪಿಕೊಂಡು, ಅರ್ಜುನನ ಎಚ್ಚರಿಸಿದನು. ಅರ್ಜುನಗೆ ಅಶ್ವತ್ಥಾಮಗೆ ಸಮಯುದ್ಧವಾಯಿತು. ಅಶ್ವತ್ಥಾಮನ ಕುದರಿಗಳ ರಶ್ಮಿ ಶ್ವೇತವಾಹನ ಛೇದಿಸಲಿಕ್ಕೆ, ಕುದರಿಗಳು ಬಿಡಿಸಿ-ಕೊಂಡು ದೂರ ಓಡಿಹೋದವು. ಗುರುಪುತ್ರ ತಾನೇ ಹೋಗಿ ಕುದರಿಗಳ ಹಿಡತಂದು ರಥಕ್ಕೆ ಕಟ್ಟಿ, 'ಅರ್ಜುನಗೆ ಇನ್ನೇನು ಪ್ರತೀಕಾರ ಮಾಡಲಿ' ಎಂದು ಎರಡು ಬಾಣಗಳಿಂದ ಭೀಭತ್ಸುವನ್ನು ಮೂರ್ಛಾಗತನ ಮಾಡಿದ. ತಾ ಸಮರ್ಥನಾದರೂ, 'ಅರ್ಜುನಗೆ ಕೇಶವ ಸಾರಥಿ ಇದ್ದಾನೆ. ಅವಧ್ಯ ಕುದರಿಗಳು, ಅಭೇದ್ಯ ರಥ, ಅಛೇದ್ಯ ಗಾಂಡೀವ ಧನುಸ್ಸು, ಧ್ವಜಸ್ತಂಭದಲ್ಲಿ ಹನುಮುಂತನಿದ್ದಾನೆ, ಇವೆಲ್ಲ ಅರ್ಜುನಗೆ ಅವೆ. ಇವುಗಳನ್ನೆಲ್ಲ ಛೇದಿಸಲಿಕ್ಕೆ ನಾ ಶಕ್ತನಲ್ಲ, ಫಲ್ಗುಣನ ಎದುರಿಗೆ ನಿಂದರಲಾರೆನು' ಎಂದು ಅಶ್ವತ್ಥಾಮ ತಿರಗಿ ಹೋದನು.

ಅಶ್ವತ್ಥಾಮ ಪಾಂಡವರ ಸೇನಿ ಒಳಹೊಕ್ಕು, ಅವರ ಪಕ್ಷಪಾತಿ, ಪಾಂಡ್ಯ-ದೇಶದ ಅರಸು ವೀರಸೇನರಾಯನ ಕೂಡ ಭಯಂಕರ ಯುದ್ಧ ಮಾಡಿದ. ವೀರಸೇನರಾಯ, ಆಯುಧಗಳು ತನಗೆ ರಣರಂಗದಲ್ಲಿ ಬೇಕೆಂದು, ಎಂಟುನೂರು

ಬಂಡಿಗಳ ಮ್ಯಾಲೆ ಆಯುಧ ಹೊರಿಸಿಕೊಂಡು ಬಂದಿಹ. ಅವು ಅಷ್ಟೂ ಅಶ್ವತ್ಥಾಮನ ಮ್ಯಾಲೆ ಈಡ್ಯಾಡಲಿಕ್ಕೆ, ಅಶ್ವತ್ಥಾಮ ವೀರಸೇನರಾಯನ ಅಷ್ಟೂ ಬಾಣಗಳು ಛೇದಿಸಿ, ಆತನ್ನ ವಿರಥನ್ನ ಮಾಡಿ, ಕುಂಡಲಸಹಿತ ಶಿರಚ್ಛೇದನ ಮಾಡಿ, ಭೂತಳದಲ್ಲಿ ಕೆಡಹಾಕಿದ. ಅರ್ಜುನ ಕುರುಸೇನಿ ಹೊಕ್ಕು, ಮಗಧದೇಶದ ಅರಸಿನ ಮಗನ್ನ ಕೊಂದು ಬಿಟ್ಟನು. ಗುರುಪುತ್ರ ಪಾಂಡವರ ಸೇನಿ ಕದಡತ ಹೋಗಲಿಕ್ಕೆ, ಧೃಷ್ಟದ್ಯುಮ್ನ ಸೇನಾಪತಿ ಎದುರಿಗೆ ಬಂದನು. 'ಎಲೋ ಗುರು-ದ್ರೋಹಿ, ನಮ್ಮ ತಂದೀನ್ನ ನೀ ಕೊಂದೀ. ಈ ಹೊತ್ತು ನಿನ್ನ ಕೊಲ್ಲಥೀನಿ' ಎಂದು ನಿಷ್ಠುರವಚನಗಳ ಆಡಲಿಕ್ಕೆ, 'ನಿಮ್ಮ ತಂದಿ ದ್ರೋಣನ್ನ ಇದೇ ಖಡ್ಗದಿಂದ ಕೊಂದಿದ್ದೀನಿ. ನಿನ್ನಾದರೂ ಇದರಿಂದಲೇ ಕೊಲ್ಲಥೀನಿ' ಎಂದು ಖಡ್ಗ ಎತ್ತಲಿಕ್ಕೆ, ಅಶ್ವತ್ಥಾಮ ಧೃಷ್ಟದ್ಯುಮ್ನನ ರಥ ಛೇದಿಸಿ, ವಿನಾಶದಗೋಸ್ಕರ ಧೃಷ್ಟದ್ಯುಮ್ನನ ಮ್ಯಾಲೆ ಬಾಣಗಳ ಎಚ್ಚಲಿಕ್ಕೆ, ಬಾಣಗಳಿಂದ ಏನೂ ಆಗಲಿಲ್ಲ. ಖಡ್ಗ ಉಚ್ಚಿಕೊಂಡು ಕಡದೇನೆಂದು ಬರಲಿಕ್ಕೆ, ಧೃಷ್ಟದ್ಯುಮ್ನನ ತೊಗಲು ಸಹ ಹರೀಲಿಲ್ಲ. ಅಸ್ತ್ರಗಳು ಮಂತ್ರಿಸಿ ಮಂತ್ರಿಸಿ ಸೇನಾಪತಿ ಮ್ಯಾಲೆ ಪ್ರಯೋಗ ಮಾಡಲಿಕ್ಕೆ, ಅಶ್ವತ್ಥಾಮನ ಅಸ್ತ್ರಗಳು ವ್ಯರ್ಥವಾಗತಿಹೋವು. ಅವನ ಬಾಣಗಳಿಂದ ಖಡ್ಗದಿಂದ ಧೃಷ್ಟದ್ಯುಮ್ನನ ಮರಣವಾಗಲಿಲ್ಲ. ಅಶ್ವತ್ಥಾಮನ ಯತ್ನ ಏನೂ ನಡೇಧಾಂಗಾಯಿತು. ಕೃಷ್ಣ ಅರ್ಜುನಗೆ ಅಂದ, 'ಸೇನಾಪತಿ ಧೃಷ್ಟದ್ಯುಮ್ನ ಅಶ್ವತ್ಥಾಮನಿಂದ ಬಹಳ ಅವಸ್ಥಿ ಬಡಥಾನೆ. ದೃಷ್ಟೀಲಿ ನೋಡು' ಎನಲಿಕ್ಕೆ, ಸೇನಾಪತಿಯನ್ನು ಬಿಡಿಸಬೇಕಾಗಿ ಅರ್ಜುನ ಅತಿ ತ್ವರದಿಂದಲೂ, ಭೀಮಸೇನ ಮಹಾವೇಗದಿಂದಲೂ ಸೇನಾಪತಿ ಸಮೀಪಕ್ಕೆ ಬಂದರು. ಭೀಮಾರ್ಜುನರು ಬಾಣಗಳ ಎಚ್ಚತ ಬರಲಿಕ್ಕೆ ಅಶ್ವತ್ಥಾಮ ಬಿಟ್ಟು ಓಡಿಹೋದ.

ಧೃಷ್ಟದ್ಯುಮ್ನಗೆ, ಕೃತವರ್ಮಗೆ ಯುದ್ಧ ಹತ್ತಿತು. ಸೇನಾಪತಿ ಕೃತವರ್ಮನ ರಥ ಛೇದಿಸಲಿಕ್ಕೆ, ಕೃತವರ್ಮ ವಿರಥನಾದ. ಕೃಪಾಚಾರ್ಯ ತನ್ನ ರಥದೊಳಗೆ ಕೃತವರ್ಮನ ಹಾಕಿಕೊಂಡು ತಿರಗಿಹೋದ. ದುರ್ಯೋಧನ ಮಾದ್ರೀ-ಪುತ್ರರ ಕೂಡ ಯುದ್ಧ ಮಾಡಿ, ನಕುಲ ಸಹದೇವರ ರಥ ಛೇದಿಸಲಿಕ್ಕೆ, ಧರ್ಮರಾಯ ಬಂದು, ತಮ್ಮಂದರನ್ನ ರಥದೊಳಗೆ ಕೂಡ್ರಿಸಿಕೊಂಡು, ಅರಸ ಧರ್ಮರಾಯನೇ ಯುದ್ಧ ಮಾಡಹೊಕ್ಕ. ಅರಸು ಅರಸರಿಗೆ ಯುದ್ಧ ಹತ್ತಿತು. ಅಷ್ಟರೊಳು ದುರ್ಯೋಧನಗೆ ಕರ್ಣ ಸಹಾಯನಾಗಿ ಬರಲಿಕ್ಕೆ, ಭೀಮಸೇನ ಕರ್ಣನ ಕೂಡ ಮಹಾ ರಭಸದಿಂದ ಯುದ್ಧ ಮಾಡಿ, ಯುದ್ಧಕಾಲದಲ್ಲಿ ಕರ್ಣನ ಮಗ ಸುಷೇಣನ್ನ ಭೀಮಸೇನ ಕೊಂದನು. ಮಗ ಸಾಯಲಿಕ್ಕೆ, ಕರ್ಣ, ಭೀಮಸೇನನ ಬಿಟ್ಟು ಧರ್ಮರಾಯನ ಸಮ್ಮುಖಕ್ಕೆ ಬಂದನು. ದುರ್ಯೋಧನನ ಎದುರಿಗೆ ಭೀಮಸೇನ ಬಂದು, ದುರ್ಯೋಧನನ ರಥ ಛೇದಿಸಿಬಿಟ್ಟ. ಮತ್ತೆ ಒಂದು ದಿವ್ಯ ರಥ

ಏರಿಕೊಂಡು, ಧರ್ಮರಾಯನ ಸಮೀಪಕ್ಕೆ ಬಂದ. ಧರ್ಮರಾಯ ದ್ರೌಪದೀ ಐದು ಮಂದೀ ಮಕ್ಕಳ ಸಹವಾಗಿ, ಸಾತ್ಯಕಿಯಿಂದ ಯುಕ್ತನಾಗಿ, ಬಾಣಗಳು ವೈರೀ ವ್ಯೂಹಲಿ ಎಚ್ಚತಾ ನಿಂತನು. ಅಷ್ಟರೊಳಗೆ ದುರ್ಯೋಧನಗೆ ಕರ್ಣ ಸಹಾಯನಾಗಿ ಬಂದು, ರಾಯನ ರಥ, ಕುದರಿಗಳು ಸಾಯಕಕುಟ್ಟಿದನು. ಮಾದ್ರೀಪುತ್ರರ ರಥ ಛೇದಿಸಿಹೋಗಿತ್ತು. ಧರ್ಮರಾಯ ನಕುಲ ಸಹದೇವರು ಒಂದೇ ರಥದ ವ್ಯೂಹಲಿ ಕುಳಿತು, ಬಾಣಗಳಿಂದ ಬಹಳ ಪೀಡಿತರಾದರು. ರಾಯು ಬಹಳ ದುಃಖಬಡತಿಹ ಇಷ್ಟಾಗಲಿಕ್ಕೆ ಭೀಮಸೇನ ದುರ್ಯೋಧನನ ಸಮೀಪಕ್ಕೆ ಬಂದು, ಮರ್ಮಸ್ಥಳಕ್ಕೆ ಬಾಣಗಳು ಪೋಣಿಸಿ ವ್ಯಥಿ ಬಡಸಲಿಕ್ಕೆ, ಅರಸಿನ ರಕ್ಷಣಾರ್ಥ, ಧರ್ಮರಾಯನ ಬಾಧಿಸೋದು ಬಿಟ್ಟು. ದುರ್ಯೋಧನನ ಸಮೀಪಕ್ಕೆ ಕರ್ಣ ಬಂದ. ಯುಧಿಷ್ಠಿರ ಕರ್ಣನ ಬಾಣಗಳಿಂದ ಪೀಡಿತನಾಗಿ, ರಣರಂಗದಲ್ಲಿ ನಿಂದರಲಾರದೆ ತನ್ನ ಶಿಬಿರಕ್ಕೆ ಹೋದ. ದುರ್ಯೋಧನ ಭೀಮಸೇನನಿಂದ ಪೀಡಿತನಾಗಿರಲಿಕ್ಕೆ, ಕೃಪಾಚಾರ್ಯ ತನ್ನ ರಥದೊಳಗೆ ದುರ್ಯೋಧನನ ಹಾಕಿಕೊಂಡು ತಿರಗಿಹೋದ.

ಅಶ್ವತ್ಥಾಮ, ಈ ಕರ್ಣ ಉಭಯರೂ, ತಮ್ಮ ಬಾಣಗಳಿಂದ ಪಾಂಚಾಲ ರನ್ನೆಲ್ಲ ಮರ್ದಿಸಹೊಕ್ಕರು. ಅರ್ಜುನ ಧರ್ಮರಾಯನ ಧ್ವಜ, ಪತಾಕ ಕಾಣದೇ, ಅರಸು ಎತ್ತಹೋದ, ರಾಯಗೆ ಏನು ಅವಸ್ಥಿ ಆಗಿದ್ದೀತೋ ಎಂದು ನೋಡ-ಲೋಸುಗ ಶ್ರೀಕೃಷ್ಣನ ಕೂಡ ಮಾತನಾಡಲಿಕ್ಕೆ, ಕೃಷ್ಣಾರ್ಜುನರು ಧರ್ಮರಾಯನ ಸಮೀಪಕ್ಕೆ ಹೋಗಥಾರೆ. ಅಷ್ಟರಲ್ಲಿ ದುಶ್ಶಾಸನ, ಅಶ್ವತ್ಥಾಮ ಉಭಯರೂ ಬಂದು ಬಾಣಪ್ರಯೋಗ ಮಾಡಲಿಕ್ಕೆ, ದುಶ್ಶಾಸನನ ಬಾಣದಿಂದ, ಧೃಷ್ಟದ್ಯುಮ್ನ ಸ್ಥಿವಿತನಾದ. ಅಶ್ವತ್ಥಾಮ ತನ್ನ ಬಾಣದಿಂದ ಅರ್ಜುನಗೆ ಶರಪಂಜರ ಕಟ್ಟಿಬಿಟ್ಟ. ಅರ್ಜುನನ ಧನುಸ್ಸು ಗುರುಪುತ್ರ ಛೇದಿಸಲಿಕ್ಕೆ, ಕೇಶವ ಫಲ್ಗುಣನ ಅಪ್ಪಿಕೊಂಡು ಎಚ್ಚರಿಸಿದನು. ಅರ್ಜುನ ಅಶ್ವತ್ಥಾಮನ ಸಾರಥಿಯನ್ನು ಸಾಯಕೊಟ್ಟು, ಕುದರಿಗಳ ರಶ್ಮಿ ಕಡದು ಓಡಿಸಿಬಿಟ್ಟ. ಕರ್ಣ-ಧೃಷ್ಟದ್ಯುಮ್ನರಿಗೆ ಭಯಂಕರ ಯುದ್ಧ ಹತ್ತಿತು. ಸಾತ್ಯಕಿ, ದುರ್ಯೋಧನಗೆ ಅತಿ ವಿಚಿತ್ರ ಯುದ್ಧವಾಯಿತು. ಇತ್ತಂಡ ಯುದ್ಧದಲ್ಲಿ ಕುರುಪಾಂಡವರ ಸೇನಿ ಹತವಾಗತಿಹೋದು. ಭೀಮಸೇನ ಸಿಂಹನಾದ ಮಾಡತ, ಕೌರವಸೇನಿ ನಡಗಸ್ತ ಹೋಗಲಿಕ್ಕೆ, ಮದ್ದಾನಿ ಸಿಕ್ಕ ಸರೋವರ ಹ್ಯಾಂಗೆ ಕದಡತದೆ, ಹಾಂಗೆ ಕುರುಸೇನಿ ಹತ್ತೂದಿಕ್ಕಿಗೆ ಓಡಿ-ಹೋಯಿತು. ಪಾಂಡವರ ಸೇನಿ, ಮೊದಲಿಗೆ ಓಡಿಹೋದಂಥಾದ್ದು ಒಂದು ಕಡೀಲಿ ಕೂಡ ಬಿತ್ತು.

ಇಷ್ಟಾಗಲಿಕ್ಕೆ ಪಾಂಚಾಲರು ಭೀಮಸೇನನ ಆಶ್ರಯಿಸಿ, ಕೌರವಸೇನಿ ಸಂಹಾರ ಮಾಡತ ಇರಲಾಗಿ, ಕರ್ಣಗೆ ಬಹಳ ಸಿಟ್ಟು ಬಂತು. ತಮ್ಮ ಸೇನಿಗೆ ಉಪದ್ರವ ಕೊಡಥಾರೆಂದು, ಕೋಪದಿಂದ ಜ್ವಲಸ್ತ, ಭಾರ್ಗವಾಸ್ತ್ರ ಅಭಿಮಂತ್ರಿಸಿ

ಪಾಂಡವರ ಸೇನಿ ವ್ಯಾಳಿ ಈಡ್ಯಾಡಿದನು. ಭಾರ್ಗವಾಸ್ತ್ರ ಜ್ವಲಸ್ತ ಬಾಹೋದು ಕಂಡು, ಸಾತ್ಯಕಿ ಧೃಷ್ಟದ್ಯುಮ್ನ, ದ್ರೌಪದೀ ಐದು ಮಂದಿ ಮಕ್ಕಳೂ ನಿಂದರ-ಲಾರದೆ ಬೆನ್ನುಕೊಟ್ಟು ಓಡಿಹೋದವ್ಯಾಳೆ, ಓಡಿಹೋದವರಿಗೆ ಕ್ಷೇಮವಾಯಿತು. ಓಡಿಹೋಗದೇ ನಿಂತವರು ಅಷ್ಟೂ ಮಂದಿ ಸುಟ್ಟು ಸತ್ತರು. ಧರ್ಮರಾಯಗೆ ಹ್ಯಾಂಗದೆ ಎಂದು ಅರ್ಜುನ ನೋಡಲಿಕ್ಕೆ ಹೋಗತಿದ್ದ. ಮಾರ್ಗದಲ್ಲಿ ಭಾರ್ಗವಾಸ್ತ್ರ ಸಮಸ್ತ ಸೇನಿ ಸುಡತದೆ. ಇದ ಕಂಡು ಮುಂದಕ್ಕೆ ಹೋಗಲಾರದೆ, ಕೃಷ್ಣನ್ನ ಬೇಡಿಕೊಂಡ. 'ಈ ಭಾರ್ಗವಾಸ್ತ್ರಕ್ಕೆ ಪ್ರತ್ಯಸ್ತ್ರ ಬಿಡಲಿಕ್ಕೆ ನಾ ಶಕ್ತನಲ್ಲ. ಈ ಅಸ್ತ್ರ ತಪ್ಪಿಸಿ, ಭೀಮಸೇನನ ಸಮೀಪಕ್ಕೆ ಕೊಂಡು ನಡಿ. ಕರ್ಣನ ಸನ್ಮುಖಕ್ಕೆ ನನ್ನ ಕೊಂಡುಹೋಗಬ್ಯಾಡ' ಎನಲಿಕ್ಕೆ, ಸ್ವಾಮಿ ಅಡ್ಡಮಾರ್ಗದಿಂದ ಅರ್ಜುನನ ಕರಕೊಂಡು ಬಂದನು. ಜಗನ್ನಿರ್ಮಾಣ ಮಾಡುವ ಸ್ವಾಮಿಗೆ, ಮಾರ್ಗ ತಪ್ಪಿಸಿ ಕರಕೊಂಡುಬಂದದ್ದು ಆಶ್ಚರ್ಯವಲ್ಲ. ಅರ್ಜುನ ಭೀಮಸೇನನ ಕೂಡ ಮಾತ-ನಾಡಿದನು, 'ಧರ್ಮರಾಯಗೆ ಏನು ಅವಸ್ಥೀ ಆಗೇದೊ, ರಣರಂಗ ಬಿಟ್ಟು, ಶಿಬಿರಕ್ಕೆ ಹೋಗ್ಯಾನೆ. ನಾ ಹೋಗಿ ವಿಚಾರ ಮಾಡಬೇಕಾದರೆ, ಸಂಶಪ್ತಕರು ನನ್ನ ಸುತ್ತು-ಗಟ್ಟಿದ್ದಾರೆ. ಯುದ್ಧ ಮಾಡದೇ ಹೋದೆನೇ, ಬೆನ್ನುಕೊಟ್ಟು ಓಡಿಹೋದನೆಂದು ಜನಾರ್ವು ಬರತದೆ. ನೀ ಹೋಗಿ ವಿಚಾರ ಮಾಡಿ ಬಾ' ಎಂದು ಭೀಮಸೇನಗೆ ಅನಲಿಕ್ಕೆ, ಭೀಮಸೇನ ಅರ್ಜುನಗೆ ಪ್ರತ್ಯುತ್ತರ ಕೊಟ್ಟ. 'ನಿನ್ನ ಯುದ್ಧಭಾರ ನಾ ವಹಿಸಿಕೊಳ್ಳಥೀನಿ. ಸಂಶಪ್ತಕರಿಗೆ ಹರವು ಹೇಳಥೀನಿ. ನೀ ಹೋಗಿ ರಾಯನ ವೃತ್ತಾಂತ ಕೊಂಡುಬಾ' ಎನಲಿಕ್ಕೆ, ಆ ವ್ಯಾಳ್ಯಾದಲ್ಲಿ ಭೀಮಸೇನನ ಕೃಷ್ಣ ಪೊಗಳಿದ. 'ಭಲಾ ಭೀಮಸೇನ! ನೀನು ಪರಾಕ್ರಮಿ ಆಹುದು. ಅರ್ಜುನನ ಭಾರ ನೀ ವಹಿಸಿಕೊಂಡದ್ದು ಆಶ್ಚರ್ಯವಲ್ಲ. ನಿನ್ನ ಬಲ ಬಹಳೆಂದು ತಿಳಿದಿದ್ದೀನಿ.' ಹೀಂಗೆಂದು ಹರಿ, ಭೀಮಸೇನನ್ನ ಪೊಗಳಿದ. ತದನಂತರ ನರನಾರಾಯಣರು ಧರ್ಮರಾಯನ ಸಮೀಪಕ್ಕೆ ಹೋದರು.

ಧರ್ಮರಾಯ ಗಾಯದಿಂದ ಪೀಡಿತನಾಗಿ ಗಾಯ ಕಟ್ಟಿಸಿಕೊಳತ ಇದ್ದಾನೆ. ಅರ್ಜುನ ಕರ್ಣನ ಕೊಂದು ಜಯಶೀಲನಾಗಿ ಬಂದನೆಂದು ತಿಳದು, 'ಭಲಾ ಅರ್ಜುನ! ನೀ ಶೂರನಹುದು. ಪರಾಕ್ರಮಿ ಕರ್ಣನ ಕೊಂದು ಬಂದಿದಿ.' ಹೀಂಗಂತ ರಾಯ ಅರ್ಜುನಗೆ ಅನಲಿಕ್ಕೆ, 'ರಾಯ ನಿನ್ನ ಅನುಗ್ರಹದಿಂದ ಕರ್ಣನ ಕೊಂದೇನು' ಎಂದನು. 'ಇನ್ನೂ ಕರ್ಣನ ಕೊಂದಿಲ್ಲವೇ! ವ್ಯರ್ಥ, ನಿನ್ನ ಗಾಂಡೀವ ಧನುಸ್ಸು ಏನುಕಾರಣ ಹಿಡದಿದಿ, ಬಿಸ್ಟುಕೊಡು. ಸಾಯು ಕೊಲ್ಲದೆ ಇಲ್ಲಿಗೆ ಏನು ನೂರಿ ತೋರಿಸಲಿಕ್ಕೆ ಬಂದೀ! ಇಲ್ಲಿಗೆ ಬರಲಿಕ್ಕೆ ನಾಚಿಕಿ ಬರಲಿಲ್ಲವೆ! ಗಾಂಡೀವ ಧನುಸ್ಸು ಕೃಷ್ಣಗಾರೆ ಕೊಡು. ನಮ್ಮ ಸ್ವಾಮಿ ಶ್ರೀಕೃಷ್ಣ, ನಮ್ಮ ವೈರಿ ರಾಧೇಯನ ಕೊಂದಾನು. ನಮ್ಮ ಸ್ವಾಮಿ, ಎದುರಿಗೆ ಕುಳಿತಿದ್ದರೆ ಸಾಕು,

ಭೀಮಸೇನ ಕರ್ಣನ ಕೊಂದಾನು. ನೀ ನಮ್ಮ ಕುಂತೀಮಗನಲ್ಲ. ಇಂದಾರಭ್ಯ ಕುಂತೀಮಗನೆಂದು ಕರಸಿಕೊಳ್ಳಲಿಕ್ಕೆ ಯೋಗ್ಯನಲ್ಲ. ನಿನ್ನ ಮಾರಿ ಕಪ್ಪು ಮಾಡಿಕೊಂಡು ಹೋಗು. ಗಾಂಡೀವ ಧನುಸ್ಸು ಬಿಷ್ಟ' ಎಂದು ನಿಷ್ಠುರ-ವಚನಗಳಾಡಲಿಕ್ಕೆ, ಅರ್ಜುನಗೆ ಸಿಟ್ಟು ಬಂತು.

ಅರ್ಜುನ ಜ್ವಲಸ್ತ, ಧರ್ಮರಾಯನ 'ಕಡದು ಬಿಷ್ಟೇನು' ಎಂದು ಕ್ರೂರ-ನಾದ ಖಡ್ಗ ಹಿಡಕೊಂಡು, ಅಣ್ಣನ ಮ್ಯಾಲೆ ಹರದುಹೋಗಲಿಕ್ಕೆ, 'ಇದೇನು ಅನರ್ಥ ಮಾಡತಿದ್ದಿ! ಅಣ್ಣ-ತಮ್ಮಂದರೊಳಗೆ ಏನು ಕಡದಾಟ! ಹಿರೇರವಚನ ತಾಳಬೇಕು. ಕೋಪಕ್ಕೆ ಬರಬಾರದು' ಎಂದು ಶ್ರೀಕೃಷ್ಣ ಅರ್ಜುನನ ಕೈಹಿಡದು ನಿಂದರಲಿಕ್ಕೆ, ಅರ್ಜುನ ಮಾತನಾಡಿದ. 'ಹೇ ಸ್ವಾಮಿ, ನನ್ನ ಪ್ರತಿಜ್ಞ ಹೀಂಗದೆ, ಗಾಂಡೀವ ಧನಸ್ಸು ಬಿಷ್ಟೆಂದವರನ್ನ ಕೊಲ್ಲಬೇಕು. ನಾ ಅಣ್ಣನೆಂದು ಭಿಡೆ ಮಾಡೋಹಾಂಗಿಲ್ಲ. ನಾ ಕೊಂದವನೇವೆ.' ಹೀಂಗನಲಿಕ್ಕೆ, "ಎಲ್ಲೆ ಅರ್ಜುನ, ಸಜ್ಜನರಿಗೆ ಹಿತವಾಗೋಂಥ ಪ್ರತಿಜ್ಞ ಮಾಡಬೇಕು. ಸಜ್ಜನರ ಹಿತದಗೋಸ್ಕರ ಸತ್ಯವಾಡಬೇಕು. ದಾವ ಧರ್ಮದಿಂದ ಉತ್ತಮರಿಗೆ ಹಿತವಾಗತದೆ ಅಂಥಾ ಧರ್ಮ ಮಾಡಬೇಕು. ಕಳ್ಳರು ಕೌಶಿಕಬ್ರಾಹ್ಮಣನನ್ನ ಕಂಡು, 'ಈ ಸ್ಥಳಕ್ಕೆ ಬಂದ ಬ್ರಾಹ್ಮಣರು ಎತ್ತ ಹೋದರು' ಎಂದು ಕೇಳಲಾಗಿ, ಕೌಶಿಕಬ್ರಾಹ್ಮಣ, ತಾ ಸತ್ಯ-ವಾದಿ ಸುಳ್ಳಾಡಬಾರದೆಂದು, ತನ್ನ ಆಶ್ರಮದಲ್ಲಿ ಅಡಗಿಕೊಂಡಂಥ ಬ್ರಾಹ್ಮಣರನ್ನ ಕಳ್ಳರಿಗೆ ತೋರಿಸಿದನು. ಕಳ್ಳರು ಬ್ರಾಹ್ಮಣರನ್ನ ಸಂಹಾರ ಮಾಡಿದರು. ಮಹಾ-ಜ್ಞಾನಿ ಕೌಶಿಕಬ್ರಾಹ್ಮಣ, ಯಥಾರ್ಥ ಆಡಿದರೂ, ಅಡಗಿಕೊಂಡ ಬ್ರಾಹ್ಮಣರನ್ನ ತೋರಿಸಿಕೊಟ್ಟ. ಆದರಿಂದ ಬ್ರಹ್ಮಹತ್ಯದೋಷ ಪ್ರಾಪ್ತವಾಯಿತು. ಆದಕಾರಣ, ಸಜ್ಜನರ ಹಿತದಗೋಸ್ಕರ ಪ್ರತಿಜ್ಞ, ಸತ್ಯವಚನ ಆಡಬೇಕು. ನಾ ಗೀತೋಸದೇಶ ಮಾಡಿದ್ದೆ. ಆದನ್ನೆಲ್ಲ ಮರತುಬಿಟ್ಟ. ಸತ್ಯ, ಧರ್ಮ ನೀ ಅರಿತವನಲ್ಲ. ಒಬ್ಬ ಅಧರ್ಮ ಮಾಡಥಾನೆ. ಅವಗೆ ಪುಣ್ಯ ಬರತದೆ. ಒಬ್ಬ ವ್ಯಾಧ ಕೊಲಿಗಡಕತನ ಮಾಡತಿಹ. ಅವಗೆ ತಾಯಿ-ತಂದೇರು ಮೃಗದ ಮಾಂಸ ಬೇಡಿದರೆ, ಜೀವಹಿಂಸ ಮಹಾ ಪಾಪವಾದರೂ, ಮಾಂಸ ತರಲಿಕ್ಕೆ ಅಡವಿಗೆ ಹೋದ. ಅಡವಿಯಲ್ಲಿ ಒಬ್ಬ ರಾಕ್ಷಸ ಜನಕಂಟಕನಾಗಿ, ಮೃಗರೂಪದಿಂದ ತಿರಗತಿದ್ದ. ಅಂಥಾ ಮೃಗರೂಪ ರಾಕ್ಷಸನ್ನ ಕೊಂದು, ತಾಯಿ-ತಂದೇರಿಗೆ ಮಾಂಸ ತಂದುಕೊಟ್ಟಕಾರಣ, ವ್ಯಾಧಗೆ ದಿವ್ಯಗತಿ ಆಯಿತು. ಧರ್ಮಾಧರ್ಮ ಮರ್ಯಾದಿಗಳು ಬಹಳ ಸೂಕ್ಷ್ಮ ಅವೆ. ನಿನ್ನ ಪ್ರತಿಜ್ಞ ಹುಸಿ ಅಲ್ಲ. ಹಿರೇರ ವಿಷಯದಲ್ಲಿ ಈ ಕಾರ್ಯ ಮಾಡಿ ತೋರಿಸಬಾರದು. ಗುರು-ಹಿರೇರ ನಿಂದಾ ಮಾಡಿದರೆ, ಅವರ ವಧಾ ಮಾಡಿದ ಫಲ ಬರತದೆ. ಆದಕಾರಣ, ಧರ್ಮರಾಯನ ನಿಂದಾ ಮಾಡು." ಹೀಂಗೆಂದು ಶ್ರೀಹರಿ ಅರ್ಜುನಗೆ ಹೇಳಲಿಕ್ಕೆ, ಅರ್ಜುನ ರಾಯನ ನಿಂದಾ ಮಾಡಹೊಕ್ಕ.

ನಿಂದಾ ಪ್ರಕಾರ ಹೇಳಥಾರೆ. 'ನೀನು ನಪುಂಸಕ, ನೀನೇವೆ ರಣರಂಗದಲ್ಲಿ ನಿಂದರಲಾರದೆ ಓಡಿಬಂದಿದಿ. ಇಷ್ಟು ದಿವಸ ನೀ ಹಿರಿಯನೆಂದು, ನಿನ್ನ ಆಜ್ಞೆ ಅನುಸರಿಸಿ, ಸಾಮ್ರಾಜ್ಯ ವೈಭೋಗ ಬಿಟ್ಟುಕೊಟ್ಟು, ಹನ್ನೆರಡು ವರುಷ ವನವಾಸ, ಒಂದು ವರುಷ ಅಜ್ಞಾತವಾಸ ಮಾಡಿ ದುಃಖಬಟ್ಟೆವು. ಈ ರಣ-ರಂಗದಲ್ಲಿ, ಹದಿನೆಂಟು ಅಕ್ಷೋಹಿಣಿ ಮಹರ್ಬಲ ಸಾಯಲಿಕ್ಕೆ ನಿಮಿತ್ತಕಾರಣ ನೀನೇವೆ. ಸಮುಸ್ತ ಭೂಪಾಲಕರ ಕೊಂದ ಪಾಪ ನಿನಗೇ ಬರತವೆ. ಜೂಜು ಏನುಕಾರಣ ಆಡಬೇಕಿತ್ತು? ಹಿರಿಯನೆಂದು ಇಷ್ಟು ದಿವಸ ಆಜ್ಞಾಧಾರಕನಾಗಿ ಇದ್ದದ್ದಕ್ಕೆ, ನಮ್ಮ ಉಪಕಾರ ಇವ ಅರಿತವನಲ್ಲ, ಬಹಳ ಕೃತಘ್ನ. ಇಷ್ಟಾಗಿ ತಾ ಶೂರನಲ್ಲ, ಬಹಳೇ ನಪುಂಸಕ. ನಿರ್ವೀರ್ಯನಾದಂಥ ಇವ, ನನ್ನ ನಿಂದಸ್ಥಾನೆ. ನಮಗೆ ಶಿಕ್ಷಿಸಬೇಕಾದರೆ ಭೀಮಸೇನ ಸಮರ್ಥ. ಅಣ್ಣನಂತ ಹಿರೇತನ ಕೊಟ್ಟರೆ, ತನ್ನ ಮರ್ಯಾದೀಲಿ ಇಹೋದಿಲ್ಲ. ಹೆಚ್ಚು ಕೊರತಿ ಅನ್ನಲಿಕ್ಕೆ ಇವ ಎಷ್ಟರವ! ಇಂಥಾವ ಅಣ್ಣನಾಗಿ ಏನು ಪ್ರಯೋಜನ! ಇಂಥಾ ದರಿದ್ರ ಅಣ್ಣನ ಕೊಂಡು ಏನು ಮಾಡಬೇಕು! ಒಬ್ಬರ ನಿಂದಾ ಮಾಡಲಿಕ್ಕೆ ಇವನ ಜನ್ಮ ಹೋಯಿತು. ವ್ಯರ್ಥ ಹಿರೇತನ ಹಚ್ಚಿಕೊಂಡಾನೆ. ನಾವೆಲ್ಲ ಭೀಮಸೇನನ ಉಪಕಾರದೊಳಗೆ ಮುಣಗಿದ್ದೇವು. ಆತನಿಂದ ಬದ್ಧರಾಗಿದ್ದೇವು. ನಮ್ಮ ಸಕಲ ಭಾರ ಭೀಮಸೇನ ವಹಿಸಿಕೊಂಡಾನೆ. ಇವ ತಾ ಏನು ನಮ್ಮ ನಿಂದಾ ಮಾಡಲಿಕ್ಕೆ!' ಹೀಂಗಂತ ಬಹಳವಾಗಿ ಧರ್ಮರಾಯನ ನಿಂದಿಸಿ, ಅರ್ಜುನ ಪಶ್ಚಾತ್ತಾಪ ಉಳ್ಳವನಾಗಿ, 'ಅಣ್ಣ ಗುರುಸ್ಥಾನ, ನಿಂದಾ ಮಾಡಿದೆನಲ್ಲ! ಪಿತೃದ್ರೋಹ ನನಗೆ ಬಂತು. ನಾ ದೇಹಾಂತ ಪ್ರಾಯಶ್ಚಿತ್ತ ಕೊಂಡೇನು' ಎಂದು, ಖಡ್ಗ ಕೊಂಡನು.

ಅರ್ಜುನ ಖಡ್ಗ ಕೊಳ್ಳಲಿಕ್ಕೆ ಕೃಷ್ಣ, 'ಮತ್ತೇನು ಕಾರಣ ಖಡ್ಗ ಕೊಂಡಿ.' ಎನ್ನಲು, 'ಅಣ್ಣನ ನಿಂದಿಸಿದ ದ್ರೋಹ ನನಗೆ ತಟ್ಟಿತು. ನಾ ದೇಹಾಂತ ಪ್ರಾಯಶ್ಚಿತ್ತ ಕೊಂಡೇನು.' ಹೀಂಗೆನಲಿಕ್ಕೆ, 'ಎಲೈ ಫಲ್ಗುಣ, ಮೂರ್ಖಬುದ್ಧಿ ಮಾಡಬ್ಯಾಡ, ದೇಹನಾಶ ಬುದ್ಧಿ ಪೂರ್ವಕ ಮಾಡಿಕೊಂಡರೆ, ತಿವಗೆ ಮಹಾಪಾಪ ಬರತದೆ, ಎಂದಿಗೂ ಉದ್ಧಾರವೇ ಇಲ್ಲ. ಈ ದೇಹ ಇರಲಿಕ್ಕೆ, ಧರ್ಮಾರ್ಥ-ಕಾಮಾದಿಗಳು ಬರಥವೆ. ಮೋಕ್ಷಫಲ ಐದಥಾರೆ. ಆದ್ದರಿಂದ ಆತ್ಮಘಾತ ಮಾಡಿಕೋಬ್ಯಾಡ. ಆತ್ಮಘಾತ ಮಾಡಿಕೊಂಡೇನೆಂಬಷ್ಟು ಇದ್ದರೆ, ನಿನ್ನ ಪ್ರಶಂಸ ಹೇಳಿಕೊ. ಆದರಿಂದ ಆತ್ಮಘಾತ ಬರತದೆ.' ಹೀಂಗಂತ ಕೃಷ್ಣ ಅರ್ಜುನಗೆ ಅನಲಿಕ್ಕೆ, ಕಿರೀಟಿ ತನ್ನನ್ನೇ ಸ್ತುತಿಮಾಡಿಕೊಳ್ಳಹೊಕ್ಕ. 'ನಾ ಇಂದ್ರನ ಲಕ್ಕಿಸದೆ ಖಾಂಡವವನ ದಹನ ಮಾಡಿದ್ದೀನಿ. ದೇವೇಂದ್ರಗೇ ಮುಣಿದು ಬಾರದಂಥ ಪೌಲೋಮ, ಕಾಲಕೇಯ, ನಿವಾತಕವಚರ ತರದಿದ್ದೀನಿ.' ಹೀಂಗಂತ ತನ್ನ ಪರಾಕ್ರಮ ತಾನೇ ಬಹಳ ಹೊಗಳಹೊಕ್ಕ. ಆತ್ಮಸ್ತುತಿ, ಗುರು-ಹಿರೇರ ನಿಂದಾ

ಅನರ್ಥಕ್ಕೆ ಸಾಧನ. ಅರ್ಜುನನ ಕೋಪದ ಮದವೆಲ್ಲ ಹೋಯಿತು. ತನ್ನ ಸ್ತುತಿ ತಾ ಏನಂತ ಮಾಡಿಕೊಂಡನೆಂದು ನಾಚಿಕೆ ಉಳ್ಳವನಾಗಿ, ಮಾರಿ ಕೆಳಗೆ ತಗ್ಗಿಸಿದ. ಆ ವ್ಯಾಳ್ಯಾದಲ್ಲಿ ಜನಾರ್ದನ ಅರ್ಜುನಗೆ ಮಾತನಾಡಿದ, 'ನಿಮ್ಮ ಅಣ್ಣ ತಮ್ಮಂದರ ಕೋಪ ಹೋಯಿತೆ? ನೀವಿಬ್ಬರೂ ಕೋಪಾಗ್ನಿಯಿಂದ ಸುಟ್ಟು ಸಾಯುತಿದ್ದಿರಿ. ನಾನಿದ್ದಕಾರಣ ಕ್ಷೇಮವಾಯಿತು.'

ಹೀಂಗೆಂದು ಅಚ್ಯುತ ಅನಲಿಕ್ಕೆ, ಅರ್ಜುನ, 'ಯಥಾರ್ಥ ಸ್ವಾಮಿ. ನಿನ್ನ ಬುದ್ಧಿಯಿಂದ, ನೀ ಇದ್ದದ್ದರಿಂದ ಜೀವಂತರಾದೆವು.' ಹೀಂಗೆಂದು ನರ-ನಾರಾಯಣರು ಮಾತನಾಡಲಾಗಿ, ಧರ್ಮರಾಯ ಕೋಪಾವಿಷ್ಟನಾಗಿ, 'ಅರ್ಜುನ ನನಗೆ ನಿಂದಾ ಮಾಡಬೇಕೆ! ಎಲೋ ನಪಸೇ! ಭೀಮಸೇನನ ಅರಸಿನ್ನ ಮಾಡಿ-ಕೊಂಡು, ನೀ ಪ್ರಧಾನನಾಗಿ ಸುಖದಲ್ಲಿರು. ನಾ ದರಿದ್ರ. ನಪುಂಸಕನ ಕೊಂಡು ಏನು ಮಾಡೀ! ನನ್ನ ಕೊಂದುಹಾಕು. ಕೊಲ್ಲದಿದ್ದರೆ ನಾ ವನಕ್ಕೆ ಹೋಗಥೀನಿ.' ಗಾಯ ಕಟ್ಟಿಸಿಕೊಳ್ಳುವಾತ, ಹಾಸಿಗಿ ಬಿಟ್ಟು ತೆರಳಲಿಕ್ಕೆ, ರಾಯನ ಕೈಹಿಡದು ಹಾಸಿಗಿ ಮ್ಯಾಲೆ ಕೂಡ್ರಿಸಿ, ಅರ್ಜುನ ರಾಯಗೆ ಸಾಷ್ಟಾಂಗನಮಸ್ಕಾರ ಹಾಕಿದ. ಶ್ರೀಕೃಷ್ಣ ಧರ್ಮರಾಯಗೆ ಬಹಳ ಪ್ರಕಾರ ಸಮಾಧಾನ ಮಾಡಿದನು. ಅರ್ಜುನ ತನಗೆ ಕ್ಷಮಾಪಣೆ ಬೇಡಿಕೊಂಡ. 'ದೈವೇಚ್ಛೆಯಿಂದ ನಾವಿಬ್ಬರೂ ಉಳಿದೆವು. ವಾಸುದೇವನಿಂದ ನಮ್ಮ ಆಪತ್ತು ಪರಿಹಾರವಾಯಿತು. ಸ್ವಾಮೀ, ನಮ್ಮ ಕೋಪ ವೆಂಬ ಅಗ್ನಿ ಶಮನ ಮಾಡಿದಿ. ನಮ್ಮ ಜೀವ ಉಳಹಿಸಿದಿ. ಸ್ವಾಮೀ, ನೀ ಉಪಾಯ ಬಲ್ಲವರೊಳಗೆ ಪರಮಶ್ರೇಷ್ಠ. ಎಲೈ ಅಚ್ಯುತಾ, ನಿನ್ನಿಂದ ನಾವು ಉಳದೆವು' ಎಂದು ಧರ್ಮರಾಯ ಜನಾರ್ದನನ ಹೊಗಳಿದನು. ಅರ್ಜುನ ಜನಾರ್ದನಗೆ ಧರ್ಮರಾಯಗೆ ನಮಸ್ಕಾರ ಮಾಡಲಿಕ್ಕೆ, ಧರ್ಮರಾಯ ತಮ್ಮನ್ನ ಸ್ನೇಹದಿಂದ ಅಪ್ಪಿಕೊಂಡು 'ಜಯಶೀಲನಾಗು!' ಎಂದು ತಮ್ಮಗೆ ಆಶೀರ್ವಾದ ಕೊಟ್ಟ.

ರಾಯನ ಅಜ್ಞ ಕೊಂಡು, ಕರ್ಣನ ಕೊಲ್ಲಲಿಕ್ಕೆ ಅರ್ಜುನ ತೆರಳಿದ. ಮಾರ್ಗದಲ್ಲಿ ಚಿಂತಿಯಿಂದ ವಿಮನಸ್ಕನಾಗಿ, 'ಹಾ! ಕರ್ಣ ಬಲಿಷ್ಠ, ನನ್ನಿಂದ ಹ್ಯಾಂಗೆ ಸತ್ತಾನು! ನಾನಾದರೂ ರಾಯನ ಮುಂದೆ ಕರ್ಣನ ಕೊಂದೇನೆಂಬು ಪ್ರತಿಜ್ಞ ಮಾಡಿ ಬಂದೀನಿ. ಕರ್ಣ ನನ್ನಿಂದ ಸಾಯದಿದ್ದರೆ, ಧರ್ಮರಾಯಗೆ ಮಾರಿ ಏನಂತ ತೋರಿಸಲಿ!' ಈ ಪ್ರಕಾರ ಚಿಂತಿಯಿಂದ ಬೆವತನು. ಅರ್ಜುನ ತಾ ದುಃಖಬಡೋದು ಕಂಡು, ಶ್ರೀಕೃಷ್ಣ ಅರ್ಜುನನ್ನ ಸಮಾಧಾನ ಮಾಡಿದ್ದಾನೆ. 'ಎಲೈ ಪಾರ್ಥ, ಏನುಕಾರಣ ಆಂಜತಿದ್ದಿ! ನಿನ್ನಲ್ಲಿ ನರಾವೇಶವದೆ. ಮಹಾ-ರುದ್ರ, ಸ್ವಪ್ನದಲ್ಲಿ ಪಾಶುಪತಾಸ್ತ್ರವನ್ನ ವೀರ್ಯವತ್ತು ಮಾಡಿಕೊಟ್ಟದ್ದಾನೆ. ಕರ್ಣನ ಕೊಲ್ಲತಿ, ಇದಕ್ಕೆ ಸಂಶಯವಿಲ್ಲ. ಚಿಂತಿ ಮಾಡಿಕೋಬ್ಯಾಡ. ಧೈರ್ಯ ಮಾಡು' ಎಂದು ಹರಿ ಪ್ರೇರಿಸಿದನು.

ಕೃಷ್ಣಾರ್ಜುನರು ರಣರಂಗಕ್ಕೆ ಹೋಗಥಾರೆ, ರಣರಂಗವೆಲ್ಲ ಹಾಳುಬಿದ್ದದೆ. ಭೀಮಸೇನನ ಎದುರಿಗೆ ದಾರೂ ನಿಂದರಲಾರದೆ ಓಡಿಹೋಗಥಾರೆ. ಭೀಮಸೇನ ರಣರಂಗ ಹಾಳುಮಾಡಿ, ಗಾಯನ ಮಾಡತಾ ಕುಳಿಥಾನೆ. ತನ್ನ ಸಾರಥಿ, ಕೃಷ್ಣನ ಮಗ, ವಿಶೋಕನ* ಕೂಡ ಯುದ್ಧಪ್ರಸಂಗದ ವಿನೋದವಚನಗಳಿಂದ, ಸುಂದರ ಗಾಯನ ಮಾಡತ, ಸಂತೋಷದಿಂದ ಕುಳಿಥಾನೆ. ಅರ್ಜುನ ಬಾಹೋದು ಕಂಡು, ಶಕುನಿ, ದುರ್ಯೋಧನನ ತಮ್ಮಂದರು ಫಲ್ಗುಣಗೆ ಎದುರಾಗಿ ಬರಲಿಕ್ಕೆ, ಭೀಮಸೇನ ಶಕುನೀ ರಥ ಛೇದಿಸಿ, ಭೂತಳದಲ್ಲಿ ಕೆಡಹಾಕಿದ. ತಾನೇ ಕೊಲ್ಲದೆ ಸಹದೇವ ನಿಂದ ಶಕುನಿ ಹತವಾಗಬೇಕೆಂದು ಬಿಟ್ಟುಕೊಟ್ಟ. ದುರ್ಯೋಧನ ತನ್ನ ಮಾವಗೆ ಬಹಳ ಅವಸ್ಥಿ ಆಯಿತೆಂದು ತನ್ನ ರಥದೊಳಗೆ ಹಾಕಿಕೊಂಡು ತೆರಳಿದನು. ಶಕುನೀ ಸಂಗಡ ದುರ್ಯೋಧನನ ತಮ್ಮಂದರು ಹತ್ತುಮಂದಿ ಬಂದಿದ್ದರು. ಅವರೂ ಓಡಿಹೋದರು.

ಭೀಮಸೇನ ತಾ ಸರ್ವಜ್ಞ, ಧರ್ಮರಾಯನ ಪ್ರವೃತ್ತಿ ತಾ ಬಲ್ಲರೂ ಸರಿಯೆ, ಅರ್ಜುನನ್ನ ಕೇಳಿದ್ದಾನೆ. 'ರಾಯಗೆ ಹ್ಯಾಂಗದೆ?' ಎಂದು ಕೇಳಲಾಗಿ, ಶ್ರೀಕೃಷ್ಣ ಆದ್ಯಂತ ಮೂಲಾರಂಭ ಕಥ ಹೇಳಿದ. ಅಷ್ಟರೊಳು ದುಶ್ಶಾಸನ ಹೆದಿ ಏರಿಸಿಕ್ಕೊಂಡು ಸಿಂಹನಾದ ಮಾಡತ ಬಂದು—ದುರ್ಬಲ ನರಿ ಸಿಂಹನೆದುರಿಗೆ ಹ್ಯಾಂಗೆ ಬರತದೆ, ಹಾಂಗೆ ದುಶ್ಶಾಸನ ಬಂದ—ಮರಣ ಸಮೀಪವುಳ್ಳವ, ಸನ್ನಿಪಾತ ಹಿಡಿದವ ಹ್ಯಾಂಗೆ ಬೊಗಳಥಾನೆ, ಹಾಂಗೆ ಬೊಳ್ಳಿಟ್ಟ ಬೊಗಳಥಾನೆ. ನರಿಯನ್ನ ಹಿಡಿಯಲಿಕ್ಕೆ ಸಿಂಹ ಹ್ಯಾಂಗೆ ಹೋಗತದೆ, ಹಾಂಗೆ ಭೀಮಸೇನ ದುಶ್ಶಾಸನನ್ನ ಹಿಡಿಯಲಿಕ್ಕೆ ಹೋದ. ದುಶ್ಶಾಸನನ ರಥ ಛೇದಿಸಿ, ಭೂತಳದಲ್ಲಿ ಕೆಡಹಾಕಿದ. 'ಇನ್ನೂ ಅಜ್ಞಾತವಾಸ ಮುಗಿದಿಲ್ಲ. ನಿಮಗೆಲ್ಲೀ ರಾಜ್ಯ!' ಎಂದು ಪಾಂಡವರಿಗೆ ಬೊಗಳಿದ್ದ. ಅದರಿಂದ ಭೀಮಸೇನ ನೆಲಕ್ಕೆ ದುಶ್ಶಾಸನನ ಹಾಕಿ, ತನ್ನ ಖಡ್ಗದಿಂದ ಹೊಟ್ಟೀ ಬಗಡಬೇಕೆಂದು, ಕೊರಳವ್ಯಾಲೆ ಕಾಲು ಕೊಟ್ಟು, ಹೊಟ್ಟೀವ್ಯಾಲೆ ಕುಳಿತು ಕಾಲೂರಿ, 'ಎಲೋ ಪಾಪೀ! ನಮಗೇನು ಅಂದಿದ್ದಿ ನೆನಪು ಮಾಡಿಕೊ! ನಮ್ಮ ದ್ರೌಪದೀನ್ನ ಸಭಿಗೆ ಎಳದುತಂದಿದ್ದಿ. ಈ ಹೊತ್ತು ನಿನ್ನ ಯಮದೇವರ ಮನಿ ಕಾಣಸ್ಥೀನಿ' ಎಂದು ಭೀಮಸೇನ, ಭಯಂಕರ ರೂಪ ಧರಿಸಿ ದುಶ್ಶಾಸನನ ಅಂಜಿಸಿದ. ಅಗ್ನೀಸದೃಶ ಖಡ್ಗದಿಂದ ದುಶ್ಶಾಸನನ ಎದಿ ಅಗಳಹೊಕ್ಕ. ಎದೀ ಬಗಡಲಿಕ್ಕೆ, ರಕ್ತವೆಲ್ಲ ಒಂದು ಮಡುವಾಗಿ ನಿಂತಿತು. ನೀರಡಿಸಿದವ ಸರೋವರ ಕಂಡರೆ ಹ್ಯಾಂಗೆ ನೀರು ಕುಡೀಥಾನೆ, ಹಾಂಗೆ ದುಶ್ಶಾಸನನ ರಕ್ತ ಪಾನ ಮಾಡಿದ್ದಾನೆಂಬೋ ಹಾಂಗೆ, ಬೊಗಸೀಲಿ ರಕ್ತ ಕೊಂಡು ತನ್ನ ತುಟಿಗೆ ತೋರಿಸಿ,

---

* ಇವನಿಗೆ ಅಶೋಕನೆಂಬ ನಾಮಾಂತರವೂ ಉಂಟು.

ಕೆಳಗೆ ಚೆಲ್ಲತಿಹ. 'ಎಲೋ ಪಾಪೀ! ದ್ರೌಪದೀ ವಸ್ತ್ರಾಪಹರಣ ಹ್ಯಾಂಗೆ ಮಾಡಿದಿ! ನಮ್ಮನ್ನ ಷಂಡತಿಲರೆಂದು ಹ್ಯಾಂಗೆ ಡೋ ಹಾಕಿದಿ! ಅದಕ್ಕೆಲ್ಲ ಪ್ರತೀಕಾರ, ಇವತ್ತು ನಿನ್ನ ಯಮಲೋಕಕ್ಕೆ ಕಳುಹಥೀನಿ' ಎಂದು, ಭೀಮಸೇನ ಕ್ರೂರನಾಗಿ ತೋರತಿಹ

ಆ ಪಾಪೀ ರಕ್ತ ಭೀಮಸೇನ ಹಲ್ಲು ಒಳಗೆ ಸಹಾ ಕೊಂಡಿದ್ದಿಲ್ಲ. ತುಟಿಗೆ ತೋರಿಸಿ ಕೆಳಗೆ ಚೆಲ್ಲತಿಹ. ರಕ್ತ ಕುಡಿದವನೆಂಬೋ ಹಾಂಗೆ ಲೋಕಕ್ಕೆ ತೋರಸ್ತಿಹ. ಆ ವ್ಯಾಳ್ಯಾದಲ್ಲಿ ನರಸಿಂಹರೂಪ ಸ್ಮರಿಸಿ, ರಕ್ತದಲ್ಲಿ ಸೋಮರಸವದೆ; ಆ ರಕ್ತದಲ್ಲಿದ್ದ ಸೋಮರಸ ನರಸಿಂಹಗೆ ಸಮರ್ಪಿಸಿದ. ಯುದ್ಧ ಎಂಬ ಅಗ್ನಿ, ದುಶ್ಶಾಸನನೆಂಬ ಪಶು, ಭೀಮಸೇನನ ಗದೀಪೆಟ್ಟಿಂಬೋ ಸಾಮಗಾಯನ, ದುಃಶ್ಶಾಸನನ ರಕ್ತವೆಂಬೋ ಸೋಮರಸ, ಹೀಂಗೆ ಮಾಡಿ ನರಸಿಂಹಗೆ ಸಮರ್ಪಿಸಿದನು. 'ನಾರಾಯಣನ ಮಹಿಮ ವಿಚಿತ್ರ! ನಮ್ಮ ಸ್ವಾಮಿ, ಅಘಟಿತಘಟಿತ ಚರಿತ್ರ ಉಳ್ಳಾತ. ದುರ್ಯೋಧನಾದಿಗಳ ಹೆಂಡಂದಿರು ಪತಿ ಉಳ್ಳವರಾಗಿದ್ದರು. ಅಂಥಾವರ ಹೆಂಡಂದಿರು ಪತಿಹೀನರಾದರು.' ಹೀಂಗೆ ಸ್ವಾಮೀನ್ನ ಚಿಂತಸ್ತ, ಸ್ವಾಮೀ ಮಹಿಮ ಕೊಂಡಾಡತ, 'ಕೌರವ, ಪಾಂಡವರ ಇತ್ತಂಡ ಸೇನಿ ಒಳಗೆ ದಾರು ಶೂರರಿದ್ದಾರೆ, ಗಂಡಸರಾದವರು ಈ ದುಶ್ಶಾಸನನ ಬಿಡಿಸಿಕೊಳ್ಳಲಿ! ಅವರ ಶಕ್ತಿ ನಾ ನೋಡೇನೆಂಥೀನಿ. ಆಲಸ್ಯರಹಿತರಾಗಿ ಈ ದುಶ್ಶಾಸನನ್ನ ಬಿಡಿಸಿಕೊಳ್ಳಿರಿ!' ಹೀಂಗಂತ ಮಾತನಾಡಿ, ಬೊಗಸಿ ಬೊಗಸಿಯಿಂದ ರಕ್ತ ಆಸ್ವಾದಿಸತ ಭೂತಳದಲ್ಲಿ ಚೆಲ್ಲತಿಹ. ದೇವೇಂದ್ರ ಅಮೃತಪಾನ ಹ್ಯಾಂಗೆ ಮಾಡಥಾನೆ, ಹಾಂಗೆ ದುಶ್ಶಾಸನನ ರಕ್ತ ಕುಡೀಥಾನೆಂಬ ಹಾಂಗೆ ಲೋಕಕ್ಕೆ ತೋರಸ್ಥಾನೆ. ದುಶ್ಶಾಸನ ಜೀವದಿಂದಿರಲಿಕ್ಕೆ, ಅವನ ಎದೀವ್ಯಾಲೆ ಕುಣದಾಡತ, ಡೋ ಹಾಕತಿಹ. ದಾರೂ ಬಿಡಿಸಿಕೊಳ್ಳಲಾರರು. ಕರ್ಣ, ದುರ್ಯೋಧನ, ಅಶ್ವತ್ಥಾಮ ಮೊದಲಾದವರು, ಭೀಮಸೇನನ ಎದುರಿಗೆ ನಿಂದರಲಿಕ್ಕೆ ಶಕ್ತರಾಗಲಿಲ್ಲ. ಭೀಮಸೇನನ ಕಡಿಗೇ ನೋಡಲಿಕ್ಕೆ ಅಂಜತಿಹೋರು. ಈ ಅದ್ಭುತರೂಪ, ಕರ್ಣ ನೋಡಲಾರದೆ, ಮೂರ್ಛೆಯಿಂದ ಭೂತಳದಲ್ಲಿ ಬಿದ್ದು, ಕಣ್ಣು ಮುಚ್ಚಿಕೊಂಡನು.

ಈ ಪ್ರಕಾರ ಕರ್ಣ ಅಧೈರ್ಯವುಳ್ಳವನಾಗಲಿಕ್ಕೆ, ಶಲ್ಯ, 'ಎಲೋ ಕರ್ಣಾ, ನೀ ಇಂಥಾ ಅಧೈರ್ಯವುಳ್ಳವ ಅರ್ಜುನನ್ನ ಹ್ಯಾಂಗೆ ಕೊಂದೀಯ! ಎಚ್ಚರ ಉಳ್ಳವನಾಗು' ಎಂದನು. ಅಶ್ವತ್ಥಾಮ ರಣರಂಗ ಬಿಟ್ಟು ಓಡಿಹೋದ. ಭೀಮಸೇನ ದುಶ್ಶಾಸನನ್ನ ಕೊಂದು, ಸೋಮರಸ ಪಾನಮಾಡಿ, ದುರ್ಯೋಧನನ್ನ ಪೂರ್ಣಾಹುತಿ ಹಾಕಬೇಕೆಂದು ನೃತ್ಯ ಮಾಡತಿಹ. ದುಶ್ಶಾಸನನ ವ್ಯಾಲೆ ಕುಣಿದಾಡಲಿಕ್ಕೆ ಜೀವ ಹೋಯಿತು. ಇಷ್ಟಾದವ್ಯಾಲೆ, ದುರ್ಯೋಧನನ ಕೊಲ್ಲಬೇಕೆಂದು, ಭೀಮಸೇನ ದುರ್ಯೋಧನನ ಎದುರಿಗೆ ಬರಲಿಕ್ಕೆ, ಇತ್ತಂಡ ಸೇನಿ,

ಕುರುಪಾಂಡವರ ಸೇನ ಭೀಮಸೇನನ ನೋಡಲಾರದೆ ಅಂಜತಿಹೋದು. ದುರ್ಯೋ-ಧನ ಭೀಮಸೇನನ ಉಗ್ರರೂಪ ಕಂಡು, ಬಹುದೂರ ಓಡಿಹೋದ. ಬಹಳ ಅಂಜಿಕೆ ಉಳ್ಳವನಾಗಿಹ. ರಣರಂಗ ಹಾಳುಬಿದ್ದುಹೋಯಿತು. ಭೀಮಸೇನ ಸಿಂಹನೋಪಾದಿ ಹಾರತಿಹ, ಜಿಗದಾಡತಿಹ ಮೃಗಗಳ ಕಂಡು ಸಿಂಹ ಹ್ಯಾಂಗೆ ಹೆಜ್ಜಿ ಹಾಕತವೆ, ಹಾಂಗೆ ಹೆಜ್ಜಿ ಹಾಕತಿಹ. ಭೀಮಸೇನ ಈ ಪ್ರಕಾರ ಮನಬಂದಹಾಂಗೆ ತಿರಗತಿಹ. ಇಂಥಾ ಅದ್ಭುತ ರೂಪ ಕಂಡು ಕೃಷ್ಣಾರ್ಜುನರು, ಭೀಮಸೇನನ್ನ ಹೊಗಳಿದರು. 'ಭಲಾ ಭೀಮಸೇನ! ಶೂರನಹುದು! ಇಂಥಾ ಪರಾಕ್ರಮ ನಿನಗೆ ಕೂಡತವೆ, ಮತ್ತೆ ದಾರಿಗೂ ಕೂಡದು.' ಹೀಂಗೆ ಹೊಗಳಿದರು.

ಇಷ್ಟಾಗಲಿಕ್ಕೆ, ದುರ್ಯೋಧನನ ತಮ್ಮಂದರು ಭೀಮಸೇನನ ಮ್ಯಾಲೆ ಬಾಣ ಪ್ರಯೋಗ, ವರ್ಷಋತು ಆಪ್ಪಂದೆ ಗರೆಯತ ಬರಲಿಕ್ಕೆ, ಆ ಕ್ಷಣವೇ ಭೀಮಸೇನ ದುರ್ಯೋಧನನ ಇಪ್ಪತ್ತು ಮುಂದಿ ತಮ್ಮಂದರನ್ನ, ಲೀಲಾಮಾತ್ರದಲ್ಲಿ ಕೊಂದು-ಬಿಟ್ಟನು. ಉಳಪರಿ ತಮ್ಮಂದರು ಜೀವ ಉಳಹಿಸಿಕೊಂಡು, ಬಹುದೂರ ಓಡಿ-ಹೋದರು. ಇಷ್ಟಾಗಲಿಕ್ಕೆ ಕರ್ಣ, ಭೀಮಸೇನನ ನೋಡಿ ಕಣ್ಣು ಮುಚ್ಚಿಕೊಂಡ. ಕರ್ಣನ ಮಗ ವೃಷಸೇನ ನಕುಲನ ಎದುರಿಗೆ ಬರಲಿಕ್ಕೆ, ಭೀಮಸೇನ ವೃಷಸೇನನ

ಮಥನ ಮಾಡಿದನು. ವೃಷಸೇನ ಖಡ್ಗ, ಚರ್ಮ ಎತ್ತಿಕೊಂಡು, ಬಹಳ ಬಲ ವುಳ್ಳವನಾಗಿ, ಭೀಮಾರ್ಜುನರ ಮ್ಯಾಲೆ ಬರಲಿಕ್ಕೆ, ಅರ್ಜುನಗೆ ಸಿಟ್ಟು ಬಂತು. ಕರ್ಣ ನೋಡಲಿಕ್ಕೇ, ವೃಷಸೇನನ ಕೊರಳು ಛೇದಿಸಿಬಿಟ್ಟ. ಎರಡು ಕಾಲು, ಎರಡು ತೋಳು ತುಂಡುಮಾಡಿ, ಐದು ಬಾಣದಿಂದ ಐದು ತುಂಡು ಮಾಡಿಬಿಟ್ಟನು. ಅದರ ಪ್ಯಾಲೆ ಅರ್ಜುನ ಬಹಳ ಕೋಪಾವಿಷ್ಟನಾಗಿ, ಕರ್ಣನ ಮ್ಯಾಲೆ ಬರಲಿಕ್ಕೆ, ಕರ್ಣಾರ್ಜುನರು ಬಹಳ ಭಯಂಕರ ಯುದ್ಧ ಮಾಡಿದರು.

ಈ ಪ್ರಕಾರ ಕರ್ಣಾರ್ಜುನರು ಯುದ್ಧ ಮಾಡಲಾಗಿ, ಆಕಾಶದಲ್ಲಿ ದೇವ-ದೈತ್ಯರು ವಾದ ಮಾಡಹೊಕ್ಕರು. ದೈತ್ಯರು ಕರ್ಣ ಗೆದ್ದಾನು, ದೇವತಿಗಳು ಅರ್ಜುನ ಗೆದ್ದಾನು, ಹೀಂಗೆಂದು ತಮ್ಮೊಳು ತಾವು ವಾದಸ್ತಿಹೋರು. ಅಷ್ಟರೊಳಗೆ ಮಹಾರುದ್ರ ಚತುರ್ಮುಖನ್ನ ಬೇಡಿಕೊಂಡ. 'ಹೇ ಸ್ವಾಮೀ ಬ್ರಹ್ಮರಾಯಾ, ಕರ್ಣಾರ್ಜುನರ ಸೋಲು ಗೆಲುವಿನ ದೆಸಿಯಿಂದ ದೇವದೈತ್ಯರು ಹೊಡದಾಡಥಾರೆ. ಸೂರ್ಯಜಗೆ, ಇಂದ್ರಜಗೆ ಸಮಯುದ್ಧ ಆಗೋ ಹಾಂಗೆ ಮಾಡು ಸೋಲುಗೆಲುವಾದ ಪಕ್ಷವೇ, ದೇವದೈತ್ಯರು ಈಗಲೇ ವಿನಾಶವಾದಾರು.' ಹೀಂಗೆಂದು ರುದ್ರ ಬೇಡಿ-ಕೊಳ್ಳಲಿಕ್ಕೆ, ದೇವೇಂದ್ರಗೆ ಬಹಳ ಸಿಟ್ಟು ಬಂತು. ದೇವೇಂದ್ರನ್ನ ಬ್ರಹ್ಮರಾಯ ಸಮಾಧಾನ ಮಾಡಿದ. 'ನೀ ಏನುಕಾರಣ ಕೋಪಕ್ಕೆ ಬರತಿದ್ದಿ? ಯೋಗೀಶ್ವರ-ನಾದಂಥ ಶ್ರೀಕೃಷ್ಣ ಎಲ್ಲಿದ್ದಾನೆ, ಅಲ್ಲಿ ಜಯವಾದೀತೆಂದು ತಿಳಿಯಬೇಕು. ಕೃಷ್ಣಾರ್ಜುನರು ಇದ್ದಲ್ಲಿ ಜಯವೆಂದು ತಿಳದೂ ತಿಳದೂ, ಏನುಕಾರಣ ಕೋಪಕ್ಕೆ

ಬರಬೇಕು?' ಎಂದು ಬ್ರಹ್ಮರಾಯ ಅನ್ನಲಿಕ್ಕೆ, 'ಹೇ ಸ್ವಾಮಿ ಬ್ರಹ್ಮರಾಯಾ, ನನ್ನ ಮಗ ಅರ್ಜುನಗೆ ಜಯವಾಗಬೇಕು' ಎಂದು ಬೇಡಿಕೊಳ್ಳಲಿಕ್ಕೆ, 'ಹಾಂಗೇ ಆದೀತು' ಎಂದು ಬ್ರಹ್ಮರಾಯ ಅನ್ನಲಿಕ್ಕೆ, ದೇವೇಂದ್ರ ಬ್ರಹ್ಮರಾಯಗೆ ನಮಸ್ಕಾರ ಮಾಡಿದ ದೇವದೈತ್ಯರಿಗೆ ಬ್ರಹ್ಮರಾಯ ಶಿಕ್ಷಿಸಿದ. 'ಯುದ್ಧ ನೋಡಬೇಕಾದರೆ ಸುಮ್ಮಗೆ ನೋಡಿ, ಕರ್ಣಾರ್ಜುನರ ವಹಿಸಿಕೊಂಡು ವಿವಾದ ಮಾಡಬ್ಯಾಡಿ. ಸುಮ್ಮಗೆ ನೋಡಬೇಕಾದರೆ ನೋಡಿ, ಇಲ್ಲವೇ ಎದ್ದುಹೋಗರಿ' ಎಂದು, ಸತ್ಯಲೋಕಾಧಿಪ ಬ್ರಹ್ಮರಾಯ 'ಆಜ್ಞಾಪಿಸಲಾಗಿ, ಉಭಯರೂ, ಆಜ್ಞಾ ವೀರಲಿಕ್ಕೆ ಶಕ್ತರಾಗದೆ, ಸುಮ್ಮಗೆ ನೋಡಹೊಕ್ಕರು.

ಅರ್ಜುನ ಕರ್ಣನ ಎದುರಿಗೆ ಹೋಗಲಿಕ್ಕೆ, ಭೀಮಸೇನ ರಥಾರೂಢನಾಗಿ ತನ್ನ ತಮ್ಮನ್ನ ರಕ್ಷಿಸ ಬರತಿಹ. ಕರ್ಣನ್ನ ಅಶ್ವತ್ಥಾಮ, ದುರ್ಯೋಧನ ರಕ್ಷಿಸತ ಬರತಿಹೋರು. ಕರ್ಣನ ವ್ಯಾಳೆ ಅರ್ಜುನ ಅಪಾರ ಬಾಣ ಎಚ್ಚಿದನು. ಸೂರ್ಯಜನ ಬಾಣಗಳಿಂದ ಪಾರ್ಥ ಬಹಳ ಪೀಡಿತನಾಗಿ, ಅಲ್ಪ ಸಾಮರ್ಥ್ಯ ಉಳ್ಳವನಾದ. 'ಅರ್ಜುನಾ, ಏನುಕಾರಣ ನಿರ್ಬಲನಾಗಿದ್ದಿ? ನಿನ್ನ ಭಾಗಕ್ಕೆಂದು ನಾ ಕೊಲ್ಲವೆ ಸುಮ್ಮಗಿದ್ದೀನಿ. ನಿನ್ನಿಂದ ಆಗದಿದ್ದರೆ ನಾ ಕೊಲ್ಲಥೀನಿ' ಎಂದು ಭೀಮಸೇನ ಗದಿ ಎತ್ತಿಕೊಂಡು ನಿಂದರಲಿಕ್ಕೆ, ಶ್ರೀಕೃಷ್ಣದೇವರು ಅರ್ಜುನಗೆ ಪ್ರೇರಿಸಿದ. 'ನಿನ್ನಲ್ಲಿ ವರಾವೇಶ ವ್ಯಕ್ತವಾಡಿಕೊಡಥೀನಿ. ಬಲವೀರ್ಯ ಉಳ್ಳವನಾಗಿ ಕರ್ಣನ ಕೊಲ್ಲು.' ಹೀಂಗೆಂದು ಸ್ವಾಮಿ ಕಿರೀಟಿಗೆ ಪ್ರೇರಸ್ತ, ಅರ್ಜುನನ ಒಲ ಹೆಚ್ಚಿಸಿಕೊಟ್ಟ. ಕರ್ಣಗೆ ಅಶ್ವತ್ಥಾಮ, ದುರ್ಯೋಧನ, ಕೃಪಾಚಾರ್ಯ ಸಹಾಯವಾಗಿ ಬರತಿಹೋರು. ಭೀಮಾರ್ಜುನರು ತಮ್ಮ ಬಾಣಗಳಿಂದ ದುರ್ಯೋಧನ, ಅಶ್ವತ್ಥಾಮ, ಕೃಪಾಚಾರ್ಯ, ಕೃತವರ್ಮರ ರಥ ಛೇದಿಸಿದರು. ದುರ್ಯೋಧನಾದಿಗಳು, ಆಯುಧ ಸಾಮಗ್ರಿಗಳ ಕೊಂಡು, ಬಾಣಗಳಿಂದ ಎಚ್ಚಿಸಿಕೊಳ್ಳಲಾರದೆ, ಕರ್ಣನ ಬಿಟ್ಟು ದೂರ ಓಡಿಹೋಗಿ ನೋಡನಿಂತರು. ಮುಂದರಿದು ಹೋಗಲಿಕ್ಕೆ ಸಮರ್ಥರಾಗಲಿಲ್ಲ.

ಅಶ್ವತ್ಥಾಮ ದುರ್ಯೋಧನನ ಕೈ ಹಿಡಕೊಂಡು, 'ನೀ ನೋಡಿದ್ಯಾ ಹೇ ದುರ್ಯೋಧನಾ, ಭೀಮಾರ್ಜುನರ ಪರಾಕ್ರಮ! ಪ್ರತ್ಯಕ್ಷ ಕಂಡ್ಯಲ್ಲ, ರಾಯಾ ಇನ್ನಾದರೂ ಜೀವ ಉಳಸಿಕೊಂಡು, ಪಾಂಡವರ ಕೂಡ ಸಮಾಧಾನ ಮಾಡು. ಇನ್ನಾದರೂ ಪಾಂಡವರಿಗೆ ಅರ್ಧ ರಾಜ್ಯ ಕೊಡು. ಯುದ್ಧ ಮಧ್ಯಸ್ಥನಾಗಥೀನಿ. ಸತ್ತಷ್ಟು ಸತ್ತುಹೋಯಿತು, ಉಳದಷ್ಟಕ್ಕಾರೆ ಕ್ಷೇಮವಾಗಲಿ. ನಾ ಗುರುಪುತ್ರ ಇದ್ದೀನಿ. ಧನಂಜಯ ನನ್ನ ಮಾತು ಕೇಳ್ಯಾನು. ಜನಾರ್ದನ ವಿರುದ್ಧ ಆಚರಿಸು ವಾತನಲ್ಲ. ಭೀಮಸೇನ ಕೃಷ್ಣಾರ್ಜುನರ ಹೊರ್ತಲ್ಲ. ನಕುಲ, ಸಹದೇವ, ಧರ್ಮರಾಯ ಶಾಂತಸ್ವಭಾವವುಳ್ಳವರು. ನೀ ಬದಕಬೇಕೆಂದು, ನಿನ್ನ ಹಿತದಗೋಸ್ಕರ ಹೇಳಥೀನಿ. ನಾ ಸತ್ತೇನಲ್ಲ ಎಂದು ಹೇಳಕೊಂಬೋದಿಲ್ಲ. ನಿನ್ನ ಒಳಿತಿಗೆ ಹೇಳಥೀನಿ.

ನಾನು, ನಮ್ಮ ಸೋದರಮಾವ ಕೃಪಾಚಾರ್ಯ, ಚಿರಂಜೀವಿಗಳು. ನಮ್ಮ ಇಬ್ಬರಿಗೆ ಮರಣ ಇಲ್ಲ. ನಮ್ಮ ಬದಕೋ ನಿಮಿತ್ತ ಹೇಳೋದಿಲ್ಲ. ಇನ್ನಾರೆ ಪಾಂಡವರ ಕೂಡ ಒಳತು ಬಳಸು. ಅರ್ಧ ರಾಜ್ಯ ಕೊಡು. ನಿನ್ನಾಜ್ಞವಾದರೆ, ಯುದ್ಧ ಶಾಂತಿ ಮಾಡಿ ಕಾರ್ಯ ಸಿದ್ಧಿಡಥೀನಿ.' ಹೀಂಗೆಂದು ಅಶ್ವತ್ಥಾಮ ಮಾತನಾಡಲಿಕ್ಕೆ ದುರ್ಯೋಧನ ಮಾತನಾಡಥಾನೆ. 'ಎಲೈ ಬ್ರಾಹ್ಮಣೋತ್ತಮಾ, ನನ್ನ ಕ್ಷೇಮ ಗೋಸುಗ ಹೇಳತಿದ್ದಿ, ಖರಿಯೆ. ನನ್ನ ಎದುರಿಗೆ ನನ್ನ ತಮ್ಮ ದುಶ್ಶಾಸನನ್ನ ಭೀಮಸೇನ ಕೊಂದ. ರಕ್ತಪಾನ ಮಾಡಿದ. ಶಾರ್ದೂಲಚೇಷ್ಟಾ ಮಾಡಿದ. ನಾ ಇನ್ನು ಹ್ಯಾಂಗೆ ಜೀವ ಧರಿಸಲಿ! ತಮ್ಮ ಸತ್ತ ದುಃಖ ಹ್ಯಾಂಗೆ ಸಹಿಸಲಿ! ಇಂಥಾ ಪ್ರಿಯಪಾತ್ರ ತಮ್ಮ ಸತ್ತಮ್ಯಾಲೆ ನನ್ನ ಬದುಕೋಣ ಯಾತಕ್ಕೆ ಬಂದೀತು! ಇನ್ನು ಪಾಂಡವರ ಕೂಡ ಸಂಧಿ ಬಳಸೋಹಾಂಗಿಲ್ಲ.' ಹೀಂಗೆಂದು ದುರ್ಯೋಧನ ಅಶ್ವತ್ಥಾಮರ ಮಾತುಗಳು ನಡದವೆ.

ರಣರಂಗದಲ್ಲಿ ಕರ್ಣಾರ್ಜುನರಿಗೆ ಬಹಳ ಭಯಂಕರ ಯುದ್ಧ ಹತ್ತದೆ. ಅಗ್ನ್ಯಸ್ತ್ರ, ವರುಣಾಸ್ತ್ರ, ಬ್ರಹ್ಮಾಸ್ತ್ರ ಅಭಿಮಂತ್ರಿಸಿ ಒಬ್ಬರ ಮ್ಯಾಲೊಬ್ಬರು ಬಿಡಥಾರೆ ಬಾಣಗಳಿಂದ ಆಕಾಶವೆಲ್ಲ ವ್ಯಾಪಿಸಲ್ಪಟ್ಟು ದಿಕ್ಕುಗಳು ಕಾಣಧಾಂಗೆ ಆದವು. ಅರ್ಜುನನ ಬಾಣಗಳಿಂದ ಕರ್ಣ ನಿರ್ಬಲನಾದ. ಪ್ರಾಣ ಹೋಗೋ ಸಮಯ ಬಂತು. ಆ ವ್ಯಾಳ್ಯಾದಲ್ಲಿ—ನಾಗಮುಯ ಬಾಣ ಬಹುಕಾಲ ಬಚ್ಚಿಟ್ಟು-ಕೊಂಡಿದ್ದ—ನಾಗಮುಯ ಬಾಣಕ್ಕೆ ಬ್ರಹ್ಮಾಸ್ತ್ರ ಅಭಿಮಂತ್ರಿಸಿ ಅರ್ಜುನನಮ್ಯಾಲೆ ಈಡ್ಯಾಡಿದನು. ಅರ್ಜುನನ ಹಣೆ ಮಧ್ಯಕ್ಕೆ ಗುರಿ ನೋಡಿ ಬಾಣ ಬಿಟ್ಟಿದ್ದ. ಎರಡು ಕಣ್ಣುಗಳು ಸಹ ಅರ್ಜುನನ ತಲಿ ಕೊಂಡುಹೋಗಬೇಕು, ಹೀಂಗೆ ಗುರಿ ಇಟ್ಟಿದ್ದ. ಬಾಣ ಜ್ವಲಸ್ತ ಬರತದೆ. ಸ್ವಾಮಿ ಭಕ್ತವತ್ಸಲ ಅರ್ಜುನಗೆ ಕ್ಷೇಮವಾಗಬೇಕಾಗಿ, ನರನ ರಥ ಭೂಮಿ ಒಳಗೆ, ಐದು ಬೆರಳು ಪ್ರಮಾಣ, ಹೋಗಿಸಿಬಿಟ್ಟ. ಐದು ಬೆರಳು ಪ್ರಮಾಣ, ರಥದ ಗಾಲಿ ಭೂಮಿ ಒಳಗೆ ಇಳಿಯಲಿಕ್ಕೆ, ನಾಗಮುಯ ಬಾಣ ಅರ್ಜುನನ ಕಿರೀಟ ಹಾರಿಸಿಕೊಂಡು ಹೋಗಿ, ಕಿರೀಟ ಸುಟ್ಟು, ಆಕಾಶಕ್ಕೆ ಹಾರಿಹೋಗುವಾಗ, 'ಹೇ ಅರ್ಜುನಾ, ನಿನ್ನ ವೈರಿ ತಕ್ಷಕನ ಮಗ ಹೋಗಥಾನೆ. ಖಾಂಡವವನ ದಹನಕಾಲದಲ್ಲಿ, ಈತನ ತಾಯೀನ ನೀ ಕೊಂದಿದ್ದಿ. ನಿನ್ನ ಕೊಲ್ಲಬೇಕೆಂದು ಕರ್ಣನ ಮುಡಿಯ ಒಳಗೆ ಬಹುಕಾಲ ಆಶ್ರಯಿಸಿಕೊಂಡಿದ್ದ. ನಿನ್ನ ವೈರಿ ತಕ್ಷಕನ ಮಗ, ಆಕಾಶಮಾರ್ಗದಲ್ಲಿ ಹೋಗಥಾನೆ. ಇದೇ ಸಮಯ. ನೋಡಿಕೋ' ಎಂದ ಶ್ರೀಕೃಷ್ಣನ ವಚನ ಕೇಳಿ, ಅರ್ಜುನ ತನ್ನ ಬಾಣದಿಂದ ಸರ್ಪನ ಕೆಡಹಾಕಿ ಭೂತಳದಲ್ಲಿ ಬಿಟ್ಟನು.

ಕರ್ಣ ಫಳಿಫಳಿಗ್ಯೆ ಹ್ಯಾಂಗೆ ಬ್ರಹ್ಮಾಸ್ತ್ರ ಮಂತ್ರಿಸಿದ ಎಂದರೆ, ಪರಶುರಾಮ ದೇವರನ್ನ ಬೇಡಿಕೊಂಡಿದ್ದ. ಆದಕಾರಣ ಬ್ರಹ್ಮಾಸ್ತ್ರಗಳ ಅಭಿಮಂತ್ರಿಸಿ ಬಾಣಗಳ

ಬಿಡತಿಹ. ಹೀಂಗೆ ಕರ್ಣಾರ್ಜುನ ಯುದ್ಧ ನೋಡಲಾಗಿ, ರೋಮಗಳೆಲ್ಲ ಉಬ್ಬುಬ್ಬಿ ಬರತಿಹೋವು. ಬಾಣಗಳಿಂದ ಅತಿ ವಿಚಿತ್ರ ಯುದ್ಧ ಮಾಡತಿಹೋರು. ಯುದ್ಧ-ಶಬ್ದದಿಂದ ಎರಡನೇ ಶಬ್ದ ಕೇಳಿಸದು. ಈ ಪ್ರಕಾರ ಕರ್ಣಾರ್ಜುನರ ಯುದ್ಧ ನಡದದೆ. ಅದೇ ಕಾಲದಲ್ಲಿ ಭೂದೇವಿ ಕರ್ಣನ ರಥವ ಗಾಲಿ ನುಂಗಿದಳು. ರಥ ಮುಂದಕ್ಕೆ ನಡೇಧಾಂಗಾಯಿತು. ಅದೇ ವ್ಯಾಳ್ಯಾದಲ್ಲಿ ಪರಶುರಾಮನ ಶಾಪದಿಂದ ಅಸ್ತ್ರಗಳು ನೆನಪಿಗೆ ಬಾರಧಾಂಗಾದವು, ಅಸ್ತ್ರಗಳು ಕರ್ಣ ಮರತನು. ಆಗ್ಗೆ ಅರ್ಜುನನ್ನ ಕರ್ಣ ಬೇಡಿಕೊಂಡ, 'ಭೂಮಿಯೊಳಗೆ ರಥದ ಗಾಲಿಗಳು ಸಿಕ್ಕಮೆ. ಒಂದಿಷ್ಟು ಅವಕಾಶ ಕೊಡು.' ಹೀಂಗಂದು ರಥದ ಗಾಲೀ ಕಡಿಗೆ, ಮೂರಿ ತಿರಗಿಸಿದ. 'ಎಲ್ಯೆ ಪಾರ್ಥ, ವೈರೀನ್ನ ಕೊಲ್ಲೋ ವ್ಯಾಳ್ಯಾ ಇದೇ. ವೈರಿಗೆ ಅವಕಾಶ ಕೊಡಬ್ಯಾಡ. ಈಗಲೇ ಕೊಂದುಬಿಡು' ಎಂದು ಸ್ವಾಮಿ ಶ್ರೀಕೃಷ್ಣ ಅನಲಿಕ್ಕೆ, ಮಹಾರುದ್ರ ಕೊಟ್ಟಂಥ ಅಂಜಲಿಕ ಬಾಣ ಹೂಡಿ, 'ನನ್ನ ಸತ್ಯವಚನ, ಇವತ್ತಿಗೆ ನಾ ಮಾಡಿದಂಥ ಪುಣ್ಯ, ಧರ್ಮ ಇದ್ದರೆ ಬಾಣ ಹೋಗಿ ಕರ್ಣನ ಕೊಂದು ಬರಲಿ' ಎಂದು ಬಾಣ ಹೊಡದನು. ಅದೇ ಬಾಣ ಹೋಗಿ ಕರ್ಣನ ಕೊಂದುಬಿಟ್ಟತು. ಆ ವ್ಯಾಳ್ಯಾದಲ್ಲಿ ಅಪರಾಹ್ನ ಕಾಲ, ಅಪರವಯಸ್ಸುಳ್ಳ ಕರ್ಣ ಅಂಜಲಿಕ ಬಾಣದಿಂದ ರಣರಂಗದಲ್ಲಿ ಬೀಳಲಿಕ್ಕೆ ದುರ್ಯೋಧನನ ಮೂರಿ ಕಪ್ಪಿಟ್ಟಿತು. 'ನಮ್ಮ ಕುರುಸೇನಿ ಬಲವೆಲ್ಲ ಹತವಾಯಿತು' ಎಂದು ದೊಡ್ಡ ನಿಟ್ಟುಸಿರು ಬಿಟ್ಟನು. ಕರ್ಣ ಹತವಾಗೋಣ, ಶಲ್ಯ ಬರೇ ರಥ ತಿರಗಿಸಿಕೊಂಡು ತಿರಗಿಹೋದನು.

ಕರ್ಣ ಸತ್ತನೆಂಬ ವಾರ್ತೆ ಧರ್ಮರಾಯಗೆ ಹೋಯಿತು. 'ಕರ್ಣ ಮಹಾ-ಪ್ರಬಲ, ಒಹಳಷ್ಟಕ್ಕೆ ಸತ್ತಿರ' ಎಂದು ರಣರಂಗಕ್ಕೆ ಬಂದು, ಕರ್ಣನ ವಿಯೋಗ ನೋಡಿ ಬಹಳ ಪ್ರೀತನಾದ. 'ಸ್ವಾಮೀ ನೀ ಇದ್ದ ಕಾರಣ, ಕರ್ಣನಂಥ ಪ್ರಬಲ, ಶೂರ, ಅರ್ಜುನನಿಂದ ಸತ್ತ. ಭಲಾ ಅರ್ಜುನ! ನೀ ವೀರಪರಾಕ್ರಮಿ ಅಹುದು. ನಿನ್ನ ಪ್ರತಿಜ್ಞೆ ಸತ್ಯ ಮಾಡಿದಿ. ಭಲಾ ಭೀಮಸೇನ! ನಮ್ಮ ಪಕ್ಷ ಗೆಲ್ಲಿಸಿದಿ. ನೀವು ಕೃಷ್ಣಾರ್ಜುನರು, ಪರಾಕ್ರಮಿ ಭೀಮಸೇನ ಇರಲಿಕ್ಕೆ ನಾವು ಜಯವುಳ್ಳವರಾದೆವು.' ಈ ಪ್ರಕಾರ ಧರ್ಮರಾಯ ಕೃಷ್ಣಾರ್ಜುನರಿಗೆ ಬಹಳ ಪೊಗಳಿದ. ಸಮಸ್ತ ರಾಯರನ್ನೂ ಬಹಳ ಕೊಂಡಾಡಿದ. ಬಹಳ ಪರಾಕ್ರಮ ಮಾಡಿದರೆಂದು, ಬಹಳ ಸಂತುಷ್ಟನಾದ. ಧರ್ಮರಾಯ ಸಮಸ್ತ ರಾಯರಿಗೂ ಉಡುಗೊರಿ ಉತ್ಸಾಹಗಳಿಂದ ಪ್ರೀತಿ ಬಡಿಸಿದನು. ಅಪಾರ ಉಡುಗೊರಿಗಳು, ರತ್ನಗಳು, ನಾನಾ ಆಭರಣಗಳು ಕೊಟ್ಟನು. ಕರ್ಣ ಸತ್ತದಿನ ಪಾಂಡವರ ಸೇನಿ, ಧರ್ಮರಾಯನ ಸಹಿತವಾಗಿ ಸಂತೋಷಭರಿತರಾದರು.

ಕರ್ಣನ ಕೊಂದೆನೆಂದು ಅರ್ಜುನ ಅಹಂಕಾರ ಉಳ್ಳವನಾದ. ಅರ್ಜುನನ ಗರ್ವ ಪರಿಹರಿಸಬೇಕಾಗಿ, ಶ್ರೀಕೃಷ್ಣ ಅರ್ಜುನಗೆ ಅಂದನು, "ಕರ್ಣನ ನೀ ಒಬ್ಬನೇ

ಕೊಂದವನಲ್ಲ, ನಾನೂ ಕೊಂದವ. ನಾಗಮಯ ಬಾಣ ಬಾಹಾಗ, ರಥದ ಗಾಲಿ ತಗ್ಗಿಸಿದ ಕಾರಣ ಜೀವದಿಂದ ಉಳದಿ. ಕುಂತೀದೇವಿ ಬೇಡಿಕೊಂಡಿದ್ದಳು, 'ತೊಟ್ಟ ಬಾಣ ತೊಡಬ್ಯಾಡ, ಅರ್ಜುನನ ಕೊಲ್ಲಬ್ಯಾಡ' ಎಂದು ಬೇಡಿಕೊಂಡಿದ್ದಳು. ದೇವೇಂದ್ರ ಕರ್ಣನ ಕವಚ, ಕುಂಡಲ, ಬ್ರಾಹ್ಮಣರೂಪನಾಗಿ ಬಂದು ಇಸಗೊಂಡು ಹೋಗಿದ್ದ. ಅಸ್ತ್ರಗಳು ನೆನಪಿಗೆ ಬರಬಾರದೆಂದು ಪರಶುರಾಮನ ಶಾಪವಾಗಿತ್ತು. ಹೀಂಗೆ ನಾವು ಆರೂ ಮಂದಿ ಕೂಡಿ ಕರ್ಣನ ಕೊಂದಿದ್ದೀವಿ. ಎಲೈ ಅರ್ಜುನಾ, ಕರ್ಣನ ನೀನೊಬ್ಬನೇ ಕೊಂದವನಲ್ಲ." ಈ ಪ್ರಕಾರ ಶ್ರೀಕೃಷ್ಣದೇವರು, ಅರ್ಜುನನ ಅಹಂಕಾರ ಪರಿಹಾರ ಮಾಡಿದನು.

ಪಾಂಡವರು ಕರ್ಣನ ಕೊಂದು ಜಯಶೀಲರಾದರು. ಇವರು ನಾರಾಯಣನಲ್ಲಿ ಭಕ್ತಿಯುಳ್ಳವರು. ಸ್ವಾಮೀ ಅನುಗ್ರಹಕ್ಕೆ ಪಾತ್ರರಾದಕಾರಣ ಸರ್ವಾಪತ್ತಿನಿಂದ ಕಡಿಗೆ ಬಿದ್ದು, ಮಹಾ ಪ್ರಬಲ ಕರ್ಣನ ಕೊಂದು, ಬಹಳ ಸಂಪತ್ತುಳ್ಳವರಾದರು. ಕರ್ಣ ಸಾಯಲಿಕ್ಕೆ ಅಪರಾಹ್ಣಕಾಲವಾಧರೂ, ಯುದ್ಧ ಆ ಹೊತ್ತಿಗೇ ಶಾಂತ ಮಾಡಿ, ಕುರುಪಾಂಡವರು ತಮ್ಮತಮ್ಮ ಶಿಬಿರಕ್ಕೆ ಹೋದರೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ, 'ಶ್ರೀಕೃಷ್ಣಚರಿತೇ ಕರ್ಣವಧಃ' ಎಂಬ ಇಪ್ಪತ್ತೇಳನೇ ಅಧ್ಯಾಯ ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೨೮

ಶ್ರೀಕೃಷ್ಣಚರಿತೇ ದುರ್ಯೋಧನವಧಾದಿ ಪಾಂಡವಸ್ವಪುರಪ್ರವೇಶಃ

ಈ ಇಪ್ಪತ್ತೆಂಟನೇ ಅಧ್ಯಾಯದಲ್ಲಿ, ಶಲ್ಯಪರ್ವ, ಗದಾಪರ್ವ, ಸೌಪ್ತಿಕ-ಪರ್ವ, ವಿಶೋಕಪರ್ವ, ಸ್ತ್ರೀಪರ್ವ, ಐಷ್ಟಿಕಪರ್ವ, ಹೀಂಗೆ ಆರು ಪರ್ವ ಭಾರತ-ಕಥ, ಶ್ರೀಮದಾಚಾರ್ಯರು, ಸಂಗ್ರಹಿಸಿ ಹೇಳಥಾರೆ. ಕರ್ಣ ಸಾಯಲಿಕ್ಕೆ, ದುರ್ಯೋಧನ ಬಹಳ ದುಃಖವುಳ್ಳವನಾಗಲು, ಸಮುದ್ರದೊಳಗೆ ನಾವಿ ಮುಣಗಿ-ಥಾಂಗಾಯಿತು. ಇನ್ನು ತನುಗೆ ಜಯುವಿಲ್ಲ ಎಂದು ತಿಳದು, ಬಹಳ ಖಿನ್ನನಾಗಿ, ಚಿಂತಿಯಿಂದ ನಿಟ್ಟುಸಿರು ಹಾಕತ, ದುರ್ಯೋಧನ ತನ್ನ ಶಿಬಿರಕ್ಕೆ ಹೋದನು. ಆಮ್ಯಾಲೆ ರಾತ್ರೀಲಿ ಅಶ್ವತ್ಥಾಮನ ಕೂಡ ವಿಚಾರ ಮಾಡಿ, ಬೆಳಗಾದಮ್ಯಾಲೆ ಶಲ್ಯನ ಕರಸಿ, ದುರ್ಯೋಧನನು ಬೇಡಿಕೊಂಡ. 'ಹೇ ಶಲ್ಯಾ, ಕರ್ಣನ ಸಾರಥಿ ಆಗಿದ್ದಿ. ಕರ್ಣನಂತು ಪರಾಕ್ರಮ ಮಾಡಿ, ರಣರಂಗದಲ್ಲಿ ಸತ್ತುಹೋದನು. ನೀ ರಥಿಕನಾಗಬೇಕು' ಎಂದು ಬಹುಪ್ರಕಾರ ಬೇಡಿಕೊಂಡು, ಶಲ್ಯನ್ನ ಸೇನಾಪತಿತ್ವದಲ್ಲಿ ಅಭಿಷೇಕ ಮಾಡಿ, 'ಪಾಂಡವರ ವಿನಾಶ ಮಾಡು' ಎಂದು ಶಲ್ಯನ್ನ ಬೇಡಿಕೊಂಡ. ಶಲ್ಯ ಸೇನಾಪತಿಯಾಗಿ ರಣರಂಗಕ್ಕೆ ಬಂದನೆಂದು ಪಾಂಡವರು ಬಹಳ ಸಂತೋಷ ಉಳ್ಳವರಾಗಿ, ಕವಚಗಳು ತೊಟ್ಟುಕೊಂಡು, ಧನುರ್ಬಾಣಗಳ ಹಿಡಕೊಂಡು ರಣರಂಗಕ್ಕೆ ಬಂದರು. ಸೇನಾ ಮುಂಭಾಗದಲ್ಲಿ ಭೀಮಸೇನ ಬಂದನು. ಮಧ್ಯದಲ್ಲಿ, ಧರ್ಮರಾಯ, ಶ್ರೀಕೃಷ್ಣರಿಂದ ರಕ್ಷಿತನಾಗಿ ಅರ್ಜುನ ಬರತಿಹೋನು. ಧರ್ಮರಾಯನ ಚಕ್ರರಕ್ಷಕರು, ನಕುಲ-ಸಹದೇವರು, ಧೃಷ್ಟದ್ಯುಮ್ನ, ಸಾತ್ಯಕಿ ಇವರಿಂದ ಯುಕ್ತವಾಗಿ ಪಾಂಡವಸೇನಿ ಬಂತು. ಇನ್ನು ಕೌರವಸೇನಿ ಹ್ಯಾಂಗೆ ಬಂತಂದರೆ, ಸೇನಾ ಮುಂಭಾಗದಲ್ಲಿ ಅಶ್ವತ್ಥಾಮ, ಶಲ್ಯ, ಮಧ್ಯದಲ್ಲಿ ದುರ್ಯೋಧನ, ತಮ್ಮಂದರ ಸಹವಾಗಿ ಹಿಂಭಾಗದಲ್ಲಿ ಬರತಿಹ. ಶಲ್ಯನ ಚಕ್ರರಕ್ಷಕರು, ಶಕುನೀ ಮಗ, ಹಾಂಗೆ ಕೃಪಾಚಾರ್ಯ, ಕೃತವರ್ಮ, ಶಲ್ಯನ ಬಳಿವಿಡಿದು ಕೌರವರ ಸೇನಿ ಬಂತು.

ಅಶ್ವತ್ಥಾಮಗೆ, ಭೀಮಸೇನಗೆ ಅತಿ ಭಯಂಕರ ಯುದ್ಧವಾಯಿತು. ಭೀಮ-ಸೇನನ ಬಾಣದಿಂದ ಅಶ್ವತ್ಥಾಮನ ರಥ ಛೇದಿಸಿಹೋಯಿತು. ಶಲ್ಯನ ಬಾಣದಿಂದ ಧರ್ಮರಾಯನ ರಥ ಛೇದಿಸಿಹೋಯಿತು. ಅರ್ಜುನಗೆ ಶಲ್ಯಗೆ ಯುದ್ಧವಾಯಿತು. ಎಂಥಾ ಭಯಂಕರ ಯುದ್ಧವೆಂದರೆ, ರೋಮುಗಳು ಉಬ್ಬಬೇಕು ಅಂಥಾ ಭಯಂಕರ

ಯುದ್ಧವಾಗತದೆ. ಅಶ್ವತ್ಥಾಮನ ರಥ ಛೇದಿಸಿ ಹೋಯಿತು. ಮತ್ತೆ ಒಂದು ದಿವ್ಯ ರಥ ಏರಿಕೊಂಡು, ಭೀಮಸೇನ ಎತ್ತ ಹೋಗಥಾನೆ ಅತ್ತ ಕಡಿಗೆ ಬಾಣಗಳಿಂದ ದಿಕ್ಕು ಕಟ್ಟಿಬಿಟ್ಟ. ಭೀಮಸೇನ, ಅಶ್ವತ್ಥಾಮನ ಲೆಕ್ಕಿಸದೆ ಈತನ ಮ್ಯಾಲೆ, ದುರ್ಯೋಧನನ ಮ್ಯಾಲೆ ಬಾಣಗಳು ಎಚ್ಚಿ, ಬಹಳ ದುಃಖಬಡಸ್ತಿಹ, ದ್ರೌಪದೀ ಐದು ಮಂದಿ ಮಕ್ಕಳು, ಧೃತರಾಷ್ಟ್ರನ ಮಗ—ವೈಶ್ಯಕನ್ನಿಕೆಯಲ್ಲಿ ಹುಟ್ಟಿದ್ದ ಆ ಯುಯುತ್ಸು, ಹಾಂಗೆ ಶಿಖಂಡಿ ಮೊದಲಾದವರು, ದುರ್ಯೋಧನನ ತಮ್ಮಂದರನ್ನ ಓಡಿಸಿಬಿಟ್ಟರು. ಇಷ್ಟಾದಮ್ಯಾಲೆ ದ್ವಂದ್ವಯುದ್ಧ ಹತ್ತಿತು. ಈ ಪ್ರಕಾರ ದ್ವಂದ್ವ ಯುದ್ಧ ಆಗತದೆ. ಶಲ್ಯ ತನ್ನ ಬಾಣಗಳಿಂದ ಅರ್ಜುನನ್ನ ಸುತ್ತುಗಟ್ಟಿದ್ದ. ದೇವ-ದೈತ್ಯರಿಗೆ ಎಂಥಾ ಯುದ್ಧವಾಗತದೆ, ಅಂಥಾ ಭಯಂಕರ ಯುದ್ಧವಾಗಲಿಕ್ಕೆ. ಅರ್ಜುನ ಮೂರ್ಛಿಯುಳ್ಳವನಾಗಿ ಬಿದ್ದನು. ವಾಸುದೇವಾನುಗ್ರಹದಿಂದ ಅರ್ಜುನ ಎಚ್ಚರಕಿ ಉಳ್ಳವನಾದ. ಅರ್ಜುನ ಶಲ್ಯನ ಧನುಸ್ಸು ಛೇದಿಸಿಬಿಟ್ಟ. ಶಲ್ಯ ಬಹಳ ಕೋಪಾವಿಷ್ಟನಾಗಿ ಯಮದೇವತಾಕ ಅಸ್ತ್ರ, ಇಂದ್ರಾಸ್ತ್ರ, ವರುಣಾಸ್ತ್ರ, ಪರ್ಜ-ನ್ಯಾಸ್ತ್ರ, ಈ ಪ್ರಕಾರ ಅಸ್ತ್ರಗಳ ಅರ್ಜುನನ ಮ್ಯಾಲೆ ಹಾಕಲಿಕ್ಕೆ, ಅರ್ಜುನ ವಾಸುದೇವಾನುಗ್ರಹದಿಂದ, ಅಷ್ಟೂ ಬಾಣಗಳು ಛೇದಿಸಿಬಿಡತಿಹ. ಅಸ್ತ್ರಗಳು ಇಲ್ಲಧಾಂಗಾದವು. ಶಲ್ಯ, ತನ್ನ ಗದೀ ಅರ್ಜುನನ ಮ್ಯಾಲೆ ಈಡ್ಯಾಡಲಿಕ್ಕೆ, ಅರ್ಜುನ ಮೂರ್ಛಿಯಿಂದ ಬಿದ್ದನು. 'ಭಲಾ ಶಲ್ಯ! ಎರಡಾವರ್ತೀ ಅರ್ಜುನನ ಕೆಡಹಾಕಿದಿ.' ಹೀಂಗೆ ಸವುಸ್ತರೂ ಹೊಗಳಿದರು ಅರ್ಜುನನು ಎಚ್ಚರಕಿ ಉಳ್ಳವನಾಗಿ, ತನ್ನ ಬಾಣಗಳಿಂದ ಶಲ್ಯನ ಸರ್ವಾಂಗವನ್ನು ಸೀಳಿ, ಮೂರ್ಛಿಯಿಂದ ಕೆಡಹಾಕಿದನು. ಸವುಸ್ತರೂ ಶಲ್ಯನೆ ಸವೀಪಕ್ಕೆ ಬಂದು, ಕಣ್ಣು ಮೂಗಿಗೆ ನೀರು ಒತ್ತಿ, ಎಚ್ಚರಕಿ ಉಳ್ಳವನ್ನ ಮಾಡಿದರು. ಶಲ್ಯಗೆ ಅರ್ಜುನಗೆ ಪುನಃ ಯುದ್ಧ ಹತ್ತಿತು, ಶಲ್ಯ ಅರ್ಜುನನ ಸ್ಥನಾಂತರ ಸೀಳಲು, ಅರ್ಜುನ ಧ್ವಜಸ್ತಂಭಕ್ಕೆ ನಂಬಿ, ಮೂರ್ಛಿಯುಳ್ಳವನಾಗಿ ಬಿದ್ದನು. ಶ್ರೀಶನನುಗ್ರಹದಿಂದ ಅರ್ಜುನ ಎಚ್ಚರಕಿ ಉಳ್ಳವನಾಗಿ, ಶಲ್ಯನ ಧ್ವಜಸ್ತಂಭ ಕೆಡಹಾಕಿ, ಸಾರಥಿಯನ್ನು ಕೊಂದು ಬಿಟ್ಟನು. ಶಲ್ಯನ ಛತ್ರ ಚಾವರ ಧ್ವಜ ಪತಾಕಿ, ಯುದ್ಧಸಾಮಗ್ರಿ ಹೋದವು. ಧರ್ಮರಾಯನ ರಥ ಯುದ್ಧದಲ್ಲಿ ಛೇದಿಸಿಹೋಗಿತ್ತು, ಧರ್ಮರಾಯ ಮತ್ತೆ ಒಂದು ರಥ ಏರಿಕೊಂಡು ಶಲ್ಯನ ಮ್ಯಾಲೆ ಬಾಣಗಳ ಮಳಿಗರೆಯತ ಬಂದನು. ಶಲ್ಯನ ರಥದ ನಾಲ್ಕು ಕುದರಿ ಸಾಯಕೊಟ್ಟುಬಿಟ್ಟನು. ಶಲ್ಯ ಮತ್ತೆ ಒಂದು ರಥ ಏರಿಕೊಂಡು ಧರ್ಮರಾಯನ ರಥ ಛೇದಿಸಿ, ಧೃಷ್ಟದ್ಯುಮ್ನ ಸಾತ್ಯಕೇರ ಕುದರಿಗಳು ಸಾಯಕೊಟ್ಟು, ಅವರನ್ನ ಓಡಿಸಿಬಿಟ್ಟನು. ನಕುಲ-ಸಹದೇವರ ಬಿಲ್ಲು ಛೇದಿಸಿ-ಬಿಟ್ಟ. ಈ ಪ್ರಕಾರ ಶಲ್ಯ, ಪಾಂಡವಸೇನಿ ಗೆದ್ದು, ಜಯಶೀಲನಾಗಿ, ರಣರಂಗ ಮಧ್ಯದಲ್ಲಿ ಶಂಖ ಊದಿದನು.

ಶಲ್ಯ ಬಹಳ ಉತ್ಕೃಷ್ಟನಾಗ್ಯಾನೆಂದು ಭೀಮಸೇನ ತನ್ನ ಬಾಣಗಳಿಂದ ಶಲ್ಯನ ರಥ ಛೇದಿಸಿದನು. ಶಲ್ಯ ಮತ್ತೆ ಬಂದು ರಥ ಏರಿಕೊಂಡು, ಭೀಮಸೇನನ ವ್ಯಾಳೆ ಏರಿ ಬರಲಿಕ್ಕೆ, ಭೀಮಸೇನ ಶಲ್ಯನ್ನ ವಿರಥನ್ನ ಮಾಡಿದನು. ಶಲ್ಯ ಮತ್ತೆ ಒಂದು ರಥ ಏರಿಕೊಂಡು, ಆಯುಧಗಳಿಂದ ಪೂರ್ಣನಾಗಿ ಬರಲಿಕ್ಕೆ, ಶಲ್ಯನ ರಥ ಭೀಮಸೇನ ಛೇದಿಸಿ ಅವನ ಬಲಾನೆಲ್ಲ ಕೊರತಿ ಮಾಡಿದನು. ಶಲ್ಯನ ಬಲವೆಲ್ಲ ಹೋಯಿತು. ಥರಥರಸ್ತ ತುಟಿ ಕಡಕೊಂಡು ಸಿಟ್ಟಿನಿಂದ, ಧರ್ಮರಾಯನ್ನ ಮುಷ್ಟೀ ಪೆಟ್ಟಿನಿಂದ ಹೊಡದೇನೆಂದು, ಭೀಮಸೇನನ ಬಿಟ್ಟುಕೊಟ್ಟು, ರಾಯನ ಸಮೀಪಕ್ಕೆ ನಡದನು. ಧರ್ಮರಾಯನ ರಥ ಛೇದಿಸಿಹೋಗಿತ್ತು. ಯುಧಿಷ್ಠಿರ ಮತ್ತೆ ಒಂದು ರಥ ಏರಿಕೊಂಡು, ಅಮೋಘ ಶಕ್ತಿ ಹಿಡಕೊಂಡು, ದಿವ್ಯ ಮಂತ್ರ ಅಭಿಮಂತ್ರಿಸಿ ತನ್ನ ಸತ್ಯವಚನ, ತಪಸ್ಸು ಜನ್ಮದಾರಭ್ಯ ಮಾಡಿದ ಧರ್ಮ, ಸಕಲ ದಾನಗಳು, ವ್ರತಗಳು ಏನು ಇದೆಯೋ ಅದಷ್ಟೂ ಸಫಲವಾಗಲೆಂದು, ಶಕ್ತಿ ಅಭಿಮಂತ್ರಿಸಿ ಶಲ್ಯನ ಹೃದಯಪ್ರದೇಶಕ್ಕೆ ಶೀಘ್ರದಿಂದ ಬಿಡಲಿಕ್ಕೆ, ಅದು ಶಲ್ಯನ ಎದೀ ವಿಭಾಗ ಮಾಡಿತು. ಶಲ್ಯ, ಆ ಶಕ್ತಿ ಎಂಬ ಆಯುಧದಿಂದ, ಧರ್ಮರಾಯಗೆ ಅಭಿಮುಖನಾಗಿ, ರಣರಂಗದಲ್ಲಿ ಸತ್ತುಬಿದ್ದನು. ಶಲ್ಯ ಸತ್ಯವಚನ ಉಳ್ಳಾತ. ದುರ್ಯೋಧನಗೆ ವಚನ ಕೊಟ್ಟದ್ದಕ್ಕೆ, ತನ್ನ ಸೋದರಳಿಯಂದರಿಗೆ ಸಹಾಯನಾಗಿ ಹೋಗದೆ ದುರ್ಯೋಧನನ ಪಕ್ಷಪಾತಿಯಾಗಿ, ಧರ್ಮರಾಯನ ಆಜ್ಞಾ ನಡಸಬೇಕಾಗಿ ಕರ್ಣನ ಸಾರಥಿಯಾಗಿ, ಕರ್ಣನ್ನ ಧಿಕ್ಕಾರ ಮಾಡಿದನು. ಇಂಥಾ ಸತ್ಯವಚನ ಉಳ್ಳಂಥ ಶಲ್ಯ ರಣರಂಗದಲ್ಲಿ ದೇಹ ಸೀಳಿಸಿಕೊಂಡು ಧರ್ಮರಾಯನ ಕೈಯಿಂದ ಸತ್ತುಬಿದ್ದನು. ಶಲ್ಯ ಸಾಯಲಿಕ್ಕೆ, ದೇವೇಂದ್ರ ಅವನ್ನ ಎದುರುಗೊಂಡು ಸ್ವರ್ಗದಲ್ಲಿ ಆತಿಥ್ಯಪೂಜ ಮಾಡಿದನು. ಶಲ್ಯಪರ್ವ ಸಮಾಪ್ತವಾಯಿತು.

ಶ್ರೀಮದಾಚಾರ್ಯರು ಗದಾಪರ್ವ ಭಾರತಕಥ ಸಂಗ್ರಹಿಸಿ ಹೇಳಥಾರೆ. ಸುಶರ್ಮ ತ್ರಿಗರ್ತದೇಶದ ಅರಸು. ಸಂಶಪ್ತಕಗಣ ಅರ್ಜುನನಿಂದ ಬಹಳೇ ಸತ್ತುಹೋಗಿತ್ತು. ಅಲ್ಪ ಸೇನಿ ಉಳದಿತ್ತು. ಆ ಸೇನಿಯಿಂದ ಯುಕ್ತನಾಗಿ ಅರ್ಜುನನ ಎದುರಿಗೆ ಬರಲಿಕ್ಕೆ, ಅರ್ಜುನ ಸುಶರ್ಮ ಸಹವಾಗಿ ಸಂಶಪ್ತಕರನ್ನೆಲ್ಲ ಕೊಂದು ಬಿಟ್ಟನು. ದುರ್ಯೋಧನನ ತಮ್ಮಂದರು ಎಷ್ಟು ಮಂದಿ ಇದ್ದರೋ, ಅವರಷ್ಟೂ ಮಂದಿ, ಭೀಮಸೇನನ ಎದುರಿಗೆ ಬಂದು, ಭೀಮಸೇನನಿಂದ ಸತ್ತು-ಹೋದರು. ಶಕುನೀ ಮಗ ಉಲೂಕನ್ನ ಸಹದೇವ ಕೊಂದುಬಿಟ್ಟನು. ಇಷ್ಟಾಗಲಿಕ್ಕೆ ಕೃತವರ್ಮ, ಕೃಪಾಚಾರ್ಯ, ಅಶ್ವತ್ಥಾಮ, ಭೀಮಾರ್ಜುನರ ಬಾಣಗಳಿಂದ ಪೆಟ್ಟು ತಾಳಲಾರದೆ, ತಮ್ಮ ರಥಗಳು ಛೇದಿಸಿಸಿಕೊಂಡು, ಒಹಳ ಅಂಜಿಕಿ ಉಳ್ಳವರಾಗಿ, ಬಹುದೂರ ಓಡಿಹೋಗಿ ಮೂರು ಮಂದಿ ವನ

ಹೊಕ್ಕೊಂಡು, ಅಲ್ಲಿ ಅಡಗಿಕೊಂಡರು, ರಣರಂಗವೆಲ್ಲ ಹಾಳು ಬಿತ್ತು. ದಾರೂ ಪಾಂಡವರಿಗೆ ಎದುರಿಲ್ಲ.

ರಣರಂಗದಲ್ಲಿ ಪರವೀರರ ಹುಡಕಲಿಕ್ಕೆ, ಸಂಜಯ ಹಸ್ತಿನಾವತಿಯಿಂದ ಬಂದಿದ್ದ. ದಾರಿಗೂ ತಿಳೀಗೊಡದೆ ಬಹು ಆವರ್ತೀಲಿ ಕುರುಕ್ಷೇತ್ರಕ್ಕೆ ಬಂದು, ರಣರಂಗವಾರ್ತಿ ಕೊಂಡು, ಧೃತರಾಷ್ಟ್ರರಾಯಗೆ ಹೋಗಿ ಹೇಳುವ. ವೇದವ್ಯಾಸರ ಅನುಗ್ರಹದಿಂದ ಪ್ರತ್ಯಕ್ಷ ಕಣ್ಣೀಲೆ ಕಂಡಹಾಂಗೇ, ಹಸ್ತಿನಾವತೀಲಿ ಹೇಳುವ. ಆ ಹೊತ್ತು ರಣರಂಗದಲ್ಲಿ ನೋಡಿದ. ಸಾತ್ಯಕಿ ಸಂಜಯನ ಕಂಡ. ಸಂಜಯನ ಹಿಡಕೊಂಡು ಪಾಂಡವರ ಸಮೀಪಕ್ಕೆ ಬರಲಿಕ್ಕೆ, ಅಲ್ಲಿ ವೇದವ್ಯಾಸ ಪ್ರತ್ಯಕ್ಷನಾಗಿ ಸಾತ್ಯಕಿ ಕೂಡ ಮಾತನಾಡಿದ. 'ಸಂಜಯ ಯುದ್ಧ ಮಾಡುವಾತನಲ್ಲ. ನನ್ನ ಶಿಷ್ಯನಾಗಿದ್ದಾನೆ. ಏನು ಕಾರಣ ಅವನ್ನ ಹಿಡಕೊಂಡು ಭೀಮಾರ್ಜುನರ ಸಮೀಪಕ್ಕೆ ಹೋಗತಿದಿ? ಬಿಟ್ಟುಕೊಡು' ಎನಲಿಕ್ಕೆ, ಸಂಜಯನ ಸಾತ್ಯಕಿ ಬಿಟ್ಟುಕೊಟ್ಟ.

ಪಾಂಡವರ ಎದುರಿಗೆ ದಾರಿಲ್ಲ, ದುರ್ಯೋಧನ ಒಬ್ಬ ಉಳಕೊಂಡ. ದುರ್ಯೋಧನ, ದಿವ್ಯ ರಥ ಏರಿಕೊಂಡು ತನ್ನ ಸರ್ವಶಕ್ತಿಯಿಂದ, ಪಾಂಡವರ ಕೂಡ ತನ್ನ ಬಾಣಗಳಿಂದ ಅರ್ಜುನನ ಹೊಡದನು. ಧರ್ಮರಾಯಗೆ ಕೆಡಹಾಕಿದನು. ಧರ್ಮರಾಯಗೆ ಮೂರ್ಛಿ ಬಂತು. ನಕುಲ-ಸಹದೇವರ ರಥ ಧನುಸ್ಸು ಛೇದಿಸಿಬಿಟ್ಟ. ಈ ಪ್ರಕಾರ ಭಯಂಕರ ಯುದ್ಧ ಮಾಡಲಿಕ್ಕೆ, ಭೀಮಸೇನ ದುರ್ಯೋಧನನ ರಥ ಛೇದಿಸಿಬಿಟ್ಟನು. ದುರ್ಯೋಧನ, ತನ್ನ ರಥ ಹೋಗೋಣ, ಆನಿ ಏರಿಕೊಂಡು ಧೃಷ್ಟದ್ಯುಮ್ನ, ಸಾತ್ಯಕಿ, ಧರ್ಮರಾಯನ ರಥಗಳು ಛೇದಿಸಿಬಿಟ್ಟನು. ಭೀಮಸೇನ ದುರ್ಯೋಧನನ ಆನಿ ಕೊಲ್ಲಲಿಕ್ಕೆ, ದುರ್ಯೋಧನ ಕುದರಿ ಏರಿಕೊಂಡು, ಈಟಿ ಹಿಡಕೊಂಡು, ತನ್ನ ಬಾಣಗಳಿಂದ, ಈಟಿಯಿಂದ ಸಾತ್ಯಕೀನ್ನ ಮೂರ್ಛಾಗತನ ಮಾಡಿಬಿಟ್ಟನು. ನಕುಲ-ಸಹದೇವರು ದುರ್ಯೋಧನನಿಂದ ಈಟಿಪೆಟ್ಟು ತಿಂದು ಮೂರ್ಛಿ ಉಳ್ಳವರಾಗಿ ಬಿದ್ದರು. ಧರ್ಮರಾಯನ ಸಮೀಪಕ್ಕೆ ದುರ್ಯೋಧನ ಹೋಗಲಿಕ್ಕೆ, ಭೀಮಸೇನ ದುರ್ಯೋಧನನ ಕುದರಿ ಸಾಯಕೊಟ್ಟನು, ಈಟಿ ಕಡದುಬಿಟ್ಟ. ಆಯುಧಗಳೆಲ್ಲ ಹೋದವು. ಒಂದು ಗದೀ ಮಾತ್ರ ಉಳಿಯಿತು. ಗದೀ ಹೋಗಾಡಿಸಿಕೊಂಡು ನಿರಾಯುಧನಾಗಿರಬಾರದು. ದೂರ್ವಾಸ ಮೂರು-ಸಾವಿರ ಮಂತ್ರ ಕೊಟ್ಟಾನೆ. ಜಲದೊಳಗೆ ಮುಣಗಿ, ಏಳು ದಿವಸ ಪರಿಯಂತ ಮಂತ್ರ ಜಪಿಸಿ, ನನ್ನ ಹನ್ನೊಂದು ಅಕ್ಷೋಹಿಣಿ ಸೇನಿನೆಲ್ಲ ಬದಕಿಸಿ, ಯುದ್ಧ ಮಾಡೇನೆಂದು ದ್ವೈಪಾಯನ ಸರೋವರಕ್ಕೆ ಹೋದ.

ಭೀಮಾರ್ಜುನರು ದುರ್ಯೋಧನನ ಹನ್ನೊಂದು ಅಕ್ಷೋಹಿಣಿ ಸೈನ್ಯನೆಲ್ಲ ಕೊಂದರು, ಎಂದು ಹೇಳತದೆ. ಕಾಳಿಂಗದೇಶದ ಒಂದು ಅಕ್ಷೋಹಿಣಿ ಸಹವಾಗಿ,

ಭೀಮಸೇನ ಆರು ಅಕ್ಷೌಹಿಣಿ ಸೈನ್ಯ ಕೊಂದ. ಐದು ಅಕ್ಷೌಹಿಣಿ ಅರ್ಜುನ ಕೊಂದುಬಿಟ್ಟನು. ಕಳಿಂಗದೇಶದ ಒಂದು ಅಕ್ಷೌಹಿಣಿ ಸೇನಿ ಬಿಟ್ಟು, ಹತ್ತು ಅಕ್ಷೌಹಿಣಿ ಭೀಮಾರ್ಜುನರಿಂದ ಸಂಹಾರವಾಗಲಿಕ್ಕೆ, ಉಳವರಿ ಸೈನ್ಯವನ್ನ ಧೃಷ್ಟದ್ಯುಮ್ನ ಮೊದಲಾದವರು ಸಂಹಾರ ಮಾಡಿದರು. ಪಾಂಡವರ ಏಳು ಅಕ್ಷೌಹಿಣಿ ಸೈನ್ಯದೊಳಗೆ, ಪಾಂಡವರ ಸೇನ ಶಿಬಿರದಲ್ಲಿ ಉಲಗಿರಲಿಕ್ಕೆ, ಮೂರು ಅಕ್ಷೌಹಿಣಿ ಅಶ್ವತ್ಥಾಮ ಕೊಂದುಬಿಟ್ಟನು. ಅದೂ ಸಹವಾಗಿ, ಅಶ್ವತ್ಥಾಮ ನಾಲ್ಕು ಅಕ್ಷೌಹಿಣಿ ಕೊಂದಾನೆ. ಮೂರು ಅಕ್ಷೌಹಿಣಿ ಸೇನಿ ಸರ್ವರೂ ಕೂಡಿಕೊಂಡು ಕೊಂದರು.

ಪಾಂಡವರು ಜಯಶೀಲರಾಗಿ, 'ನಮ್ಮ ಎದುರಿಗೆ ವೈರಿಗಳು ನಿಂದರದೇ ಓಡಿಹೋದರು. ದುರ್ಯೋಧನ ಎತ್ತ ಹೋಗಿದ್ದಾನೆ! ಎಲ್ಲಿ ಅಡಗಿಕೊಂಡಿದ್ದಾನೆ?' ಎಂದು, ದುರ್ಯೋಧನ ಸಂಜೀವನ ವಿದ್ಯ ಜಪಿಸಲಿಕ್ಕೆ ಹೋಗ್ಯಾನಂತ ಬಲ್ಲರೂ ಸರಿಯೆ, ದುರ್ಯೋಧನಗೆ ಅವಕಾಶ ಕೊಟ್ಟರೆ, ದೂರ್ವಾಸ ಕೊಟ್ಟ ಮಂತ್ರದಿಂದ, ಏಳು ದಿವಸ ತಪಸ್ಸು ಮಾಡಿ, ಜಲಸ್ತಂಭದಲ್ಲಿ ಮಂತ್ರ ಜಪಿಸಿ, ಹನ್ನೊಂದು ಅಕ್ಷೌಹಿಣಿ ಸೇನಿ ಬದಿಕಿಸ್ಯಾನು, ಅವರೂ ಅವಧ್ಯರಾಗಿ ಯುದ್ಧಕ್ಕೆ ಬಂದಾರು, ದುರ್ಯೋಧನನ ವಿದ್ಯಾಬಲ ತಿಳದು, ತಾ ಬಲ್ಲರೂ ಸರಿಯೆ, ಭೀಮಸೇನ, ಕೃಷ್ಣನ ಮುಂದುಮಾಡಿಕೊಂಡು, ಅಣ್ಣತಮ್ಮಂದಿರಿಂದ ಸಹಿತನಾಗಿ ದುರ್ಯೋಧನನ ಹುಡಕತ ಹೋಗಥಾನೆ. ವ್ಯಾಧರು ಮೃಗಗಳ ಕೊಂಡು ಬರಥಾರೆ, ಆ ವ್ಯಾಧರನ್ನ 'ದುರ್ಯೋಧನನ ಕಂಡಿರ್ಯಾ?' ಎಂದು ಕೇಳಲಿಕ್ಕೆ, 'ದುರ್ಯೋಧನ ಈ ಸರೋವರದೊಳಗೆ ಹೊಕ್ಕಾನೆ.' ಹೀಂಗಂತ ವ್ಯಾಧರು ಹೇಳಲಾಗಿ, ಜನಾರ್ದನನ ಮುಂದುಮಾಡಿಕೊಂಡು, ಪಾಂಡವರು ಸರೋವರ ಸಮೀಪಕ್ಕೆ ಹೋಗಥಾರೆ. ಅಲ್ಲಿಗೆ ಕೃಪಾಚಾರ್ಯ, ಕೃತವರ್ಮ, ಅಶ್ವತ್ಥಾಮ ದುರ್ಯೋಧನನ ಕೂಡ ವಿಚಾರ ಮಾಡಬೇಕೆಂದು ಬಂದಿದ್ದರು. ದುರ್ಯೋಧನ ಆ ಮೂರು ಮಂದಿ ಕೂಡ ಏಕಾಂತವಚನ ಆಡಥಾನೆ. ಜಲದೊಳಗಿಂದ ಅದೇ ಹೊರಗೆ ಬಂದಾನೆ. ಪಾಂಡವರನ್ನ ಕಾಣಲಿಕ್ಕೆ ಕೃತವರ್ಮ, ಕೃಪಾಚಾರ್ಯ, ಅಶ್ವತ್ಥಾಮ ಓಡಿಹೋದರು. ದುರ್ಯೋಧನ ಜಲದೊಳಗೆ ಹೊಕ್ಕನು.

ಪಾಂಡವರಿಗೆ ಕೃಷ್ಣನಾಜ್ಞ್ಞವಾಯಿತು. 'ನಿಷ್ಠುರವಚನದಿಂದ ದುರ್ಯೋಧನಗೆ ದುಃಖವಾಗೋ ಹಾಂಗೆ ಆಡು' ಎಂತ ಹೇಳಲಿಕ್ಕೆ, 'ಎಲೋ ದುರ್ಯೋಧನಾ, ಭೀಷ್ಮಾದಿಗಳ ಕೊಲ್ಲಿಸಿದಿ. ಹನ್ನೊಂದು ಅಕ್ಷೌಹಿಣಿ ಬಲವೆಲ್ಲ ಕೊಲ್ಲಿಸಿದಿ. ಸಪ್ತಸ್ತ ಭೂಪಾಲಕರೂ ನಿನ್ನಿಂದ ಸತ್ತುಹೋದರು. ನಾಚಿಕಿ ಹ್ಯಾಂಗೆ ಬರವಲ್ಲದು! ಜಲದೊಳಗೆ ಅಡಗಿಕೊಂಡಿದಿ. ಧೈರ್ಯವುಳ್ಳವನಾಗಿ ಹೊರಗೆ ಹೊರಟು ಬಾ.' ಈ ಪ್ರಕಾರ ಧರ್ಮರಾಯ ಆಡಿದ ಮರ್ಮವಚನಾತ್ಮಕ ಬಾಣಗಳ ತಾಳಲಾರದೆ

ದುರ್ಯೋಧನ, ಹೊರಗೆ ಹೊರಟುಬಂದ. ಕಟ್ಟಿಗೆಯಿಂದ ಹೊಡಿಸಿಕೊಂಡು, ಹುತ್ತದಿಂದ ಸರ್ಪ ಹ್ಯಾಂಗೆ ಬರತದೆ, ಹಾಂಗೆ ಶ್ವಾಸೋಚ್ಛ್ವಾಸ ಹಾಕತ, 'ಧರ್ಮರಾಯಾ, ನನ್ನ ಕೊಂದು ಏನು ಮಾಡೀ! ಸಮುದ್ರವಲಯಾಂತ ಭೂಮುಂಡಲ ನೀನೇ ಆಳು. ನಾ ತಪಸ್ಸು ಮಾಡಥೀನಿ. ನಮ್ಮವರೆಲ್ಲ ಸತ್ತರು. ಇನ್ನು ರಾಜ್ಯ ಕೊಂಡು ಏನು ಮಾಡಲಿ! ತಪಸ್ಸು, ಈ ಸರೋವರದಲ್ಲಿ ನನಗೆ ಮಾಡಗೊಡದಿದ್ದರೆ, ನಾ ವನಕ್ಕೆ ಹೋದೇನು.' ಹೀಂಗಂತ ದುರ್ಯೋಧನ ಮಾತನಾಡಲಿಕ್ಕೆ, ಧರ್ಮರಾಯ ಅಂದನು, "ಹೇ ದುರ್ಯೋಧನಾ, ನಿನಗೆ ಇಂಥಾ ಬುದ್ಧಿ ಬಂದದ್ದು ಬಹಳ ಆಶ್ಚರ್ಯ! ನಮ್ಮ ಸ್ವಾಮಿ ಶ್ರೀಕೃಷ್ಣ, ಹಸ್ತಿನಾವತಿಗೆ ಸಂಧಾನಕ್ಕೆ ಬಂದಿರಲಾಗಿ, 'ಸಣ್ಣ ಸೂಜಿಗೆ ಎಷ್ಟು ಮಣ್ಣು ಹತ್ತತದೆ, ಅಷ್ಟು ಮಣ್ಣು ಸಹ ನಾ ಕೊಡೋಹಾಂಗಿಲ್ಲ' ಎಂದು ಆಡಿದ್ದಿ. ಭೀಷ್ಮದ್ರೋಣಾದಿಗಳ ಕೊಲ್ಲಿಸಿದಿ. ಭೂಪಾಲಕರ ವಿನಾಶ ಮಾಡಿ, ನೀ ಇರಬೇಕೆಂಬೋ ಅಪೇಕ್ಷದಿಂದ ಸರ್ವ ಭೂಮುಂಡಲ ಆಳೀನೆಂತಿದ್ದಿ. ನೀ ಜೀವಂತನಾಗಿ ಒದಕಿರಲಿಕ್ಕೆ, ನಾವು ರಾಜ್ಯ ಆಳೋಹಾಂಗೆ ಇಲ್ಲ ಆದಕಾರಣ ನೀ ನಮ್ಮ ಕೂಡ ಯುದ್ಧ ಮಾಡದೆ, ಧೈರ್ಯಭ್ರಷ್ಟನಾಗಿ ಉದಕದೊಳಗೆ ಹೊಕ್ಕಿದ್ದಿ. ಯುದ್ಧಕ್ಕೆ ಬಾ" ಎಂದು ನಿಷ್ಠುರವಚನ ಆಡಲಿಕ್ಕೆ,

'ನಾ ಒಬ್ಬ, ನೀವು ಪಾಂಡವರು ಐದು ಮಂದಿ. ನಾನಂತೂ ಪ್ರಾಣತ್ಯಾಗ ಮಾಡಿದವನೇ ಆದರೂ, ಯುದ್ಧದಲ್ಲಿ ಕವಚ, ಧನುರ್ಬಾಣ, ಕಿರೀಟ, ಖಡ್ಗ, ಚರ್ಮ ನನ್ನವೆಲ್ಲ ಛೇದಿಸಿ ಹೋಗ್ಯವೆ. ಆಯುಧಗಳು ನನಗಿಲ್ಲ. ನೀವು ಬಹು ಮಂದಿ, ಅಪಾರ ಸೇನಾ ಉಳ್ಳವರು. ನಾ ಒಬ್ಬನೇ ನಿಮ್ಮ ಕೂಡ ಹ್ಯಾಂಗೆ ಯುದ್ಧ ಮಾಡಲಿ! ನೀವಾದರೂ ಧರ್ಮಿಷ್ಠರು, ಬಹು ಮಂದಿ ಕೂಡಿ, ಒಬ್ಬನ ಕೂಡ ಏನಂತ ಯುದ್ಧ ಮಾಡೇವೆಂಥೀರಿ? ಎಲೈ ಧರ್ಮರಾಯಾ, ನೀ ಬಹಳ ಧರ್ಮಿಷ್ಠನಿದ್ದೀ. ಧರ್ಮನಿರ್ಣಯವನ್ನು ಬಲ್ಲಿ. ನಾನಾದರೂ ಪ್ರಾಣ ಕೈಲಿ ಹಿಡಕೊಂಡು ನಿಮ್ಮಷ್ಟೂ ಮಂದಿ ಕೂಡ ಯುದ್ಧ ಮಾಡೋವನೇವೆ. ಪ್ರಾಣ ಹೋದೀತಲ್ಲೆಂದು, ನಾ ಯುದ್ಧಕ್ಕೆ ಅಂಜೋಹಾಂಗಿಲ್ಲ. ಲೋಕದೊಳಗೆ ನಿನಗೆ ಅಪಕೀರ್ತಿ ಬರಥಾಂಗೆ ಧರ್ಮವಿಚಾರ ಮಾಡಿಕೊ. ನೀವೆಲ್ಲ ವಿಚಾರಿಸಿಕೊಂಡು, ನನ್ನೆದುರಿಗೆ ಒಬ್ಬನ್ನ ಕಳಸರಿ. ಆತನ ಕೂಡ ಯುದ್ಧ ಮಾಡೇನು. ನೀವೆಲ್ಲ ಒಕ್ಕಟ್ಟಾಗಿ ಯುದ್ಧಕ್ಕೆ ಬಂದರೂ, ಯುದ್ಧ ಮಾಡಿ ಕೀರ್ತಿ ಸಂಪಾದಿಸ್ಥೀನು. ನೀವು ಬಹು ಮಂದಿ ಎಂದು ಅಂಜೋಣವಿಲ್ಲ.'

ಹೀಂಗೆಂದು ದುರ್ಯೋಧನ ಅನಲಿಕ್ಕೆ, ಧರ್ಮರಾಯ ದುರ್ಯೋಧನಗೆ ಅಂದ, 'ಕವಚ, ಖಡ್ಗ, ಬಾಣ ಏನೇನು ಯುದ್ಧಸಾಮಗ್ರಿ ಬೇಕು, ಬೇಡಿದ್ದು ಕೊಟ್ಟೇವು. ನಮ್ಮ ಐದು ಮಂದಿಯೊಳಗೆ ದಾವಾತನ ಕೂಡ, ಯುದ್ಧ ಮಾಡೇನೆಂತಿದಿ ಆತನ ಕೂಡ ಯುದ್ಧ ಮಾಡಿ ಜಯ ಉಳ್ಳವನಾಗಿ ಸಮಗ್ರ ಭೂಮುಂಡಲ

ನೀನೇ ಆಳು. ನಮ್ಮ ಐದು ಮಂದೀ ಒಳಗೆ ಒಬ್ಬನು, ನಿನ್ನ ಯುದ್ಧದಿಂದ ಕೊಂದ ಪಕ್ಷವೇ ಸಮಗ್ರ ರಾಜ್ಯ ನಾವು ಆಳೇವು. ನಿನಗೆ ದಾವ ಆಯುಧ ಬೇಕು! ದಾವಾತನ ಕೂಡ ಯುದ್ಧ ಮಾಡೇನೆಂತಿದಿ ಬೇಡಿಕೊ.' ಹೀಂಗಂತ ಧರ್ಮರಾಯು ತಿಳಿಲಿಕ್ಕೆ, ದುರ್ಯೋಧನ ಮಾತನಾಡಿದ. 'ರಾಯಾ, ನೀನಂತೂ ನನಗೆ ಸುಲಭ ಹೇಳಿಕೊಟ್ಟೆ. ನಾ ಪರಾಕ್ರಮಿ, ಚಿಕ್ಕವರ ಕೂಡ, ನಿರ್ಬಲರ ಕೂಡ ಯುದ್ಧ ಮಾಡಲಿಕ್ಕಿಲ್ಲ. ನಿಮ್ಮ ಐದು ಮಂದಿಯೊಳಗೆ ನೀನಂತೂ ನನ್ನ ಬಲಕ್ಕೆ ವೀರ್ಯಕ್ಕೆ ಸದೃಶನಲ್ಲ. ಅರ್ಜುನ, ನಕುಲ, ಸಹದೇವ ಇವರು ಚಿಕ್ಕವರು. ನನ್ನ ಕೂಡ ಯುದ್ಧ ಮಾಡಲಿಕ್ಕೆ ಭೀಮಸೇನ ಸಮರ್ಥನಿದ್ದಾನೆ. ಭೀಮಸೇನನ ಕೂಡ ಯುದ್ಧ ಮಾಡೇನು' ಎನಲಿಕ್ಕೆ, ಭೀಮಸೇನ ಬಹಳ ಸಂಭ್ರಮ ಉಳ್ಳವನಾಗಿ, 'ಇವತ್ತೆ ವಿಷ್ಣುವೈಷ್ಣವಸ್ರೋಹಿಯನ್ನು ಕೊಂದು ಸ್ವಾಮಿಗೆ ತಿರ್ಪಿಸೇನು' ಎಂದು, ದೇಹ ಉಬ್ಬಿಸಿಕೊಂಡು, ತನ್ನ ಗದಿಗೆ ಸಮವಾದಂಥಾದ್ದು, ದುರ್ಯೋಧನನ ಗದಿಗೆ ಅರ್ಧ ಹೆಚ್ಚು ಉಳ್ಳಂಥಾದ್ದು, ಅಂಥಾ ಗದಿ ನೋಡಿ ಕೊಟ್ಟು ಸಿಂಹನಾದ ಮಾಡತ ನಿಂತನು

ಶ್ರೀಕೃಷ್ಣ ಧರ್ಮರಾಯನ ಕೂಡ ಮಾತನಾಡಿದ, 'ಬಹಳ ಸಂಕಟಪ್ರತಿಜ್ಞೆ ಮಾಡಿದ್ದಿ. ದುರ್ಯೋಧನ ದೈವೇಚ್ಛೆಯಿಂದ ಭೀಮಸೇನನ್ನ ಬೇಡಿಕೊಂಡ. ನಿಮ್ಮನ್ನ ಬೇಡಿಕೊಂಡ ಪಕ್ಷವೇ, ನಿಮ್ಮ ನಾಲ್ಕು ಮಂದಿಯನ್ನೂ ಕೊಂದು. ಬಿಡುವ. ದುರ್ಯೋಧನ ಎಂಥಾ ಪ್ರಬಲನೆಂದರೆ, ದೇವಾಸುರರಿಂದ ಸೋಲೋವನಲ್ಲ. ಅಂಥಾವಗೆ ಭೀಮಸೇನ ಹ್ಯಾಂಗೆ ಕೊಂದಾನೆಂದೀ. ಭೀಮಸೇನ ದೊಡ್ಡ ಪರಾಕ್ರಮಿ. ಗದಾವಿದ್ಯದಲ್ಲಿ ದುರ್ಯೋಧನ ಕುಶಲನಾದರೂ, ಅಸ್ರಯಾಸದಿಂದ ಇವನ್ನ ಕೊಂದಾನು.' ಹೀಂಗೆ ಶ್ರೀಕೃಷ್ಣ ಹೇಳಿದನು. ಭಾರತದಲ್ಲಿ ಬಹಳ ಪ್ರಯಾಸದಿಂದ ಕೊಂದನೆಂದು ಹೇಳತದೆ. "ಭೀಮಸೇನ ಮಹಾ ಸಮರ್ಥ. ದುರ್ಯೋಧನನ ಕೊಲ್ಲುವಲ್ಲಿ ಅತಗೆ ಪ್ರಯಾಸವಿಲ್ಲ. ಜೂಜಿನ ವ್ಯಾಳ್ಯಾದಲ್ಲಿ ದ್ರೌಪದೀಗೆ 'ನನ್ನ ತೊಡೀಸ್ಯಾಲೆ ಕೂಡ್ರಬಾ' ಎಂದು ದುರ್ಯೋಧನ ಕರದಿದ್ದ. ಅಂಥಾ ತೊಡಿ, ಭೀಮಸೇನ ಕಡದೇನೆಂದು ಪ್ರತಿಜ್ಞೆ ಮಾಡ್ಯಾನೆ. ಹೊಕ್ಕಳ ಕೆಳಗೆ ಗದಿ ಹೊಡಿಯು ಬಾರದು. ಇದು ಅಧರ್ಮವಾದರೂ, ದುರ್ಯೋಧನ ಕಪಟತನದಲ್ಲಿ ತಲಿ ಕೆಳಗೆ ಮಾಡಿ, ತೊಡಿ ಮ್ಯಾಲೆ ಮಾಡಿದ ಕಾಲಕ್ಕೆ ಕೊಂದು ಬಿಷ್ಟಾನು. ಭೀಮಸೇನ ಬಲ ಉಳ್ಳವನಾದರೂ, ಕಪಟಿಗೆ ಕಪಟತನದಿಂದ ಕೊಂದಾನು. ದುರ್ಯೋಧನ ಬಹಳ ಯತ್ನ ಉಳ್ಳವ. ಗದಾವಿದ್ಯಾದಲ್ಲಿ ಬಹಳ ಕುಶಲ. ಭೀಮಸೇನ ತಾ ಸಮರ್ಥನಾದರೂ, ಪ್ರಯತ್ನ ಮಾಡುವಾತನಲ್ಲ. ದುರ್ಯೋಧನನ ತೊಡಿ ಸೀಳೇನೆಂದು ಪ್ರತಿಜ್ಞೆ ಮಾಡಿದ್ದಕ್ಕೆ, ಗದಾವಿದ್ಯದಿಂದ ಭೀಮಸೇನ ದುರ್ಯೋಧನನ ತೊಡಿ ಸೀಳ್ಯಾನು." ಹೀಂಗಂತ ಶ್ರೀಕೃಷ್ಣ ಧರ್ಮರಾಯನ ಕೂಡ ಮಾತನಾಡಲಿಕ್ಕೆ,

ಭೀಮಸೇನ ಬಹಳ ಸಂತೋಷ ಉಳ್ಳವನಾಗಿ, ಪ್ರತಿಜ್ಞೆ ಪೂರ್ಣ ಮಾಡಲಿಕ್ಕೆ ಕಾಲ ನಿರೀಕ್ಷೆ ಮಾಡತಿದ್ದ.

ಭೀಮಸೇನ, 'ಪ್ರತಿಜ್ಞೆ ಪೂರ್ಣ ಮಾಡಲಿಕ್ಕೆ ಕಾಲ ನಿರೀಕ್ಷೆ ಮಾಡತಿನ್ದೆ. ಇವತ್ತೀ ನನ್ನ ವಚನ ಸತ್ಯ ಮಾಡೇನು' ಎಂದು ಸಮುಸ್ತರೂ ಕೇಳೋಹಾಂಗೆ ಸಿಂಹನಾದ ಮಾಡತ ಒರಲಾಗಿ, ಆಕಾಶದಲ್ಲಿ ದೇವಾಸುರರು ನೋಡತಿಹೋರು. ರಣರಂಗದಲ್ಲಿ ಉಳದ ಸಮುಸ್ತ ಭೂಪಾಲಕರೂ ಈಕ್ಷಿಸತಿಹೋರು. ಆ ವ್ಯಾಳ್ಯಾದಲ್ಲಿ ಭೀಮಸೇನ ಮಾತನಾಡಿದ, 'ಎಲೋ ದುರ್ಯೋಧನಾ, ನಿನ್ನ ತೊಡಿ ಈ ಹೊತ್ತೀನಾ ಕಡದು ಬಿಸ್ಟಥೀನಿ. ಹೊಕ್ಕಳ ಕೆಳಗೆ ಹೊಡೇಬಾರದು, ಪಾಪ ಬಂದೀತಲ್ಲ ಎಂದೀ, ನಿನ್ನ ಕೊಂದರೆ ನನಗೆ ಪಾಪ ಬಾಹೋ ಹಾಂಗಿಲ್ಲ.' ಹೀಂಗಂತ ಮಾತನಾಡಿ, ಮೊದಲಿಗೆ ರಭಸಯುದ್ಧ ಮಾಡದೆ, ಇನ್ನೂ ಭೀಮಸೇನ ಶಾಂತತ್ವ ಹಿಡಿದಾನೆಂದು ತೋರಿಸಲೋಸುಗ, ದುರ್ಯೋಧನಗೆ ಕರುಣವಿಲ್ಲ, ಪಾಂಡವರಿಗೆ ರಾಜ್ಯ ಕೊಡಲಿಲ್ಲವೆಂದು, ದುರ್ಯೋಧನನ ವ್ಯಾಳೆ ಮಾತು ಇಡಬೇಕಾಗಿ, ಶಾಂತತ್ವ ಲೋಕಕ್ಕೆ ತೋರಿಸಬೇಕಾಗಿ, ಲೋಕಸಮ್ಮತ ಕರ್ತವ್ಯ ಮಾಡಬೇಕೆಂದು, ಭೀಮಸೇನ ಕೋಪಾವಿಷ್ಟನಾಗದೆ, ದುರ್ಯೋಧನನ ಕೂಡ, ಮೆಲ್ಲಗೆ ಯುದ್ಧ ಮಾಡತಿಹೋನು. ದುರ್ಯೋಧನನ ಕೂಡ ಮಂಡಲಾಕಾರ ಯುದ್ಧ ಮಾಡಥಾನೆ. ಅಷ್ಟರೊಳಗೆ ಬಲರಾಮ ತೀರ್ಥಯಾತ್ರಿ ಮಾಡಿ, ಹದಿನೆಂಟು ದಿವಸದೊಳಗೆ, ಭೀಮಸೇನ-ದುರ್ಯೋಧನರ ಗದಾಯುದ್ಧ ಕಾಲದಲ್ಲಿ ಬಂದನು. ತನ್ನ ಶಿಷ್ಯ ದುರ್ಯೋಧನನ ಕಂಡು, ಬಲರಾಮ ಅಂದ, 'ಎಲೋ ದುರ್ಯೋಧನ, ನಿನ್ನಿಂದ ಸರ್ವಸಂಹಾರವಾಯಿತು. ಇನ್ನಾದರೂ ಪಾಂಡವರ ಕೂಡ ಒಳಿತು ಬಳಸು. ಅರ್ಧ ರಾಜ್ಯ ಆಳಿಕೊಂಡು ಸುಖದಲ್ಲಿರು. ನಾ ಮಧ್ಯಸ್ಥನಾಗಿ ಶಿದ್ದಿಡಥೀನಿ' ಎಂದಲ್ಲಿ, 'ನನ್ನ ಹನ್ನೊಂದು ಅಕ್ಷೋಹಿಣಿ ಸೇನಿ ಸಂಹಾರವಾಯ್ತು. ತಮ್ಮಂದರು ಸತ್ತು-ಹೋದರು. ಇನ್ನು ನನ್ನ ಬದುಕೋಣ ಯಾತಕ್ಕೆ! ನೀನಾದರೂ ನನ್ನ ವ್ಯಾಲಿನ ವಾತ್ಸಲ್ಯದಿಂದ ಹಿತವಾತು ಆಡಿದ್ದಿ. ಆದರೂ ಆ ಮಾತು ನನಗೆ ಹಿತ ತೋರೋದಿಲ್ಲ.' ಹೀಂಗೆಂದು ದುರ್ಯೋಧನ ಮಾತನಾಡಿದನು. ತೀರ್ಥಯಾತ್ರಿ ಮಾಡಿಕೊಂಡು ಬಂದಾನೆಂದು ಪಾಂಡವರು, ಬಲರಾಮಗೆ ಪಾದಪ್ರಕ್ಷಾಳನಿ ಮಾಡಿ ಕೂಡ್ರಿಸಿ, ಬಹಳ ಆದರ ಬಹುಮಾನ ಮಾಡಿದರು.

ಸಮುಸ್ತರೂ ಕುಳಿಥಾರೆ. ಭೀಮಸೇನ ದುರ್ಯೋಧನನ ನೋಡಥಾನೆ. ಯುದ್ಧಕಾಲದಲ್ಲಿ ದುರ್ಯೋಧನ ಕಪಟತನದಿಂದ ತಲಿಕೆಳಗಾದ. ಆಗ 'ಹೇ ಭೀಮಸೇನ! ಇದೇ ವ್ಯಾಳ್ಯಾ' ಎಂದು ಶ್ರೀಕೃಷ್ಣ ಅನಲಿಕ್ಕೆ, ಭೀಮಸೇನ ಆದೇ ಕ್ಷಣದಲ್ಲಿ, ದುರ್ಯೋಧನನ ಪೃಷ್ಠಮೂಲದಲ್ಲಿ ಗದಿ ಹೊಡದು, ತೊಡಿಗಳು ಕಡದುಬಿಟ್ಟ. ಭೀಮಸೇನನ ಗದಿಯಿಂದ ಎರಡೂ ತೊಡಿ ಸೀಳಿಸಿಕೊಂಡು, ದುರ್ಯೋಧನರಾಯ,

ಭೂತಳದಲ್ಲಿ ಬಿದ್ದ. ಜೂಜುಕಾಲದಲ್ಲಿ ಶ್ರೀಕೃಷ್ಣನ್ನ ಪಣಕ್ಕೆ ಇಡೆಂದಿದ್ದ. ಆ ಸಿಟ್ಟು ಹಿಡದು, ಭೀಮಸೇನ ದುರ್ಯೋಧನನ ತಲೀ ತನ್ನ ಕಾಲಪೆಟ್ಟಿನಿಂದ ಒರಸ ಹೊಕ್ಕ. ದುರ್ಯೋಧನ ಜನ್ಮಾರಭ್ಯ ಏನು ಪುಣ್ಯ ಮಾಡಿದ್ದ, ಆದಷ್ಟೂ ಭೀಮಸೇನ ಸ್ವೀಕರಸ್ತಿಹ. ಪಾದಪಾದದಿಂದ ದುರ್ಯೋಧನನ ತಲೀ ಮರ್ದಿಸತ, 'ಎಲೋ ಪಾಪೀ, ನಮ್ಮ ಸ್ವಾಮಿ ಕೃಷ್ಣದೇವರು, ಹಸ್ತಿನಾವತೀಗೆ ಸಂಧಾನಕ್ಕೆ ಬಂದಿರಲಾಗಿ, ಕಟ್ಟಹಾಕಬೇಕೆಂದು ಮಾಡಿದ್ದಿ. ನಾವು ವನಕ್ಕೆ ಹೋಗೋವಾಗ ನಮ್ಮನ್ನೆಲ್ಲ ಅಣಕಸತಿದ್ದಿ.' ಹೀಂಗಂತ ಖೇದಿಸಿ, ತನ್ನ ಪಾದತಳದಿಂದ ತಲೀ ಒರಸಲಿಕ್ಕೆ, ಬಲರಾಮಗೆ ಬಹಳ ಸಿಟ್ಟು ಬಂತು. ಅಷ್ಟೂರೂ ಪಾಂಡವರ ಪಕ್ಷಪಾತಿಗಳೇ. ತಾ ದಾರಿಗೆ ಹೇಳ್ಯಾನು! 'ಎಲೈ ದೇವತಿಗಳಿರ್ಯಾ ನೀವು ನೋಡಿ, ಪಾಂಡವರು ಏನು ಅನ್ಯಾಯ ಮಾಡಥಾರೆ! ಸುಮ್ಮಗೆ ಕೊಂದುಬಿಡಬಾರದೇ! ಕಾಲಕಾಲೀಲಿ ತುಳೀಥಾನೆ. ನೀವೆಲ್ಲಾ ನೋಡರಿ' ಎಂದು ಕೈ ಮ್ಯಾಲಕ್ಕೆ ಎತ್ತಿ, ಮೇಲ್ಮುಖ ಮಾಡಿಕೊಂಡು ಒದರಿದನು. ಭೀಮಸೇನ ಒರಸೋದು ಬಿಡವಲ್ಲ.

ಬಲರಾಮ ಸಿಟ್ಟು ತಾಳಲಾರದೆ, ವನಕಿ, ನೇಗಲು ಹಿಡಕೊಂಡು ಭೀಮಸೇನನ ಮ್ಯಾಲೆ ಬರಲಿಕ್ಕೆ, ಭೀಮಸೇನ ಬಲರಾಮನ ಲೆಕ್ಕಿಸದೆ, ನಿರ್ಭಯದಿಂದ, ತನ್ನ ಪಾದತಳದಿಂದ, ಮತ್ತಷ್ಟು ದುರ್ಯೋಧನನ್ನ ತುಳೀತಿಹ. ಭೀಮಸೇನ ಚಂಚಲನಾಗಲಿಲ್ಲ. ಬಲರಾಮ ಹರಹರದು ಬರಲಿಕ್ಕೆ, ಕೃಷ್ಣ ಬಲರಾಮನ ಕೈ ಹಿಡದು ನಿಂದರಿಸಲಾಗಿ, 'ಭೀಮಸೇನ ಬಹಳ ಅಧರ್ಮ ಮಾಡಥಾನೆ' ಹೀಂಗಂತ ಬಲರಾಮ ಅನಲಿಕ್ಕೆ, 'ಎಲೈ ಅಣ್ಣಾ! ಭೀಮಸೇನ ಬಹಳೇ ದಯಮಾಡಿದ. ಹೇ ಬಲರಾಮಾ, ನೀ ನಮ್ಮ ಅಣ್ಣ, ನಮ್ಮಾತನಾಗಿ ಅಸತ್ಯ ಪಕ್ಷಪಾತ ವಹಿಸತಿದ್ದಿ. ನೀ ಹಿರಿಯನಾಗಿ ಬುದ್ಧಿ ತಿಳೋದಿಲ್ಲ. ಭೀಮಸೇನ ಏನು ಮಾಡಥಾನೆ ಅದಷ್ಟೂ ಅಧರ್ಮವೇ ಅಲ್ಲ.' ಹೀಂಗಂತ ಅನಲಿಕ್ಕೆ, 'ಎಲ್ಲೇ ಧರ್ಮ! ಗದೀ ಹೊಕ್ಕಳ ಕೆಳಗೆ ಹೊಡದ. ಮಂಡಲಾಕಾರ ಯುದ್ಧದಲ್ಲಿ ಗದೀ ಹೊಕ್ಕಳ ಕೆಳಗೆ ಹೊಡೀಬಾರದೆಂದು ಧರ್ಮಶಾಸ್ತ್ರವದೆ.' ಹೀಂಗೆ ಬಲರಾಮ ಅನಲಿಕ್ಕೆ, 'ಕಪಟತನದಿಂದ ದುರ್ಯೋಧನ ತಲಿಗೆಳಗಾದಕಾರಣ, ಭೀಮಸೇನ ತನ್ನ ಪ್ರತಿಜ್ಞೆ ಸತ್ಯ ಮಾಡಬೇಕಾಗಿ, ದುರ್ಯೋಧನನ ತೊಡೀ ಕಡದುಬಿಟ್ಟಾನೆ. ಭೀಮಸೇನ ಅಧರ್ಮ ಮಾಡಿಲ್ಲ.' ಈ ಪ್ರಕಾರ ಕೃಷ್ಣ ಅನಲಿಕ್ಕೆ, ಬಲರಾಮಗೆ ವಿಶ್ವಾಸ ಆಗಲಿಲ್ಲ. 'ತನ್ನ ಮುಂದೇ ತಮ್ಮವರು ಏನು ಅನ್ಯಾಯ ಮಾಡಿದರೂ ಏನು ಅಧರ್ಮ ಮಾಡಿದರೂ ಮುಚ್ಚಿಕೋಬೇಕು, ಹೊರಚೆಲ್ಲಬಾರದು, ಸುಮ್ಮಗೆ ಇರಬೇಕು' ಎಂದು, 'ದುರ್ಯೋಧನ ನನ್ನ ಶಿಷ್ಯ, ಪಾಂಡವರು ಅಧರ್ಮ ಮಾಡಿದರು' ಎಂದು ಬಲರಾಮ, ಸಿಟ್ಟಿಗೆ ಬುದ್ಧಿ ಕೊಟ್ಟು ದ್ವಾರಾವತಿಗೆ ಹೋದ.

ಬಲರಾಮ ದ್ವಾರಾವತಿಗೆ ಹೋದನ್ಮ್ಯಾಲೆ, ಧರ್ಮರಾಯ ಶ್ರೀಕೃಷ್ಣನ್ನ ಕೇಳ್ತಾನೆ. 'ಬಲರಾಮ ದ್ವಾರಾವತಿಗೆ ಹೋದ. ಭೀಮಸೇನ ದುರ್ಯೋಧನನ ಕೊಂದದ್ದು ಧರ್ಮವೋ, ಅಧರ್ಮವೊ?' ಎಂದು ಕೇಳಲಾಗಿ, ನಿಶ್ಚಯವಾಗಿ ವಿಶ್ವಾಸ ಹುಟ್ಟಿಸಿಕೊಡಬಾರದೆಂದು, 'ಹೇ ರಾಯಾ, ಪಾಪಿಗಳಿಗೆ ಧರ್ಮದಿಂದ ಕೊಲ್ಲಬಾರದು. ಅಧರ್ಮದಿಂದ ಕೊಲ್ಲಬೇಕು. ಅಧರ್ಮದಿಂದ ಪಾಪಿಗಳ ಕೊಂದರೆ ದೋಷವಿಲ್ಲ, ಅದಷ್ಟೂ ಭೂಷಣವೆ. ಪೂರ್ವದಲ್ಲಿ ದೇವತಿಗಳು ದೈತ್ಯರನ್ನು ಮಹಾವಂಚನೆಯಿಂದ ಕೊಂದಾರೆ. ಏನು ಕಾರಣೆಂದರೆ, ಪಾಪಿಷ್ಟರನ್ನ ಧರ್ಮದಿಂದ ಕೊಲ್ಲಬಾರದು. ಇವರನ್ನ ಅಧರ್ಮದಿಂದ ಕೊಂದರೆ ದೋಷವಿಲ್ಲ. ಯಜ್ಞದಲ್ಲಿ ಪಶುಹಿಂಸ ಮಾಡಿದರೂ ಹ್ಯಾಂಗೆ ದೋಷವಿಲ್ಲ, ಹಾಂಗೆ ಗದಾಯುದ್ಧದಲ್ಲಿ ನಾಭಿ ಕೆಳಗೆ ಹೊಡೆದರೆ ದೋಷವಿಲ್ಲ.' ಸ್ವಾಮಿ, ತಾನೇ ರಾಯನಲ್ಲಿ ನಿಂತು, ಸಂಶಯ-ಯುಕ್ತನ್ನ ಮಾಡಿ, ಅರ್ಜುನಗೆ ನಿಶ್ಚಯಜ್ಞಾನವಾಗಬೇಕಾಗಿ, ದುರ್ಯೋಧನನ ಕೊಂದದ್ದು ಧರ್ಮವೇ ಅಂತ ಹೇಳಿದ. 'ಭೀಷ್ಮ ದ್ರೋಣ ಕರ್ಣ ಮೊದಲಾದವರನ್ನ ಒಂದೊಂದು ಉಪಾಯದಿಂದ ಕೊಂದೀವಿ. ಶಿಖಂಡೀನ ಮುಂದುಮಾಡಿಕೊಂಡು ಭೀಷ್ಮನ್ನ ಕೊಂದೀವಿ. ದ್ರೋಣಾಚಾರ್ಯ ಬಹಳ ಭಯಂಕರ ಯುದ್ಧ ಮಾಡಲಾಗಿ, ಅಶ್ವತ್ಥಾಮ ಹತನಾದನೆಂದು, ನಿನ್ನಿಂದ ಅನ್ನಿಸಿ, ಧೃಷ್ಟದ್ಯುಮ್ನನ ಕೈಲಿ ಕೊಲ್ಲಿಸೀವಿ. ಕರ್ಣನ ರಥದ ಗಾಲಿ ಭೂಮಿ ನುಂಗಿರಲಿಕ್ಕೆ, ಅವಕಾಶ ಕೊಡದೆ ಕರ್ಣನ ಸಂಹರಿಸೀವಿ. ಈ ಪ್ರಕಾರ ಉಪಾಯದಿಂದಲೇವೆ ಕೊಂದೀವಿ. ದುರ್ಯೋಧನ ಪಾಪಿಗಳೊಳಗೆ ಮಹಾ ಪಾಪಿ. ಇವನ್ನ ಅಧರ್ಮದಿಂದ ಕೊಂದರೆ ಪಾಪವಿಲ್ಲ. ಭೀಮಸೇನ ಏನು ಮಾಡಿದ್ದೂ, ಮುಖ್ಯಧರ್ಮ. ಆಪತ್ಕಾಲಕ್ಕೆ ಧರ್ಮ ಎಂತ ಯಾರು ತಿಳೀಥಾರೆ, ಅವರು ಭೀಮಸೇನನ ಅರಿತವರಲ್ಲ. ದುರ್ಯೋಧನ ಗದಾ-ಯುದ್ಧದಲ್ಲಿ ಜರಾಸಂಧನ ಸಮ, ಅಂಥಾ ದುರ್ಯೋಧನನ ಕೊಂದಾನೆ. ಭೀಮ-ಸೇನ ಮಾಡಿದ್ದು ಬಹಳ ಸಮೀಚೀನ ಧರ್ಮ.' ಹೀಂಗಂತ ಶ್ರೀಕೃಷ್ಣ ಅಂದ. ಧರ್ಮರಾಯಗೆ ಸಂಶಯಜ್ಞಾನ ಪ್ರಾಪ್ತವಾಯಿತು. ಆಗ ಮತ್ತೂ ಕೃಷ್ಣ ಮಾತ-ನಾಡಥಾನೆ. 'ಈಗ್ಲೆ ಭೂಭಾರ ಎಷ್ಟು ಇಳಿಯಿತೋ, ಅಷ್ಟೂ ನನ್ನ ಸೇವೆ ಆಯಿತು. ಮುಖ್ಯ ಧರ್ಮಪುಣ್ಯ ಭೀಮಸೇನಗೆ ಬಂತು.' ಈ ಪ್ರಕಾರ ರಣರಂಗ-ದಲ್ಲಿದ್ದ ಸಮಸ್ತರೂ ಕೇಳೋಹಾಂಗೆ ಶ್ರೀಕೃಷ್ಣ ಗಂಭೀರವಚನಗಳಾಡಿದರೂ, ಧರ್ಮರಾಯಗೆ ವಿಶ್ವಾಸವಾಗಲಿಲ್ಲ.

ಶ್ರೀಕೃಷ್ಣನ ಮಾತು ಕೇಳಿದ ದುರ್ಯೋಧನ ಮಾತನಾಡಿದ. ಈ ಜನ್ಮದಲ್ಲಿ ಕೆರಿ ಭಾವಿಗಳ ಕಟ್ಟಿಸಿದೆ. ವೈರಿಗಳ ತಲೀಮ್ಯಾಲೆ ಕಾಲು ಇಟ್ಟಿ ಭೋಗಗಳ ಭೋಗಿಸಿದೆ. ಕಡೀಲಿ, ಯುದ್ಧದಲ್ಲಿ ಮೃತ್ಯುವಿಗೆ ಅಭಿಮುಖನಾಗಿ ಉತ್ತಮಗತಿ ಐದಿದ್ದೀನಿ. ಈ ಪಾಂಡವರು, ನಾ ಜೀವಂತನಿರಲಿಕ್ಕೆ, ಕಷ್ಟವನ್ನೇ ಭೋಗಿಸಿದರು.

ಕಪಟದಿಂದ ಯುದ್ಧ ಮಾಡಿ ಗೆದ್ದರು. ಭೀಷ್ಮ, ದ್ರೋಣ, ಕರ್ಣರೆಂಬ ರತ್ನಗಳಿಂದ ಹೀನವಾದ ಭೂಮಿಯನ್ನ, ಪಾಂಡವರು ಉಪಭೋಗ ಮಾಡಲಿ.' ಹೀಂಗಂತ ದುರ್ಯೋಧನ ಮಾತನಾಡಲಿಕ್ಕೆ, ದೇವತಿಗಳು ಆಕಾಶದಿಂದ ಹೂವಿನ ಮಳಿಗರೆಯಲಿಕ್ಕೆ, ದುರ್ಯೋಧನ ಏನಾಡಿದ್ದೂ ಸತ್ಯವೆಂದು ಧರ್ಮರಾಯಗೆ ಸಂಶಯ ಬಿತ್ತು. 'ಪ್ರತ್ಯಕ್ಷವಾಗಿ ಭೀಷ್ಮಾದಿಗಳ ಕೊಂದೆವು. ಬಲರಾಮನೂ ಅಂದ. ದುರ್ಯೋಧನ ಅನ್ನಲಿಕ್ಕೆ ದೇವತಿಗಳು ಹೂವಿನ ಮಳಿಗರೆದರು.' ಈ ಪ್ರಕಾರ ಧರ್ಮರಾಯ ಸಂಶಯಗ್ರಸ್ಥನಾದ. ದೇವತಿಗಳು ಏನುಕಾರಣ ಪುಷ್ಪವೃಷ್ಟಿ ಮಾಡಿದರೆಂದಲ್ಲಿ, ದುರ್ಯೋಧನ ಆಡಿದ ಮಾತು ಯಥಾರ್ಥವೆಂಬಂತೆ, ದುರ್ಯೋಧನಗೆ ತೋರಿಸಿ, ಅವನ್ನ ಅಂಧಂತಮಸ್ಸಿಗೆ ಹಾಕಬೇಕಾಗಿ, ಪುಷ್ಪವೃಷ್ಟಿಗೈದರು. ಅದು ಕಂಡು 'ನಾವು ಬಹಳ ಅನ್ಯಾಯ ಮಾಡಿದೆವು' ಎಂತ ಧರ್ಮರಾಯ ತಿಳಿದ. ದುರ್ಯೋಧನನ ವ್ಯಾಲಿನ ಸ್ನೇಹದಿಂದ, 'ಪಾಂಡವರು ಅನ್ಯಾಯ ಮಾಡಿದರು' ಎಂದು ಅಶ್ವತ್ಥಾಮ ಅಂತಿಹ. ಹಸ್ತಿನಾವತೀಲಿ ಸಂಜಯನೂ ಧೃತರಾಷ್ಟ್ರಗೆ ಇದೇ ಪ್ರಕಾರ ಹೇಳತಿಹ. 'ಕಪಟತನದಲ್ಲಿ, ಈ ಹೊತ್ತು ಪಾಂಡವರು ದುರ್ಯೋಧನನ ಕೊಂದರು. ಭೀಮ. ಸೇನ ಕಾಲೀಲೆ ದುರ್ಯೋಧನನ ತಲಿ ಒರಸಿಬಿಟ್ಟ. ದುರ್ಯೋಧನ, ನಿನ್ನ ಮಗ, ತೊಡೀ ಸೀಳಿಸಿಕೊಂಡು ರಣರಂಗದಲ್ಲಿ ಬಿದ್ದಾನೆ.' ಹೀಂಗೆ ಸಂಜಯ ಹೇಳತಿಹ. ಬಲರಾಮ 'ಪಾಂಡವರು ಬಹಳ ಅನ್ಯಾಯ ಮಾಡಿದರು' ಎಂದು ದೇವತಿಗಳಿಗೆ ಒದರಹೇಳಿ, ದ್ವಾರಕಿಗೆ ಹೋದ. ಇವರೆಲ್ಲ ಬುದ್ಧಿಪೂರ್ವಕ ಅಂದವರಲ್ಲ.

ದುರ್ಯೋಧನ, ರಣರಂಗದಲ್ಲಿ ತೊಡೀ ಸೀಳಿಸಿಕೊಂಡು ಬಿದ್ದು, ಆತ್ಮಸ್ತುತಿ ಮಾಡಿಕೊಳ್ಳತ, ಪರನಿಂದಾ ಮಾಡತ, ಹರಿದ್ವೇಷಗೈಯತ, ಹರಿಭಕ್ತರ ವೈರತನ ಮಾಡತ ಬಿದ್ದಾನೆ. ಶ್ರೀಕೃಷ್ಣ ಪಾಂಡವರಿಗೆ ಅಂದ, 'ವೈರಿ ಬಿದ್ದ, ಹಿಂದಕ್ಕೆ ತಿರಗರಿ' ಎಂತ ಅನಲಿಕ್ಕೆ, ಪಾಂಡವರು ವೈರಿಗಳ ಕೊಂದು, ಬಹಳ ಜಯಶೀಲರಾಗಿ, ನಾನಾ ವಾದ್ಯಗಳ ಬಾರಿಸಿಕೊಳತ, ಚತುರಂಗಸೇನಿಯಿಂದ ಯುಕ್ತರಾಗಿ ತಿರಗಿದರು. ಬ್ರಹ್ಮಾದಿ ದೇವತಿಗಳು ಸ್ವಾಮಿಗೆ 'ಜಯ ಜಯ!' ಎಂದು, ಮಂದಾರಪಾರಿಜಾತ ಹೂವಿನ ಮಳಿಗರೆದರು. ಆಕಾಶಮಾರ್ಗದಲ್ಲಿ ಸ್ವಾಮಿಯನ್ನ ವಾಲ್ಮೈಸತಿಹೋರು. ಸ್ವಾಮಿ ದುರ್ಯೋಧನನ್ನ ಕೊಲ್ಲಿಸಿ, ಮುಗುಳುನಗೆ ನಗತ, ಸಮಸ್ತ ಭೂಪಾಲರ ಕೂಡಿಕೊಂಡು, ಪಾಂಡವರ ಸಹವಾಗಿ ಜನಾರ್ದನ, ಶಿಬಿರಕ್ಕೆ ಹೋದನು.

ತರುವಾಯ ಧೃತರಾಷ್ಟ್ರನ ಮಗ, ಯುಯುತ್ಸು - ವೈಶ್ಯ ಕನ್ನಿಕೆಯಲ್ಲಿ ಹುಟ್ಟಿದವ—ದುರ್ಯೋಧನನ ಪಕ್ಷಪಾತಿ ಆಗದೆ ಪಾಂಡವರ ಕಡಿಗೆ ಒಂದಿದ್ದ, ಕೌರವಸೇನಿ ಹನ್ನೊಂದು ಅಕ್ಷೋಹಿಣಿ ಸಂಹಾರವಾದಮ್ಯಾಲೆ, ಕೃಷ್ಣನ್ನ ಕೇಳಿದ್ದಾನೆ. 'ನಮ್ಮ ತಂದಿ ಧೃತರಾಷ್ಟ್ರ, ಈ ಮಕ್ಕಳು ಸತ್ತ ದುಃಖವಾರ್ತಿ ಕೇಳಿ, ಶೋಕಾತಿಶಯನಾಗಿದ್ದಾನು. ಸಮಾಧಾನ ಮಾಡಲಿಕ್ಕೆ ಹೋಗಥೀನಿ'

ಎಂದು, ಶ್ರೀಕೃಷ್ಣನ್ನ ಕೇಳಲಿಕ್ಕೆ, 'ನೀನು ಹೋಗು. ನಾನೂ ಗತಲೋಚನನ ಸಮಾಧಾನ ಮಾಡಲಿಕ್ಕೆ ಬರುವೆ' ಎಂದು ಶ್ರೀಕೃಷ್ಣ ಹೇಳಿದ. ಯುಯುತ್ಸು, ಶ್ರೀಕೃಷ್ಣ ಪಾಂಡವರ ತಿಪ್ಪಣೇ ಕೊಂಡು, ತನ್ನ ತಂದಿ ಸಮಾಧಾನ ಮಾಡಲು ಹಸ್ತಿನಾವತಿಗೆ ಬಂದನು. ಸ್ವಾಮಿ, ಕಮಲೇಕ್ಷಣ ಪಾಂಡವರನ್ನೆಲ್ಲ ಶಿಬಿರದಲ್ಲಿಟ್ಟು, 'ನಾ ನಾಗಪುರಿಗೆ ಹೋಗಿ, ಅಂಧನೃಪನ ಸಮಾಧಾನ ಮಾಡಿ ಬರಥೀನಿ' ಎಂದು ಹೇಳಿ, ಗಜಪುರಕ್ಕೆ ಹೋದನು. ಆಲ್ಲಿ ಅಂಧನೃಪನ್ನ ಬಹಳವಾಗಿ ಸಮಾಧಾನ ಮಾಡಿದ್ದಾನೆ. 'ಆತ ದಾರು? ನೀ ದಾರು? ದೇಹಸಂಬಂಧದಿಂದ ನಿನ್ನ ಮಗನಾಗಿ ಹುಟ್ಟಿದ್ದ. ದೇಹ ತಾ ಅನಿತ್ಯ, ಜೀವ ನಿತ್ಯ, ಜೀವಕ್ಕೆ ನಾಶವಿಲ್ಲ. ರಾಯಾ, ಪಾಪಿಗಳು ಸತ್ತರೆ, ಜ್ಞಾನಿಗಳು ದುಃಖಪಡಬಾರದು. ಹೀನಮಕ್ಕಳು ನಿನ್ನ ಬುದ್ಧೀನೆಲ್ಲ ಕೆಡಸಿದರು. ಅದೃಷ್ಟನಾಮಕ ಪರಮಾತ್ಮನ ಇಚ್ಛೆಯಿಂದ, ತಮ್ಮ ಪಾಪದಿಂದ ತಾವೇ ಸತ್ತರು. ಪಾಂಡವರಿಗೆ ಅರ್ಧರಾಜ್ಯ ಕೊಡೆಂತ ನೀ ಹೇಳಿದಿ, ಗಾಂಧಾರಿ ಹೇಳಿದಳು. ಭೀಷ್ಮ ದ್ರೋಣ ಮೊದಲಾದವರೆಲ್ಲ ಹೇಳಿದರು. ನಿನ್ನ ತಮ್ಮ ವಿದುರ ಹೇಳಿದ. ನಾ ಸಂಧಾನಕ್ಕೆ ಬಂದು, ಐದು ಮಂದಿಗೆ ಐದು ಗ್ರಾಮಗಳು ಕೊಡೆಂತ ಕೇಳಿದೆ. ಪಾಪಿ! ದಾರ ಮಾತಿಗೂ ಮಣಿದು ಬರಲಿಲ್ಲ. ನನ್ನ ಕಟ್ಟಿಹಾಕಬೇಕಂತ ಮಾಡಿದ, ತನ್ನ ಪಾಪದಿಂದ ತಾನೇ ಸತ್ತುಹೋದ. ರಾಯಾ, ನೀ ಇನ್ನು ವ್ಯರ್ಥ ದುಃಖಬಡಬ್ಯಾಡ. ಸತ್ತವರಂತೂ ಸತ್ತುಹೋದರು. ಸುಮ್ಮಗೆ ಕ್ಲೇಶಕ್ಕೆ ಪಾತ್ರನಾಗಬ್ಯಾಡ.' ಹೀಂಗೆ ಜನಾರ್ದನ, ಧೃತರಾಷ್ಟ್ರನ್ನ ಬಹಳ ಪ್ರಕಾರ ಸಮಾಧಾನ ಮಾಡಿ, ಕುರುಕ್ಷೇತ್ರಕ್ಕೆ ಪಾಂಡವರ ಶಿಬಿರಕ್ಕೆ ಬಂದನು. ಪಾಂಡವರಿಗೆ ಶ್ರೀಕೃಷ್ಣ ಹೇಳಿದ, 'ದುರ್ಯೋಧನನ ಹನ್ನೊಂದು ಅಕ್ಷೋಹಿಣಿ ಬಲ ಸತ್ತುಹೋಯಿತು. ಅವರವರ ಗೃಹದಲ್ಲಿ ದಿವ್ಯ ವಸ್ತ್ರಾಭರಣಗಳು, ದಿವ್ಯ ರತ್ನಗಳು ಏನೇನು ಸಕಲ ಸಾಮಗ್ರಿ ಇದ್ದೀತೊ ಅಷ್ಟೂನೂ ಕೊಂಡು-ಬರಬೇಕು' ಎಂದು ಹೇಳಿ, ಅಶ್ವತ್ಥಾಮಗೆ ಅವಕಾಶ ಕೊಡಬೇಕಾಗಿ, ಪಾಂಡವರನ್ನ, ಸಾತ್ಯಕಿಯನ್ನ. ಕೂಡಿಕೊಂಡು, ದುರ್ಯೋಧನನ ವಸ್ತ್ರಗೃಹಕ್ಕೆ, ಯಾದವ-ಶ್ರೇಷ್ಠ ಬಂದನು. ಇಲ್ಲಿಗೆ ಗದಾಪರ್ವ ಭಾರತಕಥ ಸಂಪೂರ್ಣವಾಯಿತು.

ಇನ್ನು ಸೌಪ್ತಿಕಪರ್ವ ಭಾರತಕಥ ಹೇಳಥಾರೆ. ಅಶ್ವತ್ಥಾಮ, ಕೃಪಾಚಾರ್ಯ, ಕೃತವರ್ಮ, ವನದೊಳಗೆ ಅಡಗಿಕೊಳ್ಳಲಿಕ್ಕೆ ಹೋಗಿದ್ದರು. ದುರ್ಯೋಧನಗೆ ಏನು ಅವಸ್ಥೀ ಆಗಿದ್ದೀತೊ ಎಂದು ನೋಡಲಿಕ್ಕೆ ಬರಥಾರೆ. ದುರ್ಯೋಧನ ತೊಡೆ ಕಡಸಿಕೊಂಡು ರಣರಂಗದಲ್ಲಿ ಬಿದ್ದಾನೆ! ನರೀ ನಾಯಿಗಳು ತೊಡೀ ಸೀಳಿದ್ದು ಎಳಕೊಂಡು ತಿಂಥವೆ. ದುರ್ಯೋಧನ ನಿಟ್ಟುಸಿರು ಹಾಕತ ಬಿದ್ದಾನೆ. ಈ ಅವಸ್ಥಿ ಅಶ್ವತ್ಥಾಮ ಕಂಡು, 'ಹಾಹಾ! ಅಕಟಕಟಾ! ನನ್ನ ಗೆಳಿಯಗೆ ಈ ಅವಸ್ಥಿ

ಆಗಬೇಕೆ ! ' ಎಂದು ದುಃಖ ಮಾಡಿಕೊಂಡು ದುರ್ಯೋಧನನ ಕೂಡ ಅಶ್ವತ್ಥಾಮ ಮಾತನಾಡಿದ. ' ಹೇ ದುರ್ಯೋಧನಾ, ಕರ್ಣ ಸಾಯಲಿಕ್ಕೇ ನಾ ಹೇಳಿದೆ. ಪಾಂಡವರಿಗೆ ಅರ್ಧರಾಜ್ಯ ಕೊಟ್ಟು ಸುಖದಲ್ಲಿರೆಂದು ಹೇಳಿದರೆ, ನೀ ನನ್ನ ಮಾತು ಕೇಳಲಿಲ್ಲ. ನೀನಂತೂ ಸಾಯುತಿದ್ದಿ. ನಿನ್ನ ಮನೋಬಯಕೆ ಏನದೆ ಹೇಳು. ಸ್ಪಷ್ಟ ಅಂತಃಕರಣ ಉಳ್ಳವನಾಗಿ ಪ್ರಾಣತ್ಯಾಗ ಮಾಡು. ನಾ ನಿನ್ನ ಮನೋಭಿ-ಪ್ರಾಯ ಮಾಡೇನು ' ಎಂದು ಅಶ್ವತ್ಥಾಮ ಕೇಳಲಾಗಿ, ದುರ್ಯೋಧನ ತನ್ನ ಮನೋಭಿಪ್ರಾಯ ಹೇಳಿದ. ' ಪಾಂಡವರ ವಂಶ ನಿರ್ವಂಶ, ನಾಮ ನಿರ್ನಾಮ, ನೀ ಮಾಡು. ಭೂಮಿಯ ಮ್ಯಾಲೆ ಪಾಂಡವರ ವಂಶ ಇಲ್ಲೆನಿಸು. ನನ್ನ ಹೆಂಡತೀನ ಮದುವಿ ಮಾಡಿಕೊಂಡು, ಒಬ್ಬ ಮಗನ್ನ ಹಡಿಯೋಪರಿಯಂತ ನೀ ರಾಜ್ಯವಾಳಿ, ನನ್ನ ವಂಶ ನಿಲ್ಲಿಸು ' ಎಂದು ' ಅಶ್ವತ್ಥಾಮಗೆ ರಾಜ್ಯದಲ್ಲಿ ಪಟ್ಟಾಭಿ-ಷೇಕ ಮಾಡೇನು ' ಎಂದು, ರಣರಂಗದಲ್ಲಿ ಬಿದ್ದ ಹುಡಿಮಣ್ಣು ಎರಡೂ ಕೈಲಿ ತೆಗೆದುಕೊಂಡು, ಮ್ಯಾಲಕ್ಕೆ ಕೈ ನೆಗಹಿ ಅಭಿಷೇಕ ಮಾಡಿದ. 'ನನ್ನ ಸ್ತ್ರೀ ಭೋಗಕ್ಕೆ ಅನುಕೂಲಳಾಗದೇ ಇದ್ದರೆ, ನೀನು ಪರಸ್ತ್ರೀಯಲ್ಲಿ ವೀರ್ಯ ಇಡಬಾರದು ಎಂಬೋದು ಇದ್ದರೆ, ಒಬ್ಬಾಕೀನ್ನ ಮದುವಿ ಮಾಡಿಕೊಂಡು, ಮಗನ್ನ ಹಡದು, ಆತಗೇ ರಾಜ್ಯ ಕೊಡು. ಈ ಪ್ರಕಾರ ಕೌರವಸಂತತಿ ಪರಂಪರಾ ನಡಿಯೋ ಹಾಂಗೆ ಮಾಡು. ಮಗ ಹುಟ್ಟೋಪರಿಯಂತ ನೀನೇ ರಾಜ್ಯ ಆಳು. ನನ್ನ ಅರಸತ್ವ ನಾ ನಿನಗೆ ಕೊಟ್ಟೀನಿ. ಸಾಮ್ರಾಜ್ಯದಲ್ಲಿ ಅಭಿಷೇಕ ಮಾಡೀನಿ. ವೈರಿಗಳ ವಿನಾಶ ಮಾಡು. ಈ ಭೂಮಂಡಲ ನೀನೇ ಆಳು ' ಎಂದು ದುರ್ಯೋಧನ ಅಶ್ವತ್ಥಾಮಗೆ ಹೇಳಿದ.

ದುರ್ಯೋಧನನ ಮನೋರಥ ಪೂರ್ಣ ಮಾಡಬೇಕಾಗಿ, ಅಶ್ವತ್ಥಾಮ ಒಳ್ಳೇದೆಂದು ಅಂಗೀಕಾರ ಮಾಡಿದ. ವಚನವ್ಯಭಿಚಾರ, ಮನೋವ್ಯಭಿಚಾರ ಅಶ್ವತ್ಥಾಮಗೆ ಪ್ರಾಪ್ತವಾಯಿತು. ಬ್ರಹ್ಮಚರ್ಯವ್ರತ ಕೆಟ್ಟುಹೋಯಿತು. ಅಶ್ವತ್ಥಾಮ ತನ್ನಲ್ಲೇ ವಿಚಾರ ಮಾಡಿದ—ತಾನು ಬ್ರಾಹ್ಮಣ. ಪಾಂಡವರು ಸರ್ವಸಮರ್ಥರು. ಸಾಕ್ಷಾತ್ ಪರದೇವತಿ ಶ್ರೀಕೃಷ್ಣ ಅವರಿಗೆ ಸಹಾಯನಿದ್ದಾನೆ. ದೇವರ ಬಲಿಕಿ ಇರಲಿಕ್ಕೆ ಪಾಂಡವರು ತನ್ನಿಂದ ಹ್ಯಾಂಗೆ ವಿನಾಶವಾಗಥಾರೆ ! ಇದು ಅಸಂಭಾವಿತ ಕಾರ್ಯ, ತನ್ನಿಂದ ಆಗದೆಂದು ತಿಳಿದ. ತರುವಾಯ ಅಶ್ವತ್ಥಾಮ, ಕೃಪಾಚಾರ್ಯ, ಕೃತವರ್ಮರು ರಥ ಏರಿಕೊಂಡು ಪುನಃ ವನಕ್ಕೆ ಅಡಗಿಕೊಳ್ಳಲು ಹೋದರು. ಅಶ್ವತ್ಥಾಮಗೆ ದುರ್ಯೋಧನನ ಮತ್ತು ದ್ರೋಣಾಚಾರ್ಯನ ವಧಾ-ಚಿಂತಿಯಿಂದ ನಿದ್ರಿ ಬಾರದು. ಕೃತವರ್ಮ, ಕೃಪಾಚಾರ್ಯ ಮಲಗಿರಲಿಕ್ಕೆ, ಅಶ್ವತ್ಥಾಮಗೆ ಶಕುನವಾಯಿತು. ಆಲದ ಗಿಡದಲ್ಲಿ ಹತ್ತೆಂಟುಸಾವಿರ ಕಾಗಿಗಳವೆ. ರಾತ್ರೀಲಿ ಒಂದು ಗೂಗಿ ಬಂದು, ಕಾಗಿಗಳನ್ನೆಲ್ಲ ಕೊಂದು ಬಿಸ್ಟತಿಹೋದು.

ಅಶ್ವತ್ಥಾಮ, ಮಲಗಿದ್ದ ಕೃಪಾಚಾರ್ಯ, ಕೃತವರ್ಮರಿಗೆ ಹೇಳಿ, ಪಾಂಡವರನ್ನೆಲ್ಲ ಕೊಲ್ಲಬೇಕೆಂದು ರಥ ಏರಿಕೊಂಡು ತೆರಳಿದ. ಕೃತವರ್ಮ, ಕೃಪಾಚಾರ್ಯ ಬ್ಯಾಡವೆಂದು ನಿವಾರಿಸತಿಹೋರು. ಆವರ ಮಾತು ಕಿವಿಗೆ ಹಾಕಿಕೊಳ್ಳದೆ, ರಾತ್ರೀಲಿ ಅಶ್ವತ್ಥಾಮ ತೆರಳಲಿಕ್ಕೆ, ಅಶ್ವತ್ಥಾಮ ಕೃಪಾಚಾರ್ಯನ ಮಾತು ಕೇಳದಿದ್ದರೂ, ಕೃತವರ್ಮನ ಸಹವಾಗಿ ಕೃಪಾಚಾರ್ಯ ಅಶ್ವತ್ಥಾಮನ ಬಳಿವಿಡಿದು ತೆರಳಿದನು.

ಪಾಂಡವರ ಶಿಬಿರಕ್ಕೆ ಮೂರೂ ಮಂದಿ ಬರಥಾರೆ. ಮೂಲರುದ್ರ ಪಾಂಡವರ ಶಿಬಿರ ಕಾಯುಥಾನೆ. ಮೂಲರುದ್ರನ ಕಂಡು, ಅಶ್ವತ್ಥಾಮ ಅಂಜಿದ. ಮೂಲರುದ್ರಗೆ, ಅಶ್ವತ್ಥಾಮನ ಕೂಡ ಯುದ್ಧ ಮಾಡೆಂದು ವಾಸುದೇವ ಹೇಳಿದ್ದ. ಮೂಲರುದ್ರಗೆ ವಾಸುದೇವನ ಆಜ್ಞೆವಾಗಿರಲಿಕ್ಕೆ, ಮೂಲರುದ್ರಗೆ ಅಶ್ವತ್ಥಾಮಗೆ ಭಯಂಕರ ಯುದ್ಧವಾಯಿತು. ಅಶ್ವತ್ಥಾಮನ ಆಯುಧಗಳೆಲ್ಲ ಮೂಲರುದ್ರ ನುಂಗಿಬಿಟ್ಟ. ದೇವರ ಶಕ್ತಿ ಅಚಿಂತ್ಯ! ತಮ್ಮನ್ನ ತಾವೇ ಕೊಂದುಕೊಳ್ಳತಿಹೋರು. ಹೀಂಗೆ ಯುದ್ಧವಾಗೋಣ, ಅಶ್ವತ್ಥಾಮನ ಆಯುಧಗಳೆಲ್ಲ ಹೋದವು. ಅಶ್ವತ್ಥಾಮ ಮನಸ್ಸಿನಿಂದ ಮಾನಸಪೂಜಿಯನ್ನು ಮಾಡಿ, ತನ್ನನ್ನೇ ಪಶು ಮಾಡಿ, ರುದ್ರಾಂತರ್ಗತ ನಾರಾಯಣಗೋಸ್ಕರ ಹೋಮಿಸಲಿಕ್ಕೆ, ನಾರಾಯಣನಿಂದ

ಪ್ರೇರಿತನಾದ ಮೂಲರುದ್ರ, ತುಷ್ಟನಾಗಿ ಪ್ರಸನ್ನನಾಗಿ, ಸರ್ವ ಆಯುಧಗಳು ಅಶ್ವತ್ಥಾಮಗೆ ತಿರಗಿಕೊಟ್ಟ. 'ಕೃಷ್ಣನ ಆಜ್ಞೆದಿಂದ ಪಾಂಡವರ ಶಿಬಿರ ರಕ್ಷಿಸತ ಇದ್ದೆ. ನಿನ್ನ ಒಳಗೆ ಬಿಡಲಿಕ್ಕೆ ಕೃಷ್ಣನ ಆಜ್ಞೆವದೆ. ನೀ ಒಳಗೆ ಹೋಗು, ಮಾರ್ಗ ಬಿಡಥೀನಿ. ಅವಶ್ಯ ಈ ಪ್ರಾಣಿಗಳ ಕೊಲ್ಲು' ಎಂದು ಹೇಳಿ, ಶಿಬಿರದೊಳಗೆ ಅಶ್ವತ್ಥಾಮನ ಹೊಗಿಸಿಬಿಟ್ಟು, ಅಪ್ರತ್ಯಕ್ಷನಾದ. ಶರ್ವತ್ರಾತನ ಕೊಂಡು, ಮೂಲರುದ್ರ ಕೈಲಾಸಕ್ಕೆ ಹೋದ.

ಅಶ್ವತ್ಥಾಮ ಧನುರ್ಬಾಣಗಳ ಹಿಡಕೊಂಡು, ದಾರಿಗೂ ಹೊರಗೆ ಬಿಡಥಾಂಗೆ, ಕೃತವರ್ಮ ಕೃಪಾಚಾರ್ಯರನ್ನು ಹೊರಗೆ ದ್ವಾರದಲ್ಲಿ ಕೂಡ್ರಿಸಿ, ಅಶ್ವತ್ಥಾಮ ಒಳಗೆ ಹೋಗಲಿಕ್ಕೆ, ಪಾರಿವಾಳದೋಪಾದಿ ಕುದುರಿ ಉಳ್ಳ ಧೃಷ್ಟದ್ಯುಮ್ನ ಮಲಗಿಕೊಂಡಾನೆ. ಅಶ್ವತ್ಥಾಮ ಹೋಗಿ ಕಾಲಿಲೆ ಒದ್ದು ಎಬ್ಬಿಸಿದ. ಧೃಷ್ಟದ್ಯುಮ್ನ ಎಚ್ಚರಿಕಿ ಉಳ್ಳವನಾಗಿ, ಗುರುಪುತ್ರ ತನ್ನ ಹತ್ಯದಗೋಸ್ಕರ ಬಂದಾನೆಂದು ತಿಳಿದ. 'ಎಲ್ಲೆ ಗುರುಪುತ್ರಾ, ನಾ ಇನ್ನು ಒದುಕೋಹಾಂಗೆ ಇಲ್ಲ. ನನ್ನ ಕೊಲ್ಲಲಿಕ್ಕೆ ಬಂದೀದಿ. ನಾ ಶಸ್ತ್ರಪಾಣಿಯಾಗಿ ನಿಂತಮ್ಯಾಲೆ ನನ್ನ ಕೊಲ್ಲು, ದಿವ್ಯಗತಿ ನನಗೆ ಆದೀತು. ನನ್ನ ದೇಹವೆಂಬ ಹವಿಸ್ಸು, ಬಾಣಗಳಿಂದ ಈ ರಣಯಜ್ಞದಲ್ಲಿ ಹೋಮಿಸಿಬಿಡು.' ಹೀಂಗಂತ ಧೃಷ್ಟದ್ಯುಮ್ನ ಅನಲಿಕ್ಕೆ, 'ಎಲೋ ಬ್ರಹ್ಮಹತ್ಯಗಾರ! ಗುರುದ್ರೋಹಿಗೆ ದಿವ್ಯಗತಿ ಆಗಕೊಟ್ಟೀನೆ! ನೀ ಅತ್ಯಂತ ಪಾಪಿ ಇದ್ದೀ. ಒಳ್ಳೇ ಗತಿ ನಿನಗ್ಯಾಕೆ!' ಈ ಪ್ರಕಾರ ಅಶ್ವತ್ಥಾಮ ನಿಷ್ಠುರವಚನಗಳ

ಬಿಡಥಾನೆ. ಧೃಷ್ಟದ್ಯುಮ್ನ ಸ್ವಪ್ನ ನೆನಪು ಮಾಡಕೋಥಾನೆ. ದ್ರೋಣನ ಕೊರಳು ಕೊಯಿದಾರಂಭವಾಗಿ, ನಿರಂತರ ದುಃಸ್ವಪ್ನ ಕಾಣತಿಹ. ಅಶ್ವತ್ಥಾಮ ತನ್ನ ಕೈ ಹಿಡದು ಎಳೀತಿಹೋನು. ಈ ಪ್ರಕಾರ ನಿರಂತರ 'ಸ್ವಪ್ನ ಕಂಡದ್ದು ಪ್ರತ್ಯಕ್ಷ ಸಿದ್ಧವಾಯಿತು' ಎಂದು ತಿಳಿದ. ವೈರಿಗೆ ಬಹಳ ಭಂಗದಿಂದ ಕೊಲ್ಲಬೇಕೆಂದು, ಅಶ್ವತ್ಥಾಮ ತನ್ನ ಧನುರ್ಬಾಣ, ಧೃಷ್ಟದ್ಯುಮ್ನನ ಕೊರಳಿಗೆ ಹಾಕಿ, ಶೀಘ್ರ ಕೊಲ್ಲದೆ ವ್ಯಥಿಬಡಿಸಿ, ಮಥನಮಾಡಿ ಕೊಂದುಬಿಟ್ಟನು. ಧೃಷ್ಟದ್ಯುಮ್ನ ತನ್ನ ಅಗ್ನಿಲೋಕಕ್ಕೆ ಹೋದನು. ಅಶ್ವತ್ಥಾಮ, ದ್ರುಪದರಾಯನ ಮಕ್ಕಳು, ಶಿಖಂಡೀ ಯುಧಾಮನ್ಯು ಉತ್ತಮೌಜ ಜನಮೇಜಯ ಎಂಬ ಹೀಂಗೆ ನಾಲ್ಕು ಮಂದಿ ಮಕ್ಕಳನ್ನೆಲ್ಲ ಕೊಂದುಬಿಟ್ಟನು.

ಈ ಪ್ರಕಾರ ಅಶ್ವತ್ಥಾಮ ಮಂದೀನೆಲ್ಲ ಕೊಲ್ಲತಾ ಬರಲಿಕ್ಕೆ, ದ್ರೌಪದೀ ಐದು ಮಂದಿ ಮಕ್ಕಳೂ, ಸಿದ್ರಿಗೈದಿದ್ದರು, ಎಚ್ಚರಗೊಂಡು ಧನುರ್ಬಾಣಗಳ ಹಿಡಕೊಂಡು, ಅಶ್ವತ್ಥಾಮನ ಮ್ಯಾಲೆ ಬಾಣ ಎಚ್ಚಿದರು. ಅಶ್ವತ್ಥಾಮ ಸವ್ಯಾಪ. ಸವ್ಯದಿಂದ, ಪಾಂಡವರ ಮೂರು ಅಕ್ಷೌಹಿಣಿ ಸೇನಿನೆಲ್ಲ ಕೊಲ್ಲತ ಬರಲಿಕ್ಕೆ, ಪ್ರತಿವಿಂಧ್ಯ ಮೊದಲಾದ ದ್ರೌಪದೀ ಐದು ಮಂದಿ ಮಕ್ಕಳು ಯುದ್ಧ ಮಾಡಲಿಕ್ಕೆ, ಅವರನ್ನ ಕೊಂದು ಐದು ತಲೀ ಅಶ್ವತ್ಥಾಮ ಕೈಲಿ ಹಿಡಕೊಂಡು, ಸೇನಿನೆಲ್ಲ ಎಡದ ಕೈಲಿ ಸಂಹಾರ ಮಾಡತಿಹ. ಈ ಪ್ರಕಾರ ಸಂಹಾರ ಮಾಡಲಿಕ್ಕೆ, ಭೀಮಸೇನನ ಮಗ, ಅಚ್ಚ ಭಾರತೀ ಅವತಾರ ಕಾಳೀದೇವಿಯಲ್ಲಿ ಶರ್ವತ್ರಾತನೆಂಬಾತ ಹುಟ್ಟಿದ್ದ. ಅವನ್ನ ಮಹಾರುದ್ರ ಕೈಲಾಸಕ್ಕೆ ಕೊಂಡುಹೋದ. ಆತನ್ನ ಏನು-ಕಾರಣ ಕೊಂಡುಹೋದನೆಂದರೆ, ಕಾಳೀದೇವಿ, ಕಾಶೀರಾಯನ ಮಗಳು, ಕಾಶೀ-ರಾಯ ಮಹಾರುದ್ರನ್ನ ಬೇಡಿಕೊಂಡಿದ್ದ. 'ಪುತ್ರಿಕಾಪುತ್ರನ್ಯಾಯದಿಂದ, ಈ ಕಾಳೀದೇವೀ ಮಗ ನನ್ನ ಮಗನಾಗಿದ್ದಾನೆ. ಇವನ್ನ ರಕ್ಷಿಸು, ಅವಧ್ಯನಾಗಲಿ' ಎಂದು ಬೇಡಿಕೊಂಡಿದ್ದ. ಆದಕಾರಣ, ಶಿಬಿರದಲ್ಲಿ ಶರ್ವತ್ರಾತ ಮಲಗಿರಲಿಕ್ಕೆ, ಮಹಾರುದ್ರ ಅಪ್ರತ್ಯಕ್ಷನಾಗಿ ಕೈಲಾಸಕ್ಕೆ ಹೋಗೋವಾಗ್ಗೆ ಶರ್ವತ್ರಾತನ ಕೊಂಡು. ಹೋದ. ಶರ್ವತ್ರಾತನೆಂದು ಹೆಸರು ಇಟ್ಟುಕೊಂಡಿದ್ದಕ್ಕೆ, ಮಹಾರುದ್ರನಿಂದ ರಕ್ಷಿಸಿಕೊಳ್ಳಲು, ನಾಮ ಅನ್ವರ್ಥಕವಾಯಿತು, ಸತ್ಯವಾಯಿತು. 'ಶರ್ವತ್ರಾತನ ಇಟ್ಟುಹೋದಪಕ್ಷನೇ, ದೈವೇಚ್ಛೆಯಿಂದ ಉಳದರೆ, ಭೀಮಸೇನ ಹಿರಿಯ, ಆತನ ಮಗನ್ನ ಪಟ್ಟಾಭಿಷೇಕ ಮಾಡಬೇಕೆಂದಾರು, ಶ್ರೀಕೃಷ್ಣನ ಮನಸ್ಸಿನಲ್ಲಿ ತನ್ನ ತಂಗೀ ಸುಭದ್ರಾ ಮೊಮ್ಮಗಗೆ ರಾಜ್ಯಾಭಿಷೇಕ ಮಾಡಬೇಕೆಂಬೋದು ಅದೆ.' ಹೀಂಗಂತ ತಿಳಿದುಕೊಂಡಿದ್ದರಿಂದ, ಶರ್ವತ್ರಾತನ್ನ ಮಹಾರುದ್ರ ಕೊಂಡುಹೋದ. ಹದಿನೆಂಟು ಅಕ್ಷೌಹಿಣಿ ಸೇನಿ ಸರ್ವಸಂಹಾರವಾದಮ್ಯಾಲೆ, ಪಾಂಡವರು ಮೂವತ್ತೆಂಟು ವರುಷ ರಾಜ್ಯ ಆಳುವಾಗ, ಶರ್ವತ್ರಾತ ಮಹಾರುದ್ರನ್ನ

ಬೇಡಿಕೊಂಡಿದ್ದಾನೆ. 'ನನ್ನ ನಿರ್ಬಂಧ ಮಾಡಿ ಕೈಲಾಸದಲ್ಲಿಡಬ್ಯಾಡ. ನಮ್ಮ ಹಿರೇರು ರಾಜ್ಯ ಆಳಥಾರೆ. ನಾ ಹೋಗಥೀನಿ, ಉಪ್ಪಣಿ ಕೊಡು' ಎಂದು ರುದ್ರನ್ನ ಬೇಡಿಕೊಂಡಿದ್ದಾನೆ. 'ನೀ ಹೋದರೆ ವ್ಯರ್ಥ ಸತ್ತೀ. ಹೋಗಬ್ಯಾಡ' ಎಂದು ಮಹಾರುದ್ರ ನಿಬಂಧನಿ ಮಾಡಿ ಇಟ್ಟುಕೊಂಡ. ಅಶ್ವತ್ಥಾಮ, ಪಾಂಡವರನ್ನ ನಿರ್ನಾಮ, ನಿರ್ವಂಶ ಮಾಡೇನು' ಎಂದು ಬ್ರಹ್ಮಾಸ್ತ್ರ ಬಿಟ್ಟಿದ್ದ. ಮೂಲರುದ್ರ ಅಶ್ವತ್ಥಾಮಗೆ ಅಂದ, 'ಶರ್ವತ್ರಾತನ ಹೊರ್ತು, ನಿನ್ನ ಬ್ರಹ್ಮಾಸ್ತ್ರ ಸತ್ಯವಾಗಲಿ' ಎಂದು ಹೇಳಿದ ಪ್ರಯುಕ್ತ, ಅಶ್ವತ್ಥಾಮ ಶರ್ವತ್ರಾತನ ರಕ್ಷಿಸಿದ.

ಅಶ್ವತ್ಥಾಮ ದಾರದಾರನ್ನ ಕೊಂದ ಎಂದರೆ, ಚೇಕಿತಾನರಾಯ, ಪಾಂಚಾಲ-ದೇಶದವರೆಲ್ಲರನ್ನೂ, ಕಾಶೀದೇಶದವರನ್ನೂ, ಕರೂಷದೇಶ, ಚೈದ್ಯದೇಶದ ಸಮಸ್ತ-ರನ್ನೂ ಕೊಂದು, ಶಿಬಿರದಲ್ಲಿ ಹೆಂಗಸರು ಮಕ್ಕಳು ಇದ್ದವರನ್ನೆಲ್ಲ ನೋಡಿನೋಡಿ ಕೊಲ್ಲಲಾರದೆ, ಶಿಬಿರಕ್ಕೇ ಬೆಂಕಿ ಹಚ್ಚಿಬಿಟ್ಟ. ಹೆಂಗಸರು ಜೀವ ಉಳಸಿಕೊಂಡು ಹೊರಗ ಬರಲಿಕ್ಕೆ, ದ್ವಾರದಲ್ಲಿ ಕೃತವರ್ಮ, ಕೃಪಾಚಾರ್ಯ, ಶಸ್ತ್ರಪಾಣಿಗಳಾಗಿ ಕುಳತಿದ್ದರು, ಬಂದಬಂದವರನ್ನ ಖಡ್ಗದಿಂದ ಕಡದುಕಡದು ಹಾಕತಿಹೋರು. ಧೃಷ್ಟದ್ಯುಮ್ನನ ಸಾರಥಿ ದ್ವಾರಕ್ಕೆ ಹೋಗಲಿಕ್ಕೆ, ಕೃತವರ್ಮನ ಖಡ್ಗಕ್ಕೆ ಅಂಜಿ, ಹೆಣದೊಳಗೆ ಹೆಣದೋಪಾದಿ ತಾನೂ ಅಡಗಿಕೊಂಡನು. ರಾತ್ರಿ ಅಂಧಕಾರದಲ್ಲಿ ಬಹಳ ಪ್ರಾಣಿಗಳ ಕೃತವರ್ಮ ಸಂಹರಿಸಲಿಕ್ಕೆ, ಧೃಷ್ಟದ್ಯುಮ್ನನ ಸಾರಥಿಗೆ ಅವಕಾಶ-ವಾಯಿತು. ಹೆಣದೊಳಗಿಂದ ನುಣಚಿಕೊಂಡು, ಸಾರಥಿ ರಾತ್ರೀಲಿ ಓಡಿಹೋಗಿ ದ್ರೌಪದಿಗೆ ಹೇಳಿದ. 'ನಿನ್ನ ಮಕ್ಕಳು ಪ್ರತಿವಿಂಧ್ಯ ಮೊದಲಾದವರು ಎಲ್ಲರೂ ಸತ್ತುಹೋದರು. ಪಾಂಡವರು ಐದು ಮಂದಿ, ಕೃಷ್ಣ. ಸಾತ್ಯಕಿ ಹೊರ್ತು ಸರ್ವ-ಸಂಹಾರವಾಯಿತು' ಎಂದು ಹೇಳಲಿಕ್ಕೆ, ದ್ರೌಪದೀ ಪುತ್ರಶೋಕ ತಾಳಲಾರದೆ, ಭೀಮಸೇನನ ಸಮೀಪಕ್ಕೆ ಹೋದಳು. ಅಶ್ವತ್ಥಾಮನ ಅಗ್ಗಳಿಕೆ ಕೇಳಿ ಭೀಮಸೇನ, ಧನುರ್ಬಾಣಗಳ ಹಿಡಕೊಂಡು, ಅಶ್ವತ್ಥಾಮನ ಹುಡಕತ ಬಂದನು. ಅಶ್ವತ್ಥಾಮ ದುರ್ಯೋಧನನ ಪ್ರೀತಿ ಬಡಿಸಬೇಕಾಗಿ, ಪಾಂಡವರ ಐದು ಮಂದಿ ಮಕ್ಕಳಾದ ಪ್ರತಿವಿಂಧ್ಯ ಮೊದಲಾದವರ ಐದು ತಲೀ ಒಯ್ದು ದುರ್ಯೋಧನಗೆ ತೋರಿಸಿದ. 'ಭಲಾ ಅಶ್ವತ್ಥಾಮ! ನನ್ನ ಪ್ರೀತಿ ಬಡಿಸಿದಿ. ನನ್ನ ವಚನ ಸತ್ಯ ಮಾಡಿದಿ.' ಹೀಂಗಂದು, ಆಗಲೇ ಪ್ರಾಣತ್ಯಾಗ ಮಾಡಿದನು. ಭೀಮಸೇನನ ಅಂಜಿಕೆಯಿಂದ ಅಶ್ವತ್ಥಾಮ, ಕೃಪಾಚಾರ್ಯ, ಕೃತವರ್ಮ ಮೂರೂ ಮಂದಿ ಓಡಿಹೋದರು.

ಭೀಮಸೇನ ಸತೀ ಸಮೀಪಕ್ಕೆ ಬಾಹೋಣ, ಅಶ್ವತ್ಥಾಮ ನಿಂತು ಬ್ರಹ್ಮಾಸ್ತ್ರ ಪ್ರಯೋಗ ಮಾಡಿದ. ಅಷ್ಟರೊಳಗೆ ಶ್ರೀಕೃಷ್ಣ, ಧರ್ಮರಾಯ, ಅರ್ಜುನ, ಮಾದ್ರೀ ಪುತ್ರರು ಬಂದರು. ಅಶ್ವತ್ಥಾಮನ ಅಗ್ಗಳಿಕೆನೆಲ್ಲ ಪಾಂಡವರಿಗೋಸ್ಕರ ಶ್ರೀಹರಿ ಹೇಳಿದ. "ಇವ ಬ್ರಾಹ್ಮಣನೆಂತ ನಂಬಬ್ಯಾಡಿ. ಬಹಳೇ ಕಪಟಿ ಇದ್ದಾನೆ.

ನನ್ನಂಥವಗೆ ಕೊಲ್ಲಬೇಕಂತ ಮಾಡಿದ್ದ. ನಾ ಪ್ರಭಾಸಕ್ಷೇತ್ರದಲ್ಲಿ ಸಾಯಂಕಾಲದ ಸಂಧ್ಯಾವಂದನಿಗೆ ಹೋಗಿರಲಾಗಿ, ಅಶ್ವತ್ಥಾಮ ಬಂದು ನನ್ನ ಅಸ್ತ್ರಗಳು ಬೇಡಿಕೊಂಡ. ಬ್ರಾಹ್ಮಣ ಬೇಡಥಾನೆಂದು ನನ್ನ ನಂದಕವೆಂಬ ಖಡ್ಗ, ಕೌಮೋದಕಿ ಗದಿ, ಸುದರ್ಶನ ಚಕ್ರ, ಅಷ್ಟೂ ಆಯುಧಗಳು ಕೆಳಗೆ ಇಡಲಾಗಿ, ನನ್ನ ಆಯುಧಗಳು ಎತ್ತಲಿಕ್ಕೆ ಅಶ್ವತ್ಥಾಮ ಅಸಮರ್ಥನಾದ. ಏನುಕಾರಣ ಆಯುಧಗಳು ಬೇಕೆಂದಲ್ಲಿ ತನ್ನ ಅಭಿಪ್ರಾಯ ನನ್ನ ಮುಂದೆ ಹೇಳಿದ. 'ಪಾಂಡವರಿಗೆ ಮೂಲ-ಕಾರಣ ನೀನು. ನಿನ್ನ ಕೊಂದರೆ ಪಾಂಡವರ ಪಕ್ಷ ಹೋದೀತು. ನೀ ದಾರ ಆಯುಧಗಳಿಂದಲೂ ಸಾಯಲಿಕ್ಕೆ ಶಕ್ಯನಲ್ಲದ ಕಾರಣ, ನಿನ್ನ ಆಯುಧಗಳಿಂದಲೇ ನಿನ್ನ ಕೊಂದು, ತರುವಾಯ ಪಾಂಡವರ ವಿನಾಶ ಮಾಡಿ, ಸರ್ವ ಸಾಮ್ರಾಜ್ಯ, ಏಕಚಕ್ರಾಧಿಪತ್ಯರಾಜ್ಯ ದುರ್ಯೋಧನನ ಕೈಯ ಆಳಸಬೇಕೆಂದು, ನಿನ್ನ ಕೊಲ್ಲುವುದಕ್ಕೆ ಆಯುಧಗಳ ಬೇಡಿದೆನು' ಎಂದು ಪ್ರಭಾಸಕ್ಷೇತ್ರದಲ್ಲಿ ತನ್ನ ಅಭಿಪ್ರಾಯ ಹೇಳಿದನು. ಅಶ್ವತ್ಥಾಮಗೆ ಬುದ್ಧಿ ಹೇಳಿದೆ. ನೀ ಬ್ರಾಹ್ಮಣ, ಕೋಮಲ ಅಂತಃ-ಕರಣ ಇರಬೇಕು. ಇಂಥಾ ಕೊಲಿಗಡಕ ಕರ್ಮ, ಅನ್ಯಾಯ ಮಾಡಬ್ಯಾಡೆಂದು ಬುದ್ಧಿ, ಯುಕ್ತಿಯಿಂದ ಹೇಳಿದೆ. ಅಶ್ವತ್ಥಾಮ ತಿರಗಿ ಹೋದ. ಇವನ ದುರ್ಬುದ್ಧಿ ಇಂಥಾದ್ದು. ಈಗ ಪಾಂಡವರ ವಿನಾಶಗೋಸ್ಕರ ಬ್ರಹ್ಮಾಸ್ತ್ರ ಬಿಟ್ಟಾನೆ. ಈ ಬ್ರಹ್ಮಾಸ್ತ್ರ ಉಪಸಂಹಾರ ಮಾಡಲಿಕ್ಕೆ ಶಕ್ತನಲ್ಲ. ಏನು ಕಾರಣೆಂದರೆ, ಬ್ರಹ್ಮಚರ್ಯ ವ್ರತ ಭಂಗವಾಗೇದೆ. 'ದುರ್ಯೋಧನನ ಹೆಂಡತೀಲಿ ವೀರ್ಯ ಇಟ್ಟು ಮಕ್ಕಳ ಹಡದೇನು' ಎಂದು ವಾಙ್ಮನಸ್ಸಿನಲ್ಲಿ ವ್ಯಭಿಚಾರ ಮಾಡ್ಯಾನೆ. ಮನೋವ್ಯಭಿಚಾರ ದೋಷ ಅಶ್ವತ್ಥಾಮಗೆ ಬಂದದೆ. ಬ್ರಹ್ಮಾಸ್ತ್ರ ಉಪಸಂಹಾರ ಮಾಡಿಕೊಳ್ಳಲಿಕ್ಕೆ ಶಕ್ತನಲ್ಲ. ಭೂಮೀ ಮ್ಯಾಲೆ ಪಾಂಡವರು ಇಲ್ಲಧಾಂಗೆ ಮಾಡೇನೆಂದು ಅಸತ್ಯಪಕ್ಷ ಉಳ್ಳವನಾಗಿ, ಬ್ರಹ್ಮಾಸ್ತ್ರ ಬಿಟ್ಟಾನೆ. ಅಸ್ತ್ರ ಜ್ವಲಸ್ತ ಬರತದೆ. ಎಲೈ ಅರ್ಜುನಾ ಪರಿಹಾರ ಮಾಡು" ಎಂದು ಅರ್ಜುನಗೆ ಶ್ರೀಕೃಷ್ಣ ಆಜ್ಞಾಪಿಸಲಿಕ್ಕೆ, ಅಶ್ವತ್ಥಾಮ ಬಿಟ್ಟ ಅಸ್ತ್ರಕ್ಕೆ ಪ್ರತೀಕಾರ ಮಾಡಬೇಕಾಗಿ, ಅರ್ಜುನ ಪ್ರತಿ ಬ್ರಹ್ಮಾಸ್ತ್ರ ಬಿಟ್ಟನು.

ಅಸ್ತ್ರ ಬಿಡುವಾಗ್ಗೆ, 'ಗುರುಪುತ್ರ ಅಶ್ವತ್ಥಾಮಗೆ ಕ್ಷೇಮವಾಗಲಿ, ಅಶ್ವತ್ಥಾಮ ಬಿಟ್ಟ ಅಸ್ತ್ರ ಶಾಂತವಾಗಲಿ, ಸಮಸ್ತ ಪ್ರಾಣಿಗಳಿಗೆ ಶಾಂತವಾಗಲಿ' ಎಂದು ಬ್ರಹ್ಮಾಸ್ತ್ರ ಬಿಟ್ಟ. ಈ ಪ್ರಕಾರ ಏನುಕಾರಣ ಬಿಟ್ಟನೆಂದರೆ, ಬ್ರಹ್ಮಾಸ್ತ್ರ ಬಲ್ಲವರ ಮ್ಯಾಲೆ ಪ್ರಯೋಗ ಮಾಡಲಿಕ್ಕೆ, ಅವನಿಗೇ ತಿರಗಿಬಂದು ಹೊಡೀತದೆ. ಆದಕಾರಣ ತನಗೆ ಕ್ಷೇಮವಾಗಲೆಂದು ಬೇಡಿಕೊಂಡು, ಗುರುಭಕ್ತಿ ಇದ್ದಕಾರಣ, 'ನಮ್ಮ ಗುರುಪುತ್ರ ಬ್ರಾಹ್ಮಣೋತ್ತಮ ಇದ್ದಾನೆ' ಎಂದು ಬೇಡಿಕೊಂಡು ಬ್ರಹ್ಮಾಸ್ತ್ರ ಬಿಟ್ಟ. ಪ್ರಾಣಿಗಳಿಗೆ ಏನುಕಾರಣ ಕ್ಷೇಮವಾಗಲೆಂದು ಬೇಡಿಕೊಂಡನೆಂದಲ್ಲಿ, ಎರಡೂ ಬ್ರಹ್ಮಾಸ್ತ್ರ ಕೂಡಿ ಸಕಲ ಪ್ರಾಣಿಗಳ ಸಂಹರಿಸ್ಯಾವೆಂದು, ಪ್ರಾಣಿಗಳಿಗೆ ಒಳಿತು ಇಚ್ಛೈಸಿ ಬ್ರಹ್ಮಾಸ್ತ್ರ ಬಿಟ್ಟನು.

ಅರ್ಜುನನ ಪ್ರತಿಜ್ಞೆ ಗೆಲ್ಲಿಸಬೇಕಾಗಿ, ಸತ್ಯವತೀಕುಮಾರ ವೇದವ್ಯಾಸ ಪ್ರತ್ಯಕ್ಷನಾಗಿ ಬಂದು, ಮಧ್ಯದಲ್ಲಿ ನಿಂತನು. ಎರಡು ಬ್ರಹ್ಮಾಸ್ತ್ರಗಳೂ ಅಂತರಿಕ್ಷ ಮಾರ್ಗದಲ್ಲಿ ಜ್ವಲಿಸ್ತ ನಿಂತಿಹೋವು. 'ನೀವು ಇಬ್ಬರೂ ಅಸ್ತ್ರ ಬಲ್ಲವರೊಳಗೆ ಶ್ರೇಷ್ಠರು. ಆದರೂ ನಿಮ್ಮಂಥ ವೀರರನ್ನು ನಾ ಎಲ್ಲೂ ಕಂಡಿದ್ದಿಲ್ಲ ಸಜ್ಜನರಾಗಿ ಲೋಕೋದ್ಧರ ಮಾಡಥೀರಿ.' ಹೀಂಗಂತ ವೇದವ್ಯಾಸ ಅನಲಿಕ್ಕೆ ಅರ್ಜುನ ಅಂಥಾನೆ. 'ಸ್ವಾಮೀ, ನಾ ಲೋಕದ ವಿನಾಶದಗೋಸ್ಕರ ಬ್ರಹ್ಮಾಸ್ತ್ರ ಬಿಟ್ಟಿಲ್ಲ. ನಮ್ಮ ಪ್ರಾಣ ರಕ್ಷಿಸಕೋಬೇಕಾಗಿ ಬಿಟ್ಟಿನು' ಎಂದು, ಅರ್ಜುನ ವೇದವ್ಯಾಸಗೆ ಹೇಳಿದ. ಇದೇ ಪ್ರಕಾರ ಅಶ್ವತ್ಥಾಮ ತನ್ನ ಪ್ರಾಣರಕ್ಷಣೆಗೋಸ್ಕರ ಬಿಟ್ಟಿನೆಂದು, ವೇದವ್ಯಾಸರಿಗೆ, ಉಭಯರೂ ನಮಿಸಿದರು. ಪರಾಶರತನಯ ಇಬ್ಬರಿಗೂ ಬ್ರಹ್ಮಾಸ್ತ್ರ ಉಪಸಂಹಾರ ಮಾಡಿಕೊಳ್ಳಲು ಆಜ್ಞಾಪಿಸಿದ. ಸ್ವಾಮೀ ಆಜ್ಞೆ ಶಿರಸಾವಹಿಸಿ, ಅರ್ಜುನ ಪ್ರಾಣಾಯಾಮ, ನ್ಯಾಸ ಮಾಡಿ, ತಾ ಬಿಟ್ಟಂಥ ಬ್ರಹ್ಮಾಸ್ತ್ರ ಉಪಸಂಹಾರ ಮಾಡಿಕೊಂಡ.

ಅಶ್ವತ್ಥಾಮ ಉಪಸಂಹಾರ ಮಾಡಿಕೊಳ್ಳಲಿಕ್ಕೆ ಶಕ್ತನಾಗಲಿಲ್ಲ. ಆ ವ್ಯಾಳ್ಯಾದಲ್ಲಿ ಶ್ರೀಕೃಷ್ಣ ವೇದವ್ಯಾಸದೇವರಿಗೆ ಹೇಳಿದ. 'ನೋಡಿದ್ಯಾ ವೇದವ್ಯಾಸ! ಅರ್ಜುನ ಕ್ಷತ್ರಿಯ, ಉಪಸಂಹಾರ ತನ್ನ ಕ್ರಿಯದಿಂದ ಮಾಡಿಕೊಂಡ ಅಶ್ವತ್ಥಾಮ ಬ್ರಾಹ್ಮಣ, ನಾಲ್ಕು ವರ್ಣದೊಳಗೆ ಶ್ರೇಷ್ಠ, ಆದರೂ ಏನು ಮಾಡಬೇಕು! ಬ್ರಹ್ಮಚಾರಿ, ಸತ್ಕುಲದವ, ದುರ್ಯೋಧನನ ಹೆಂಡತಿಯಲ್ಲಿ ವೀರ್ಯವಿಟ್ಟು ಮಕ್ಕಳ ಹಡದೇನೆಂದಿದ್ದ. ಆದ್ದರಿಂದ ಬ್ರಹ್ಮಚರ್ಯವ್ರತ ಕೆಟ್ಟುಹೋಗೇದೆ. ಅದಕ್ಕೇ ಭಂಗವಾದದ್ದು ಖರಿಯೆ.' ಹೀಂಗಂತ ಯಾದವಶ್ರೇಷ್ಠ ಶ್ರೀಕೃಷ್ಣ ಅಂದನು. ವೇದವ್ಯಾಸ ಅಶ್ವತ್ಥಾಮನ್ನ ಕೇಳಿದ, 'ಅಹುದೇ' ಎನಲಿಕ್ಕೆ, ಅಶ್ವತ್ಥಾಮ ಸುಮ್ಮಗಾದ. 'ಈ ಪಾಪಕ್ಕೆ ದೇಹಾಂತ ಪ್ರಾಯಶ್ಚಿತ್ತ ಕೋಬೇಕು. ಇದಕ್ಕೆ ನಾ ಒಂದು ಸುಲಭ ಉಪಾಯ ಹೇಳಥೀನಿ. ನಿನ್ನ ತಲೀಮ್ಯಾಲಿನ ಸ್ವಾಭಾವಿಕ ರತ್ನ, ಮಹಾ ತೇಜಸ್ಸುಳ್ಳದ್ದು, ರತ್ನಮಹಿಮೆಯಿಂದ ಜರಾಮರಣಾದಿ ದೋಷಗಳಿಲ್ಲ, ಹಸಿವಿ ನೀರಡಿಕೆಗಳಿಲ್ಲ, ಕಗ್ಗತ್ತಲೀ ಪರಿಹರಿಸುವಂಥ ರತ್ನ, ಸೂರ್ಯನಷ್ಟಂತೆ ತೇಜಸುಳ್ಳದ್ದು, ದುರ್ಗಂಧ ಪರಿಹರಿಸುವಂಥಾದ್ದು, ಇಂಥಾ ರತ್ನ ಹೇ ಅಶ್ವತ್ಥಾಮ ನಿನ್ನ ತಲೀ ಮ್ಯಾಲೆ ಅದೆ. ಈ ರತ್ನ ಭೀಮಸೇನಗೆ ಕೊಡು. ಭೀಮಸೇನನಿಂದ ಸರ್ವಕಾಲ ಸೋತಿದಿ. ನಿನ್ನ ಪಾಪ ಪ್ರಾಯಶ್ಚಿತ್ತಾರ್ಥ ಭೀಮಸೇನಗೆ ಕೊಡು' ಎನಲಿಕ್ಕೆ, ಅಶ್ವತ್ಥಾಮ ಮಹಾ ತೇಜಸ್ಸುಳ್ಳ ರತ್ನ ತೆಗೆದು, ವೇದವ್ಯಾಸನ ಆಜ್ಞೆದ ಮ್ಯಾಲೆ 'ನಾ ಬಿಟ್ಟಂಥ ಅಸ್ತ್ರ ಪಾಂಡವರಿಗೆ ಬಾಧಿ ಕೊಡಬೇಡ' ಎಂದು ಬಾಯಲ್ಲಿ ಅಂದು, ರತ್ನ ಭೀಮಸೇನನ ಪಾದದ ಮ್ಯಾಲೆ ಇಟ್ಟನು.

ತರುವಾಯ, ಯಾದವಶ್ರೇಷ್ಠ ಶ್ರೀಕೃಷ್ಣ ಅಶ್ವತ್ಥಾಮಗೆ ಅಂದ. 'ಎಲ್ಲೆ ಅಶ್ವತ್ಥಾಮ ವೇದವ್ಯಾಸನ ವಚನ ನಡಸಿದ್ದಿ ನನ್ನದೊಂದು ವಚನ ನಡಸು. ಪಾಂಡವರ ಒಂದು ಸಂತಾನಕ್ಕೆ ಕ್ಷೇಮವಾಗಲೆಂದು ನಿನ್ನ ಬಾಯಲ್ಲಿ ಅನ್ನು.' ಹೀಂಗಂದಲ್ಲಿ, 'ನೀ ಪಾಂಡವ ಪಕ್ಷಪಾತಿ. ವೇದವ್ಯಾಸ ದಾರ ಪಕ್ಷಪಾತಿಯೂ ಅಲ್ಲ. ಸೋದರಳಿಯನ ಸಂತಾನ ನಡಿಯಬೇಕೆಂದು ಇಚ್ಛೈಸಕಿದ್ದಿ. ನಾ ಉತ್ತರಾದೇವಿ ಗರ್ಭ ವಿನಾಶ ಮಾಡಲಿಕ್ಕೆ ಬ್ರಹ್ಮಾಸ್ತ್ರ ಬಲಿಸ್ತೀನಿ' ಎಂದು ಅಶ್ವತ್ಥಾಮ ಅಂದನು ತಾ ಮೊದಲೇ ಬಿಟ್ಟ ಅಸ್ತ್ರ ಅಶ್ವತ್ಥಾಮ ಕೃಷ್ಣ, ವೇದವ್ಯಾಸರ ಆಜ್ಞೆದಿಂದ ಉಪ-ಸಂಹಾರ ಮಾಡಿಕೊಂಡಿದ್ದ. ಪುನಃ ಅಸ್ತ್ರ ಬಿಡಲಿಕ್ಕಾಗಿ ಅಶ್ವತ್ಥಾಮ ಆಡಿದ ದುರಾಗ್ರಹ ನಿಷ್ಠುರವಚನ ಕೇಳಿ ಶ್ರೀಕೃಷ್ಣ ಅಶ್ವತ್ಥಾಮನ ಕೂಡ ಮಾತ ನಾಡಥಾನೆ. 'ನೀನು ಅಸ್ತ್ರ ಬಿಡಲೇಬೇಕೆಂದು ಇದ್ದ ಪಕ್ಷವೇ, ಅಭಿಮನ್ಯುನ ಮೃತದೇಹದಲ್ಲಿ ಬಿಡು. ಉತ್ತರಾದೇವಿ ಗರ್ಭದಲ್ಲಿ ಪ್ರಯೋಗಿಸಬ್ಯಾಡ.' ಹೀಂಗೆಂದು ಕೃಷ್ಣ ಅನಲಿಕ್ಕೆ ಅಶ್ವತ್ಥಾಮ ಮಾತನಾಡಿದ, 'ನಿನ್ನ ಕೂಡ ನಾ ಯಾಕೆ ಪರೀಕ್ಷ ಮಾಡಲಿ. ಈಗಲೇ ಪರೀಕ್ಷ ಮಾಡೋಹಾಂಗಿಲ್ಲ. ಉತ್ತರಾದೇವಿ ಗರ್ಭದೊಳಗೆ ಬ್ರಹ್ಮಾಸ್ತ್ರ ಹಾಕಥೀನಿ.' ಹೀಂಗಂತ ಅಶ್ವತ್ಥಾಮ ದುರಾಗ್ರಹದಿಂದ ಅನಲಿಕ್ಕೆ ಸ್ವಾಮಿ ಕ್ಷವಾಸಮುದ್ರನಾದರೂ, ಒಂದಿಷ್ಟು ಕೋಪಕ್ಕೆ ಬಂಧಾಂಗೆ ಮಾಡಿದನು. "ಎಲೋ ಅಶ್ವತ್ಥಾಮ! ಬಹಳ ದುರ್ಮತಿ ಇದ್ದೀ. ನಿನ್ನ ಮನಸ್ಸಿನಲ್ಲಿ ಹ್ಯಾಂಗೆ ಅದೆ ಹಾಂಗ ಮಾಡು. ನಿನ್ನ ಯತ್ನ ನಾ ಕೆಡಸ್ತೀನಿ. ಪಾಂಡವರನ್ನ ನೀ ಕೆಡಸ್ತೀನೆಂತ ಮಾಡತಿದ್ದೀಯಲ್ಲ, ಪಾಂಡವರ ಸಂತಾನ ಸಂರಕ್ಷಿಸಥೀನಿ. ಕಲಿಯುಗದಲ್ಲಿ ಸಾವಿರ ವರುಷ ಪಾಂಡವರ ಸಂತಾನ ನಾ ನಡಿಸೇನು. ನಿನ್ನ ಕೆಟ್ಟ ಬುದ್ಧಿ ಕೆಟ್ಟ ಅಭಿಪ್ರಾಯ ವ್ಯರ್ಥವಾದೀತು. 'ದುರ್ಯೋಧನಗೆ ಸಂತಾನ ನಡಿಸೇನು' ಎಂದೀ. ಅದು ಎಂದಿಗೂ ನಿನ್ನ ಯತ್ನ ನಡಿಯುದು. ನಿನ್ನ ಯತ್ನ, ನಿನ್ನ ದುರ್ಬುದ್ಧಿ ವ್ಯರ್ಥವಾದೀತು. ನೀ ಮನುಷ್ಯರು ತಿರುಗಾಡುವಲ್ಲಿ ತಿರುಗಾಡಬ್ಯಾಡ. ನಿನ್ನ ಸರ್ವಾಂಗಕ್ಕೆ ಹುಳ ಬೀಳಲಿ. ನಿನ್ನ ಸರ್ವಾಂಗ ದುರ್ಗಂಧ ನಾರಲಿ. ನಿನ್ನ ಎಲವುಗಳಿಗೆಲ್ಲ ಹುಳಗಳು ಪೋಣಿಸಲಿ. ಎಲೋ ಮೂರ್ಖಾ! ನನ್ನ ಮಾತು ಕೇಳಲಿಲ್ಲ. ಇಂದಾರಭ್ಯ ಪಟ್ಟಣಗಳ ಸೇರಬ್ಯಾಡ. ಅಡವೀ ಮಡವಿ ತಿರಗು. ಪಾಂಡವರ ಸಂತಾನ ಭೂಮಿ ಮ್ಯಾಲೆ ಇರೋ ತನಕ, ಅಪ್ರಯೋಜಕನಾಗಿ ತಿರಗು.' ಹೀಂಗಂತ ಶ್ರೀಕೃಷ್ಣ ಅಶ್ವತ್ಥಾಮಗೆ ಅನಲಿಕ್ಕೆ, 'ಎಲೋ ಅಶ್ವತ್ಥಾಮಾ, ಕೃಷ್ಣ ನಿನಗೇನು ಅಂದ, ಅದಷ್ಟೂ ಸತ್ಯವಾದೀತು' ಎಂದು ವೇದವ್ಯಾಸ ಹೇಳಿದನು. ಕೃಷ್ಣನ ಮ್ಯಾಲಿನ ದ್ವೇಷದಿಂದ ಅಶ್ವತ್ಥಾಮ ಜ್ವಲಸ-ತಿಹೋನು. ತನಗೆ ರಕ್ಷಕರು ದಾರಿಲ್ಲೆಂದು ಸತ್ಯವತೀತನಯಗೆ ಶರಣುಹೊಕ್ಕ. 'ಎಲ್ಲೆ ಸ್ವಾಮೀ, ನಿರಂತರ ನಿನ್ನ ಸ್ವರೂಪ ನನಗೆ ತೋರಸು.' ಹೀಂಗಂತ

ವೇದವ್ಯಾಸಗೆ ಬೇಡಿಕೊಳ್ಳಲಿಕ್ಕೆ, 'ಒಳ್ಳೇದು' ಎಂದು ವೇದವ್ಯಾಸ ಅನುಗ್ರಹ ಮಾಡಿದ, ಅಶ್ವತ್ಥಾಮಗೆ ಹೇಳಿ, ವೇದವ್ಯಾಸ ಬದರಿಕಾಶ್ರಮಕ್ಕೆ ತೆರಳಿದನು.

ಅಶ್ವತ್ಥಾಮ ನಿರಂತರ ಸ್ವಪ್ನ ಕಾಣತಿಹ. ಪಾಂಡವರ ಐದು ಮಂದಿ ಮಕ್ಕಳನ್ನು ತಾನೇ ಕೊಲ್ಲತಿಹ. ದ್ರೌಪದೀ ದುಃಖದಿಂದ ಶಪಸ್ತಿಹೋಳು. ಅರ್ಜುನ ದ್ರೌಪದೀ ಸಮಾಧಾನದಗೋಸ್ಕರ, ಅಶ್ವತ್ಥಾಮನ ಹಿಡದು, ಕೈಸೆರಿ ತಂದು ದ್ರೌಪದೀ ಮುಂದೆ ನಿಂದರಿಸುವ. ದ್ರೌಪದೀ 'ಹೇ ಭೀಮಸೇನ, ಗುರುಪುತ್ರನ ಬಿಡು' ಎಂದು ಬಿಡಿಸೋಳು. ಈ ಪ್ರಕಾರ ನಿರಂತರ ಸ್ವಪ್ನ ಕಾಣತಿಹ. ಅಶ್ವತ್ಥಾಮ ತನಗೆ ಲೋಕದೊಳಗೆ ಅಪ್ರತಿಷ್ಟಿ ಆಯಿತೆಂದು, ಶೋಕಾರ್ಹನಾಗಿ ಬದರಿಕಾಶ್ರಮಕ್ಕೆ ಹೋದನು. ಸರ್ವಾಂಗದಲ್ಲಿ ಹುಳ ಬಿದ್ದಿಹೋವು. ದೇಹ, ದುರ್ಗಂಧ ನಾರತಿಹೋದು. ಈ ಪ್ರಕಾರ ದುಃಖಪಟ್ಟು ಕಡೀಲಿ ಕಲಿಯುಗ, ಕೃತಯುಗ ಮುಗಿದ ಮ್ಯಾಲೆ, ಉತ್ತರ ದ್ವಾಪರಯುಗದಲ್ಲಿ ವೇದವ್ಯಾಸನ ಶಿಷ್ಯನಾಗಿ, ಅತನ ಅನುಗ್ರಹದಿಂದ ವೇದವಿಭಾಗ ಮಾಡಿ, ಮುಂದೆ ಸಪ್ತಋಷಿತ್ವ ಐದಾನು ವೇದವ್ಯಾಸನ ಅನುಗ್ರಹದಿಂದ, ಅಶ್ವತ್ಥಾಮ ಬಹಳ ವೈರಾಗ್ಯ ಉಳ್ಳವನಾಗಿ, ಸಾಕ್ಷಾತ್ ಪರದೇವತಿ ದಾಶಾರ್ಹ ಕೃಷ್ಣನ ದ್ರೋಹ ಮಾಡಿದೆನೆಂದು ವೈರಾಗ್ಯ ಉಳ್ಳವನಾಗಿ ಕೃಷ್ಣನಲ್ಲಿ ಭಕ್ತಿಯಿಂದ ತನ್ನ ಮೂಲರೂಪ ಐದಾನು.

ಇನ್ನು ಕೃಪಾಚಾರ್ಯನ, ಕೃತವರ್ಮನ ವಿಚಾರ ಹೇಳಥಾರೆ. ಕೃಪಾಚಾರ್ಯ ಪಾಂಡವರ ಸಮೀಪದಲ್ಲಿ ಬಂದು, ಪಾಂಡವರಿಗೆ ಪ್ರೀತಿವಿಷಯನಾಗಿ, ಪಾಂಡವರ ಸಂತಾನಕ್ಕೆಲ್ಲ ಗುರುವು ಆದ. ಕೃಪಾಚಾರ್ಯ ಮನುಕಲ್ಪಕ್ಕೆ ಸಪ್ತಋಷಿಗಳೊಳಗೆ ಒಬ್ಬ ಋಷಿ ಆದಾನು. ಇನ್ನು ಕೃತವರ್ಮನ ಅವಸ್ಥೀ ಏನಾಯಿತೆಂದರೆ, ಕೃತ. ವರ್ಮ ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರನಾಗಿ, ದ್ವಾರಾವತಿಗೆ ಕೃಷ್ಣನ ಸಂಗಡ ಹೋಗಿದ್ದಾನೆ.

ಪುತ್ರಶೋಕದಿಂದ ದ್ರೌಪದೀ ಬಹಳ ದುಃಖಪಡಲಾಗಿ, ಅಶ್ವತ್ಥಾಮನ ಶಿರೋರತ್ನ, ಭೀಮಸೇನ ದ್ರೌಪದೀಗೆ ಕೊಟ್ಟನು ಶೋಕ ನಾಶವಾಡೋ ಅಂಥಾ ರತ್ನ, ಆ ರತ್ನ ತೆಗೆದುಕೊಂಡು ಪುತ್ರಶೋಕದಿಂದ ಶಾಂತತ್ವ ಉಳ್ಳಾಕೆಯಾದಳು. ಇಂಥಾ ರತ್ನ, ಅರಸಗೆ ಯೋಗ್ಯವಾದಂಥಾದ್ದು, ಹೆಂಡತೀ ಮ್ಯಾಲಿನ ಸ್ನೇಹದಿಂದ ತನ್ನ ಸ್ತ್ರೀಗೆ ಕೊಟ್ಟನೆಂದು, ತನ್ನ ಪತಿಗೆ ದೂಷಣೆ ಬರಬಾರದೆಂದು, ದ್ರೌಪದೀ ಆ ರತ್ನ ಧರ್ಮರಾಯಗೆ ಕೊಟ್ಟಳು. ಅದರಿಂದ ಭೀಮಸೇನನ ಪ್ರೀತಿ ದ್ರೌಪದೀ ಮ್ಯಾಲೆ ಬಹಳ ಆಯಿತ್ತು. ಧರ್ಮರಾಯ ರತ್ನ ಕೊರಳಿಗೆ ಹಾಕಿಕೊಂಡು ಕೂಡ್ರಲಿಕ್ಕೆ, ಅರಸು, ರಾಜ್ಯಕ್ಕೆ ಸೂರ್ಯನಪ್ಪಂದೆ ಒಪ್ಪುವಂಥ ಧರ್ಮರಾಯ, ವೇದಾತ್ಮಕ ವೇದವ್ಯಾಸ, ಶ್ರೀಕೃಷ್ಣ, ತಮ್ಮಂದರು, ದ್ರೌಪದೀ ಕೂಡಿಕೊಂಡು ತಮ್ಮ ನಿಜರಾಜಧಾನಿಗೆ ಹೋದನು. ಜ್ಞಾನಿಗಳು ಕಾಮಾದಿ ವೈರಿಗಳ ಕೊಂದು, ತಮ್ಮ

ಸ್ವರೂಪಸುಖ ಹ್ಯಾಂಗೆ ಐದಥಾರೆ, ಹಾಂಗೆ ಪಾಂಡವರು ಬಹಿರ್ಶತ್ರುಗಳಾದ ದುರ್ಯೋಧನಾದಿಗಳ ಕೊಂದು, ತಮ್ಮ ನಿಜರಾಜಧಾನಿ, ಹಸ್ತಿನಾವತಿಗೆ ಬಂದರು. ಇಲ್ಲಿಗೆ ಸೌಪ್ತಿಕಪರ್ವ ಸಂಪೂರ್ಣವಾಯಿತು.

ವಿಶೋಕಪರ್ವ ಭಾರತಕಥ ಹೇಳಥಾರೆ. ಧರ್ಮರಾಯ ಹಸ್ತಿನಾವತಿಗೆ ಹೋಗಿ ಇನ್ನು ಹಿರೇರ ಆಜ್ಞ ಇಲ್ಲದೆ ಸಿಂಹಾಸನದಲ್ಲಿ ಕೂಡ್ರಬಾರದೆಂದು, ಧೃತರಾಷ್ಟ್ರನ ಸಮೀಪಕ್ಕೆ ಹೋಗಿ, 'ನಾ ಧರ್ಮರಾಯ, ನಮಸ್ಕಾರ ಮಾಡಥೀನಿ' ಎಂದು, ನಮಸ್ಕಾರ ಮಾಡಲಿಕ್ಕೆ, 'ಧರ್ಮರಾಯಾ ಯಾತರೊಳಗೆ ಏನೂ ಇಲ್ಲ. ನನ್ನ ಮಕ್ಕಳ ಕೊಲ್ಲೋದಕ್ಕೆ ಭೀಮಸೇನನೇ ಮುಖ್ಯಕಾರಣ' ಎಂದನು. ಭೀಮಸೇನನ ಮ್ಯಾಲೆ ಧೃತರಾಷ್ಟ್ರಗೆ ಕೋಪ ಬಹಳ ಇಹೋದು. ಭೀಮಸೇನ ಗತಲೋಚನಗೆ ನಮಸ್ಕಾರ ಮಾಡಲಿಕ್ಕೆ ಹೋಗಲಾಗಿ, ಭೀಮಸೇನನ ಕೈ ಹಿಡದು, ಶ್ರೀಕೃಷ್ಣ ನಿಂದರಿಸಿ, ಉಕ್ಕಿನ ಭೀಮಸೇನನ ತಂದು ಧೃತರಾಷ್ಟ್ರನ ಮುಂದಿಟ್ಟನು. ಉಕ್ಕಿನ ಭೀಮಸೇನ ಎಲ್ಲೆತ್ತೆಂದರೆ, ದುರ್ಯೋಧನ ಬದಕಿರುವಾಗ, ಉಕ್ಕಿನ ಭೀಮಸೇನನ ಮಾಡಿ, ಗದಾ ವಿದ್ಯ ಕಲಿಯುವ. ಆ ಉಕ್ಕಿನ ಭೀಮಸೇನನ್ನ ಭಂಡಾರದ ಮನೀ ಒಳಗೆ ಇಟ್ಟಿದ್ದರು. ಆ ಕಾಲದಲ್ಲಿ ಉಕ್ಕಿನ ಭೀಮಸೇನನ ಧೃತರಾಷ್ಟ್ರನೆದುರಿಗೆ ನಿಂದರಿಸಿ, ಶ್ರೀಕೃಷ್ಣ ಮಾತನಾಡಿದ. "ಹೇ ಧೃತರಾಷ್ಟ್ರರಾಯಾ! ಭೀಮಸೇನ ನಮಸ್ಕಾರ ಮಾಡಿ ನಿಂತಾನೆ.' ಹೀಂಗೆನಲಿಕ್ಕೆ, ಧೃತರಾಷ್ಟ್ರ ಬಂದು 'ಭೀಮಸೇನ ನನ್ನ ನೂರು ಮಂದಿ ಮಕ್ಕಳನ್ನ ಕೊಂದ್ಯಾ!' ಎಂದು ಮಹಾ ಆಕ್ರೋಶದಿಂದ ಉಕ್ಕಿನ ಭೀಮಸೇನನ ಅಪ್ಪಿಕೊಳ್ಳಲಿಕ್ಕೆ, ಅದು ಪುಡಿಪುಡಿ ಆಯಿತು. ಸಿಟ್ಟೇಲೆ ರಕ್ತ ಕಾರತ ಧೃತರಾಷ್ಟ್ರ ಬಿದ್ದನು.

ಒಂದಷ್ಟು ಎಚ್ಚರಿಕೆ ಉಳ್ಳವನಾಗಲಿಕ್ಕೆ, ಕೃಷ್ಣ ಧೃತರಾಷ್ಟ್ರಗೆ ಅಂದ, 'ಎಲೈ ವೈಚಿತ್ರ್ಯವೀರ್ಯಾ, ನಿನ್ನ ಕಪಟತನ ನೀನೆ ಹೊರಗೆ ಹಾಕಿದಿ. ಭೀಮಸೇನ ಸತ್ತನಂತ ಕೇಬ್ಯಾಡ, ಬದಕಿದ್ದಾನೆ! ಉಕ್ಕಿನ ಭೀಮಸೇನ ನಿನ್ನ ಆಕ್ರೋಶದಿಂದ ಪುಡಿಪುಡಿ ಆಯಿತು. ನಿನ್ನ ಕೆಟ್ಟ ಬುದ್ಧಿ ಲೋಕಕ್ಕೆ ತೋರಸ್ದೀ. ನಿನ್ನ ಮಕ್ಕಳು ದುರಾತ್ಮರು. ತಮ್ಮ ಪಾಪದಿಂದ ತಾವೇ ಸತ್ತುಹೋದರು. ನಿನಗಿಷ್ಟು ಕೋಪ ಯ್ಯಾಕೆ? ಚಿಕ್ಕಂದಿನಾರಭ್ಯ ಮಕ್ಕಳ ಬಲಿಸಿದೀ ನನ್ನ ಮಾತು ಕೇಳದೆ, ಪಾಂಡವರಿಗೆ ರಾಜ್ಯ ಕೊಡದ ಕಾರಣ ತಮ್ಮ ದುರಾಗ್ರಹದಿಂದ ತಾವೇ ಸತ್ತುಹೋದರು. ನಿನಗೆ ಪುತ್ರಶೋಕ ಹ್ಯಾಂಗೆ ಬಿಟ್ಟೀತು! ನಿನ್ನ ದೋಷ ನೀ ಉಣಬೇಕು. ದುರ್ಯೋಧನಾದಿಗಳೆಂಬ ವೃಕ್ಷ ಬಹಳೇ ಬೆಳಸಿದ್ದೀ. ಆ ವೃಕ್ಷದ ಫಲ ನೀ ಉಣಬೇಕು. ನೀ ಸುಟ್ಟೀನೆಂದರೆ ನಿನಗೆ ಶಕ್ಯವಲ್ಲ. ವ್ಯರ್ಥ ಭೀಮಸೇನನ ಮ್ಯಾಲೆ ದ್ವೇಷ ಮಾಡಲಿಕ್ಕೆ ಕಾರಣವಿಲ್ಲ. ನಿನ್ನ ಮಕ್ಕಳು ಪಾಪಶೀಲರು. ಚಿಕ್ಕಂದಿನಾರಭ್ಯ

ಪಾಂಡವರನ್ನ ಕೊಲ್ಲಬೇಕೆಂದು, ವಿಷ ಹಾಕಿದರು, ಸರ್ಪಗಳ ಕೈಯ ಕಚ್ಚಿಸಿದರು, ಮಡುವಿನೊಳಗೆ ಮುಣುಗಿಸಿದರು, ಅರಗಿನ ಮನೀ ಒಳಗೆ ಸುಟ್ಟು ಸಾಯಿಸಬೇಕೆಂದು ಮಾಡಿದರು. ದೈವೇಚ್ಛೆಯಿಂದ ಬವಕಿ, ಇಂದ್ರಪ್ರಸ್ಥ ರಾಜ್ಯ ಆಳಿದರೆ ದಕ್ಕಿತು. ಅತ್ಯುತ್ಕಟ ಪಾಪ ಬಹಳ ದಿವಸ ಜಯಿಸೋದಿಲ್ಲ. ವಿಷನ್ನೆಸ್ಸ ಬಲಿಸಿದಿ. ಅದರ ಫಲ ನೀ ಉಣಬೇಕು. ಮಕ್ಕಳಿಂದ ಅನುಭವಿಸುವ ದುಷ್ಕರ್ಮ ಇರಲಿಕ್ಕೆ, ಭೀಮಸೇನನ ಮ್ಯಾಲೆ ಕೋಪಕ್ಕೆ ಬರುವುದು ನಿರರ್ಥಕ.' ಹೀಂಗೆ ಶ್ರೀಕೃಷ್ಣ ಅನಲಿಕ್ಕೆ, ರಾಯ ವೈರಾಗ್ಯ ಉಳ್ಳವನಾಗಿ ಶಾಂತನಾದ. ಆಗ ಭೀಮಸೇನ ಹೋಗಿ ನಮಸ್ಕಾರ ಮಾಡಲಿಕ್ಕೆ, ಸ್ನೇಹದಿಂದ ಭೀಮಸೇನನ್ನ ಅಪ್ಪಿಕೊಂಡ, ಹಾಂಗೆ ಅರ್ಜುನ ನಕುಲಸಹದೇವರು ನಮಸ್ಕಾರ ಮಾಡಿದರು ಅವರನ್ನೂ ಆಲಂಗಿಸಿದ.

ಮೊದಲಿಗೇ ಭೀಮಸೇನ ನಮಸ್ಕಾರ ಮಾಡಿದ್ದರೆ ಸಾವ್ವೋನೋ ಹ್ಯಾಂಗೆ, ಎಂದು ಶಂಕ ಬಂದರೆ, ಭೀಮಸೇನನ ದೇಹ ವಜ್ರಕ್ಕಿಂತ ಕಠಿಣ ದೇಹ, ಧೃತರಾಷ್ಟ್ರನ ಕೋಪ ಹೊರಗೆ ಬೀಳಬೇಕಾಗಿ, ಕೃಷ್ಣ ಭೀಮಸೇನರು ಧೃತರಾಷ್ಟ್ರನ ಕಪಟ ಲೋಕಕ್ಕೆ ತೋರಸಬೇಕೆಂದು ಈ ಪ್ರಕಾರ ಮಾಡಿದರು. ಹರಿ, ಮುಖ್ಯ-ಪ್ರಾಣರ ದ್ವೇಷದಿಂದ, ದಿವ್ಯಗತಿ ಆಗಲಿಕ್ಕಿಲ್ಲೆಂದು ಕೋಪ, ಹೊರಚೆಲ್ಲಿಸಿದರು.

ಇನ್ನು ಗಾಂಧಾರೀ ದರ್ಶನಕ್ಕೆ, ಧರ್ಮರಾಯ ಹೋದ. 'ಗಂಡಗೆ ಕಣ್ಣಿಲ್ಲ, ನಾ ಕಣ್ಣು ಉಳ್ಳಾಕೆ ಇದ್ದೀನಿ' ಎಂದು ಕಣ್ಣಿಗೆ ಪರದಿ ಹಾಕಿಕೊಂಡು ಇಹೋಳು. ಧರ್ಮರಾಯ ನಮಸ್ಕಾರ ಮಾಡಲಿಕ್ಕೆ, ಮಕ್ಕಳು ಸತ್ತ ದುಃಖದಿಂದ, ಕ್ರೋಧದಿಂದ ನೋಡಲಿಕ್ಕೆ, ಧರ್ಮರಾಯನ ಪಾದದ ಉಗುರುಗಳ ಮ್ಯಾಲೆ ಗಾಂಧಾರೀ ದೃಷ್ಟಿ ಬಿತ್ತು. ಅಷ್ಟೂ ಉಗುರುಗಳು ಕಪ್ಪಾದವು. 'ಅಮ್ಮಾ ತಾಯೀ, ನಾ ಕುಲನಾಶಕ, ನೀನು ಏನು ಶಾಪ ಕೊಟ್ಟೀ ಅದು ನಾ ಅಂಗೀಕಾರ ಮಾಡಥೀನಿ', ಎಂದು ಬೇಡಿಕೊಂಡನು. ಕಾಲುಗುರುಗಳು ಕಪ್ಪು ಮಾಡಿಕೊಂಡು, ಕಡಿಗೆ ಆದನ್ಯಾಲೆ, ಭೀಮಸೇನ ಗಾಂಧಾರಿಗೆ ನಮಸ್ಕಾರ ಮಾಡಲಿಕ್ಕೆ, 'ಎಲೋ ಭೀಮಸೇನಾ, ನೀ ನೀಚವಂತ, ಅಧರ್ಮದಿಂದ ನನ್ನ ಮಕ್ಕಳನೆಲ್ಲಾ ಕೊಂದಿ. ಗದಾಯುದ್ಧದಲ್ಲಿ ಹೊಕ್ಕಳ ಕೆಳಗೆ ಹೊಡೀಬಾರದು. ಹೀಂಗಿರಲಿಕ್ಕೆ, ಹ್ಯಾಂಗೆ ಅಧರ್ಮ ಮಾಡಿದಿ?' ಎಂದು ಕೇಳಲಾಗಿ, 'ಅಮ್ಮಾ ಪ್ರಾಣಸಂದೇಹ ಬಂತು. ಆದಕಾರಣ ನಾ ಕೊಂದೆ' ಹೀಂಗಂತ ಭೀಮಸೇನ ಹೇಳಿದ್ದು ಮೃಷ. 'ನಾವು ಕ್ಷತ್ರಿಯರು, ನಮ್ಮ ಪ್ರತಿಜ್ಞಾ ಹಾನಿ ಆಗಬಾರದೆಂದು, ಸತ್ಯ ಮಾಡಬೇಕಾಗಿ ತೊಡೀ ಕಡದೆನು. ದ್ರೌಪದೀಗೆ ಜೂಜಿನಲ್ಲಿ ತೊಡಿ ತೋರಿಸಿದಾಗ ಜಡೇ ತೊಡಿ ಕಡದೇನಂತ ಆಡಿದ್ದೆ. ಇದಲ್ಲಡೇ ಪಾಪಿಗಳನ್ನ ಅಧರ್ಮದಿಂದ ಕೊಲ್ಲಬೇಕು. ಧರ್ಮದಿಂದ ಕೊಲ್ಲಬಾರದು ಕಾರಣ, ನಿನ್ನ ಮಕ್ಕಳು ಪಾಪಿಗಳು. ದೇವತೆಗಳು ತ್ರಿಪುರಸಂಹಾರಕಾಲದಲ್ಲಿ ಕಪಟತನದಿಂದ ಕೊಂದರೊ ಇಲ್ಲವೋ? ಕಪಟದಿಂದಲೇ ಕಪಟಿಗಳನ್ನ ಕೊಲ್ಲಬೇಕು. ಆದರಿಂದ

ಪುಣ್ಯ ಬರತದೆ.' ಹೀಂಗಂತ ಶಾಸ್ತ್ರಸಮ್ಮತ ಹೇಳಿದ್ದಾನೆ. 'ಮನುಷ್ಯ ರಕ್ತ ಕುಡದೀ, ನೀ ಮನುಷ್ಯ, ಕುಳಿತು ನನ್ನ ಮಗನ ರಕ್ತ ಹ್ಯಾಂಗೆ ಕುಡದೀ?' ಎಂದು ಗಾಂಧಾರೀ ಕೇಳಲಾಗಿ, 'ನಿನ್ನ ಮಗನ ರಕ್ತ ನಾ ಕುಡಿದಿಲ್ಲ ಹಲ್ಲು ಒಳಗೆ ಸಹಾ ರಕ್ತ ಕೊಳ್ಳಲಿಲ್ಲ. ನನ್ನ ಪ್ರತಿಜ್ಞೆ ಸತ್ಯ ಮಾಡಬೇಕಾಗಿ, ದುಶ್ಶಾಸನನ ರಕ್ತ ಮುಖಕ್ಕೆ ತೋರಿಸಿ ಚಲ್ಲಿದೆ. ವೈರಿಗಳಿಗೆ ಅಂಜಿಸಬೇಕಾಗಿ, ರಕ್ತ ಕುಡಿದೆನೆಂಬೋ ಹಾಂಗೆ ತೋರಿಸಿದೆ' ಎಂದು ಭೀಮಸೇನ ಹೇಳಿದನು. ಗಾಂಧಾರೀ, 'ನನ್ನ ನೂರು ಮಕ್ಕಳೂ ನಿನ್ನ ಮ್ಯಾಲೆ ಅಪರಾಧ ಮಾಡಿದರೆ! ನಾವಿಬ್ಬರು ಗಂಡಹೆಂಡಿರೂ ಕುರುಡರು. ಕುರುಡರಿಗೆ ಕೋಲಿನಂತೆ ಒಬ್ಬ ಮಗನ್ನಾದರೂ ಉಳಸಬಾರದಿತ್ತೇ!' ಎಂದಲ್ಲಿ, 'ಎಲೌ ಅಮ್ಮಾ, ನಿನ್ನ ನೂರು ಮಕ್ಕಳೂ ವಧಿಗೆ ಯೋಗ್ಯರು. ನಮ್ಮ ಸ್ವಾಮಿ ಶ್ರೀಕೃಷ್ಣ, ಸಂಧಾನಕ್ಕೆ ಬಂದಾಗ, ಸ್ವಾಮೀನ್ನ ಕಟ್ಟಿಹಾಕಬೇಕೆಂದು ನಿನ್ನ ನೂರು ಮಕ್ಕಳೂ ಏಕಮತ ಉಳ್ಳವರಾಗಿದ್ದರು. ಒಬ್ಬರೂ ಬ್ಯಾಡವೆಂದು ನಿವಾರಿಸಿದ್ದಿಲ್ಲ. ನಮ್ಮ ಸ್ವಾಮೀ ದ್ರೋಹ ಮಾಡಿದ್ದು ಕಣ್ಣಗಂಡು, ನೂರೂ ಮಂದಿ ಪಾಪಿಗಳೆಂದು ತಿಳದು, ನಿನ್ನ ಮಕ್ಕಳನ್ನೆಲ್ಲ ಕೊಂದೀನಿ. ಚಿಕ್ಕಂದಿನಲ್ಲೇ ಅವರಿಗೆ ನೀವು ಬುದ್ಧಿ ಕಲಿಸಲಿಲ್ಲ. ನಿನ್ನ ಮಕ್ಕಳಿಗೆ ಬುದ್ಧಿ ಕಲಿಸಲಿಕ್ಕೆ ನೀ ಅಸಮರ್ಥಳಾಗಿ, ನನ್ನ ಮ್ಯಾಲೆ ನಿರರ್ಥಕ ಕ್ರೋಧ ಏನುಕಾರಣ ಮಾಡತಿದ್ದೀ!' ಹೀಂಗೆ ಭೀಮಸೇನ ಮಾತನಾಡಲಿಕ್ಕೆ, ಗಾಂಧಾರೀ ನಿರುತ್ತರಳಾದಳು. ಭೀಮಸೇನ ನಮಸ್ಕಾರ ಮಾಡಿದಮ್ಯಾಲೆ, ಕ್ರಮದಿಂದ ಎಲ್ಲರೂ ನಮಸ್ಕಾರ ಮಾಡಿದರು. ವೇದವ್ಯಾಸ ಗಾಂಧಾರಿಗೆ ಅಂದ, 'ಭೀಮಸೇನ ಏನು ಮಾತನಾಡಥಾನೆ ಅದಷ್ಟೂ ಸತ್ಯನೇ. ಗಾಂಧಾರೀ, ಶೋಕಾರ್ಹಳಾಗಬ್ಯಾಡ.' ಹೀಂಗಂತ ಸಮಾಧಾನ ಮಾಡಿದ. ಗಾಂಧಾರೀ ವೇದವ್ಯಾಸನ ವಚನದಿಂದ ಶಾಂತಳಾದಳು. ಇಲ್ಲಿಗೆ ವಿಶೋಕ ಪರ್ವ ಮುಗಿಯಿತು.

ಇನ್ನು ಸ್ತ್ರೀಪರ್ವ ಭಾರತಕಥ ಹೇಳಥಾರೆ. ದುರ್ಯೋಧನಾದಿಗಳ ಹೆಂಡಂದರು, ತಮ್ಮ ಗಂಡಂದರು ಸತ್ತ ದುಃಖದಿಂದ ದುಃಖಿತರಾಗಿ, ಮಾರ್ನಾದರೂ ನೋಡೇ-ವೆಂದು, ಕುರುಕ್ಷೇತ್ರದಲ್ಲಿ ರಣರಂಗಕ್ಕೆ ಹೋದರು. ಹಾಂಗೇ ಗಾಂಧಾರೀಸಹಿತ ಅಂಧನೃಪ ತೆರಳಿದನು. ಹೀಂಗೇ ಪಾಂಡವರು, ದ್ರೌಪದೀ, ವೇದವ್ಯಾಸ, ಕೃಷ್ಣ ಯುದ್ಧಭೂಮಿಗೆ ಬಂದರು. ಗಾಂಧಾರೀ ತನ್ನ ಪತಿವ್ರತಾಧರ್ಮದಿಂದ ತಪಸ್ಸಿನೆಲಿ ಹೆಚ್ಚಿಹೋಳು. ಯೋಗ್ಯತಾ ಮೀರಿ ತಪಸ್ಸು ಮಾಡ್ಯಾಳೆ. ತಪಸ್ಸು ಹಾನಿ ಆಗ ಬೇಕೆಂದು, ಸ್ವಾಮಿ ಗಂಡಹೆಂಡರಿಗೆ ದಿವ್ಯ ಚಕ್ಷು ಕೊಟ್ಟ. ಮಕ್ಕಳನ್ನೆಲ್ಲ ದೃಷ್ಟಿನೆಲಿ ನೋಡಿದಳು. ಮಕ್ಕಳ ಪ್ರೇತದೇಹ ಕಣ್ಣಿನೆಲೆ ಕಂಡು ಶ್ರೀಕೃಷ್ಣನ ಮ್ಯಾಲೆ ಕೋಪ ದಿಂದ, 'ಇಷ್ಟಕ್ಕೆಲ್ಲ ಶ್ರೀಕೃಷ್ಣನೇ ಮೂಲ ಅನರ್ಥ. ಪಾಂಡವರ ಪಕ್ಷವಾಗಿ,

ನನ್ನ ಮಕ್ಕಳನ್ನೆಲ್ಲ ಕೊಲ್ಲಿಸಿದನು' ಎಂದು ಯಾದವೇಶ್ವರನಿಗೆ ಗಾಂಧಾರಿ ಶಾಪ ಕೊಟ್ಟಳು. 'ಹೇ ಕೃಷ್ಣಾ, ನಮ್ಮ ಕುಲ ವಿನಾಶ ಮಾಡಿಸಿದಿ. ನಿನ್ನ ಯಾದವ-ಕುಲ ಅನ್ಯೋನ್ಯ ಯುದ್ಧದಿಂದ ವಿನಾಶವಾಗಲಿ' ಎಂದು ಶಾಪ ಕೊಟ್ಟಳು. ಶ್ರೀಕೃಷ್ಣ 'ಬಹಳ ಒಳ್ಳೇದು' ಎಂದ. 'ಗಾಂಧಾರೀ ನೀ ಪತಿವ್ರತಾಸ್ತ್ರೀ ಇದ್ದೀ. ನಿನ್ನ ವಚನ ಸರ್ವಥಾ ಹುಸಿ ಆಗದು, ಸತ್ಯವೇ ಆಗೋದು.' ಹೀಂಗಂದು, ಶ್ರೀಕೃಷ್ಣ ಗಾಂಧಾರೀ ಶಾಪ ಅಂಗೀಕಾರ ಮಾಡಿದ. ಗಾಂಧಾರೀ ಶಾಸ, ಅನ್ಯಥಾ ಮಾಡಲಿಕ್ಕೆ ತಾ ಶಕ್ತನಾದರೂ, ಕಲಿಯುಗದಲ್ಲಿ ಯಾದವರಿದ್ದ ಪಕ್ಷವೇ, ಕಲೀ ವ್ಯಾಪಾರ ನಡೇದಾದಕಾರಣ, ಯಾದವರು ತಮ್ಮೊಳಗೆ ತಾವೇ ಕಲಹದಿಂದ ಸಂಹಾರ ಆಗಬೇಕೆಂದು ತನ್ನ ಚಿತ್ತದಲ್ಲಿಹೋದಾದಕಾರಣ, ಗಾಂಧಾರೀ ಶಾಸ ಬಲಿಸಿ-ಕೊಟ್ಟ. ಶ್ರೀಕೃಷ್ಣಗೆ ಶಾಪ ಕೊಡಲಿಕ್ಕೆ ಗಾಂಧಾರೀ ತಪಸ್ಸಿನ ಫಲ ಹಾನಿ ಆಯಿತು. ಗಾಂಧಾರೀ ಧೃತರಾಷ್ಟ್ರನಕಿಂತ ನೀಚಳು.

ಗಾಂಧಾರೀ ಸೊಸೆಂದರು ತಮ್ಮ ಗಂಡಂದರ ಅಪ್ಪಿಕೊಂಡು, ಹಣೆಗೆ ಹಣೆ ಹೊಸ್ತರು. ಹೀಂಗೆ ಅನೇಕ ಪ್ರಕಾರ ಪ್ರಲಾಪ ಮಾಡೋ ಕಾಲದಲ್ಲಿ, ಶ್ರೀಕೃಷ್ಣ ದ್ರೌಪದೀಗೆ ತೋರಿಸಿದ್ದಾನೆ. 'ನೀ ಅರಣ್ಯಕ್ಕೆ ಹೋಗೋವಾಗ, ದುರ್ಯೋಧನಾದಿಗಳ ಸ್ತ್ರೀಯರು ಅಳೋದು ತೋರಿಸೇನೆಂದಿದ್ದೆ. ನನ್ನ ಪ್ರತಿಜ್ಞೆ ಸತ್ಯ ಮಾಡಿದೆ.' ಹೀಂಗೆಂದು ಸ್ವಾಮಿ ಅನಲಿಕ್ಕೆ 'ಎಲೈ ಸ್ವಾಮೀ, ನೀ ಪೂರ್ಣಾನಂದ, ಗುಣಸಮುದ್ರ, ನಿನ್ನ ಸಂಕಲ್ಪ ಸತ್ಯವೇ, ನಿನ್ನ ಭೃತ್ಯಳೆಂದು ಸತ್ಯ ಮಾಡಿದಿ.' ಹೀಂಗೆಂದು ದ್ರೌಪದೀ ಶ್ರೀಕೃಷ್ಣನ ಸ್ತೋತ್ರ ಬಹಳ ಪ್ರಕಾರ ಮಾಡಿದಳು.

ರಣರಂಗದಲ್ಲಿ ಹದಿನೆಂಟು ಅಕ್ಷೋಹಿಣಿ ಸೈನ್ಯ ಬಿದ್ದದೆ, ದಾರದಾರಿಗೆಂತ ಅಗ್ನಿಸಂಸ್ಕಾರ ಮಾಡ್ಯಾರು! ದ್ರೋಣಾಚಾರ್ಯ ಮೊದಲಾದವರಿಗೆ ಅಗ್ನಿಸಂಸ್ಕಾರ ಮಾಡಿದರು. ಧೃತರಾಷ್ಟ್ರ ತನ್ನ ಮಕ್ಕಳ ದೇಹಗಳಿಗೆಲ್ಲ ಅಗ್ನಿಸಂಸ್ಕಾರ ಮಾಡಸ. ಹೊಕ್ಕ. ಬ್ಯಾಡವೆಂದು ಭೀಮಸೇನನ ಮನಸ್ಸಿನಲ್ಲಿಹೋದು. ರಾಯನ ಚಿತ್ತ-ಕ್ಷೋಭವಾದೀತೆಂದು ಬ್ಯಾಡವೆಂದು ನಿವಾರಿಸಲಿಲ್ಲ. ಧೃತರಾಷ್ಟ್ರ ತನ್ನ ಮಕ್ಕಳ ದೇಹಗಳನೆಲ್ಲ ದಹನ ಮಾಡಿಸಿದ. ಹದಿನೆಂಟು ಅಕ್ಷೋಹಿಣಿ ಸೈನ್ಯ, ಎಷ್ಟೆಂತ ಸುಟ್ಟಾರು! ಪಾಂಡವರು ತಮ್ಮ ಐದು ಮಂದಿ ಸಾರಥಿಗಳಿಗೆ ಹೇಳಿ, ಸಜ್ಜನರುಗಳು, ಒಳ್ಳೇವರು ದಾರಿದ್ದಾರೆ, ದ್ರುಪದರಾಯ ದೃಷ್ಟಕೇತುರಾಯ, ಇವರಿಗೆಲ್ಲ ಸರಸ್ವತೀ ನದಿಯೊಳಗೆ ಹಾಕಿಸಿದರು. ಎಷ್ಟಂತ ಶವಗಳ ನದೀಲಿ ಹಾಕ್ಯಾರು! ಉಳದ ಮುಂದಿಯನ್ನ ಅಲ್ಲೇ ಬಿಟ್ಟು, ಅಲ್ಲಿಂದ ಭಾಗೀರಥೀಗೆ ಬಂದರು. ಸ್ತ್ರೀಪರ್ವ ಮುಗಿಯಿತು.

ಐಕ್ಷಿಕಪರ್ವ ಹೇಳಥಾರೆ. ಭಾಗೀರಥೀ ತೀರದಲ್ಲಿ ಪಾಂಡವರು, ಗುರುಹಿರೇರಿಗೆ ಪಿಂಡಪ್ರದಾನ, ತಿಲೋದಕ ಕೊಡೋವಾಗ, ಕುಂತೀದೇವಿ ಮಕ್ಕಳಿಗೆ ಹೇಳಿದಳು. 'ಅಪ್ಪಗಳಿರ್ಯಾ, ಕರ್ಣಗೆ ಸಹನಾಗಿ ವಿಶೇಷವಾಗಿ ತಿಲೋದಕ, ಪಿಂಡಪ್ರದಾನ ಮಾಡರಿ. ಕರ್ಣಗೆ ಸರಲೋಕವಾಗಲಿ.' ಹೀಂಗಂತ ಅನಲಿಕ್ಕೆ. 'ಕರ್ಣ ನಮ್ಮ ಅಪಕ್ಷಪಾತಿ, ಅತಗೆ ಏನುಕಾರಣ ವಿಶೇಷವಾಗಿ ತಿಲೋದಕ ಕೊಡಬೇಕು?' ಎಂದಲ್ಲಿ ಕುಂತೀ ಮಕ್ಕಳಿಗೆ ಹೇಳಿದಳು. 'ಅಪ್ಪಗಳಿರ್ಯಾ, ನಾ ಕನ್ಯಾವಸ್ಥೀಲಿ, ಕರ್ಣನ ಪಡದೀನಿ.' ಹೀಂಗಂತ ಕುಂತೀದೇವಿ ಮಾತು ಕೇಳದ ಧರ್ಮರಾಯ ಮೂರ್ಛೆಯಿಂದ ಬಿದ್ದ. 'ಇಷ್ಟು ದಿವಸ ಕರ್ಣ ನಮ್ಮ ಅಣ್ಣನಂತ ತಿಳಿದಿದ್ದಿಲ್ಲ. ಪ್ರತ್ಯಕ್ಷ ನಮ್ಮಣ್ಣನ ಕೊಂದೆವಲ್ಲ! ನಮ್ಮಂಥ ಪಾಪಿಗಳು ಎಲ್ಲಾದರಿದ್ದಾರೆ!' ಎಂದು ಬಹಳ ದುಃಖಬಡಹೊಕ್ಕ. 'ಎಲೌ ತಾಯೀ, ನಾವು ಪ್ರತ್ಯಕ್ಷ ನಮ್ಮಣ್ಣನ ಕೊಂದೆವು. ಇನ್ನು ನಮಗೆ ದಾವ ದುರ್ಗತಿ ಆಗತದೆ!' ಎಂದು, ಕರ್ಣನ ನೆನನೆನಸಿ ಪ್ರಲಾಪ ಮಾಡಥಾನೆ. ಆಗ 'ಸ್ತ್ರೀಯರಿಗೆ ಗೌಪ್ಯ ಪ್ರಸೋಯ ನಿಂದರ-ಬ್ಯಾಡ, ಸ್ತ್ರೀಯರಂತಸ್ಥ ಮಾತು ಹೊರಗೆ ಬೀಳಲಿ' ಎಂದು ಧರ್ಮರಾಯ ಶಪಿಸಿದ. ಕರ್ಣನ ನೆನಸಿ ದುಃಖಬಡತ, ತಿಲೋದಕ ಕೊಡೋದು ಬಿಟ್ಟುಕೊಟ್ಟು, ಪ್ರಲಾಪ ಮಾಡತ ಕುಳಿತಿರಲಾಗಿ, ಅಲ್ಲಿಗೆ ನಾರದ ಬಂದನು, ಬಂದು ಬಹಳ ಸಮಾಧಾನ ಮಾಡಿದ. 'ಎಲೈ ಧರ್ಮರಾಯಾ, ಕರ್ಣನ ದುರ್ಗುಣಗಳು ಬಹಳವೆ. ಪಾಂಡವರಿಗೆ ನೀ ಹಿರಿಯನಾಗಿರೆಂದು ಹೇಳಿದೆ. ಕುಂತೀದೇವಿ ಹೇಳಿದಳು' ಎಂದು ಹೇಳಿದ. ಶ್ರೀಕೃಷ್ಣ ಹೇಳಥಾನೆ, 'ಎಲೈ ಧರ್ಮರಾಯಾ, ನಾ ಹಸ್ತಿನಾವತಿಗೆ ಹೋಗಿದ್ದಾಗ್ಯೆ, ಕರ್ಣನ್ನ ರಥದಲ್ಲಿ ಕೂಡ್ರಿಸಿಕೊಂಡು, ಪಾಂಡವರ ಕಡಿಗೆ ಬಾ, ಸರ್ವಸಾಮ್ರಾಜ್ಯ ನೀನೇ ಆಳುವಂತೀ, ಎಂದು ಬಹುಪ್ರಕಾರ ಹೇಳಿದರೂ ಕೇಳಲಿಲ್ಲ' ಎಂದು ಹೇಳಿ, ಶ್ರೀಕೃಷ್ಣ ಧರ್ಮರಾಯನ ಸಮಾಧಾನ ಮಾಡಿದ. ತರುವಾಯ ಪಾಂಡವರು, ಭಾಗೀರಥೀ ತೀರದಲ್ಲಿ, ದ್ವಾದಶಾಹ ಕರ್ತವ್ಯಕರ್ಮ ಮುಗಸಿ, ಸಮಸ್ತ ಸಜ್ಜನರಿಗೆ ಊರ್ಧ್ವಗತಿ ಕಾಣಿಸಿ, ಸಿಂಹಾಸನ ಪದವೀ ಆಳಲಿಕ್ಕೆ. ಹಸ್ತಿನಾವತಿಗೆ ಬಂದರು. ದೇವರ ಭಕ್ತರಾದವರು, ಸಕಲ ದುಷ್ಕರ್ಮ ಪರಿಹರಿಸಿಕೊಂಡು, ನಿಜಸುಖಲಾಭ ಹ್ಯಾಂಗೆ ಐದಥಾರೆ, ಹಾಂಗೆ ಪಾಂಡವರು ವೈರಿಗಳ ಕೊಂದು, ಸಿಂಹಾಸನ ಪದವಿ ಐದಿದರು. ಸ್ವಾಮೀ ಕಥಾ ಕೇಳಿದವರಿಗೆ ಅರಿಷ್ಟನಿವೃತ್ತಿ ಇಷ್ಟಪ್ರಾಪ್ತಿ ಆಗತದ ಎಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ, ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀಕೃಷ್ಣಚರಿತೇ ದುರ್ಯೋಧನವಧಾದಿ ಪಾಂಡವ ಸ್ವಪುರ ಪ್ರವೇಶಃ' ಎಂಬ ಇಪ್ಪತ್ತೆಂಟನೇ ಅಧ್ಯಾಯವು ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೨೯

ಶ್ರೀಕೃಷ್ಣಚರಿತೇ ಸಮಸ್ತ ಧರ್ಮನಿರ್ಣಯಃ

ಈ ಇಪ್ಪತ್ತೊಂಭತ್ತನೇ ಅಧ್ಯಾಯದಲ್ಲಿ ಶಾಂತಿಪರ್ವ ಭಾರತಕಥ ಹೇಳಥಾರೆ. ಧರ್ಮರಾಯಗೆ ಸಾಮ್ರಾಜ್ಯದಲ್ಲಿ, ಶ್ರೀಕೃಷ್ಣ ವೇದವ್ಯಾಸರು ಬ್ರಾಹ್ಮಣರಿಂದ ಅನುಕ್ತರಾಗಿ, ಅಭಿಷೇಕ ಮಾಡಿದರು. ಭೀಮಸೇನಗೆ ಯುವರಾಜ್ಯದಲ್ಲಿ ಅಭಿಷೇಕ ಮಾಡಿದರು. ಈ ಪ್ರಕಾರ ಸಕಲ ಸಾಮ್ರಾಜ್ಯ ವೈಭೋಗ ಭೋಗಸ್ತ, ಧರ್ಮರಾಯು ಸಿಂಹಾಸನದಲ್ಲಿ ಕುಳಿಥಾನೆ. ಅಲ್ಲಿಗೆ ಒಬ್ಬ ಚಾರ್ವಾಕ ತ್ರಿದಂಡಿ ಸನ್ಯಾಸಿ ಬಂದನು. ಚಾರ್ವಾಕ ಸನ್ಯಾಸಿ ಮಹಾ ದೊಡ್ಡ ರಾಕ್ಷಸ. ದುರ್ಯೋಧನನ ಗೆಳಿಯನಾಗಬೇಕು. ಧರ್ಮರಾಯನ್ನ ರಾಜ್ಯಭ್ರಷ್ಟನ್ನ ಮಾಡಬೇಕು, ದುರ್ಯೋಧನಗೆ ಪ್ರೀತಿ ಆಗಬೇಕು ಎಂಬ ಆಲೋಚನೆಯಿಂದ ಬಂದಿದ್ದ. ಪಾಂಡವರು ಸನ್ಯಾಸಿ ಬಂದಾನೆಂದು ಪೂಜೆ ಮಾಡಿದರು. ಪೂಜೇ ಕೊಂಡು ಸನ್ಯಾಸಿ ಮಾತನಾಡಥಾನೆ. " ರಾಯಾ ನಿನಗೆ ಬ್ರಾಹ್ಮರು ಬಹಳ ನಿಂದಸಥಾರೆ. ' ಜ್ಞಾತಿಕ್ಷಯ ಮಾಡಿದ್ದಾರೆ. ದುರ್ಯೋಧನಾದಿಗಳ ಕಪಟದಿಂದ ಕೊಂದರು, ದುಶ್ಶಾಸನನ ರಕ್ತ ಸೇವಿಸಿದರು.' ಹೀಂಗಂತ ಬಹಳ ದೂಷಸ್ಥಾರೆ. ' ಇಂಥಾ ಕುಲವಿನಾಶಕರಲ್ಲಿ ಅನ್ನ ಕೋಬಾರದು ' ಅಂತ ನಿಮ್ಮನ್ನ ಬ್ರಾಹ್ಮರು ಅಂಥಾರೆ." ಹೀಂಗೆಂದು ರಾಯಗೆ ಸನ್ಯಾಸಿ ದೂಷಣವಚನ ಆಡಲಿಕ್ಕೆ, ಧರ್ಮರಾಯ ದುಃಖಿಷ್ಟನಾದ. ' ಬ್ರಾಹ್ಮಣರ ಕೂಡ ದಾರು ಹೊಗಳಿಸಿಕೊಂಬೋದಿಲ್ಲ, ಅವರ ಜನ್ಮ ವ್ಯರ್ಥ. ನಾ ನಿಂದಿಸಿಕೊಂಡೆನಲ್ಲ! ನನ್ನ ಜನ್ಮ ವ್ಯರ್ಥವಾಯಿತು, ಸಿಂಹಾಸನ ಪದವೀ ಸುಡಲೀ! ' ಹೀಂಗಂತೆ ಧರ್ಮರಾಯ ಬಹಳ ದುಃಖಿಬಡಲಿಕ್ಕೆ, ವಿಪ್ರರು ರಾಯ ದುಃಖಿಬಡೋದು ಕಂಡು, ' ಹೇ ಧರ್ಮರಾಯ ನಿನಗೆ ರಾಜ್ಯದಲ್ಲಿ ಅಭಿಷೇಕವಾಯಿತೆಂದು, ರಾಜ್ಯ ರಾಜ್ಯದಿಂದ ನಾವು ಬ್ರಾಹ್ಮರು ಬಂದೀವಿ. ನಮ್ಮ ಹೊರ್ತು ದ್ವಿಜರು ದಾರಿದ್ದಾರೆ! ' ಎಂದು, ತ್ರಿಕಾಲದರ್ಶಿಗಳು, ಈ ಚಾರ್ವಾಕ ಸನ್ಯಾಸಿ ರಾಕ್ಷಸರೊಳಗೆ ಅಧಮನೆಂದು ತಿಳಿದು, ತಮ್ಮಲ್ಲಿಲ್ಲದಂಥ ದೋಷ ಆರೋಪಿಸಿ, ರಾಯಗೆ ಇಲ್ಲದ್ದೊಂದು ಹೇಳಿ, ರಾಯನ ಮನಸ್ಸು ಕ್ಷೋಭ ಮಾಡ್ಯಾನೆಂದು ತಿಳಿದು, ' ಎಲೋ ಸನ್ಯಾಸೀ, ನಿನಗೆ ಶಾಪ, ಸುಟ್ಟು ಸಾಯಂತ ಕೊಡಥೀವಿ.' ಹೀಂಗಂತ ' ಸುಟ್ಟು ಸಾಯಿ ' ಎಂದು ಶಪಿಸಲಿಕ್ಕೆ, ಭೂಸುರವಚನಾತ್ಮಕ ಬಾಣದಿಂದ, ಚಾರ್ವಾಕಸನ್ಯಾಸಿ ಸುಟ್ಟು ಬೆಂವಟಾದನು. ಚಾರ್ವಾಕ ರಾಕ್ಷಸ ಸಾಯಲಿಕ್ಕೆ, ಧರ್ಮರಾಯ ಮತ್ತಷ್ಟು ಚಿಂತಿಯುಳ್ಳವನಾದ. ' ಸನ್ಯಾಸಿ ನನ್ನಲ್ಲಿ ಸತ್ತನಲ್ಲ! ' ಎಂದು ದುಃಖಿಬಡಲಿಕ್ಕೆ, ' ಇವ ಸನ್ಯಾಸಿ ಅಲ್ಲ

ರಾಕ್ಷಸರೊಳಗೆ ಅಧಮನಿದ್ದಾನೆ. ದುರ್ಯೋಧನಗೆ ಗೆಳಿಯನಾಗಬೇಕು. ಅವನ ಪ್ರೀತಿ ಒಡಿಸಬೇಕಾಗಿ, ನಿನ್ನ ರಾಜ್ಯಭ್ರಷ್ಟನ್ನ ಮಾಡಬೇಕಾಗಿ, ಕಪಟದಿಂದ ಸನ್ಯಾಸಿ ಆಗಿ ಬಂದಿದ್ದ. ತನ್ನ ಪಾಪದಿಂದ, ದ್ವಿಜರ ಶಾಪದಿಂದ ತಾನೇ ಸುಟ್ಟು-ಹೋದ. ರಾಯಾ, ನೀ ಮನಸ್ಸಿಗೆ ಖೇದ ಹಚ್ಚಿಕೋಬ್ಯಾಡ' ಹೀಂಗೆ ಯಾದವೇಂದ್ರ ಸಮಾಧಾನ ಮಾಡಿದ. ತರುವಾಯ ವಿಪ್ರರಿಗೆ ಉಡಗೊರಿ, ಉತ್ಸಾಹ, ದ್ರವ್ಯ ದಕ್ಷಿಣೆಗಳಿಂದ ಸಂತೋಷ ಬಡಿಸಿ, ಮೃದುವಚನಗಳಿಂದ ಸಮಾಧಾನ ಮಾಡಿದ.

ದುರ್ಯೋಧನ ಸಾಯಲಿಕ್ಕೆ, ಅತನ ಸಂಬಂಧೀಕರು, ಪಾಂಡವರು ತಮಗೆ ಅಪ್ರತಿಷ್ಠ ಮಾಡ್ಯಾರೆಂದು ದೂರದೇಶಕ್ಕೆ ಹೋದರು. ಧರ್ಮರಾಯ, ಓಡಿಹೋದ ಪಟ್ಟಣಸ್ಥರನ್ನೆಲ್ಲ ಕರಸಿ, ಅವರಿಗೆ ವೃತ್ತಿ ಸ್ವಾಸ್ಥಿ ಕೊಟ್ಟು, ತಾಯಿತಂದೇರು ಮಕ್ಕಳ ಪೋಷಣೆ ಮಾಡಿದಂತೆ ರಕ್ಷಿಸತಿಹೋನು. ಹೀಂಗೆ ರಾಯ ಸರ್ವಸುಖ-ದಿಂದಿದ್ದು, ರಾಜ್ಯ ಆಳೋವಲ್ಲಿ, ಮನಸ್ಸು ಬಾರದು. ತಮಗೆ ದಾವ ದುರ್ಗತಿ ಆದೀತೊ ಎಂದು ಚಿಂತಿ ಹಚ್ಚಿಕೊಂಡು, 'ಕುರುವೃದ್ಧಪಿತಾಮಹನಾದ ಭೀಷ್ಮ, ದ್ರೋಣ, ಸಾಕ್ಷಾತ್ ನಮ್ಮ ಅಣ್ಣ ಕರ್ಣ, ಹೀಂಗೆ ಕುಲಬಾಂಧವರನ್ನ ಕೊಂದೆವು. ಎಲೈ ಭೀಮಸೇನ, ನೀನು ರಾಜ್ಯ ಆಳು. ನಾ ರಾಜ್ಯ ಆಳವಲ್ಲೆ' ಎಂದು ಸಿಂಹಾಸನದಲ್ಲಿ ಕುಳಿತು, ದೇಶದ ಪಾರುಪತ್ಯ ಮಾಡವಲ್ಲನಾದ. ರಾಯಗೆ ಭೀಮಸೇನ ಅರ್ಜುನರು ಬೇಡಿಕೊಂಡರು. ಮಾದ್ರೀಪುತ್ರರು ಬೇಡಿಕೊಂಡರು. ದ್ರೌಪದೀ ಬೇಡಿಕೋತಿಹೋಳು. 'ನಮ್ಮ ಸ್ವಾಮಿ ಕೃಷ್ಣನ ವಾಕ್ಯದಂತೆ ಇರು. ನಿನಗೆ ಪಾಪವಿಲ್ಲ. ವಿಷ್ಣು-ವೈಷ್ಣವದ್ರೋಹಿಗಳ ಕೊಂದದ್ದರಿಂದ ಪುಣ್ಯವೇ ಬಂತು. ದೇವರ ವಾಕ್ಯದಲ್ಲಿ ವಿಶ್ವಾಸ ಮಾಡು. ಪಾಪಕ್ಕೆ ಪ್ರಾಯಶ್ಚಿತ್ತ ಕೋಬೇಕೆಂದು ವನಕ್ಕೆ ಹೋಗಬ್ಯಾಡ' ಎಂದು ಅನೇಕ ಪ್ರಕಾರ, ಬಹು ಮಂದಿ ಬೇಡಿಕೊಳ್ಳಲಿಕ್ಕೆ, ಧರ್ಮರಾಯ ಭೀಮಸೇನನ ಬೇಡಿಕೊಂಡ. 'ಎಲೈ ತಮ್ಮಾ, ನನಗೆ ಹೇಳಬ್ಯಾಡ ಹಟವಾದದಿಂದ ನಿನ್ನ ಮಾತು ಕೇಳಿದ್ದರಿಂದ ಇಷ್ಟು ಸಂಹಾರವಾಯಿತು. ಹದಿನೆಂಟು ಅಕ್ಷೋಹಿಣಿ ಮಹಬ್ರಲ ಸತ್ತಿತು. ದೋಷಕ್ಕೆ ಪಾತ್ರನಾದೆ. ಇನ್ನು ರಾಜ್ಯ ಆಳೋಹಾಂಗೆ ಇಲ್ಲ. ನೀವೇ ರಾಜ್ಯ ಆಳಿಕೊಳ್ಳಿ.' ಹೀಂಗೆ ಭೀಮಸೇನಗೆ ರಾಯ ಹೇಳಿಕೊಂಡ. ಅರ್ಜುನನ್ನ ಜಬರಿಸಿಕೊಂಡ. 'ನೀ ನನಗೆ ಬುದ್ಧಿ ಹೇಳುವನೇ!' ಎಂದು ಜಬರಿಸಿಕೊಳ್ಳಲಿಕ್ಕೆ, ಅರ್ಜುನ ಖಿನ್ನಮನಸ್ಸುಳ್ಳವನಾಗಲು, ಬ್ರಾಹ್ಮಣರು ಅರ್ಜುನನ್ನ ವಹಿಸಿಕೊಂಡು ಮಾತನಾಡಥಾರೆ. 'ರಾಯಾ, ಅರ್ಜುನ ದೇವೇಂದ್ರನಿದ್ದಾನೆ. ನಿನ್ನಕಿಂತ ದೊಡ್ಡವನು' ಎಂದು ವಿಪ್ರರಾಡಲಿಕ್ಕೆ, ಏನಂದರೂ ರಾಯನ ಸಂಶಯ ಬಿಡದು. 'ಇವರೆಲ್ಲ ನನ್ನ ಮ್ಯಾಲಿನ ಸ್ನೇಹದಿಂದ, ಮಾಡಿದ ಕರ್ತವ್ಯವೇ ಧರ್ಮ ಎಂದು ಹೇಳಥಾರೆ. ನಾ ಬಹಳ ಪಾಪ ಮಾಡೀನಿ. ಕುಲಕ್ಷಯ

ಮಾಡೀನಿ. ಇದಕ್ಕೆ ಪ್ರಾಯಶ್ಚಿತ್ತ ಮಾಡಿಕೋಬೇಕು. ರಾಜ್ಯ ಆಳಬಾರದು.' ಹೀಂಗೆಂದು ದುರಾಗ್ರಹ ಮಾಡಿಕೊಂಡಿಹ. ಶ್ರೀಕೃಷ್ಣ, ವೇದವ್ಯಾಸರು ಬಹು ಪ್ರಕಾರ ಹೇಳಿದರೂ, ಸಮಾಧಾನ ಆಗ. ಯುಕ್ತಿಜ್ಞಾನದಿಂದ ಹೇಳಿದರೂ ಮಣಿದು ಬರವಲ್ಲ. ಶ್ರೀಕೃಷ್ಣ ಧರ್ಮರಾಯಗೆ ಅಂದ, 'ನನ್ನ ಮಾತು ಕೇಳವಲ್ಲಿ, ದುರ್ಯೋಧನನ ಪಕ್ಷಪಾತಿ ಭೀಷ್ಮ ಇನ್ನೂ ಸತ್ತಿಲ್ಲ. ರಣರಂಗದಲ್ಲಿ ಉತ್ತರಾಯಣ ಮಾರ್ಗ ನೋಡತ, ಗಾಯದಿಂದ ದುಃಖಬಡತ ಬಿದ್ದಾನೆ. ನಾವು ಸ್ವಾರ್ಥದಿಂದ ಹೇಳಥೀ. ವೆಂದು ತಿಳದಿದಿ. ಭೀಷ್ಮ ಹೇಳಿದ ಮಾತು ಸತ್ಯ ಮಾಡೀಯ?' ಎಂದು ಕೇಳಲು ರಾಯ, 'ಕೇಳಥೀನಿ' ಎಂದ. ಆಗ ಯಾದವಕೃಷ್ಣ, ವೇದವ್ಯಾಸ, ಪಾಂಡವರಿಂದ ಯುಕ್ತರಾಗಿ ಕುರುಕ್ಷೇತ್ರಕ್ಕೆ ಹೋದರು.

ರಾಯ ಬಹಳ ನಾಚತಿಹ. 'ಭೀಷ್ಮನ್ನ ಪ್ರತ್ಯಕ್ಷ ಹೊಡದೀವಿ. ಏನಂತ ಮಾರಿ ತೋರಿಸಲಿ' ಎಂತ ಭೀಷ್ಮನ ಎದುರಿಗೆ ಹೋಗವಲ್ಲ. ಶ್ರೀಕೃಷ್ಣ ಹೋಗಿ ಭೀಷ್ಮಗೆ ಹೇಳದ. 'ಧರ್ಮರಾಯ ನಿನ್ನಲ್ಲಿ ಕೆಲವು ಮಾತು ಆಡಲಿಕ್ಕೆ ಬಂದಾನೆ. ಛಿಟ್ಟ ಕೊಳ್ಳಲಿಕ್ಕೆ ಬಹಳ ನಾಚಥಾನೆ' ಎನಲಿಕ್ಕೆ, 'ಏನುಕಾರಣ ಲಜ್ಜಾನ್ವಿತನಾಗ್ಯಾನೆ!' ಹೀಂಗೆಂದು ಭೀಷ್ಮ ಧರ್ಮರಾಯನ ಕರದು, 'ಎಲೋ ಅಪ್ಪಾ, ರಾಯಾ, ನಾವೆಲ್ಲ ಈಶಾಧೀನರು. ಜೀವಕ್ಕೆ ನಾನಾ ದೇಹಗಳು ಬಾಹೋವು. ದೇಹ ನಾಶವಾಗೋದು ದೇವರಾಧೀನ. ನನ್ನ ನೀ ಕೊಂದವನಲ್ಲ.' ಹೀಂಗಂತ ರಾಯನ್ನ ಸಮಾಧಾನ ಮಾಡಿದ. ಕೃಷ್ಣ ಭೀಷ್ಮಗೆ ಆಜ್ಞಾಪಿಸಿದ. 'ಧರ್ಮರಾಯ ನಿನ್ನ ಮುಖದಿಂದ ಧರ್ಮ ಕೇಳಲಿಕ್ಕೆ ಬಂದಾನೆ, ಪ್ರಶ್ನಕ್ಕೆ ಉತ್ತರ ಹೇಳು' ಎನಲಿಕ್ಕೆ, 'ಸ್ವಾಮೀ ನೀ ಸರ್ವೋತ್ತಮ ದೇವತಿ ಪ್ರತ್ಯಕ್ಷವಾಗಿರಲಿಕ್ಕೆ, ನಾ ಧರ್ಮಗಳ ಹೇಳಲಿಕ್ಕೆ ಶಕ್ತನೇ! ನಿನ್ನ ಮುಂದೆ ಪಾಂಡವರಿಗೆ ಧರ್ಮ ಹೇಳಲಿಕ್ಕೆ ನಾ ಶಕ್ತನಲ್ಲ. ನೀ ಸರ್ವಶಕ್ತಿ ಉಳ್ಳವ, ಸರ್ವಾಂತರ್ಯಾಮಿ.' ಹೀಂಗಂತ ಭೀಷ್ಮ ಅನಲಿಕ್ಕೆ, 'ಎಲೈ ಗಂಗಾತನಯ ನಾನೇ ನಿನ್ನಲ್ಲಿ ನಿಂತು, ಧರ್ಮ ಮರ್ಯಾದಿಗಳು ಹೇಳಸಥೀನಿ. ಪಾಂಡವರಿಗೆ ಭೀಷ್ಮ ನೀತಿ ಹೇಳದನಂತ ನಿನ್ನ ಕೀರ್ತಿ ಲೋಕದಲ್ಲಿ ಪಸರಿಸಲಿ.' ಹೀಂಗತ ಶ್ರೀಕೃಷ್ಣ ಅನಲಿಕ್ಕೆ, ಭೀಷ್ಮ ಧರ್ಮರಾಯಗೆ ರಾಜಧರ್ಮ, ದಾನಧರ್ಮ, ಆಪದ್ಧರ್ಮ, ಮೋಕ್ಷಧರ್ಮ, ಹೀಂಗೆ ನಾಲ್ಕು ವಿಧ ಧರ್ಮಗಳು ಹೇಳಥಾನೆ.

'ಹೇ ಧರ್ಮರಾಯಾ, ರಾಜಧರ್ಮ ಹೇಳಥೀನಿ, ಕೇಳು. ಹೇ ಧರ್ಮರಾಯಾ, ಪ್ರಾಣಿಗಳು ಧರ್ಮ ಮಾಡಥಾರೆ. ಅದಕ್ಕೆ ದಾರು ವಿಘ್ನ ಆಚರಿಸಥಾರೆ ಅವರನ್ನ ಕೊಲ್ಲಬೇಕು. ಭಗವದ್ಧರ್ಮ ಪಾಲಿಸಬೇಕು. ವಿಷ್ಣುವೈಷ್ಣವದ್ರೋಹಿಗಳ ದಂಡಿಸಬೇಕು. ರಾಯನಾದವ ಸಾತ್ತ್ವಿಕಧರ್ಮ ತಿಳಕೋಬೇಕು, ತಾ ಮಾಡಬೇಕು. ಪ್ರಾಣಿಗಳಿಗೆ ಭಗವಂತನ ವಿಷಯಕ ಧರ್ಮ ಮಾಡಿರೆಂದು ಶಿಕ್ಷಿಸಬೇಕು. ಕಾಯಾ, ವಾಚಾ, ಮನಸ್ಸಿನಿಂದ ಕೇಶವನ ಪೂಜಿ ಮಾಡಬೇಕು. ನಿರಂತರ ಧರ್ಮ

ಮಾಡಬೇಕು. ಧರ್ಮ ಮಾಡಿ ತತ್ತ್ವಜ್ಞಾನವಿಲ್ಲದಿದ್ದರೆ ಉಪಯೋಗವಿಲ್ಲ. ತತ್ತ್ವಜ್ಞಾನ ಸಂಪಾದಿಸಬೇಕು. ನಾರಾಯಣ ಸರ್ವೋತ್ತಮ, ಸರ್ವತಂತ್ರ ಸ್ವತಂತ್ರ, ಲಕ್ಷ್ಮೀ ಬ್ರಹ್ಮಾದಿ ಜಗತ್ತು ಮೋಕ್ಷದಲ್ಲಿ, ಸಂಸಾರದಲ್ಲಿ ಸ್ವಾಮೀ ಅಧೀನವೆಂದು ನಿರಂತರ ತಿಳೀಬೇಕು. ದೇವತಾ ತಾರತಮ್ಯ ಜೆನ್ನಾಗಿ ತಿಳೀಬೇಕು. ನಾರಾಯಣನ ವ್ಯತಿರಿಕ್ತ ಲಕ್ಷ್ಮೀ ಬ್ರಹ್ಮಾದಿಗಳ ಪೂಜೆ ಸ್ವತಂತ್ರದಿಂದ ಮಾಡಬಾರದು. ಅವರ ಪೂಜೆ ಮಾಡಬೇಕಾದರೆ, ಇವರು ನಮ್ಮ ಸ್ವಾಮೀ ಭಕ್ತರು, ಇವರೆಲ್ಲಾ ಪರಿವಾರದೇವತೆಗಳೆಂದು ಪೂಜಾ ಮಾಡಬೇಕು. ದಾವದಾವ ದೇಶದಲ್ಲಿರ ಲ್ಯಾಕೆ, ನಾರಾಯಣನ ತುಷ್ಟ್ಯರ್ಥ ಸೇವಿ ಮಾಡಬೇಕು. ಸುಮ್ಮಗೇ ಕಟ್ಟಿಗೀ ಮುರೇಬಾರದು. ಸ್ತ್ರೀಪುತ್ರಾದಿಗಳು ದೇವರ ಇಚ್ಛೆಯಿಂದ ತನ್ನ ಅಧೀನರಾಗಿದ್ದಾರೆ. ಅತಿ ಮೋಹ ಇರಬಾರದು. ಶಿಶ್ನೋದರಪರಾಯಣರಾಗಿರಬಾರದು. ವಿಷಯ-ಭೋಗದಲ್ಲಿ, ನಾರಾಯಣನ ಮರತು ವ್ಯರ್ಥ ಕೆಡಬಾರದು. ನಾರಾಯಣನ ಭಕ್ತರ ಕೂಡ ವಿರೋಧ ಮಾಡಬಾರದು. ಪರಸ್ಪರ ಹರಿಭಕ್ತರಿಗೆ ವಿರೋಧವಿದ್ದಿದ್ದರೆ, ವಿಶೇಷಜ್ಞಾನ ಉಳ್ಳವರ ಪಕ್ಷವಾಗಬೇಕು. ದಾವ ಪ್ರಕಾರದಲ್ಲಾದರೂ, ಹರಿಭಕ್ತರ ಪ್ರೀತಿ ಸಂಪಾದಿಸಬೇಕು. ತಾ ಮಾಡೋದು ಧರ್ಮ, ನೋಡಿದರೆ ಸಜ್ಜನರಿಗೆ ಅಪ್ರೀತಿ ಕಾಣಿಸತದೆ, ಅಂಥಾ ಧರ್ಮ ಮಾಡಬಾರದು. ಸಜ್ಜನರ ಸಮ್ಮತವಾಗುವ ಧರ್ಮ ಮಾಡಬೇಕು.

'ಇನ್ನು ವರ್ಣಾಶ್ರಮಧರ್ಮ ಹೇಳಥೀನಿ. ಬ್ರಾಹ್ಮಣನಾದವ ತತ್ತ್ವ-ವಿಚಾರ ಮಾಡಿರಬೇಕು. ತತ್ತ್ವಜ್ಞಾನ ತಿಳೀಬೇಕು. ಸ್ವರೂಪೋತ್ತಮರ ಕಡಿ-ಯಿಂದ ತಾ ಕೇಳಿಕೋಬೇಕು, ತಾ ಒಬ್ಬರಿಗೆ ಹೇಳಬೇಕು. ತೀರ್ಥಯಾತ್ರಿ, ವ್ರತಗಳು ಮಾಡಬೇಕು. ದೇವರ ತುಷ್ಟ್ಯರ್ಥ ಸೇವಿ ಮಾಡಬೇಕು. ಬ್ರಾಹ್ಮಣನಾಗಿ ಜೀವಹಿಂಸಿ ಮಾಡಬಾರದು, ವಂಚಿಸಬಾರದು. ಸ್ತ್ರೀಪುತ್ರಾದಿಗಳಿಗೆ ದೇಹನಾಶ, ಅಂಗನ್ಯೂನ ಆಗಥಾಂಗೆ ದಂಡಿಸಬೇಕು. ಯದೃಚ್ಛಲಾಭದಿಂದ ತುಷ್ಟನಾಗಿರ ಬೇಕು. ತನಗೇನೂ ಕೊಡಲಿಲ್ಲವೆಂದು ವಿಮನಸ್ಕನಾಗಬಾರದು. ಅಹಿತ ಚಿಂತಿಸಿ ಅರವನಿಗೆ ಹೇಳಿ, ಒಬ್ಬರಿಗೆ ದಂಡ ಕಟ್ಟಿಸಬಾರದು. ಸ್ವರೂಪ ಹಾನಿ ಮಾಡಿ-ಕೊಂಡು ಅತಿ ಯತ್ನ ಮಾಡಬಾರದು. ದುರ್ದಾನ ತೆಗೆದುಕೊಳ್ಳದೆ, ಸಾತ್ತ್ವಿಕ ದಾನ ತಾವಾಗಿ ತಂದುಕೊಟ್ಟರೆ, ಕೋಬೇಕು. ಪರರಿಗೆ ಉಪದ್ರವ ಮಾಡಬಾರದು. ಯಜ್ಞಾದಿ ಷಟ್ಕರ್ಮ ಮಾಡಬೇಕು. ಶಿಲೋಂಚನವೃತ್ತಿ ಮಾಡಬೇಕು. ಯಜ್ಞ ಮಾಡಬೇಕು. ಯಜ್ಞಾದಿ ಕರ್ಮಗಳ ಮಾಡಸಬೇಕು. ಆದರಿಂದ ದ್ರವ್ಯ ದಕ್ಷಿಣೆ ಒಂದದ್ದು ತೆಗೆದುಕೊಂಡು, ಉದರಪೋಷಣೆ ಮಾಡಬೇಕು. ಆದು ತನ್ನಿಂದ ಆಗದಿದ್ದರೆ, ಆಪತ್ಕಾಲಕ್ಕೆ ಕ್ಷತ್ರಿಯ ವೃತ್ತಿ ಮಾಡಬೇಕು. ಖಡ್ಗ ಚರ್ಮ ಧರಿಸಿ ಉದರವೃತ್ತಿ ನಡೀದೆ ಮಹಾ ಆಪತ್ಕಾಲ ಪ್ರಾಪ್ತವಾದರೆ ವೈಶ್ಯವೃತ್ತಿ ಮಾಡಬೇಕು.

'ಇನ್ನು ಕ್ಷತ್ರಿಯರು ದಾವ ಪ್ರಕಾರ ಉದರಪೋಷಣೆ ಮಾಡಬೇಕೆಂದರೆ, ದೇವಸ್ವ ಬ್ರಹ್ಮಸ್ವ ಕೋಬಾರದು. ದೇವ ದ್ವಿಜರ ವೃತ್ತಿ ಮುಣಗಸದೆ, ಪರಂಪರ ನಡಿಯುವಂತೆ ನಡಸಬೇಕು. ತಾನು ಹೊಸದಾಗಿ ವೃತ್ತಿ ಕೊಡಬೇಕು. ಭೂಸುರರ ಕೈಯ ಕಪ್ಪ ಕೋಬಾರದು, ದೇವ ದ್ವಿಜರ ಬಿಟ್ಟು ಮಿಗಿಲಾದವರ ಕೈಯ ಕೋ-ಬೇಕು. ಅರಸಿನಲ್ಲಿ ಇದ್ದಲಿಗಾರನ ವಿಚಾರ ಇರಬೇಕು. ಹೂಗಾರನ ವಿಚಾರ ಪ್ರಜಾಪಾಲನಿ ಮಾಡಿ, ಅವರ ಕೈಯ ಕಪ್ಪ ಕೋಬೇಕು, ಜೀವಸೋಪಾಯ ಮಾಡಬೇಕು. ಕ್ಷತ್ರಿಯನಾದವ ತನ್ನ ಬಾಹುಬಲದಿಂದ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರ ರಕ್ಷಿಸಬೇಕು. ಪರಚಕ್ರರು, ತನಗೆ ವಿರುದ್ಧ ರಾಯರು, ಸಮರಾಯರು ವೈರಿಗಳು ದಾರಿದ್ದಾರೆ ಅವರಿಗೆ ಸಾಮ, ದಾನ, ಭೇದ, ದಂಡನಿ ಹೀಂಗೆ ನಾಲ್ಕು ವಿಧ ವಿಚಾರದಿಂದ ದಂಡಿಸಿ ಕಪ್ಪ ಕೋಬೇಕು. ಅರಸನಾದವ ಅಲ್ಪದಿಂದ, ತುಷ್ಟ-ನಾಗಿರಬಾರದು. ರಾಜ್ಯಲಕ್ಷ್ಮೀ ಸಂಪಾದಸ್ತಿರಬೇಕು. ಕ್ಷತ್ರಿಯರು ರಣರಂಗದಲ್ಲಿ ಬೆನ್ನ್ನಕೊಟ್ಟು ಓಡಬಾರದು. ಧೀರನಾಗಿ ಯುದ್ಧ ಮಾಡಬೇಕು. ಅಸಜ್ಜನರ ಪಕ್ಷದಿಂದ ಸಜ್ಜನರ ಕೂಡ ಯುದ್ಧ ಮಾಡಿ, ಬೆನ್ನು ಕೊಟ್ಟು ಓಡಿಬಂದರೂ, ದೋಷನಿಲ್ಲ. ಸಜ್ಜನರಿಗೆ ಸಹಾಯವಾಗಿ, ದುರಾತ್ಮರ ಕೂಡ ಯುದ್ಧ ಮಾಡಿ, ರಣರಂಗದಲ್ಲಿ ಓಡಿಬಂದರೆ ಅವಗೆ ದಿವ್ಯಗತಿ ಇಲ್ಲ. ಅಧೋಲೋಕದಲ್ಲಿ ಬೀಳಥಾನೆ. ಕ್ಷತ್ರಿಯನಾದವ ಪ್ರಜಾಪಾಲನಿ ಮಾಡಬೇಕು.

'ಇನ್ನು ವೈಶ್ಯವೃತ್ತಿ ಹೇಳಥೀನಿ, ಕೇಳು. ಧರ್ಮರಾಯಾ, ವೈಶ್ಯವೃತ್ತಿ ಗೋರಕ್ಷಣೆ, ಕೃಷಿ ಮಾಡಬೇಕು. ಬಡ್ಡಿಬಾಚಿ ವ್ಯವಹಾರ ಮಾಡಬೇಕು. ಅನ್ಯಾಯದಿಂದ ಬಡ್ಡಿ ಕೋಬಾರದು. ಒಂದು ವರಹಾ, ಎಂಭತ್ತೈದು ಪಾಲು ಮಾಡಿದರೆ, ಅದರೊಳಗೆ ಒಂದು ಪಾಲು, ಒಂದು ತಿಂಗಳಿಗೆ ಬಡ್ಡಿ ಕೋಬೇಕು.

'ಶೂದ್ರನಾದವ ಬ್ರಹ್ಮ ಕ್ಷತ್ರಿಯ ವೈಶ್ಯ, ಈ ಮೂರು ವರ್ಣದವರ ಸೇವಿ ಮಾಡಬೇಕು. ಹೀಂಗೆ ನಾಲ್ಕು ವರ್ಣದ ಮರ್ಯಾದಿ ಹೇಳಿದೆ. ಇನ್ನು ವರ್ಣ-ಬಾಹ್ಯರು, ಚಂಡಾಲರು ತಮ್ಮ ಹಿರೇರ ಪರಂಪರ ಬಂದ ಕುಲಾಚಾರ ಮಾಡಿ ಕೊಂಡಿರಬೇಕು. ಅದು ನಿಂದಿತವಾಗಿರಬಾರದು. ಹರಿಪ್ರೀತಿ ಆಗೋಹಾಂಗೆ ಸೇವಿ ಮಾಡಿಕೊಂಡು ಉದರ ಭರ್ತಿ ಮಾಡಿಕೋಬೇಕು. ವರ್ಣಹೀನನಾದವ ಹರಿ-ಭಕ್ತನಾಗಿ ಗುಣ ಉಳ್ಳವನಾಗಿರಥಾನೆ, ಅವಗೆ ನಮಸ್ಕಾರ ಮಾಡಬಾರದು. ಅವಗೆ ಅನ್ನೋದಕದಿಂದ ತುಷ್ಟಿ ಬಡಿಸಿ, ಬಹು ನೂನ ಮಾಡಬೇಕು. ಬ್ರಾಹ್ಮಣ, ತತ್ತ್ವ ಹೇಳೋದು ಮುಖ್ಯಧರ್ಮ; ಕ್ಷತ್ರಿಯ, ವೇದ ಹೇಳೋದು ಮುಖ್ಯಧರ್ಮವಲ್ಲ. ಶ್ರೀಕೃಷ್ಣನ ಆಜ್ಞದಿಂದ ನಾ ನಿನಗೆ ತತ್ತ್ವ ಹೇಳೀನಿ. ವೈಶ್ಯರಾದವರು ಬ್ರಾಹ್ಮರ ಕೈಯ ಆಜ್ಞ ತೆಗೆದುಕೊಂಡು, ತಮ್ಮಕಿಂತ ನೀಚರು, ಸತೀಪುತ್ರಾದಿಗಳಿಗೆ ಉಪದೇಶ ಮಾಡಬೇಕು. ತತ್ತ್ವ ಹೇಳೋ ಅಲ್ಲಿ ವೈಶ್ಯನು ಬ್ರಹ್ಮ ಕ್ಷತ್ರಿಯ ವೈಶ್ಯ

ಈ ಮೂರು ವರ್ಣದವರಿಗೆ ತತ್ತ್ವ ಹೇಳಬಾರದು. ಶೂದ್ರ ತನ್ನ ಹಿರೇರ ಪರಂಪರ ನಡೀತಾ ಬಂದದ್ದು ತಿಳದಿದ್ದರೆ, ತನ್ನ ಮಕ್ಕಳಿಗೆ ಹೇಳಬೇಕು. ನಾಲ್ಕು ವರ್ಣದೊಳಗೆ ತತ್ತ್ವ ಅರಿಯದವರಿಲ್ಲದಿದ್ದರೆ, ವರ್ಣಬಾಹ್ಯರಿಗೆ ಎಲ್ಲಿಂದ ತತ್ತ್ವಜ್ಞಾನ ಬಂದೀತು! ಬ್ರಹ್ಮ ಕ್ಷತ್ರಿಯ ವೈಶ್ಯ ಈ ಮೂರೂ ಮಂದಿ ವೇದ ಓದಬೇಕು. ಶೂದ್ರರು ವೇದ ಓದಬಾರದು. ದಿವಸ ಮೀರಿ ಮುಂಜಿ ಕಟ್ಟಿಸಿಕೋಥಾರೆ, ಅವರು ವ್ರತಬಾಹ್ಯರು. ಕುಂಡಗೋಳಕರು ಬ್ರಾಹ್ಮರ ಅಭಾಸದಲ್ಲಿರಥಾರೆ. ಅವರೂ ವೇದ ಓದಬಾರದು. ತಂತ್ರೋಕ್ತ ಹರಿಪೂಜಿ ಮೂರು ವರ್ಣದವರು ಮಾಡಬೇಕು.

'ಸ್ತ್ರೀಯರಿಗ ದಾವ ಧರ್ಮವೆಂದರೆ, ಸ್ತ್ರೀ ಆದಾಕಿ, ತನ್ನ ಪತಿಯಲ್ಲಿ ಬಹಳ ಭಕ್ತಿಯಿಂದಿರಬೇಕು. ಪುರುಷನಾದವ ಪರಸ್ತ್ರೀಯಲ್ಲಿ ಮನಸ್ಸು ಎರಗಸಬಾರದು. ತನ್ನ ಸ್ತ್ರೀಯಲ್ಲಿ ರತನಾಗಿರಬೇಕು. ದೇವತಾಸ್ತ್ರೀಯರ ವರ್ಣನಿ ಕೇಳಿರಥಾನೆ, ದೇವತಾಸ್ತ್ರೀಯರ ವಿಷಯಾದಿಕ್ಯಳು ತನ್ನ ಸ್ತ್ರೀಯಲ್ಲಿ ಮನಸ್ಸು ಎರಗಿಸಿ, ಮನಸ್ಸಿಂದಾದರೂ ಇಚ್ಛಾ ಮಾಡಿದರೆ, ಅಂಧಂತಮಸ್ಸಿಗೆ ಹೋಗಿ ಬೀಳಥಾನೆ. ಅಥವಾ ಈ ಲೋಕದಲ್ಲಿ ಜ್ಞಾನ ಭಕ್ತಿ ವೈರಾಗ್ಯಶೀಲರ ಹೆಂಡರಿರಥಾರೆ, ಭೋಗಕ್ಕೆ ಬರೋಹಾಂಗಿರಥಾರೆ, ಅಂಥಾ ಸ್ತ್ರೀಯರ ಸಂಭೋಗ ಮಾಡಿದ್ದರಿಂದ ಕೆಟ್ಟು ಹೋಗಥಾನೆ. ಜ್ಞಾನ ಓದಗಿಬಂದು, ಮೋಕ್ಷಕ್ಕೆ ಕಾರಣನಾಗದ್ದೂ ಕೆಟ್ಟು ಹೋಗಥಾನೆ. ದ್ರವ್ಯ ಹೋಗಾಡಿಸಿಕೊಂಡು ಬಾಯಲಿ ಹ್ಯಾಂಗೆ ಮಣ್ಣು ಹೊಯಿಕೋಥಾನೆ, ಹಾಂಗೆ ಉತ್ತಮ ಸ್ತ್ರೀಯರ ಭೋಗದಿಂದ ಕೆಟ್ಟುಹೋಗಥಾನೆ. ಬ್ರಾಹ್ಮಣಸ್ತ್ರೀಭೋಗದಿಂದ ಅನೇಕ ಪಾಪ ಹೆಚ್ಚಾಗತದೆ. ಆದಕಾರಣ ತನ್ನ ಸ್ತ್ರೀಯಲ್ಲಿ ಹೊರತು ಪರಸ್ತ್ರೀಯಲ್ಲಿ ಭೋಗಸಬಾರದು. ಇನ್ನು ಹೆಂಗಸಾದಾಕಿ, ತನ್ನ ಪತಿ ಬಿಟ್ಟು ಪರಪುರುಷನ ಹೊಗಬಾರದು. ಅದರೊಳಗೆ ನೀಚಪುರುಷನ ಭೋಗ ಮಾಡಿದ ಪಕ್ಷವೇ ಬಹಳ ಅನರ್ಥಸಾಧನ. ಜಾತಿಯಿಂದ ಅಧವು, ಗುಣದಿಂದ ಅಧವು, ಅಂಥಾವನ ಭೋಗ ಮಾಡಿದ್ದರಿಂದ ಅನೇಕ ಪಾಪ ಪ್ರಾಪ್ತವಾಗತದೆ. ಸ್ತ್ರೀಯರು ವೇದ ಓದಬಾರದು. ತಂತ್ರೋಕ್ತ ತಿಳಕೋಬೇಕು. ದೇವತಾಸ್ತ್ರೀಯರು, ಋಷಿಗಳ ಸ್ತ್ರೀಯರು ಇರಥಾರೆ, ಅವರು ವೇದ ಓದಲಿಕ್ಕೆ ಅಧಿಕಾರರು. ಕರ್ಮವಶದಿಂದ ಮನುಷ್ಯರಾಗಿ ಹುಟ್ಟಿದ ಪಕ್ಷವೇ, ಆ ಸ್ತ್ರೀಯರು ವೇದ ಓದಿದ ಪಕ್ಷವೇ ವೇದ ಒರತದೆ. ಅವರು ವೇದಾಧಿಕಾರರಂತ ತಿಳಿಯಬೇಕು. ಇನ್ನು ಸಚ್ಛೂದ್ರರು ಪುರಾಣಗಳು ತಿಳಕೋಬೇಕು, ಕೇಳಬೇಕು. ಇನ್ನು ವರ್ಣಬಾಹ್ಯರು ಪುರಾಣ ಕೇಳಲಿಕ್ಕೆ ಯೋಗ್ಯರಲ್ಲ- ಒಳ್ಳೇವರ ಕೈಯು ನಾರಾಯಣನಾಮು ಹೇಳಿಸಿಕೊಂಡು, ನಿರಂತರ ನಾರಾಯಣಸ್ಮರಣೆ ಮಾಡಬೇಕು. ತವೋಯೋಗ್ಯರಿಗೆ ಶರಿಭಕ್ತ್ಯಾದಿ ಗುಣಗಳು ಇರೋದಿಲ್ಲ. ನಾರಾಯಣನ್ನ ಏನಂತ ತಿಳೀಥಾರೆಂದರೆ, ನಾರಾಯಣನ ಸದೃಶ ಕೆಲವು ಗುಣಗಳು ಕೆಲವು ದೇವತಿಗಳಲ್ಲಿ ಅವೆ, ಹೀಂಗೆ

ತರ್ಕಗಳು ಮಾಡಥಾರೆ. ನಾರಾಯಣ ನಿರ್ಗುಣ, ನಿರಾಕಾರ, ವಿಶ್ವಂ ಮಿಥ್ಯಾ ಎಂದು ತಿಳೀಥಾರೆ. ನಾರಾಯಣಗೆ ಅಜ್ಞಾತ್ವ, ಸಮಾಧಿಕ್ಕಳೆಂದು ಯಾರು ತಿಳೀಥಾರೆ, ನಾರಾಯಣ ದುಃಖ ಉಳ್ಳಾತ, ಅವನ ಅವತಾರರೂಪಕ್ಕೂ, ಮೂಲರೂಪಕ್ಕೂ ಭೇದ ತಿಳಿಯೋಣ, ವಿಪರೀತ ತಾರತಮ್ಯ ತಿಳಿಯೋಣ, ಈ ಪ್ರಕಾರ ಹರಿಭಕ್ತರಲ್ಲಿ ವಿಪರೀತ ಜ್ಞಾನ ತಿಳದು, ವಿರೋಧ ಮಾಡೋಣ, ಇವಷ್ಟೂ ಅಂಧಂತಮಸ್ಸಿಗೆ ಸಾಧನ. ಜ್ಞಾನಿಗಳು ಹೀಂಗೆ ತಿಳೊದಿಲ್ಲ. ಸ್ವಾಮಿ ಸರ್ವೋತ್ತಮ, ಪ್ರಾಣಿಗಳು, ಉಸಿರು ಬಿಡೋ ವ್ಯಾಪಾರ ನಾರಾಯಣನ ಅಧೀನವೆಂದು ತಿಳೀಥಾರೆ. ದಾರು ತಿಳೀದೆ ಇದ್ದಾರೆ, ಅವರು ಸಂಶಯವಿಲ್ಲದೆ ಘೋರವಾದಂಥ ನರಕಕ್ಕೆ ಹೋಗಿ ಬೀಳಥಾರೆ. ಇನ್ನು ನಿತ್ಯಸಂಸಾರಿಗಳು, ಇದಮಿದಂ ಎಂಬ ಅಜ್ಞಾನ ಉಣಥಾರೆ. ಹೀಂಗೆ ಸ್ವರ್ಗ ನರಕ ಅನುಭವಿಸತ, ಪುಣ್ಯ ಪಾಪ ಸವುವಾದರೆ, ಮನುಷ್ಯರಾಗಿ ಹುಟ್ಟಿದರೆ ಪುನಃಪುನಃ ಸಂಸಾರ ಐದಥಾರೆ. ಅವರಿಗೆ ತಮುಸ್ಸು ಆಗೋದಿಲ್ಲ.

'ಇನ್ನು ಮೋಕ್ಷಾಧಿಕಾರಿಗಳಿಗೆ ಜ್ಞಾನ,' ಭಕ್ತಿ ನಾರಾಯಣನ ಪ್ರಸಾದದಿಂದ ಆಗತವೆ. ಸಾಧನಸಂಪತ್ತು ಸೈಯಲಾಗಿ ಅವರವರ ಯೋಗ್ಯತಾನುಸಾರ ಮೋಕ್ಷ ಆಗತವೆ. ಪ್ರಾಣಿಗಳು ಅಪಾರ ಪಾಪ ಮಾಡಲ್ಯಾಕೆ, ವಿಷ್ಣು-ವೈಷ್ಣವರ ವಾಕ್ಯದಿಂದ ಅವರಿಗೆ ಪಾಪಲೇಪವಿಲ್ಲ. ಕೇಳಯ್ಯ ಧರ್ಮರಾಯ, ನಿನ್ನ ಮನಸ್ಸಿನಲ್ಲಿ ಸಂಶಯ ಬಹಳದೆ. ದ್ರೋಣ ಕರ್ಣ ಮೊದಲಾದ ಹಿರೇರನ್ನ ಕೊಂದೀನಿ, ಪಿತಾಮಹನ ಕೊಂದೆವಲ್ಲ ಎಂದು ಬಹಳ ದುಃಖ ಉಳ್ಳವನಾಗಿದ್ದೀ. ರಾಯ ಏನುಕಾರಣ ದುಃಖ ಹಚ್ಚಿಕೊಂಡಿದ್ದೀ! ಅಸಜ್ಜನರ ಪಕ್ಷಪಾತಿಗಳ ಕೊಂದದ್ದರಿಂದ ನಿನಗೆ ಬಹಳ ಪುಣ್ಯ ಬಂತು. ನಿನಗೆ ಪಾಪದ ಲೇಪವಿಲ್ಲ ಎಂದು ಶ್ರೀಕೃಷ್ಣ, ವೇದವ್ಯಾಸರು ಹೇಳಥಾರೆ. ಇವರು ಪರದೇವತೆಗಳು, ವೈಷ್ಣವೋತ್ತಮ ಭೀಮಸೇನ ಹೇಳಥಾನೆ. ದ್ರೌಪದೀ ಹೇಳಥಾಳೆ. ಇಂಥಾ ದೊಡ್ಡವರು ಹೇಳಿದ ಮ್ಯಾಲೆ ನಿನಗೆ ಪಾಪವೆಲ್ಲಿಯದು! ಹರಿಭಕ್ತರು, ಹರಿ-ಮುಖ್ಯಪ್ರಾಣರ ಅನುಗ್ರಹ ಆಗಲಿಕ್ಕೆ ಪಾತ್ರರು, ಅವರಿಗೆ ಪಾಪವಿಲ್ಲ, ಎನಲಿಕ್ಕೆ, ದಾವ ಮನುಷ್ಯನು, ಅನೇಕ ಪಾಪ ಮಾಡಿರಲ್ಯಾಕೆ, ಅವರ ಪಾಪಕರ್ಮ ಹಾನಿ ಆಗತದೆ. ಸಕಲ ಸಜ್ಜನರು ನಿನ್ನ ತಮ್ಮಂದರು ಭೀಮಾರ್ಜುನರು ಹೇಳಥಾರೆ, ನಿನಗೆ ಸಂಶಯ ಹೋಗಿಲ್ಲ. ಶ್ರೀಕೃಷ್ಣ ವೇದವ್ಯಾಸರ ಮುಂದೆ ನಾ ಏನು ಹೇಳಲಾಪೆ. ಅವರ ಮುಂದೆ ನಾ ಏನು ಹೇಳೋದು ಅದೆ! ಕೇಳಯ್ಯ ಧರ್ಮರಾಯಾ, ನಿನಗೆ ಲೇಶಮಾತ್ರ ಪಾಪವಿಲ್ಲ, ಸಂಶಯ ಮಾಡಿಕೋಬ್ಯಾಡ.' ಈ ಪ್ರಕಾರ ರಣಭೂಮಿಯಲ್ಲಿ ಭೀಷ್ಮ ಧರ್ಮರಾಯನ ಸಂಶಯ ಪರಿಹಾರ ಮಾಡಿದನು.

ಧರ್ಮರಾಯ ಭೀಷ್ಮನ ವಚನದಲ್ಲಿ ವಿಶ್ವಾಸ ಉಳ್ಳವನಾಗಿ, ತನಗೆ ಪಾಪದ ಲೇಪವಿಲ್ಲೆಂದು ತಿಳಕೊಂಡು, ನಾನಾ ಧರ್ಮರಹಸ್ಯಗಳ ಕೇಳಿ, ಬಹಳ ಪ್ರೀತನಾಗಿ,

ಹರ್ಷೋದ್ರೇಕದಿಂದ ತನ್ನ ತಮ್ಮಂದರ ಕೂಡ ತಾ ಮಾತನಾಡಥಾನೆ. 'ಧರ್ಮ, ಅರ್ಥ, ಕಾಮ, ಹೀಂಗೆ ಮೂರರೊಳಗೆ ದಾವದು ಸರಿ, ದಾವದು ದೊಡ್ಡದು?' ಎಂದು ಯುಧಿಷ್ಠಿರ ಪ್ರಶ್ನ ಮಾಡಲಿಕ್ಕೆ, ವಿದುರ ತನ್ನ ಸಿದ್ಧಾಂತ ಹೇಳಿದ. 'ಧರ್ಮ ದೊಡ್ಡದು, ಅರ್ಥ ಮಧ್ಯಮ, ವಿಷಯಭೋಗಗಳ ಕಾಮ ನೀಚ, ಮೋಕ್ಷಕ್ಕೆ ಉಪಯೋಗವಲ್ಲ. ಧರ್ಮಾರ್ಥಕಾಮದೊಳಗೆ, ಧರ್ಮ ಪರಲೋಕಕ್ಕೆ ಕಾರಣ' ಎಂದು ವಿದುರ ಹೇಳಿದ. ಅರ್ಜುನ ತನ್ನ ಸಿದ್ಧಾಂತ ಹೇಳಥಾನೆ. 'ಅರ್ಥ ದೊಡ್ಡದು, ಅರ್ಥ ಎರಡು ಪ್ರಕಾರವದೆ, ದೇವಾರ್ಥ, ಮನುಷ್ಯಾರ್ಥ ಎಂತ. ವಿದ್ಯದಿಂದ ಜ್ಞಾನ ಉಳ್ಳವನಾಗಿ, ಅಪರೋಕ್ಷೀಕರಿಸಿ, ನಾರಾಯಣನ ಕಾಣಥಾನೆ. ಜ್ಞಾನಪೂರ್ಣತ್ವ ವಿದ್ಯದಿಂದ ಹುಟ್ಟತದೆ. ವಿದ್ಯಾಬಲದಿಂದ ಜ್ಞಾನ, ಜ್ಞಾನದಿಂದ ಮುಕ್ತನಾಗಥಾನೆ. ಅಂಥಾ ವಿದ್ಯ ಮನುಷ್ಯ, ಅರ್ಥದಿಂದ ಸಂಪಾದಿಸಥಾನೆ. ಈ ಅರ್ಥದಿಂದ ಗುರುವು ತುಷ್ಟನಾಗಿ, ವಿದ್ಯ ಕೊಡಥಾನೆ. ಮೋಕ್ಷಾದಿ ಪುರುಷಾರ್ಥ ಕೊಡಲಿಕ್ಕೆ ಸಮರ್ಥವಾದಕಾರಣ ಅರ್ಥ ದೊಡ್ಡದು. ಅರ್ಥ ಉಳ್ಳನಾಗಿ ಸತ್ಪಾತ್ರದಲ್ಲಿ ದ್ರವ್ಯ ಕೊಟ್ಟದ್ದರಿಂದ ಮೋಕ್ಷಮಾರ್ಗ ಐದಥಾನೆ ದ್ರವ್ಯ ನಿಷ್ಕಾಮದಿಂದ ಕೊಟ್ಟದ್ದು, ಫಲಾಪೇಕ್ಷೆ ಇಲ್ಲದೆ ಕೊಟ್ಟದ್ದು, ಗುರುಗಳು ದೇವತಿಗಳನ್ನ ತುಷ್ಟಿ ಬಡಿಸಿ, ಅವರು ಅವಗೆ ಮೋಕ್ಷಫಲ ಪ್ರಾಪ್ತಿ ಮಾಡಿಕೊಡಥಾರೆ. ಸತ್ಪಾತ್ರರಲ್ಲಿ ಕೊಟ್ಟ ಪಕ್ಷವೇ ಅನೇಕ ಫಲವಾಗತದೆ. ಕೇಳು ಧರ್ಮರಾಯ, ನನ್ನ ಸಿದ್ಧಾಂತ ಅರ್ಥ ದೊಡ್ಡದು' ಎಂದು ಅರ್ಜುನ ಅನಲಿಕ್ಕೆ, ಅರ್ಜುನ ಹೇಳಿದ ಪ್ರಕಾರ ಅರ್ಥ ದೊಡ್ಡದೆಂದು ನಕುಲ-ಸಹದೇವರೂ ಹೇಳಿದರು.

'ನೀವೆಲ್ಲ ಕಾಮ ನೀಚವೆಂತ ಮಾಡೀರಿ. ಕಾಮ ನೀಚವಲ್ಲ, ಉತ್ತಮ' ಎಂತ ಭೀಮಸೇನ ತನ್ನ ಸಿದ್ಧಾಂತ ಹೇಳಥಾನೆ. 'ಯೋಗ್ಯವಾದಂಥ ಬಯಕಿ ಬಯಸಿ, ಧರ್ಮ ಅರ್ಥ ಮಾಡಥಾರೆ. ನೀಚಕಾಮ ದಾರೂ ಬಯಸರು. ಸಮಸ್ತರೂ ಸುಖ ಇಚ್ಛೈಸಥಾರೆ. ಕಾಮ ಇಲ್ಲದಿದ್ದರೆ ಶಾಸ್ತ್ರ ಕೇಳಹತ್ತದು, ಮೋಕ್ಷ ಹತ್ತದು, ಕಾಮ ಹ್ಯಾಂಗೆ ನೀಚ! ಸಮಸ್ತ ಜನರೂ ಮೋಕ್ಷ ಬಯಸಥಾರೆ. ಮೋಕ್ಷ ಬಯಸಿದವರು ನಾರಾಯಣನ ಪಾದಾಂಬುಜವಾದರೂ ಬಯಸಥಾರೋ ಇಲ್ಲವೋ? ಉತ್ತಮಾಧಿಕಾರಿಗಳು ನಾರಾಯಣನ ಸೇವಿ ಬಯಸಥಾರೆ, ಬಯಸದವರು ದುಃಖಸಮುದ್ರದೊಳಗೆ ಮುಣಗಥಾರೆಂದು ತಿಳೀಬೇಕು. ಅವರು ಅಧೋಗತಿಗೆ ಹೋದಾರು. ಕಾಮ ಇಲ್ಲದೇ ಜ್ಞಾನ ಭಕ್ತಿ ಮೋಕ್ಷ ಏನೇನೂ ಇಲ್ಲ. ನಾರಾಯಣ ತನಗೆ ತಿಳಿಯ, ಹರಿವಿಷಯಕ ಜ್ಞಾನ ತನಗೆ ಇಲ್ಲದಿದ್ದರೆ, ಅವನು ಅಜೇತನ, ಒಂದು ಕಲ್ಲುಗುಂಡು ಎಂತ ತಿಳೀಬೇಕು. ಬಯಸಲ್ಪಟ್ಟಂಥಾದ್ದು ಅಷ್ಟೂ ಕಾಮವೇ. ಮೋಕ್ಷ ಬಯಸೋದೂ ಕಾಮವೇ. ಮೋಕ್ಷಪ್ರದ ನಾರಾಯಣನ ಕಾಮ ಇಚ್ಛೆ ಮಾಡಿದರೆ, ಪುರುಷಾರ್ಥಫಲ ಐದಥಾನೆ. ಲೋಕದಲ್ಲಿ

ನೋದಲಾಗಿ ತಮ್ಮ ಸ್ವರೂಪದ ಸುಖ ಉಂಡೇನೆಂದು ಇಚ್ಛಿವುಳ್ಳವರಾಗಥಾರೆ. ಈ ಸ್ವರೂಪ ಜೀವಾಚ್ಛಾದಕ, ಪರವಾಚ್ಛಾದಕ ಬಂಧವಾಗಿದೆ. ಲಿಂಗದೇಹ ಭಂಗ ವಾಗಬೆಂದು ಪ್ರಾಣಿಗಳು ಬಯಸಥಾರೋ ಇಲ್ಲವೋ? ಅದಕಾರಣ ಕಾಮು ದೊಡ್ಡದು.

'ಕಾಮು ಮೂರು ಪ್ರಕಾರ. ವಿಷಯಭೋಗ ಕಾಮುವೆನಿಸಥದೆ. ಅಂಥಾ ಕಾಮು ನೀಚ. ವಿಷಯಭೋಗಗಳು ಹಂದಿ ನಾಯಿ ದಾವ ಜನ್ಮ ಬರಲ್ಯಾಕೆ, ಮೈಥುನ ದೊರಕತದೆ. ಕಾಮು ಮೂರು ಪ್ರಕಾರ ಹೇಳೀದೆ. ಧರ್ಮ ಅರ್ಥಗಳಿಂದ ಯುಕ್ತವಾದಂಥಾದ್ದು ಉತ್ತಮ ಕಾಮು, ಧರ್ಮಕ್ಕೆ ವಿರೋಧಿಯಲ್ಲ. ಅದಕ್ಕೆ ವಿರೋಧಿಯಾದರೆ ಮಧ್ಯಮ ಕಾಮು. ಧರ್ಮಾರ್ಥ ಕೆಡಿಸೋ ಅಂಥಾದ್ದು ನೀಚ-ಕಾಮು. ಧರ್ಮವೇ ಕೆಡಬಾರದು, ಅರ್ಥಹಾನಿ ಆಗಬಾರದು, ಧರ್ಮಕ್ಕೆ ವಿರೋಧಿ ಆಲ್ಲದಂಥಾದ್ದು, ಏಕಾದಶಿ ಉಪವಾಸ, ದ್ರವ್ಯ ವೆಚ್ಚವಾಗೋದಿಲ್ಲ, ಪುಣ್ಯವಾದರೂ ಬರತದೆ, ಇದು ಉತ್ತಮ ಕಾಮು. ಧರ್ಮ ಮಾಡಲಿಕ್ಕೆ ದ್ರವ್ಯ ವೆಚ್ಚವಾಗತದೆ, ಪುಣ್ಯವಾದರೂ ಬರತದೆ, ಇದು ಮಧ್ಯಮ ಕಾಮು. ಅರ್ಥಕ್ಕೆ ವಿರೋಧಿ ನಿಂದಿತ ಸೇವಿ, ಧರ್ಮಕ್ಕೆ ವಿರೋಧಿ. ಅವೈಷ್ಣವಂಗೆ ದಾನ ಕೊಟ್ಟದ್ದರಿಂದ ಅರ್ಥವು ಕೆಟ್ಟು ಹೋಗತದೆ. ಪುಣ್ಯವು ಬರೋದಿಲ್ಲ, ಇದು ನೀಚ ಕಾಮು. ವ್ಯಭಿಚಾರ ಮಾಡಥಾನೆ, ವ್ಯಭಿಚಾರದಲ್ಲಿ ದ್ರವ್ಯ ವೆಚ್ಚವಾಗತದೆ. ಧರ್ಮಕ್ಕೆ ವಿರೋಧಿ, ದೇಹನಾಶ, ಅಪ-ಕೀರ್ತಿ, ಪರಲೋಕದಲ್ಲಿ ದಂಡಿಸಿಕೊಂಬೋಣ. ದುರಾಚಾರ ಮಹಾ ನಿಂದಿತ-ಕರ್ಮ, ಅದು ಕೆಡಿಸ್ತದೆ, ಅಧಮಕಾಮುವಾದಕಾರಣ. ಸ್ವಸ್ತ್ರೀಯಲ್ಲಿ ಸಂತಾನಾರ್ಥ ವಾಗಿ ಭೋಗಿಸಬೇಕು, ಇದು ವಿಹಿತಕರ್ಮ, ನೀಚವಲ್ಲ. ಕೇಳು ಧರ್ಮರಾಯಾ, ಬುದ್ಧಿ ಎಂಬ ಸ್ತ್ರೀಯಿಂದ ಯುಕ್ತನಾಗಿ ಮನಬಂಧಾಂಗೆ ರಮಸ್ತ ಬಾ.' ಹೀಂಗೆಂದು ಭೀಮಸೇನ ಕಾಮು ದೊಡ್ಡದೆಂದು ಸ್ಥಾಪಿಸಿದ.

ಭೀಮಸೇನ ವಿಷ್ಣು-ವೈಷ್ಣವದ್ವೇಷಿಗಳ ಕೊಂದೆನೆಂದು, ಬಹಳ ಹರ್ಷ ಉಳ್ಳವನಾಗಿ, ಬಹಳ ಸಂಭ್ರಮದಿಂದ, ತನ್ನ ದೇಹ ನಾರಾಯಣನ ಮನಿ ಎಂದು ತಿಳದು, ಗಂಧನಾಲಿಕೆಯಿಂದ ಪರಿಮಳದ್ರವ್ಯದಿಂದ ದೇಹಕ್ಕೆ ಸುಖಬಡಸ್ತ, ನಾನಾ ಹಾರಗಳು ಹಾಕಿಕೊಂಡು, ನಾನಾವಿಧ ಕಸ್ತೂರಿ ತಿಲಕ ಇಟ್ಟುಕೊಂಡು, ಅನೇಕ ವಿಷಯಭೋಗಗಳು ಭೋಗಸ್ತಿಹ ಧರ್ಮರಾಯ ಏನು ಮಾಡಿಕೊಂಡಿಹ ಎಂದರೆ, ಜ್ಞಾನಾಗ್ನಿಕ್ಷಯ ಮಾಡಿದೆನೆಂದು ಗೋಮೂತ್ರದಲ್ಲಿ ಜಟಾ ತೋಯಿಸಿ, ಮಲಿನವಸ್ತ್ರ ಉಳ್ಳವನಾಗಿ ವಿಷಯಭೋಗಗಳ ತ್ಯಾಗ ಮಾಡಿಹ. ಭೀಮಾರ್ಜುನರು, ವಿದುರ, ಧರ್ಮಾರ್ಥಕಾಮು ತಿಳದು ಹೇಳಿದರು. ಧರ್ಮರಾಯ ಮೋಕ್ಷ ದೊಡ್ಡದೆಂದು ಹೇಳಿದನು. ಭೀಮಸೇನ, ಯುಕ್ತಿಗೆ ವಿರೋಧ ಆಲ್ಲ, ತಾನೂ ಮೋಕ್ಷ ದೊಡ್ಡದು ಎಂದು ಸ್ವಾಮೀ ಮುಂದೆ ಆಡಿದನು. ಈ ಶಾಂತಿಪರ್ವ ಭಾರತಕಥ ರಣ-

ಭೂಮಿಯಲ್ಲಿ, ಧರ್ಮರಾಯಗೋಸ್ಕರ ರಾಜಧರ್ಮ, ದಾನಧರ್ಮ, ಆಪದ್ಧರ್ಮ, ಮೋಕ್ಷಧರ್ಮ ಹೀಂಗೆ ನಾಲ್ಕು ಪ್ರಕಾರ ಭೀಷ್ಮ ಹೇಳಿದನೆಂಬಲ್ಲಿಗೆ ಶ್ರೀಮದಾಚಾರ್ಯರು ಹೇಳಿದ, ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ ' ಶ್ರೀಕೃಷ್ಣಚರಿತೇ ಸಮಸ್ತಧರ್ಮ ನಿರ್ಣಯಃ ' ಎಂಬಂಥಾ ಇಪ್ಪತ್ತೊಂಭತ್ತನೇ ಅಧ್ಯಾಯ ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೩೦

ಶ್ರೀಕೃಷ್ಣಚರಿತೇ ಅಶ್ವಮೇಧಿಕನಿರ್ಣಯಃ

ಈ ಮೂವತ್ತನೇ ಅಧ್ಯಾಯದಲ್ಲಿ ಅಶ್ವಮೇಧಪರ್ವ ಭಾರತಕಥ ಹೇಳಥಾರೆ. ಭೀಷ್ಮ, ಧರ್ಮರಾಯನಗೋಸ್ಕರ ಧರ್ಮಮುರ್ಯಾದಿಗಳು ಹೇಳತ, ಶ್ರೀಕೃಷ್ಣನಲ್ಲಿ ಮನಸ್ಸುಳ್ಳವನಾಗಿ, ಮರಣಕಾಲದಲ್ಲಿ 'ಕೃಷ್ಣಾ, ಕೃಷ್ಣಾ' ಎಂದು ನಾಮುಸ್ಮರಣಿ, ಸ್ವಾಮೀ ಗುಣೋತ್ಕರ್ಷಣಿ, ಸ್ವಾಮೀ ಸ್ತುತಿ ಮಾಡತ, ದೇವರ ಪಾದಕಮಲದಲ್ಲಿ ಭಕ್ತಿಯುಳ್ಳವನಾಗಿ, ದೇಹತ್ಯಾಗ ಮಾಡಿ, ತನ್ನ ಮೂಲ ವಸುರೂಪ ಕೂಡಿದನು.

ಭೀಷ್ಮ ಸಾಯಲಿಕ್ಕೆ, ಭಾಗೀರಥೀ ಮೂಲರೂಪ ಧರಿಸಿ ಪುತ್ರಶೋಕದಿಂದ ಯುಕ್ತಳಾಗಿ ಬಂದು, ಬಹಳ ದುಃಖಬಡಲಿಕ್ಕೆ ಶ್ರೀಕೃಷ್ಣ, ವೇದವ್ಯಾಸ ಭಾಗೀರಥೀಗೆ ಅನೇಕ ಪ್ರಕಾರ ಸಮಾಧಾನ ಮಾಡಿದರು. ಧರ್ಮರಾಯ ತನ್ನ ಪಿತಾಮಹ ಸಾಯಲಿಕ್ಕೆ, 'ನಮ್ಮ ಪಿತಾಮಹ ದೊಡ್ಡ ಜ್ಞಾನಿ, ನಮ್ಮ ಕುರುಕುಲಕ್ಕೆ ಮೂಲ ಪುರುಷ, ಇಂಥಾ ಭೀಷ್ಮನ್ನ ನಾವು ಪ್ರತ್ಯಕ್ಷ ಕೊಂದೆವಲ್ಲ!' ಎಂದು, ಭೀಷ್ಮನ್ನ ನೆನಸಿಕೊಂಡು, ಬಹಳ ದುಃಖಬಡತಿಹ. ಶ್ರೀಕೃಷ್ಣ-ವೇದವ್ಯಾಸರಿಂದ ಸಮಾಧಾನ ಮಾಡಿಸಿಕೊಂಡು, ಪಾಂಡವರು ಪಿತಾಮಹನ ದ್ವಾದಶಾಹಕರ್ತವ್ಯ ಕರ್ಮ ಮಾಡಿ ಮುಗಿಸಿದರು. ಧರ್ಮರಾಯ ವೈರಾಗ್ಯ ಉಳ್ಳವನಾಗಿ, 'ನಾನು ರಾಜ್ಯ ಆಳುವ-ಹಾಂಗಿಲ್ಲ. ಈ ಕುರುಕ್ಷೇತ್ರದಿಂದ ವನಕ್ಕೆ ಹೋಗಥೀನಿ' ಎಂದು ಉದ್ಯುಕ್ತನಾಗಲಿಕ್ಕೆ, ಶ್ರೀಕೃಷ್ಣ, ವೇದವ್ಯಾಸ ಅನೇಕ ಪ್ರಕಾರ ಸಮಾಧಾನ ಮಾಡಿದರು. ಧರ್ಮರಾಯ ಮಣದು, ಸಮಾಧಾನಕ್ಕೆ ಬಾರ. 'ಎಲ್ಲೆ ಯುಧಿಷ್ಠಿರಾ, ಗುರು-ಹಿರೇರ ವಧಾ ಮಾಡಿದ ಪಾಪ ನಿನಗಿಲ್ಲ. ಸಂಶಯ ಹಚ್ಚಿಕೊಂಡಿದಿ. ಪಾಪ-ಪರಿಹಾರ ನಿಮಿತ್ತ ಅಶ್ವಮೇಧಯಜ್ಞ ಮಾಡು, ರಾಜ್ಯ ಪಾಲಿಸು. ನೀ ವನಕ್ಕೆ ಹೋದವ್ಯಾಲೆ, ಅರಾಜಕವಾದಲ್ಲಿ ಪ್ರಜಾಪಾಲನಿ ದಾರು ಮಾಡ್ಯಾರು? ನಮ್ಮ ಮಾತು ಕೇಳು, ನೀರಬ್ಯಾಡ. ರಾಜ್ಯ ಆಳಿ ಪ್ರಜಿಗಳ ಪರಿಪಾಲಿಸು.' ಹೀಂಗಂತ ಹೇಳಿ ನಿಜರಾಜಧಾನಿ ಹಸ್ತಿನಾವತಿಗೆ ಕೂಡಿಕೊಂಡು ಬಂದರು.

ಧರ್ಮರಾಯ ಕೃಷ್ಣ ವೇದವ್ಯಾಸರ ಮಾತು ಕೇಳಿ ಹ್ಯಾಂಗೆ ರಾಜ್ಯ ಆಳಿದ-ನೆಂದರೆ, ಬಹಳ ವಿರಕ್ತನಾಗಿ, ಗೋಮಯದೊಳಗೆ ಬಂದಂಥ ಧಾನ್ಯ, ಗೋ-ಮೂತ್ರದಲ್ಲಿ ಪಕ್ವ ಮಾಡಿಸಿ, ದೇಹ ನಿಂದರೋ ಹಾಂಗೆ ಆಹಾರ ಕೊಂಬ. ದಾವ ರೀತಿಯಲ್ಲಾದರೂ ಪಾಪ ಪರಿಹಾರವಾಗಲೆಂದು, ಭಂಡಾರ ಒದಗಿಸದೆ, ಅಪಾರ ದ್ರವ್ಯ ಹೇಳಿ ಕೊಡಿಸುವ. ಮನೋಬಯಕೆ ಏನದೆ ಅದೆಲ್ಲ ವಿಪ್ರರಿಗೆ ಪೂರ್ಣ

ಮಾಡಿಕೊಡುವ. ನಿರಂತರ ಹೀಂಗೆ ಕೊಡತಿಹ, ಒಂದು ದಿವಸನೂ ಬಿಟ್ಟಿದ್ದಿಲ್ಲ. ಸದಾ ವೈಭವದಿಂದ ವಿಪ್ರರಿಗೆ ತುಷ್ಟಿಬಡಿಸುವ. ಸ್ತ್ರೀಭೋಗ ದೊಡ್ಡದಾದರೂ, ಭೋಗ ಬಿಟ್ಟಿಹ. ಅರಣ್ಯವಾಸ ಆರಂಭವಾಗಿ ದ್ರೌಪದೀ ಭೋಗ ಬಿಟ್ಟಿಹ. ಶಾಮಲಾದೇವಿ ತನ್ನ ಸ್ತ್ರೀ ಆದರೂ, ಭೋಗ ಬಿಟ್ಟಿಹ. ನಿರಂತರ ಗೋಮೂತ್ರ ದಲ್ಲಿ, ಚಾಂದ್ರಾಯಣ ಉಪವಾಸ ಮಾಡಿ ದೇಹ ಕೃಶ ಮಾಡಿಹ. ದಿವ್ಯ ಬ್ರಾಹ್ಮಣರು, ಧರ್ಮರಾಯನ ಸಮೀಪಕ್ಕೆ ಬಾಹೋರು. ಬಂದಂಥಾವರನ್ನ ತನ್ನ ಪ್ರಾಯಶ್ಚಿತ್ತ ಕೇಳತಿಹ. 'ರಾಯಾ, ನಿನಗೆ ಪಾಪ ಉಂಟೇ! ಬಹು ಪುಣ್ಯ ಬಂದದೆ' ಎಂದು ಹೇಳಿದರೂ, ವಿಶ್ವಾಸ ಸಾಲದೆ, ನಿರಂತರ ಹೋಮ ಮಾಡಿ, ಸತ್ಪಾತ್ರರಿಗೆ ಕೊಡತಿಹ. ಈ ಪ್ರಕಾರ ಧರ್ಮರಾಯ, ತನ್ನ ತಂದೀ ಪಾಂಡು. ಚಕ್ರವರ್ತೀ ಮನಿ ಒಳಗೆ ಇರತಿಹ.

ಧರ್ಮರಾಯನ ಸ್ಥಿತಿ ಹೇಳಿ; ಇನ್ನು ಭೀಮಸೇನನ ಸ್ಥಿತಿ ಹೇಳಥಾರೆ. ಭೀಮಸೇನ ಏನಂತ ತಿಳಿದಿಹ, 'ನನಗೆ ಬಹಳ ಪುಣ್ಯ ಬಂತು. ವೈಷ್ಣವದ್ವೇಷಿಗಳನ್ನ, ಪಾಪಿ ದುರಾತ್ಮ ದುರ್ಯೋಧನನ ಸಂಬಂಧಿಗಳನ್ನ ಕೊಂದೆ' ಎಂದು, ಹರ್ಷ ಉಳ್ಳವನಾಗಿ, ದ್ರೌಪದೀ ಕೂಡ, ಸುರಜನಭೋಗ ಎಂಥಾದ್ದು, ಅಂಥಾ ಭೋಗಗಳು ಭೋಗಸ್ತಿಹ. ವಿಹಿತಭೋಗ ಭೋಗಸಬೇಕು. ಭೋಗಸದವ ಪಶು ಎಂದು ತಿಳೀಬೇಕು. ಭೀಮಸೇನ ಸರ್ವಜ್ಞಶಿಖಾಮಣಿ ಆದಕಾರಣ—ಅರಣ್ಯವಾಸ ಆರಂಭವಾಗಿ ಭೀಮಸೇನ ಹೊರತು, ಉಳದ ನಾಲ್ವರೂ ದ್ರೌಪದೀಭೋಗ ಬಿಟ್ಟಿಹೋರು—ಭಾವೀ ಸರಸ್ವತೀ, ಅಚ್ಚ ಭಾರತೀರೂಪದಿಂದ ನಿರ್ಮಲಳಾದಂಥ ದ್ರೌಪದೀಭೋಗ ಅಂತಃಕರಣದಿಂದ ಭೋಗಸ್ತಿಹ. ಧರ್ಮರಾಯ, ತಮ್ಮನ ಹೆಂಡತಿ ಎಂದು ದ್ರೌಪದೀನ್ನ ಬಹುಮಾನ ಮಾಡತಿಹ. ಅರ್ಜುನ, ಯಮಳರು ದ್ರೌಪದೀನ್ನ, ಅತ್ತಿಗಿ, ತಾಯೀ ಸಮಾನ ಎಂದು ತಿಳದಿಹೋರು. ಅಸಹ್ಯ ಉಳ್ಳವರಾಗಿದ್ದಿಲ್ಲ. ದ್ರೌಪದೀ ಬಹಳ ಸಂತೋಷದಿಂದ ಯೋಗ್ಯ ಪತಿಯಾದ ಭೀಮಸೇನನ ಸೇವಿ ಮಾಡೋಳು.

ಪೂರ್ವದಲ್ಲಿ, ದೈತ್ಯರ ಸಂಹಾರ ಮಾಡಿ ಕ್ಷೀರಸಮುದ್ರದಲ್ಲಿ ಶ್ರೀ, ಭೂದೇವೇರಿಂದ ಸ್ವಾಮಿ ಹ್ಯಾಂಗೆ ಒಪ್ಪಿದನೋ, ಹಾಂಗೆ ದ್ರುಪದರಾಜನ ಮಗಳು ದ್ರೌಪದೀ, ಕಾಶೀರಾಜನ ಮಗಳು ಕಾಳೀದೇವಿ, ಈ ದ್ವಿರೂಪರಾವಂಥ ಭಾರತೀದೇವೇರಿಂದ ಯುಕ್ತನಾಗಿ, ಭೀಮಸೇನ ಒಪ್ಪುವಂಥಾತನಾದನು. ಪಂಚಪ್ರಾಣರ ಮಧ್ಯದಲ್ಲಿರೋ ಅಂಥಾ ಪ್ರಾಣನ ಅಂಶ, ಸರ್ವೋತ್ತುಂಗನೆಂಬವ ಭೀಮಸೇನನಿಂದ ಹುಟ್ಟಿದ್ದನು. ರಾತ್ರಿಯಲ್ಲಿ ವಸ್ತ್ರಗೃಹದಲ್ಲಿ, ಗುರುಪುತ್ರ ಅಶ್ವತ್ಥಾಮನಿಂದ ಸತ್ತನು. ಅತನ ತಾಯಿ, ವಸುದೇವನ ಹೆಂಡತಿ ರೋಹಿಣೀಯಲ್ಲಿ, ದೇವೀ ಎಂಬ ನಾಮ ಉಳ್ಳಾಕಿಯಾಗಿ ಹುಟ್ಟಿದ್ದಳು. ಅಕೀನೇ ಭೀಮಸೇನನ ಹೆಂಡತಿಯಾಗಿದ್ದಳು.

ಆದರ ಹೊರ್ತು ಇಪ್ಪತ್ತು ರೂಪದಿಂದ ಶ್ರೇಷ್ಠರಾದಂಥ ಹೆಂಡರಿದ್ದರು. ಅವರು ದಾರೆಂದರೆ ವಸುದೇವನ ಮಕ್ಕಳು. ಪೂರ್ವದಲ್ಲಿ ದಿಗಭಿಮಾನಿ ದೇವತಿಗಳು ಹಲವರು, ಕೆಲವರು ಉದಕಾಭಿಮಾನಿ ದೇವತಿಗಳು. ಅಂಥಾವರಿಂದ ಗಂಧರ್ವ-ಗಾಯನಸದೃಶ ಗಾಯನ ಮಾಡಿಸಿಕೊಳ್ಳತ, ದೇವತಿಗಳಿಗೆ ಅಲಭ್ಯವಾದ ಭೋಗವನ್ನ ಭೀಮಸೇನ ಭೋಗಿಸುವಂಥಾತನಾದನು.

ಒಂದೊಂದು ಗ್ರಾಮದಲ್ಲಿ ಪಂಡಿತರಾದಂಥ ನಿರ್ವಾಹಕರ್ತರು, ಸ್ವಕೀಯ-ರಾದಂಥ ಐದು ಮಂದಿ ಪಂಡಿತರನ್ನಿಟ್ಟು, ಧರ್ಮಸಂರಕ್ಷಣೆ ಮಾಡಿದನು. ಅವೈಷ್ಣವರನ್ನು ಓಡಿಸಿ, ಅವರನುಸಾರಿಗಳನ್ನು ದಂಡಿಸಿ, ಸನ್ಮಾರ್ಗದಲ್ಲಿ ಪ್ರವರ್ತಕರನ್ನ ಮಾಡಿದನು. ವಿಪ್ರಶ್ರೇಷ್ಠರಾದಂಥವರ ಕೈಯ ಧರ್ಮಸಾರ ಕೇಳಿ, ಅದರಂತೆ ಧರ್ಮ ಮಾಡತಿಹ. ಅನಾಚಾರ ಮಾಡೋರಿಲ್ಲಿಂದು ಗೂಢಚಾರರ ಕೈಯ ಸಮಾಚಾರ ತರಸ್ತಿಹ. ಈ ಪ್ರಕಾರ ಭೀಮಸೇನನ ಶಿಕ್ಷಿಯಿಂದ, ಅವೈಷ್ಣವರು ಭೂಮೀಮ್ಯಾಲೆ ಇಲ್ಲಧಾಂಗಾದರು. ಅನ್ಯದೇವತಿಗಳ ಪೂಜಿ ಮಾಡೋರು ದಾರೂ ಇದ್ದಿಲ್ಲ. ಭೀಮಸೇನನ ಆಜ್ಞೆದಿಂದ ವಿಧಿ ದಾರೂ ಮೀರಿದ್ದಿಲ್ಲ. ನಿಷಿದ್ಧ ಬಿಟ್ಟಿಹೋರು. ಪಾಂಡವರು ರಾಜ್ಯ ಆಳೋವಾಗ, ದಾರೂ ದುಃಖ ಉಳ್ಳವ-ರಾಗಿದ್ದಿಲ್ಲ, ದರಿದ್ರರೂ ಇದ್ದಿಲ್ಲ. ನೋಡಿದರೆ ಕಲಿಯುಗ, ಕೃತಯುಗದಕಿಂತ ಹೆಚ್ಚಾಗಿಹೋದು. ಏನು ಕಾರಣವೆಂದರೆ ಗ್ರಾಮಗ್ರಾಮದಲ್ಲಿ ಮುನೀಶ್ವರರ ಶಿಕ್ಷ, ಮ್ಯಾಲೆ ಭೀಮಸೇನನ ದರ್ಪ, ಹಾಂಗೆ ಶ್ರೀಕೃಷ್ಣ, ವೇದವ್ಯಾಸರಿಂದ ಧರ್ಮಗಳು ಲಾಲಿಸಿಕೊಳ್ಳತಿಹೋರು. ಕೃತಯುಗದಲ್ಲಿ ಬಹಳ ಪುಣ್ಯ ಮಾಡಿದರೆ, ಫಲ ಸ್ವಲ್ಪ ವಾಗೋದು. ಪಾಪ ಥೋಡೆ ಮಾಡಿದರೆ, ಫಲ ಬಹಳವಾಗೋದು. ಕಲಿಯುಗದಲ್ಲಿ ಪುಣ್ಯ ಸ್ವಲ್ಪ ಮಾಡಿದರೆ, ಅನಂತಮಡಿಯಾಗಿ ಫಲವಾಗಬೇಕು. ಪಾಪ ಮಾಡಿದರೆ ಸ್ವಲ್ಪ ಫಲವಾಗಬೇಕು. ಆದಕಾರಣ ಕಲಿಯುಗದಲ್ಲಿ ಧರ್ಮ ಬಹಳ ಪಸರಿಸಿಹೋದು, ಕೃತಯುಗ ನೋಡಲಿಕ್ಕೆ ಹೆಚ್ಚಿಹೋದು. ಈ ಪ್ರಕಾರ ಭೀಮಸೇನನ ಸ್ಥಿತಿ ಹೇಳಿ ಇನ್ನು ಅರ್ಜುನನ ಸ್ಥಿತಿ ಹೇಳಥಾರೆ.

ಅರ್ಜುನ ಧರ್ಮರಾಯನ ಆಜ್ಞೆದಿಂದ ಪರಚಕ್ರರ ಕೊಂದಿದ್ದಿಲ್ಲ. ತನ್ನ ಬಾಹುಪರಾಕ್ರಮದಿಂದೇ ಪರಚಕ್ರರ ಅಂಜಿಸಿಕೊಂಡು, ಅವರ ಕೈಯ ಕಪ್ಪ ಕೊಂಡುಬಾಹ. ಈತನ ಅಂಜಿಕೆಯಿಂದ ಸಮಸ್ತ ಭೂಪಾಲಕರೂ, ಕಪ್ಪ ಕೊಂಡು-ಬಂದು ಧರ್ಮರಾಯನ ಮುಂದೆ ಇಟ್ಟು, ರಾಯಗೆ ನಮಸ್ಕಾರ ಮಾಡಿ ರಾಯನ ಆಪ್ಪಣಿ ಕೊಂಡು ತಮ್ಮ ರಾಜಧಾನಿಗೆ ಹೋಗತಿಹೋರು. ಅರ್ಜುನ, ತನ್ನ ಮಗ ಅಭಿಮನ್ಯುನ ನೆನಸಿಕೊಂಡು ಪುತ್ರಶೋಕದಿಂದ ಮಿಶ್ರಸುಖ ಉಳ್ಳವನಾಗಿಹ. ಅತಿಶಯಭೋಗ ಬಿಟ್ಟಿಹೋನು. ದುಶ್ಶಾಸನನ ಮನೀತಿ, ಸುಭದ್ರಾ ಹಾಂಗೆ ವೀರಸೇನನ ಮಗಳು ಚಿತ್ರಾಂಗದಾ ಕೂಡ ಸಾಮಾನ್ಯ ಭೋಗ ಭೋಗಸ್ತಿಹೋನು.

ನಕುಲ, ಸಕಲ ಆಶ್ರಿತಜನಕ್ಕೆ ಭೃತ್ಯಜನಕ್ಕೆ ಸಂಬಳ ಕೊಡತಿಹೋನು. ದುರ್ಮುಖನ ಮನಿಯೊಳಗೆ ವಾಸ ಮಾಡಿಕೊಂಡು, ಮದ್ರರಾಯನ ಮಗಳ ಕೂಡ ರಮಿಸ್ತಿಹ. ಸಹದೇವ ಏನು ಮಾಡತಿಹನೆಂದರೆ, ಸಂಧಾನಭೇದಗಳು ಮಾಡಿ, ಅರಸರ ಕೈಯ ದ್ರವ್ಯ ತರಸಿಕೊಡಿಸುವ. ಸಂಧಾನ, ಭೇದಕ್ಕೆ ಮಣದು ಬಾರದಿದ್ದರೆ, ಅವರ ಮ್ಯಾಲೆ ದಂಡಯಾತ್ರಿ ಮಾಡಿಸುವ. ಈ ಪ್ರಕಾರ ಧರ್ಮರಾಯನ ಅಂಗ-ರಕ್ಷಕನಾಗಿ, ಖಡ್ಗ ಚರ್ಮ ಹಿಡಕೊಂಡು ರಾಯನ ಬೆನ್ನ ಹಿಂದೆ ಸೇವಿ ಮಾಡತ, ಜರಾಸಂಧನ ಮಗಳು, ಸಹದೇವನ ತಂಗೀ ಭೋಗ ಮಾಡತ, ದುರ್ಮರ್ಷಣನ ಮನಿಯಲ್ಲಿ ಇರತಿಹ. ಕೃಪಾಚಾರ್ಯ ಪಾಂಡವರ ಸೇನಾಪತಿತನ ಮಾಡಿಕೊಂಡು, ಧೃತರಾಷ್ಟ್ರನ ಸಮಾಧಾನಾರ್ಥವಾಗಿ, ರಾಯನ ಸಮೀಪದಲ್ಲಿ ಯುಯುತ್ಸು, ಸಂಜಯ ಹೀಂಗೆ ಮೂರು ಮಂದಿ ರಾಯನ ಸಮಾಧಾನ ಮಾಡತಿದ್ದರು. 'ಹೇ ವೈಚಿತ್ರ್ಯವೀರ್ಯ, ಪುತ್ರಶೋಕ ಮಾಡಬ್ಯಾಡ' ಎಂದು ಪ್ರತಿಕ್ಷಣದಲ್ಲಿ ಸಮಾಧಾನ ಮಾಡತಿಹೋರು.

ಧರ್ಮರಾಯ ದ್ವಿರೂಪೀ ಕೃಷ್ಣರಿಂದ ರಾಜ್ಯದಲ್ಲಿ ಅಭಿಷೇಕ ಮಾಡಿಸಿಕೊಂಡ ಸರಿಯೇ. 'ಕುಲಕ್ಷಯ ಪಾಪ ಬಂತಲ್ಲ!' ಎಂದು, ವೈರಾಗ್ಯ ಉಳ್ಳವನಾಗಿ, ವಿಷಯಭೋಗಗಳ ಭೋಗಿಸದೆ, ದೇಹವೆಲ್ಲ ಶೋಷಿಸಿಕೊಂಡು, ತನ್ನ ಸ್ವಸ್ತ್ರೀ ಭೋಗವಿಲ್ಲದೆ, ಭೂಮಿ ಆಳತಿಹ. ಸಮುದ್ರವೇ ಒಡ್ಯಾಣವಾಗುಳ್ಳಂಥ ಭೂಮಿಯನ್ನ ಆಳಲಾಗಿ, ಒಬ್ಬರೂ ದರಿದ್ರರಿದ್ದಿಲ್ಲ. ಹಿರೇರ ಮುಂದೆ ಕಿರೇರು ಸಾಯತಿದ್ದಿಲ್ಲ. ಸ್ತ್ರೀಯರು ಪರಕೀಯರಾಗಿದ್ದಿಲ್ಲ. ತಮ್ಮ ಗಂಡಂದರ ಬದಕಿಸಿ-ಕೊಂಡಿಹೋರು. ಸಮಸ್ತ ಸ್ತ್ರೀಯರೂ ಮುತ್ತೈದಿಯರಾಗಿಹೋರು. ಪುರುಷರು ತಮ್ಮ ಹೆಂಡಂದಿರ ಬದಕಿಸಿಕೊಂಡಿಹೋರು. ಸ್ತ್ರೀಪುರುಷರು ವಿಯೋಗವಿಲ್ಲದೆ ಸುಖ ಅನುಭವಿಸಿಕೊಂಡು, ಭೋಗಗಳ ಭೋಗಸ್ತಿಹೋರು. ಪ್ರಜರುಗಳಿಗೆ ಲೇಶ-ಮಾತ್ರ ದುಃಖವಿದ್ದಿಲ್ಲ. ದುಷ್ಟವಚನ ಅಪಶಬ್ದಗಳಿದ್ದಿಲ್ಲ. ಮೃದುವಚನ ಉಳ್ಳವ-ರಾಗಿ, ಹರಿಪರಾಯಣರಾಗಿಹೋರು. ದುಷ್ಟಶಬ್ದ, ದುಷ್ಟರೂಪ, ದುಷ್ಟರಸ, ದುರ್ಗಂಧ ಇದ್ದಿಲ್ಲ. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಅಪೂರ್ವವಿಹೋವು. ದೇವೇಂದ್ರ ವ್ಯಾಳ್ಯವ್ಯಾಳ್ಯಕ್ಕೆ ಮಳಿಗರೇತಿಹೋನು. ಭೂಮಿ ಯಥೇಷ್ಟ ಬೆಳಸು ಬೆಳೀತಿಹೋಳು. ದಾರಿಗೂ ತ್ರಿವಿಧ ತಾಪ ಇದ್ದಿಲ್ಲ. ಅನೃತ, ಜ್ವರ, ಮುಂಡೆಶೂಲಿ ಇದ್ದಿಲ್ಲ ಸ್ತ್ರೀಪುತ್ರರುಗಳಿಗೆ ದುಃಖವಾಗತಿದ್ದಿಲ್ಲ. ಅತಿವೃಷ್ಟಿ, ಅನಾವೃಷ್ಟಿ ಇದ್ದಿಲ್ಲ. ಪ್ರಜರು ತ್ರಿವಿಧ ತಾಪವಿಲ್ಲದೆ, ಅಚ್ಯುತನ ಪೂಜಿ ಮಾಡತಿಹೋರು. ತಾರತಮ್ಯ-ಜ್ಞಾನದಿಂದ ಪರಿವಾರದೇವತಿಗಳ ಪೂಜಿ ಮಾಡತಿಹೋರು. ಭೂಮಿ, ಮನಸ್ವಿ ಬೆಳಸು ಬೆಳೀತಿಹೋಳು. ಮೇಘಗಳು ಮಳೀ ಕರೀತಿಹೋವು. ತಾಮ್ರಪರ್ಣಿ ಮೊದಲಾದ ನದಿಗಳಿಂದ ರತ್ನಗಳು ತೇಲಿಬರತಿಹೋವು. ಸಮುದ್ರದಿಂದ ನಾನಾ

ರತ್ನಗಳು ಅರಸು ತಂದುಕೊಡತಿಹೋರು. ಈ ಪ್ರಕಾರ ಸ್ಥಾವರಜಂಗಮ ಪ್ರಾಣಿಗಳು ರತ್ನಗಳು ಬೆಳೀತಿಹೋವು. ವೇದಮಂತ್ರಗಳು ಜಪಿಸಲು ಫಲ ಕೊಡತಿಹೋವು. ಇಷ್ಟೂ ಕೃಷ್ಣನ ದಯಾಶ್ರಯದಿಂದ ಸಮಸ್ತ ಭೂಮಂಡಲ ಅಧೀನ ಮಾಡಿಕೊಂಡು ದೇವತಿಗಳಿಂದ ದೇವೇಂದ್ರ ಹ್ಯಾಂಗೆ ಸ್ವರ್ಗ ಆಳಥಾನೆ, ಹಾಂಗೆ ಧರ್ಮರಾಯ ರಾಜ್ಯಪಾಲನಿ ಮಾಡತಿಹ. ಅಗ್ನಿಸದೃಶ ಬ್ರಾಹ್ಮಣರು, ಋಷಿಗಳು, ಸನ್ಯಾಸಿಗಳು ಬರತಿಹೋರು ಧರ್ಮರಾಯ ಅವರಿಗೆ ಬಹುಮಾನದಿಂದ ಪೂಜೆ ಮಾಡುವ. ಸೂತ, ಮಾಗಧ, ವಂದಿಗಳು ಸ್ತೋತ್ರ ಮಾಡತಿಹೋರು. ಈ ಪ್ರಕಾರ ಯುಧಿಷ್ಠಿರ ರಾಜ್ಯ ಆಳಲಿಕ್ಕೆ, ಪಾಂಡವರ ಕೀರ್ತಿ ಭೂಮಂಡಲ ವ್ಯಾಪಿಸಿಹೋದು.

ಕೀರ್ತಿ, ಸ್ತ್ರೀರೂಪದಿಂದ ವರ್ಣಿಸಥಾರೆ. ಕೀರ್ತ್ಯಂಗನಾ ದೈತ್ಯರ ಶಿರಸ್ಸಿನಲ್ಲಿ ಪಾದ ಕೊಟ್ಟು, ಸಜ್ಜನರಿಗೆ ಅಭಯ ಕೊಡಥಾಳೆ. ಪಂಚಾಶತ್ಕೋಟಿ ಭೂಮಿ, ಕೀರ್ತಿರೂಪಸ್ತ್ರೀ ಹ್ಯಾಂಗೆ ವ್ಯಾಪಿಸಿದಳು ಎಂದರೆ, ಕೀರ್ತಿ ಎಂಬ ಸ್ತ್ರೀ, ಪಾತಾಳ-ಲೋಕದಲ್ಲಿ ಪಾದ ಊರಿ ನಿಂತಿಹೋಳು. ಟೊಂಕದಲ್ಲಿ ಭೂಲೋಕ, ಆಕಾಶ ಮಧ್ಯಪ್ರದೇಶ, ತನ್ನ ಕರಗಳಿಂದ ದಿಕ್ಕುಗಳ ವ್ಯಾಪಿಸಿಹೋಳು. ಸೂರ್ಯಚಂದ್ರ-ರನ್ನ ಆಭರಣ ಮಾಡಿಕೊಂಡಿಹೋಳು. ನವಗ್ರಹ ಮೊದಲಾದ ಅಲಂಕಾರ, ಸ್ವರ್ಗಲೋಕ ವಕ್ಷಸ್ಥಳದಲ್ಲಿಟ್ಟಿಹೋಳು. ಕೀರ್ತಿಸ್ತ್ರೀ ಮುಖವೆಂಬೋದು ವಿರಂಚಿ-ಲೋಕ. ಅಂಥಾ ಸ್ತ್ರೀ ತಲಿಯ ಮ್ಯಾಲೆ ವೈಕುಂಠಲೋಕವಿಹೋದು. ವೈಕುಂಠ-ನಾಯಕನಾದ ನಾರಾಯಣ, ತನ್ನ ಮಂಗಳ ಅಭಯಹಸ್ತ, ಪರಮಾದರದಿಂದ ತಲೀಮ್ಯಾಲೆ ಇಟ್ಟಿಹೋನು. ಆಕಿ ಎಂಥಾಕಿ ಎಂದರೆ ದ್ರೌಪದೀಸದೃಶಳಾದಂಥಾಕಿ. ಆ ಸ್ತ್ರೀ ಹೆಸರು, ಭಾರತಕೀರ್ತಿ. ಭಾರತತೀರ್ಥಮಹಿಮಿ ಕೇಳಿ ಪ್ರಜರುಗಳು ಬಹಳ ಪವಿತ್ರರಾಗಿಹೋರು.

ಹೀಂಗೆ ಧರ್ಮರಾಯ ರಾಜ್ಯ ಆಳತಿರಲಿಕ್ಕೆ, ಕಲಿ ತನ್ನ ಯುಗವೆಂದು, ಈ ಸಾಮ್ರಾಜ್ಯ ತನ್ನದೆಂದು, ಪಾಂಡವರನ್ನಾಶ್ರಯಿಸಿ ರಾಜ್ಯ ಆಳಥಾನೆ. ತನ್ನ ವ್ಯಾಪಾರ ನಡೀಗೊಡೋದಿಲ್ಲ, ತನ್ನ ಲೆಕ್ಕಿಸೋದಿಲ್ಲ. ಪಾಂಡವರಿಗೆ ಪ್ರತೀಕಾರ ಮಾಡಲಿಕ್ಕೆ, ತಾ ಶಕ್ತನಲ್ಲಾದ ಕಾರಣ, ಬಲಿ ಎಂಬ ದೈತ್ಯನ ಮುಂದ ಮಾಡಿ-ಕೊಂಡು, ಅಪಾರ ಸೇನಿಯಿಂದ ಯುಕ್ತನಾಗಿ, ಬಹು ದೂರದೇಶದಲ್ಲಿ ಅಗ್ಗಳಿಕೆ ಮಾಡಹೊಕ್ಕ. ಈ ವಾರ್ತಿ ರಾಯಗೆ ಬಂತು. ಭೀಮಸೇನಗೆ ಕೃಷ್ಣ ಯುಧಿಷ್ಠಿರರು ಆಜ್ಞಾಪಿಸಿದರು. ಶೀಘ್ರ ಹೋಗಿ, ಅವರ ಕೈಸೆರಿ ತರೋದೆಂದು ಹೇಳಲಿಕ್ಕೆ, ತಿತೀವ್ರ ಭೀಮಸೇನ ಹಸ್ತಿನಾವತಿಯಿಂದ ಹೋಗಲಿಕ್ಕೆ, ಬಲಿ ಎಂಬ ದೈತ್ಯ ಓಡಿ-ಹೋದ, ಕಲಿ ಕೈಸರಿ ಸಿಕ್ಕ. ಅವನ್ನ ಹಿಡಕೊಂಡು ಹಸ್ತಿನಾವತಿಗೆ ಬಂದು, ಕೃಷ್ಣಯುಧಿಷ್ಠಿರರ ಮುಂದೆ ನಿಂದರಿಸಿದನು. ರಾಯ ಕಲೀನ್ನ ಕೇಳಥಾನೆ, ' ನಾವು

ರಾಜ್ಯ ಆಳತಿರಲಿಕ್ಕೆ, ಅಗ್ಗಳಿಕೆ ಹ್ಯಾಂಗೆ ಮಾಡಿದಿ?' ಹೀಂಗೆಂದು ಕೇಳಲಾಗಿ ಕಲಿ ಮಾತನಾಡಥಾನೆ. 'ಕೇಳಯ್ಯ ಧರ್ಮರಾಯಾ, ದುರ್ಯೋಧನ ಸತ್ತ ಆರಂಭ, ಈ ರಾಜ್ಯ ನೀ ಆಳತಿದ್ದೀ. ಅಂದಿನಿಂದ ನನ್ನ ಆಳಕಿ, ನನ್ನ ಯುಗ ನಡೇತವೆ. ನೀವು ಬಲಿಷ್ಠರಾಗಿ ರಾಜ್ಯ ಆಳಥೀರಿ. ಅಕ್ರಮ ನಿಮ್ಮುದಾಗ್ಯೇದೆ. ನನ್ನ ಯುಗದಲ್ಲಿ ವೇದಾಧ್ಯಯನ ನಡೇಬಾರದು, ಯಜ್ಞಾದಿ ಕರ್ಮಗಳು ಮಾಡಬಾರದು, ಭ್ರಷ್ಟಾಚಾರರಾಗಿರಬೇಕು. ಈ ಪ್ರಕಾರ ದುರಾಚಾರದಿಂದ ಲೋಕ ಪ್ರವರ್ತಿಸತಾ ಇಲ್ಲ. ಸನ್ಮಾರ್ಗದಿಂದ ಪ್ರವರ್ತಿಸಥಾರೆಂದು ನಾ ಉಪದ್ರವ ಕೊಟ್ಟೀನಿ.' ಹೀಂಗೆಂದು ಹೇಳಲಾಗಿ ರಾಯು ಕೇಳಥಾನೆ. 'ಎಲೋ ಕಲೀ, ರಾಜ್ಯ ನಮ್ಮದು, ನಾವು ಬಲಿಷ್ಠರು. ನಿನ್ನ ದರ್ಪ ಭಂಗ ಮಾಡಿ, ನಿನ್ನ ಸೊಕ್ಕು ಮುರದು, ರಾಜ್ಯವಾಳುವಾಗ ಅಗ್ಗಳಿಕೆ ಹ್ಯಾಂಗೆ ಮಾಡಿದಿ? ನಮ್ಮಂಥ ಬಲಿಷ್ಠ ರಾಯರು ಕಲೀ ಕಾಲ ಮುರದು ರಾಜ್ಯ ಆಳಥಾರೆ. ಎಲೋ ಪಾಪೀ! ನಿನ್ನ ರಾಜ್ಯವೆಂದು ಅಹಂಕಾರ ಮಾಡಬ್ಯಾಡ.' ಹೀಂಗೆಂದು ಧರ್ಮರಾಯ ಅನಲಿಕ್ಕೆ, 'ಹೇ ರಾಜನ್, ನನ್ನ ಕಾಲದಲ್ಲಿ ನಿನ್ನಂಥ ಧರ್ಮಿಷ್ಠ ಅರಸರು ಎಲ್ಲಿರಥಾರೆ! ನಾ ಮೊದಲಿಗೇ ಅರಸಿನಲ್ಲಿ ಹೊಕ್ಕು, ಕೆಟ್ಟ ಬುದ್ಧಿ, ಕೆಟ್ಟ ಮನಸ್ಸು ಕೊಟ್ಟು ಅವರನ್ನ ಕೆಡಸಿಬಿಡಥೀನಿ. ಹಾಂಗೆ ಬ್ರಾಹ್ಮಣಂಲ್ಲಿ ಹೊಕ್ಕು ವಿಪರೀತ ಬುದ್ಧಿ ಕಲಸ್ಥೀನಿ. ನಿನ್ನಲ್ಲಿ ಪ್ರವೇಶ ಮಾಡಲಿಕ್ಕೆ ಶಕ್ತನಲ್ಲ. ನಿಮ್ಮಲ್ಲಿ ನನ್ನ ತೇಜಸ್ಸು ನಡೇದು. ರಾಯಾ ನನ್ನ ದೃಷ್ಟಿ ಎಲ್ಲೆ ಬಿದ್ದೀತು ಅಲ್ಲಿ ಶುದ್ಧ ಆಚಾರವಿಲ್ಲ. ವೇದ, ಪುರಾಣ ವಿವೇಕಗಳಿಲ್ಲ, ಧರ್ಮವಿಲ್ಲ, ಸನುಸ್ತರೂ ಅಧರ್ಮರತರಾಗಿರಬೇಕು.'

ಹೀಂಗೆ ಕಲಿ ಮಾತನಾಡಲಿಕ್ಕೆ, 'ಕಲಿ ಹುಸಿಗಾರನಾದರೂ, ನನ್ನ ಸಂಗಡ ಸತ್ಯ ಮಾತನಾಡಥಾನೆ' ಎಂದು, ರಾಯು ಪ್ರೀತನಾಗಿ, ಕಲೀ ಕೂಡ ಮಾತನಾಡಿದನು. 'ಎಲೋ ಕಲಿ, ನೀನು ಹುಸಿ ಆಡಬೇಕು, ಆಡಲಿಲ್ಲ. ನನ್ನ ಕೂಡ ಸತ್ಯವಚನ ಆಡತಿದ್ದೀ. ಭೀಮಸೇನಗೆ ನಾ ಹೇಳಿ ಬಿಡಸಥೀನಿ. ನಾವು ರಾಜ್ಯ ಆಳುವಾಗ, ನಮ್ಮ ಸಂತಾನ, ಕ್ಷೇಮಕರಾಯನ ಪರಿಯಂತ ಕಲಿಯುಗದಲ್ಲಿ ನಿನ್ನ ಕಲೀವ್ಯಾಪಾರ ನಡೇಬ್ಯಾಡ. ಕಲಿಯುಗದಲ್ಲಿ ನಮ್ಮ ಸಂತಾನ ಕಡಿಕೀ ಅದಮ್ಯಾಲಾದರೂ, ನಿನ್ನ ಯುಗದಲ್ಲಿ ನಮಗೆ ಕಪ್ಪ ನಡಸು. ದಾವದೆಂದರೆ, ಗ್ರಾಮ ಗ್ರಾಮ ಸೀಮಿ ಮರ್ಯಾದಿಗಳಿದ್ದಾವು. ಅಲ್ಲಿ ಅಧರ್ಮವಾಗಬಾರದು, ಮಾನದಲ್ಲಿ ಅಳತಿ ಹೊರ್ತಿರಬಾರದು. ಅದಕ್ಕೆ ನೀ ಅತಿಕ್ರಮ ಮಾಡಬ್ಯಾಡ. ಈ ರೀತಿ ನಮಗೆ ಕಪ್ಪ ನಡಸ್ತ ಬಾ' ಎಂದು ಧರ್ಮರಾಯ ಮಾತನಾಡಿದನು. ಅದರಮ್ಯಾಲೆ ಶ್ರೀಕೃಷ್ಣ ಕಲಿಗೆ ಅಂದನು, 'ಪಾಂಡವರ ಸಂತಾನ ಇರೋ ಪರಿಯಂತ ನಿನ್ನ ಪ್ರಭುತ್ವ ತೋರಿಸಬ್ಯಾಡ. ಇವರ ಕಡಿಗೆ ಕಣ್ಣೆತ್ತಿ ನೋಡಬ್ಯಾಡ. ಕ್ಷೇಮಕರಾಯನ ಸಂತಾನ ಭೂಮೀಮ್ಯಾಲೆ ಇಲ್ಲಥಾಂಗಾದಮ್ಯಾಲೆ, ಅಲ್ಲಿಂದ ನಿನ್ನ ವ್ಯಾಪಾರಕ್ರಮ

ಹೆಚ್ಚಸ್ತ ಬಾ. ಅಲ್ಲಿಪರಿಯಂತ ಭೂತಳದಲ್ಲಿರಬ್ಯಾಡ, ಬಹು ದೂರ ಹೋಗು' ಎಂದು ಕೃಷ್ಣ ಯುಧಿಷ್ಠಿರ ಹೇಳಲಾಗಿ, ಧರ್ಮರಾಯ-ಶ್ರೀಕೃಷ್ಣರಿಗೆ ನಮಸ್ಕರಿಸಿ ಕಲಿ, ಸ್ವಾದೋದಕ ಸಮುದ್ರ ಆಚೀಲಿ ಹೋಗಿ, ಒಂದು ಗುಹಾದೊಳಗೆ ಇರಹೊಕ್ಕ.

ತರುವಾಯ ಅರ್ಜುನ ಅಭಿಮನ್ಯುನ ನೆನಸಿ, ಪುತ್ರಶೋಕದಿಂದ ಘಳಿಘಳಿಗೈ ದುಃಖಬಡತಿಹ. ಆದಕಾರಣ ಅರ್ಜುನನ್ನ ಒಂದು ಸ್ಥಳಾಂತರಕ್ಕೆ ಕರಕೊಂಡು ಹೋಗಿ, ಸಮಾಧಾನ ಮಾಡಬೇಕೆಂದು, ಹಸ್ತಿನಾವತಿಯಿಂದ ಇಂದ್ರಪ್ರಸ್ಥಕ್ಕೆ, ಶ್ರೀಕೃಷ್ಣ ಕರಕೊಂಡುಹೋಗಿ, ಪುತ್ರಶೋಕ ಮರವಿಗೆ ಹಾಕೋಹಾಂಗೆ ಮಾಡಿದರೂ ಸರಿಯೆ, ಪ್ರತಿಕ್ಷಣದಲ್ಲಿ ಮಗನ್ನ ನೆನಸಿ ನಿಟ್ಟುಸಿರು ಹಾಕತಿಹ. ಯುದ್ಧಕಾಲದಲ್ಲಿ, ಅರ್ಜುನಗೆ ಗೀತೋಪದೇಶ ಮಾಡಿದ್ದು ಮಸಣಿಸಿ ಹೋಗಿತ್ತು. ಆದಕಾರಣ ಶೋಕಪರಿಹಾರಾರ್ಥವಾಗಿ, ಶ್ರೀಕೃಷ್ಣ ಅರ್ಜುನಗೆ ಅಣುಗೀತಾ ಹೇಳಿದ್ದಾನೆ. 'ವಾಣೀ, ಪ್ರಾಣ, ವಾಸುದೇವನಿಂದ ಜಗತ್ತು ವ್ಯಾಪ್ತವಾಗೇದೆ. ವಾಣೀ ಎಂದರೆ ಸರಸ್ವತೀ, ಪ್ರಾಣ ಎಂದರೆ ಮುಖ್ಯಪ್ರಾಣ, ವಾಸುದೇವ ಎಂದರೆ ಸಾಕ್ಷಾತ್ ನಾರಾಯಣ. ಮತ್ತೂ ವಾಣಿ ಎಂದರೆ ಲಕ್ಷ್ಮೀದೇವಿ, ಪ್ರಾಣ ಎಂದರೆ ಮುಖ್ಯ ನಾರಾಯಣ. ಹೀಂಗೆ ಮೂರು ಮಂದಿ ಜಗತ್ತಿನಲ್ಲಿ ವ್ಯಾಪಿಸಿದ್ದಾರೆ. ಮೂವರೂ ಸಮರಲ್ಲ. ಮುಖ್ಯಪ್ರಾಣನ ನೋಡಲಿಕ್ಕೆ, ಲಕ್ಷ್ಮೀದೇವಿ ದೊಡ್ಡಾಕಿ. ಲಕ್ಷ್ಮೀದೇವಿ ನೋಡಲಿಕ್ಕೆ ನಾರಾಯಣ ದೊಡ್ಡಾತ. ಈ ಮೂರೂ ಮಂದಿ ಜಗತ್ತಿಗೆ ಆಧಾರರಾಗಿದ್ದಾರೆ. ಸಮಸ್ತ ಜನರು ಮುಖ್ಯಪ್ರಾಣನ ವಶರು. ನಾರಾಯಣ ಸಮಾಧಿಕಶೂನ್ಯ, ಈತನ ಸದೃಶ ಬಾರೂ ಇಲ್ಲ. ಬ್ರಹ್ಮರುದ್ರಾದಿ ಜೀವರು ಮುಕ್ತಿ-ಯೋಗ್ಯರು, ನಿರ್ದೋಷ ಭಕ್ತಿವುಳ್ಳವರು, ಉತ್ತಮರು. ಇನ್ನು ಅನಾದಿಕಾಲದ ದ್ವೇಷಿಗಳು, ತಮೋಯೋಗ್ಯರು, ಅತ್ಯಂತ ಪಾಪಿಗಳು. ಸ್ವಾಮಿಯಲ್ಲಿ ದ್ವೇಷವೂ ಇಲ್ಲ; ಭಕ್ತಿಯೂ ಇಲ್ಲ, ಇವರು ನಿತ್ಯಸಂಸಾರಿಗಳು. ಹೀಂಗ ತ್ರಿವಿಧ ಜೀವರುಗಳು. ಇವರಿಗೆ ಹ್ಯಾಂಗ ತಿಳೀಬೇಕೆಂದೀ, ದೇಹಲಕ್ಷಣದ ವ್ಯಾಲೆ. ಹರಿಸರ್ವೋತ್ತಮ-ಜ್ಞಾನ ಮನಸ್ಸಿನ ಲಿಂಗದಿಂದ ಇವರು ಉತ್ತಮಾಧಿಕಾರಿಗಳು. ಹೀಂಗೆ ಅಧಮರು ನೀಚರೆಂದು ತಿಳೀಬೇಕು. ಭಕ್ತಿತಾರತಮ್ಯ ತಿಳೀಬೇಕು. ಮುಖ್ಯ ತಿಳಿಯೋಣ, ನಾರಾಯಣನಲ್ಲಿ ಭಕ್ತಿ, ತದ್ಭಕ್ತರಲ್ಲಿ ವಿಶ್ವಾಸ, ಮುಖ್ಯಧರ್ಮ. ಅವರ ಪ್ರೀತೀನೆ ಧರ್ಮ. ಹರಿಯಲ್ಲ ಭಕ್ತಿ ಇಲ್ಲದೇ ಇರೋಣ, ಹರಿಭಕ್ತರಲ್ಲಿ ದ್ವೇಷ ದಾವಾತ ಮಾಡಥಾನೆ, ಅವ ಅನೇಕ ಧರ್ಮ ಮಾಡಲ್ಯಾಕೆ, ನಾನಾ ಮಂತ್ರಗಳು ಆಚರಿಸ-ಲ್ಯಾಕೆ ಅದಷ್ಟೂ ಅಧರ್ಮವಾಗತದೆ, ವ್ಯರ್ಥವಾಗತದೆ. ಅಡವಿಯೊಳಗೆ ಪ್ರಲಾಪ ಹ್ಯಾಂಗೆ, ಬೆಂವಟನೊಳಗೆ ಹೋಮಿಸಿಧಾಂಗೆ ಆಗತದೆ. ಎಲೈ ಅರ್ಜುನ, ನಿಶ್ಚಯ. ಜ್ಞಾನ ಇರಲಿ.' ಈ ಪ್ರಕಾರ ಸ್ವಾಮಿ ಜ್ಞಾನೋಪದೇಶ ಮಾಡಿದ. ಅದರಿಂದ

ಪಾಂಡವರು ಬಹಳ ಪ್ರೀತರಾದರು. ಸ್ವಾಮಿ ತಮ್ಮ ಕೈಯ ವೈರಿಗಳ ಕೊಲ್ಲಿಸಿ, ಸಾಮ್ರಾಜ್ಯ ಮಾಡಿಕೊಟ್ಟನೆಂದು ಸ್ತೋತ್ರ ಮಾಡತಿಹೋರು. ಅರ್ಜುನ ಹಸ್ತಿನಾವತಿಗೆ ಬಂದಮ್ಯಾಲೆ ಬಹು ದಿವಸ ಹೋದವು. ಸ್ವಾಮಿ, ದ್ವಾರಾವತಿಗೆ ತೆರಳಿದನು.

ಪಾಂಡವರ ಕೈಯ ಅಪ್ಪಣೆ ಕೊಂಡು, ತಂಗಿ ಸುಭದ್ರಾ ದುಃಖಿಷ್ಟಳಾಗಿದ್ದಾಳೆಂದು ಸಮಾಧಾನ ಮಾಡೋದರಗೋಸ್ಕರ, ತವರುಮನಿಗೆ ಸುಭದ್ರಾನ್ನ ಕೂಡಿಕೊಂಡು ಹೋದನು. ಮಾರ್ಗದಲ್ಲಿ ಉದಂಕಋಷಿ ಆಶ್ರಮದಲ್ಲಿಳಿದನು. ಕ್ಷೇಮಪ್ರಶ್ನೆಗಳಾದವು. ಋಷಿ, ಸಮಾಧಿ ಮುಗಸಿ, 'ಎತ್ತ ಹೋಗಿದ್ದು?' ಎಂದು ವಿಚಾರಗೈದನು. ಸ್ವಾಮಿ, 'ಹಸ್ತಿನಾವತಿಗೆ ಹೋಗಿದ್ದೆ' ಎನಲು, 'ನನ್ನ ಶಿಷ್ಯ ದುರ್ಯೋಧನ ಕ್ಷೇಮದಲ್ಲಿದ್ದಾನೆ?' ಎಂದು ಕೇಳಲಾಗಿ, 'ದುರ್ಯೋಧನ, ನೂರು ಮಂದಿ ಅಣ್ಣತಮ್ಮಂದರು, ದ್ರೋಣ, ಭೀಷ್ಮ, ಮೊದಲಾಗಿ ಹದಿನೆಂಟು ಅಕ್ಷೋಹಿಣಿ ಸೈನ್ಯ ಸಂಹಾರ ಆದಮ್ಯಾಲೆ, ಧರ್ಮರಾಯನ್ನ ಹಸ್ತಿನಾವತಿಗೆ ಕರಕೊಂಡು ಹೋಗಿ, ರಾಜ್ಯದಲ್ಲಿ ಅಭಿಷೇಕ ಮಾಡಿ, ದ್ವಾರಾವತಿಗೆ ಹೋಗೋ ನಿಮಿತ್ತ ಇಲ್ಲಿ ಇಳದೆ' ಎಂದು ಹೇಳಲು, ಉದಂಕಋಷಿಗೆ ಬಹಳ ಸಿಟ್ಟು ಬಂತು. ಕೃಷ್ಣ, ಪಾಂಡವರ ಪಕ್ಷಪಾತಿಯಾಗಿ, ತನ್ನ ಶಿಷ್ಯ ದುರ್ಯೋಧನಾದಿಗಳ ಕೊಲ್ಲಿಸಿದನೆಂದು, ಕೋಪಾಟೋಪದಿಂದ ಶಾಪ ಕೊಡಲಿಕ್ಕೆ ಉದ್ಯುಕ್ತನಾದ. ತನ್ನ ಭಕ್ತ ತನಗೆ ಶಾಪ ಕೊಟ್ಟರೆ ಒಳಿತಲ್ಲ. ದೇಹಾಭಿಮಾನ ಬಿಟ್ಟು ತಪಸ್ಸು ಮಾಡ್ಯಾನೆ, ತನ್ನ ಆರಾಧಿಸಿದ್ದು ವ್ಯರ್ಥವಾಗಬಾರದೆಂದು ತನ್ನ ಭಕ್ತಗೆ ವಿಶ್ವರೂಪ ತೋರಿಸಿದ. ಬ್ರಹ್ಮಾದಿ ದೇವತಿಗಳು ಮಾಲ್ಗ್ಲಸಥಾರೆ. ಸಮಾಧೀಲಿ ಕುಳಿತಾಗ್ಗೆ, ಹೃತ್ಕಮಲದಲ್ಲಿ ದಾವ ಮೂರ್ತಿ ಕಂಡಾನೆ, ಅದೇ ಮೂರ್ತಿ ಪ್ರತ್ಯಕ್ಷ ಕಂಡ. ಋಷಿ ಬಹಳ ಪಶ್ಚಾತ್ತಾಪ ಉಳ್ಳವನಾಗಿ, 'ಸರ್ವೋತ್ತಮದೇವತಿಗೆ ಶಾಪ ಕೊಡತಿದ್ದೆನಲ್ಲ!' ಎಂದು ಬಹಳ ಅಂಜಿಕಿವುಳ್ಳವನಾಗಿ, ವಾಸುದೇವಗೆ ಶರಣು ಬಂದ. ಸ್ವಾಮಿ ಭಕ್ತವತ್ಸಲ, ಭಕ್ತರ ಅನ್ಯಾಯ ಮನಸ್ಸಿಗೆ ತಾರದೆ, ಭಕ್ತಪ್ರಿಯನಾದಕಾರಣ, ಋಷಿಗೆ ಅಂಜಬ್ಯಾಡವೆಂದು, ಅಭಯ ಕೊಟ್ಟು, ದಿವ್ಯ ಜ್ಞಾನೋಪದೇಶ ಮಾಡಿ, 'ನಿನಗೋಸ್ಕರ ದೇವೇಂದ್ರನ ಕೈಯ ಅಮೃತ ಕಳಸಥೀನಿ' ಎಂದು ಹೇಳಿ, ಜನ್ಮಜರಾದಿ ದೋಷಗಳ ಮರ್ದಿಸುವಂಥ ಜನಾರ್ದನ, ದ್ವಾರಾವತಿಗೆ ಹೋಗಿ, ದೇವೇಂದ್ರನ ಕರಸಿ ಮಾತನಾಡಿದ. 'ಉದಂಕಋಷಿಗೆ ಅವಶ್ಯ ಅಮೃತ ಒಯ್ದುಕೊಡು' ಎಂದನು. 'ಬಹಳ ಒಳ್ಳೇದೆಂದು, ಸ್ವಾಮಿ ಆಜ್ಞೆ ಶಿರಸಾವಹಿಸಿ, 'ಅಮೃತ ಕಳಸಥೀನಿ, ದಕ್ಕಧಾಂಗೆ ಮಾಡು' ಎಂದು ದೇವೇಂದ್ರ ಕೇಳಲು, ಸ್ವಾಮಿ 'ನಿನ್ನ ಮನಸ್ಸಿಗೆ ಬಂಧಾಂಗೆ ಮಾಡು' ಎನಲಿಕ್ಕೆ, ವಾಸುದೇವನ ಆಜ್ಞೆ ಕೊಂಡು, ದೇವೇಂದ್ರ ಚಂಡಾಲವೇಷ ಧರಿಸಿ, ದೇಹವೆಲ್ಲ ರಕ್ತ ಮಾಂಸ, ಮಲಿನ ವಸ್ತ್ರ, ಹೇಸಿಗಿ ಬರೋಹಾಂಗೆ, ಕಲಶ ಕೈಲಿ ಹಿಡಕೊಂಡು, ಅದರ ಬಾಯೊಳಗೆ

ತನ್ನ ಶಿಶ್ನ ಹಾಕಿಕೊಂಡಿದ್ದಾನೆಂಬೋ ಹಾಂಗೆ ತೋರಿಸಿ, 'ವಾಸುದೇವ ನಿನಗೆ ಅಮೃತ ಕಳಸಿಕೊಟ್ಟಾನೆ, ತಕ್ಕೋ' ಎಂದಲ್ಲಿ, ಚಂಡಾಲನ ಕೈಯ ಅಮೃತ ಹ್ಯಾಂಗೆ ತಕ್ಕೋಬೇಕೆಂದು, ಅಮೃತ ಒಲ್ಲೆನೆಂದು, ಈ ರೀತಿ ಮೂರು ಖ್ಯಾಪಿ ಋಷಿಯಿಂದ ಅನ್ನಿಸಿಕೊಂಡು, 'ಅಯೋಗ್ಯಂಗೆ ಅಮೃತ ಪ್ರಾಪ್ತವಾಗತಿತ್ತು, ಸ್ವಾಮಿ ಪರಿಹರಿಸಿದನು' ಎಂದು ಬಹಳ ಪ್ರೀತನಾಗಿ, ತಮ್ಮ ಅಸಾಧಾರಣ ಅನ್ನ ಕೊಂಡು, ದೇವೇಂದ್ರ ಸ್ವರ್ಗಕ್ಕೆ ಹೋದ. ಸ್ವಾಮಿ ಅಜ್ಞ ಸುರರಾಜ ನಡಸಿ. ಧಾಂಗಾಯಿತು. ಋಷಿ ತನ್ನ ಅಪರಾಧದಿಂದ ಅಮೃತ ದಕ್ಕಿಸಿಕೊಳ್ಳಲಿಲ್ಲ.

ಶ್ರೀಕೃಷ್ಣ ಕುರುಪಾಂಡವರ ಭಾರತಯುದ್ಧಪ್ರಸಂಗ ವಸುದೇವನ ಮುಂದೆ ಹೇಳಥಾನೆ. ವಸುದೇವ ಶ್ರೀಕೃಷ್ಣನಿಂದ ಭಾರತಯುದ್ಧ ಕೇಳಿದ. ಸುಭದ್ರಾ ತನ್ನ ಅಣ್ಣಗೆ, ತನ್ನ ಮಗ ಅಭಿಮನ್ಯು ಹ್ಯಾಂಗೆ ಸತ್ತನೆಂದು ಕೇಳಿದಳು. 'ರಣರಂಗದಲ್ಲಿ ಹ್ಯಾಂಗೆ ಮರಣ ಐದಿದ ಎಂದರೆ, ಎಲೌ ಅಮ್ಮಾ ದುಃಖ ಏನು ಕೇಳೀ' ಎನಲು, 'ಸ್ವಾಮೀ ಹೇಳಬೇಕು' ಎಂದು ಆಗ್ರಹ ಮಾಡಲು, ಸ್ವಾಮಿ ಜಗಜ್ಜೀವನ ಸುಭದ್ರಾ ದುಃಖ ಪರಿಹರಿಸಲಾರನೆ! ತಂಗಿ ಕೇಳಥಾಳೆಂದು ಮರಣದ ಪ್ರಕರಣ ಹೇಳಥಾನೆ. 'ದ್ರೋಣಾಚಾರ್ಯ ರಣರಂಗದಲ್ಲಿ ವ್ಯೂಹರಚನಿ ಮಾಡಿದ್ದ. ಸಂಶಪ್ತಕರ ಕೂಡ ಯುದ್ಧ ಮಾಡಲು ನಾನು, ಅರ್ಜುನ ಇಬ್ಬರೂ ಬಹು ದೂರ ಹೋಗಿದ್ದೆವು. ಅಭಿಮನ್ಯುನ ಮುಂದವಾಡಿಕೊಂಡು, ಪಾಂಡವರು ವ್ಯೂಹ ಸೀಳಲಿಕ್ಕೆ ಹೋದರು. ಅಭಿಮನ್ಯುನ ಮುಂದಾಗಿ ಬಿಟ್ಟು, ಕೌರವರು ಪಾಂಡವರ ಅಡ್ಡಗಟ್ಟಿದರು. ಭೀಮಸೇನ ಜಯದ್ರಥನ ಸೋಲಿಸಿ ಒಳಗೆ ಹೋಗಲಿಕ್ಕೆ ಸಮರ್ಥನಾದರೂ, ಅದೃಷ್ಟನಾಮಕ ಪರಮಾತ್ಮನ ಇಚ್ಛಾದಿಂದ, ಭೀಮಸೇನ ಅಭಿಮನ್ಯುನ ಬಳಿಪಡಿದು ಹೋಗದೆ, ಯುದ್ಧಕ್ಕೆ ತೊಡಗಿದನು. ಅಭಿಮನ್ಯು ಬಹಳ ಪರಾಕ್ರಮದಿಂದ ವೈರಿಗಳನ್ನೆಲ್ಲ ಮರ್ದಿಸಿ, ದುರ್ಯೋಧನ ದುಶ್ಶಾಸನರ ಮಕ್ಕಳನ್ನ ಕೊಂದು, ತಾನೂ ರಣರಂಗದಲ್ಲಿ ಸತ್ತನು. ಅಭಿಮನ್ಯುನ ಮರಣದಿಂದ ದುಃಖ, ಧರ್ಮರಾಯಗೆ ಬಹಳ ಆಯಿತು. ಆವತ್ತಿಗೆ ಯುದ್ಧ ಶಾಂತವಾಯಿತು.' ಈ ವಾರ್ತೆ ವಸುದೇವ ಮೊದಲಾದವರೆಲ್ಲ ಕೇಳಿ, ಅಭಿಮನ್ಯುಗೆ ದಿವ್ಯಗತಿ ಆಗಲೆಂದು ಗೋ, ಭೂ, ಹಿರಣ್ಯದಾನ ಮೊದಲಾದದ್ದು, ಬ್ರಾಹ್ಮಣರಿಗೆ ಕೊಟ್ಟು ಭೂರಿಭೋಜನ ಮಾಡಿಸಿದರು.

ಯಾದವಪತಿ ಶ್ರೀಕೃಷ್ಣ ದ್ವಾರಾವತೀಲಿ ಇರಲಿಕ್ಕೆ ಧರ್ಮರಾಯ, ಗೋತ್ರಜ, ಬಾಂಧವರ ಕೊಂದ ದೋಷಕ್ಕೆ, ಅಶ್ವಮೇಧಯಜ್ಞ ಮಾಡಬೇಕೆಂದು ಇಚ್ಛಿಸಲು, 'ಧನವಿಲ್ಲ, ಸಮಸ್ತ ರಾಯರೂ ಸತ್ತರು. ಅವರವರ ಮಕ್ಕಳಿಗೆ ಅವರವರ ರಾಜ್ಯ ಕೊಟ್ಟು, ಅವರವರ ಕೈಯ ಕಪ್ಪ ಕೋಬೇಕಾದರೆ, ಅವರಷ್ಟೂ ಮುಂದಿ ಚಿಕ್ಕವರು, ತಮ್ಮತಮ್ಮ ರಾಜಧಾನಿ ರಕ್ಷಿಸಿಕೊಂಡಿರಲಿಕ್ಕೇ ಸಾಕಾಗೇದೆ. ನಮಗೆ ಎಲ್ಲಿಂದ ಕಪ್ಪ

ಕೊಟ್ಟಾರು! ರಾಜ್ಯ ಬಹಳಾಗಿ ಹೋಗೇದೆ. ಪ್ರಾಣಿಗಳಿಗೆ ದುಃಖ ಕೊಡವಲ್ಲೆ. ದ್ರವ್ಯಾನುಕೂಲ ನೋಡಿಕೊಂಡು, ಕಾಲದ ಮ್ಯಾಲೆ ದೃಷ್ಟೀ ಕೊಟ್ಟು, ಮಧ್ಯಮ-ಕಲ್ಪ ಯಜ್ಞ ಮಾಡಬೇಕು' ಎಂದರೆ, ಧರ್ಮರಾಯನ ಮನಸ್ಸಿಗೆ ಬಾರದು. ಯಥೇಷ್ಟ ಅನ್ನಪಾನದ್ರವ್ಯಗಳಿಂದ ಬ್ರಾಹ್ಮಣರಿಗೆ, ದೇವತೆಗಳಿಗೆ ತುಷ್ಟಿ ಬಡಿಸಬೇಕು, ಈ ಪ್ರಕಾರ ಧರ್ಮರಾಯನ ಮನೋಗತ ಅಭಿಪ್ರಾಯ ತಿಳಿದು, ಅಲ್ಲಿಗೆ ವೇದವ್ಯಾಸ ಬಂದನು. ಬಂದು 'ಎಲೈ ಧರ್ಮರಾಯ ಅವಶ್ಯ ಯಜ್ಞ ಮಾಡು. ದ್ರವ್ಯ ವೆಚ್ಚಿಸಲಿಕ್ಕೆ ಇಲ್ಲವೆಂದು ಚಿಂತಿ ಮಾಡಬ್ಯಾಡ ನಾ ದ್ರವ್ಯ ತರಸಿಕೊಡಥೀನಿ. ಹಿಮವತ್ಪರ್ವತದ ಕೋಡುಗಲ್ಲಿನಲ್ಲಿ ಮೇರುಪರ್ವತದ ಕೋಡುಗಲ್ಲು ತಂದಿಟ್ಟದ್ದಾರೆ. ಅಲ್ಲಿ ನಾರಾಯಣ, ತಾ ಕರ್ಮಬದ್ಧನಲ್ಲದಿದ್ದರೂ, ಲೋಕಶಿಕ್ಷಾರ್ಥವಾಗಿ, ತನ್ನ ಕುರಿತು ತಾನೇ ಯಜ್ಞ ಮಾಡಿದ್ದಾನೆ. ಅದೇ ಸ್ಥಳದಲ್ಲಿ ಶಂಕರಾದಿ ದೇವತೆಗಳು, ಯಜ್ಞ ಮಾಡಿದ್ದಾರೆ. ಹಾಂಗೆ ನಿಮ್ಮ ಪೂರ್ವಜ ಮರುತ್ತರಾಯ ಯಜ್ಞ ಮಾಡಿದ್ದಾನೆ. ಯಜ್ಞಶೇಷ ರುದ್ರಭಾಗವೆಂದು, ಯಜ್ಞದ ಉಚ್ಚಿಷ್ಟ, ಅಪಾರ ದ್ರವ್ಯರಾಶಿ ಬಿದ್ದದೆ. ಆ ದ್ರವ್ಯ ತಂದು ನೀ ಯಜ್ಞ ಮಾಡು' ಎಂದು ವೇದವ್ಯಾಸ ಹೇಳಲು, ಧರ್ಮರಾಯಗೆ ಮನಸ್ಸು ಬಾರದು. 'ಪರದ್ರವ್ಯ ತಂದು ನಾ ಹ್ಯಾಂಗೆ ಮಾಡಲಿ? ರುದ್ರಭಾಗ ನಮಗೆ ಹ್ಯಾಂಗೆ ಬಿಡತದೆ?' ಎಂದಲ್ಲಿ, ಭೀಮಸೇನ ಮಾತನಾಡಥಾನೆ. 'ರಾಯಾ, ಪರದ್ರವ್ಯ ಹ್ಯಾಂಗೆ ಕೊಳ್ಳಲಿ ಎಂದು ಚಿಂತಿ ಮಾಡಬ್ಯಾಡ. ರುದ್ರಭಾಗವಾದರೂ, ರುದ್ರಾಂತರ್ಯಾಮಿ ಪರಶುರಾಮನ ಪೂಜಿ ಮಾಡಿ, ದೇವರ ದ್ರವ್ಯ ಕೊಂಡುಬಂದರೆ, ನಮಗೆ ದೋಷವಿಲ್ಲ. ಪರಶುರಾಮ ಜಗತ್ತಿಗೆ ಒಡಿಯ. ಇಂಥಾ ಅಖಿಲೇಶ್ವರ, ಶಂಕರನ ಶಿರಸ್ಥನಾಗಿದ್ದಾನೆ. ಯಜ್ಞಕೇಷಕ್ಕೆ ಒಡಿಯನಾಗಿದ್ದಾನೆ. ಗುರುದ್ರವ್ಯ, ಹಿರೇರ ದ್ರವ್ಯ ಪರದ್ರವ್ಯವಲ್ಲ. ರುದ್ರ ನಮ್ಮ ಅರ್ಜುನನ ಗುರುವು, ಅರ್ಜುನಗೆ ಪಾಶುಪತಾಸ್ತ್ರ ಕೊಟ್ಟದ್ದಾನೆ. ಪರಶುರಾಮ, ವೇದವ್ಯಾಸ, ಶ್ರೀಕೃಷ್ಣ ಮೂರೂ ಮೂರ್ತಿ, ನಮ್ಮ ಮುಖ್ಯ ಸ್ವಾಮಿ. ಇಂಥಾ ಸ್ವಾಮಿ, ನಮ್ಮ ಕೈಯಿಂದ ಮಹತ್ಕಾರ್ಯ ಮಾಡಿಸಿ, ಅಖಿಲ ಸಾಮ್ರಾಜ್ಯ ಮಾಡಿಕೊಟ್ಟಾನೆ. ಇಂಥಾ ಜಗನ್ನಾಥ ದೂತತ್ವ ಕೆಲಸ ಮಾಡಿದ್ದಾನೆ. ಸ್ವಾಮಿ ಭಕ್ತವತ್ಸಲ, ಸ್ವಾಮಿಗೆ ಇದು ಆಶ್ಚರ್ಯವಲ್ಲ. ಜಗತ್ಸೃಷ್ಟಿ ಮಾಡಥಾನೆ. ಬ್ರಹ್ಮಾದಿ ದೇವತೆಗಳಿಗೆ ಪದವಿ ಕೊಡಥಾನೆ. ನಾವು ಸ್ವಾಮೀ ಭಕ್ತರು, ಸ್ವಾಮಿಗೆ ಬೇಕಾದವರು. ಸ್ನೇಹದಿಂದ ದ್ರವ್ಯ ಕೊಂಡುಬನ್ನಿ ಎಂದು ಹೇಳಥೀನಿ. ಸ್ವಾಮಿ ಕೊಟ್ಟಂಥ ದ್ರವ್ಯದಿಂದ ಆತನ ಪೂಜಿ ಮಾಡಬೇಕು. ಅದಲ್ಲದೆ ವೇದವ್ಯಾಸ ನಮ್ಮ ಪಿತಾಮಹ. ಮುತ್ಯಾನ ಒದಕು, ಮೊಮ್ಮಕ್ಕಳಿಗೆ ಪರದ್ರವ್ಯವಲ್ಲ. ರಾಯಾ, ಏನೂ ಅನುಮಾನ ಮಾಡಬ್ಯಾಡ. ಸುಮ್ಮಗೆ ದ್ರವ್ಯ ಕೊಂಡುಬರಬೇಕು.' ಹೀಂಗೆಂದು ಭೀಮಸೇನ ಧರ್ಮರಾಯಗೆ ಅನ್ನಲಿಕ್ಕೆ, ವೇದವ್ಯಾಸರ ಮುಂದ-

ಮಾಡಿಕೊಂಡು, ಹಿಮವತ್ಪರ್ವತದ ಕೋಡಗಲ್ಲು ಸಮೀಪಕ್ಕೆ ಧರ್ಮರಾಯ ಹೋದನು.

ಅಲ್ಲಿ ದ್ರವ್ಯ ಎಷ್ಟು ಬಿದ್ದಿತ್ತು ಎಂದರೆ, ನೂರು ಯೋಜನ ಅಡ್ಡಗಲ, ನೂರು ಯೋಜನ ಉದ್ದ ದ್ರವ್ಯ ಬಿದ್ದಿದೆ. 'ಇಷ್ಟು ದ್ರವ್ಯ ಕೊಟ್ಟೀನಿ. ಕೊಂಡು-ಹೋಗರಿ' ಎಂದು ವೇದವ್ಯಾಸ, ಧರ್ಮರಾಯಗೆ ಹೇಳಲಿಕ್ಕೆ, ದ್ರವ್ಯಕ್ಕೆ ಶಾಂತಿ ಷೋಡಶೋಪಚಾರ ಪೂಜಿಗೈದು ಒಂಟಿ, ಹೇಸರಗತ್ತಿ, ಭಂಡಿ, ಆನಿ, ಕುದರಿ ಹಾಂಗೆ ಭಾರವಾಹಕರಮ್ಯಾಲೆ, ಚತುರಂಗಸೇನಿ ಮ್ಯಾಲೆಲ್ಲ ಹೇರಿ ಹೇರಿ ಕಳುಹಲು ಇನ್ನೂ ಅಪಾರ ದ್ರವ್ಯ ಉಳದಿಹೋದು. ಅರಸು ಧರ್ಮರಾಯ ಒಬ್ಬನ ಉಳದು ಭೀಮಸೇನ, ಅರ್ಜುನ, ಮಾದ್ರೀಪುತ್ರರು ಸಹ ಹೊತ್ತುಕೊಂಡು ನಡದರು. ಉದಯ ಆಗೋ ಎಳೇ ಸೂರ್ಯನೋಪಾದಿ ದ್ರವ್ಯ ಹೊಳೀತಿಹೋದು.

ಪಾಂಡವರು ಹಸ್ತಿನಾವತಿಯಲ್ಲಿ ಏನು ಮಾಡಥಾರೋ ಎಂದು ಸ್ವಾಮಿ ಕಮಲೇಕ್ಷಣ, ಭಕ್ತಪ್ರಿಯ, ಶ್ರೀಕೃಷ್ಣ ಭಕ್ತರ ಬಿಟ್ಟಿರಲಾರದೆ, ದ್ವಾರಾವತಿಯಿಂದ ಹಸ್ತಿನಾವತಿಗೆ ಬರೋವಾಗ, ಮಾರ್ಗದಲ್ಲಿ ಉದಂಕಮುಷಿಯು ಕಂಡನು. ಋಷೀ ಪೂಜಿಗೊಂಡು ಮಾತನಾಡಿದ. 'ನಿನಗೆ ಅಮೃತ ದೇವೇಂದ್ರನ ಕೈಯ ಕಳಸಿದ್ದೆ, ಮುಟ್ಟಿತೇ?' ಎಂದಲ್ಲಿ, 'ಸ್ವಾಮಿ ಅಮೃತ ಅಲ್ಲ, ಚಂಡಾಲ ತನ್ನ ಮೂತ್ರ ಕೊಂಡು ಬಂದಿದ್ದ' ಎಂದನು. 'ನೀ ಅಯೋಗ್ಯ, ಅಮೃತ ದಕ್ಕಬಾರದೆಂದು ಚಂಡಾಲವೇಷ ಧರಿಸಿ ಬಂದಿದ್ದ, ನೀ ಯಾಕೆ ಬಿಟ್ಟೆ?' ಎಂದಲ್ಲಿ 'ಬಂದಂಥ ಅಮೃತ ಕಳಕೊಂಡೆನಲ್ಲ!' ಎಂದು ಉದಂಕಮುಷಿ, ಪಶ್ಚಾತ್ತಾಪ ಉಳ್ಳವನಾದ. 'ಸ್ವಾಮೀ, ನನ್ನ ಆಶ್ರಮ ಸೌಳುಭೂಮಿ, ನೀರು ಕುಡದೇನೆಂದರೆ ನೀರು ಇಲ್ಲ' ಎನಲಿಕ್ಕೆ, 'ಎಲೈ ಋಷಿಯೇ, ನೀ ದಾವಾಗ ನೀರು ಕುಡದೇನೆಂತಿ, ಅದೇ ವ್ಯಾಳ್ಯಾದಲ್ಲಿ ಮೇಘಗಳು ಮಳಿಗರದಾವು. ಆ ಮಳಿ ಧಾರಿಯಿಂದ ನೀರು ಕುಡದು ತೃಷಾ ಶಾಂತಿ ಮಾಡಿಕೊ.' ಹೀಂಗೆಂದು ಸ್ವಾಮಿ, ಸತ್ಯಸಂಕಲ್ಪ ತನ್ನ ವಚನ ಸತ್ಯ ಮಾಡಿ, ಋಷೀ ಪ್ರೀತಿಬಡಿಸಿ, ಆ ಆಶ್ರಮದಿಂದ ಹಸ್ತಿನಾವತಿಗೆ ಬಂದನು.

ಶ್ರೀಕೃಷ್ಣ ಅಂತಃಪುರದಲ್ಲಿ ಪ್ರವೇಶವಾಗಲಿಕ್ಕೆ, ಉತ್ತರಾದೇವಿ ಪ್ರಸೂತವಾಗಿ ಕೂಸು ಹೊರಗೆ ಬರಲಿಕ್ಕೆ, ಅಶ್ವತ್ಥಾಮನ ಬ್ರಹ್ಮಾಸ್ತ್ರ ಕೂಸಿಗೆ ಬಡದು, ಕೂಸು ಕಪ್ಪಾಗಿ ಅಜೇತನದಿಂದ ಭೂತಳದಲ್ಲಿ ಬಿದ್ದಿತು. ಕುಂತೀ ಮೊದಲಾದ ಸ್ತ್ರೀ-ಸಮ್ಯಾಳ ಶ್ರೀಕೃಷ್ಣನ್ನ ಬೇಡಿಕೊಂಡರು. 'ಸ್ವಾಮೀ, ನಮ್ಮನ್ನ ಸರ್ವಾಪತ್ತಿನಿಂದ ರಕ್ಷಿಸಿದಿ. ಲಾಕ್ಷಾಗೃಹದಲ್ಲಿ ಸತ್ತುಹೋಗಿದ್ದೆವು, ಅಲ್ಲಿ ಸಂರಕ್ಷಿಸಿದಿ. ಹನ್ನೆರಡು ವರ್ಷ ವನವಾಸ, ಒಂದು ವರ್ಷ ಅಜ್ಞಾತವಾಸದಲ್ಲಿ ರಕ್ಷಿಸಿದಿ. ನಮ್ಮ ಕುಲಕ್ಕೆಲ್ಲ ಬೀಜ ನೀನು. ಈ ಬಾಲಕನ್ನ ರಕ್ಷಿಸೆಸೇದು ನಿನಗೆ ಆಶ್ಚರ್ಯವಲ್ಲ, ನಮ್ಮ ಕುಲ ವಿನಾಶವಾಗತದೆ, ರಕ್ಷಿಸಬೇಕು.' ಹೀಂಗೆಂದು ಬೇಡಿಕೊಳ್ಳಲಿಕ್ಕೆ, ಸ್ವಾಮಿ,

ಜಗತ್ಪಾಲಕನ ಹುಟ್ಟಸ್ಥಾನೆ. ಭಕ್ತರ ಮನೋಭೀಷ್ಟ ಮಾಡದೇಹೋದಾನೆ! ಗರ್ಭದಲ್ಲಿ ರಕ್ಷಿಸಿದಾತ, ಹೊರಗೆ ರಕ್ಷಿಸದೇ ಹೋದಾನೆ! ಅಶ್ವತ್ಥಾಮನ ಬ್ರಹ್ಮಾಸ್ತ್ರ ಸಾಮರ್ಥ್ಯ ತೋರಿಸಬೇಕಾಗಿ, ಒಂದು ಕ್ಷಣ ಪರಿಯಂತ ಬ್ರಹ್ಮಾಸ್ತ್ರಕ್ಕೆ ಅವಕಾಶ ಕೊಟ್ಟ. ಕುಂತೀ ಮೊದಲಾದ ಸ್ತ್ರೀಯರು ಬೇಡಿಕೊಂಡದ್ದರಿಂದ, ಸಂಗಡಲೆ ಪರೀಕ್ಷಿತರಾಯನ ಬದಕಿಸಿದನು.

ಅಷ್ಟರೊಳಗೆ ಪಾಂಡವರು ದ್ರವ್ಯ ಹೇರಿಕೊಂಡು ಬಂದರು. ಪರೀಕ್ಷಿತರಾಯ ಹುಟ್ಟಿದ್ದು, ಸತ್ತದ್ದು, ಸಂಗಡಲೇ ಶ್ರೀಕೃಷ್ಣ ಬದಕಿಸಿದ್ದು, ಈ ವಾರ್ತೆ ಕೇಳಿ, ಸ್ವಾಮಿಗೆ ನಮಸ್ಕಾರ ಮಾಡಿ ಸ್ತೋತ್ರಗೈದರು. ತನುಗೆ ಪುತ್ರೋತ್ಸವವಾಯಿತೆಂದು, ಸ್ವಾಮಿಯಲ್ಲಿ ಭಕ್ತಿಯುಳ್ಳವರಾಗಿ, ಅಂಬುಜನಾಭನ ಆಜ್ಞೆ ಕೊಂಡು, ಅಪಾರ ದ್ರವ್ಯ ಬ್ರಾಹ್ಮಣರಿಗೆ ಕೊಟ್ಟರು. ವಾಸುದೇವ ಸಮಸ್ತರ ಕೈಯ ಪೂಜೆ ಮಾಡಿಸಿಕೊಂಡನು. ತರುವಾಯ, ಅಶ್ವಮೇಧಯಜ್ಞ ಆರಂಭ ಮಾಡಬೇಕಾಗಿ ವೇದವ್ಯಾಸ, ಶ್ರೀಕೃಷ್ಣ ಸಭಾಪತಿಗಳಾದರು. ಅಶ್ವಮೇಧಯಜ್ಞ ಮಾಡಿದ್ದರಿಂದ ಸಮಸ್ತ ಯಜ್ಞ ಮಾಡಿದಾಂಗೆ. ಯಜ್ಞಕ್ಕೆ ಸರ್ವವೂ, ಸುವರ್ಣಮಯ ಪಾತ್ರೆ, ಹಿರಣ್ಮಯ ಶಾಲೆ, ಸುವರ್ಣಮಯ ಭೂಮಿ, ಈ ಪ್ರಕಾರ ಸುವರ್ಣಮಯ ಮಾಡಿದ್ದರು. ಯಜ್ಞಕ್ಕೆ ಅಶ್ವ ತಿರಗಿಸಿ ತರಬೇಕೆಂದು, ಮೇದಿನೀನ್ಯಾಲೆ ತಿರಗಿಸಿ ತರೋದಕ್ಕೆ ಅರ್ಜುನನ ಕೊಟ್ಟು ಕಳುಹಿದರು.

ಅರ್ಜುನ ಶಸ್ತ್ರಾಸ್ತ್ರ ತೇಜಸ್ಸುಳ್ಳಾತ, ತನ್ನ ಬಾಹುಪರಾಕ್ರಮದಿಂದ ಸಮಸ್ತ ಭೂಪಾಲಕರ ಸೋಲಿಸಿ, ಕಪ್ಪಗಳು ಕೊಂಡು, 'ಅಶ್ವಮೇಧಯಜ್ಞಕ್ಕೆ ಬನ್ನಿ' ಎಂದು ಆಜ್ಞಾಪಿಸತ, ಅಶ್ವ ತಿರಗಸತ ಬರತಿಹ. ಅರ್ಜುನನ ಎದುರಿಗೆ ದಾರು ಯುದ್ಧಕ್ಕೆ ಬಾಹೋರು, ಅವರನ್ನೆಲ್ಲ ಸೋಲಿಸಿಬಿಡೋನಲ್ಲದೆ, ದಾರನ್ನೂ ಕೊಂದಿರಲಿಲ್ಲ. ಏನು ಕಾರಣವೆಂದರೆ, ಧರ್ಮರಾಯನಾಜ್ಞೆ. 'ರಣರಂಗದಲ್ಲಿ ಹದಿನೆಂಟು ಅಕ್ಷೋಹಿಣಿ ಸೈನ್ಯ ಸಂಹಾರ ಮಾಡೀವಿ. ಅವರ ಮಕ್ಕಳಿಗೆ ನೂತನ ಪಟ್ಟ ಕಟ್ಟೀವಿ. ಅವರು ಚಿಕ್ಕವರು, ನಿನ್ನ ಸಾಮರ್ಥ್ಯ ಅರಿತವರಲ್ಲ. ಯುದ್ಧಕ್ಕೆ ಬಂದ ಪಕ್ಷವೇ, ಅವರನ್ನ ಸೋಲಿಸಿ ಜೀವದಿಂದ ಬಿಟ್ಟುಕೊಡು.' ಹೀಂಗಂತ ಧರ್ಮರಾಯನ ಆಜ್ಞೆ ಇಹೋದು. ಆವಕಾರಣ ಅರ್ಜುನ ಸಮಸ್ತ ಭೂಪಾಲಕರ ಕೊಲ್ಲದೆ, ಪ್ರಾಣೋಪಕಾರ ಮಾಡಿ, ಅವರ ಕೈಯ ಕಪ್ಪ ಕೊಂಡು, ಯಜ್ಞಕ್ಕೆ ಬಾಹೋದಕ್ಕೆ ಹೇಳಿ, ಕುದರೀ ತಿರಗಸ್ತ ಬರಲಿಕ್ಕೆ ಮಣಿಪುರಕ್ಕೆ* ವೀರಸೇನನ ಸಮೀಪಕ್ಕೆ ಬಂದನು.

---

* ಮಳಲೂರು, ಮಣನೂರು ಎಂಬು ನಾವಾಂತರಗಳು.

ಮಣಿಪುರದಲ್ಲಿ, ಬಬ್ರುವಾಹನ ಅರ್ಜುನನಿಂದ ಚಿತ್ರಾಂಗದಾನಲ್ಲಿ ಹುಟ್ಟಿದ್ದ, ಮಾತಾಮಹನಲ್ಲಿ ಸೇರಿಕೊಂಡಿದ್ದ. ಬಬ್ರುವಾಹನ ತನ್ನ ತಂದಿ ಬರಥಾನೆಂದು ವಾರ್ತಿ ಕೇಳಿ, ಪೂಜಾಸಾಹಿತ್ಯ ದ್ರವ್ಯಗಳ ಕೊಂಡು, ಅರ್ಜುನನ ಎದುರಿಗೆ ಬರಲು, ಅರ್ಜುನ ತನ್ನ ಮಗ ಯುದ್ಧ ಮಾಡದೆ ಪೂಜಾ ಮಾಡಲಿಕ್ಕೆ ಬಂದನೆಂದು ಕೋಪದಿಂದ ಮಾತನಾಡಿದ. 'ಎಲೋ, ನೀ ಕ್ಷತ್ರಿಯನಲ್ಲ. ಯುದ್ಧ ಮಾಡದೆ, ಪೂಜಾ ಮಾಡಲಿಕ್ಕೆ ಹ್ಯಾಂಗೆ ಬಂದಿ? ಸುಡು ನಿನ್ನ ಜನ್ಮ! ಕ್ಷತ್ರಿಯ ಮರ್ಮ ತೋರಿಸು.' ಹೀಂಗೆಂದು ಅರ್ಜುನ, ಮಾತನಾಡಲಿಕ್ಕೆ, 'ಪ್ರತ್ಯಕ್ಷ ತಂದೀ ಕೂಡ ಹ್ಯಾಂಗೆ ಯುದ್ಧ ಮಾಡಲಿ' ಎಂದು, ಮಾರಿ ತಗ್ಗಿಸಿಕೊಂಡು ಬಬ್ರುವಾಹನ ನಿಂತನು. ಇರಾವಂತನ ತಾಯಿ ಉಲೂಪೀ, ತನ್ನ ಮಲಮಗ ಬಬ್ರುವಾಹನಗೆ ಹೇಳಿದಳು. 'ಮಗನಾದವ ಗುರುಹಿರೇರ ಆಜ್ಞಾ ನಡಸಬೇಕು. ಪ್ರೀತಿ ಸಂಪಾದಿಸು' ಎಂದು, ಉಲೂಪೀ ಮಲತಾಯಿ ಆಜ್ಞಾದಿಂದ, ಅರ್ಜುನನ ಕೂಡ ಬಬ್ರುವಾಹನ ಅತಿ ಭಯಂಕರ ಯುದ್ಧ ಮಾಡಿದ. ಮಗನ ಸಾಮರ್ಥ್ಯ ಹೆಚ್ಚಿಸಬೇಕಾಗಿ, ಅರ್ಜುನ ತೀವ್ರ ಯುದ್ಧ ಮಾಡದೆ, ಮುಗುಳುನಗೆ ನಗತ ಮೆಲ್ಲಮೆಲ್ಲಗೆ ಯುದ್ಧ ಮಾಡತಿಹ. ಬಬ್ರುವಾಹನನ ಬಾಣಗಳೆಷ್ಟೂ ಅರ್ಜುನನ ದೇಹದ ಮ್ಯಾಲೆ ತೋರತಿಹೋವು. ಆ ಬಾಣಗಳು ಅರ್ಜುನಗೆ ಏನೂ ವ್ಯಥಿ ಮಾಡಲಿಲ್ಲ. ಬಾಣಗಳಿಂದ ಅರ್ಜುನ ಮಣಿದುಬಾಹೋದಿಲ್ಲೆಂದು, ಅಸ್ತ್ರ ಅಭಿಮಂತ್ರಿಸಿ ಅರ್ಜುನನ ಮ್ಯಾಲೆ ಬಾಣ ಈಡ್ಯಾಡಲಿಕ್ಕೆ, ಅರ್ಜುನ ಮೂರ್ಛಿ ಉಳ್ಳವನಾಗಿ ಬಿದ್ದನು. 'ಪ್ರತ್ಯಕ್ಷ ತಂದೀನ್ನ ಕೊಂದೆ' ಎಂದು, ಗುರುದ್ರೋಹಿಗ ಪ್ರಾಯಶ್ಚಿತ್ತ ದೇಹಾಂತರವೆಂದು ತಿಳದು, ಬಬ್ರುವಾಹನ ಪ್ರಾಯೋಪವೇಶಕ್ಕೆ ಕುಳಿತನು. ಚಿತ್ರಾಂಗದ ಬಹಳ ಪ್ರಲಾಪ ಮಾಡಹೊಕ್ಕಳು. 'ನನ್ನ ಮಗ ಬಬ್ರುವಾಹನ ಉಲೂಪೀ ಮಾತು ಕೇಳಿ ತನ್ನ ತಂದೀನ್ನ ಕೊಂದ, ತಾನೂ ಸಾಯಥಾನೆ. ಎಲೌ ಉಲೂಪೀ ನನ್ನ ಗಂಡ, ಮಗ ಸಾವೋದಕ್ಕೆ ನೀನೇ ಕಾರಣಳು. ನನ್ನ ಮಗ ಮೊದಲಿಗೆ ತಂದೀ ಕೂಡ ಯುದ್ಧ ಮಾಡಿದ್ದಿಲ್ಲ. ಯುದ್ಧ ಮಾಡಸಲಿಕ್ಕೆ ಕಾರಣಳು ನೀನೇ. ನನ್ನ ಮಗ, ಗಂಡ ಸತ್ತಮ್ಯಾಲೆ ನಾ ಬದಕೇನು ಫಲ! ಈ ಮೂರು ಮಂದಿ ಹತ್ಯ ನಿನಗೆ ಬಂತು. ಯುದ್ಧ ಮಾಡೆಂದು ಏನುಕಾರಣ ಹೇಳಬೇಕು.' ಹೀಂಗೆಂದು ಬಹಳ ಕೋಪ ಉಳ್ಳವಳಾಗಿ, ಪಾಂಡ್ಯಧೇಶದ ಅರಸು ವೀರಸೇನರಾಯನ ಮಗಳು ಚಿತ್ರಾಂಗದಾ ಸಿಟ್ಟು ಮಾಡಲಿಕ್ಕೆ, ಉಲೂಪೀ ಸಂಜೀವಕರಣಿ, ಔಷಧ ತರಲಿಕ್ಕೆ ನಾಗಲೋಕಕ್ಕೆ ಹೋಗಿ. ಔಷಧ ತಂದು ಗಂಡಗೆ ಹಚ್ಚಲಿಕ್ಕೆ, ಆಂಬುಗಳು ಕಳಚಿಬಿದ್ದವು. ಅರ್ಜುನ ಎಚ್ಚರ ಉಳ್ಳವನಾಗಿ ಮಾತನಾಡಹೊಕ್ಕ. ಆ ವ್ಯಾಳ್ಯಾದಲ್ಲಿ ಉಲೂಪೀ ಚಿತ್ರಾಂಗದಾ ಕೂಡ ಮಾತನಾಡಿದಳು.

ಉಲೂಪೀ ಚಿತ್ರಾಂಗದಾಗೆ ಹೇಳಿದಳು, "ನನ್ನ ದೂಷಿಸಿ, ಯುದ್ಧ ಏನು ಕಾರಣ ಮಾಡಿಸಿದೀ ಎಂದಿ. ಅದರ ವಿಸ್ತಾರ ನಾ ಹೇಳಥೀನಿ. ನನ್ನ ಮೊದಲ ಗಂಡ ಸತ್ತ ಮ್ಯಾಲೆ ಇರಾವಂತನ್ನ, ಅರ್ಜುನನ ದೆಸಿಯಿಂದ ಹಡಿಯಲಿಕ್ಕೆ, ವ್ಯಭಿಚಾರ ಮಾಡಿ, ಪರಪುರುಷನಲ್ಲಿ ಮಲಗಿ ಮಗನ ಹಡದೆನೆಂದು, ನನಗೂ ನನ್ನ ಮಗ ಇರಾವಂತಗೂ ಹೊರಗೆ ಹಾಕಿದರು. ಮಗನ ಕೂಡಿಕೊಂಡು ಸ್ವರ್ಗಕ್ಕೆ ಹೋದೆ. ಅಲ್ಲಿ ಒಪುಕಾಲ ಇರಲಿಕ್ಕೆ, ಕುರುಪಾಂಡವರಿಗೆ ಯುದ್ಧ ಆರಂಭವಾಯಿತು. ಇರಾವಂತ ರಣರಂಗಕ್ಕೆ ಬಂದು ಸತ್ತುಹೋದ. ನಾ ಸ್ವರ್ಗದಲ್ಲಿರಲಿಕ್ಕೆ, ನನ್ನ ಗಂಡ ಅರ್ಜುನನ ದೂಷಿಸಿದರು. 'ಭೀಷ್ಮ, ದ್ರೋಣ, ಕರ್ಣ ಮೊದಲಾದವರನ್ನೆಲ್ಲ ನ್ಯಾಯದಿಂದ ಕೊಲ್ಲಲಿಲ್ಲ, ಕಪಟತನದಿಂದ ಕೊಂದರು. ಅರ್ಜುನ ಪರ ವೀರರ ಕೈಯ್ಯ ಸೋಲಲಿ.' ಹೀಂಗಂತ ದೇವೇಂದ್ರನ ಸಭಿಯಲ್ಲಿ ದೇವತಿಗಳೆಲ್ಲ ಮಾತನಾಡಲಿಕ್ಕೆ, ಅವರ ಕೂಡ ಮಾತನಾಡಿದೆ. ದೇವತಿಗಳಿಗೆ ಕೇಳಿದರೆ ಅಧರ್ಮವಲ್ಲ. ನೀವೆಲ್ಲ ಹ್ಯಾಂಗೆ ಅಧರ್ಮವೆಂತಿದೀರಿ? ಎಂದು ಕೇಳಲಾಗಿ, 'ಭೀಷ್ಮ, ದ್ರೋಣ, ಕರ್ಣರನ್ನ ತಾ ಕೊಂದನೆಂದು ಅರ್ಜುನ ಅಹಂಕಾರ ಉಳ್ಳವನಾಗ್ಯಾನೆ. ಆದಕಾರಣ, ರಣರಂಗದಲ್ಲಿ ಅರ್ಜುನಗೆ ವ್ಯಥಿ ಆಗಲೆಂದು ಅಂಥೀವಿ.' ಹೀಂಗಂತ ದೇವತಿಗಳು ಅಡಲಾಗಿ, ನಾ ಬೇಡಿಕೊಂಡೆ. ನಿಮ್ಮ ಮಾತು ಸುಳ್ಳಾಗದು. ನನ್ನ ಗಂಡ ಅರ್ಜುನ ಲೋಕೈಕವೀರ, ಪರರ ಕೈಯ ವ್ಯಥಿ ಆದರೆ ಕೀರ್ತಿ ಕೆಟ್ಟೀತು. ಮಗನ ಕೈಯಿಂದ ಸೋತರೆ ಕೀರ್ತಿ ಕೆಡದು. ಅರ್ಜುನ ತನ್ನ ಮಗನ ಕೈಯಿಂದ ಸೋಲೋಹಾಂಗಾಗಲೆಂದು ದೇವತಿಗಳನ್ನ ಬೇಡಿಕೊಂಡಿದ್ದೆ. ಕಾಲ ಪ್ರಾಪ್ತವಾಯಿತು. ಆದಕಾರಣ ಬಬ್ರುವಾಹನನ ಪ್ರೇರಿಸಿ ಯುದ್ಧ ಮಾಡಿಸಿದೆ. ದೇವತಿಗಳ ವಚನ ಸತ್ಯವಾಯಿತು. ಅರ್ಜುನಗೆ ಪರವೀರರ ಕೈಯ ಸೋಲೋಣವಾಗಲಿಲ್ಲ. ಮಗನ ಕೈಲಿ ಸೋತರೆ ಕೀರ್ತಿ ಕೆಡೋದಿಲ್ಲ." ಹೀಂಗೆಂದು ಉಲೂಪೀ ಚಿತ್ರಾಂಗದಾಗೆ ಅನ್ನಲಿಕ್ಕೆ, ಅರ್ಜುನ ಬಹಳ ಪ್ರೀತನಾದ. 'ಎಲೌ ಉಲೂಪೀ, ನೀ ಸ್ವರ್ಗದಲ್ಲಿ ಇದ್ದದ್ದಕ್ಕೆ ನನ್ನ ಕೀರ್ತಿ ಕೆಡಥಾಂಗೆ ಮಾಡಿದಿ, ಭಲಾ!' ಎಂದು ತನ್ನ ಹೆಂಡತಿ ನಾಗಕನ್ನಿಕೆಯಾದ ಉಲೂಪೀನ್ನ ಹೊಗಳಿ, ಪಾಂಡ್ಯದೇಶದ ಅರಸು, ವೀರಸೇನರಾಯನ ಕೂಡ ಕಪ್ಪಕೊಂಡು, ಯಜ್ಞಕ್ಕೆ ಬರಲಿಕ್ಕೆ ಹೇಳಿ, ಕೆಲವು ರಾಯರಿಂದ ಯುಕ್ತನಾಗಿ ಅರ್ಜುನ ದ್ವಾರಾವತಿಗೆ ಹೋದನು.

ಯಾದವರೆಲ್ಲ ಅರ್ಜುನನ ಕಂಡು, ತಮ್ಮ ಸುಭದ್ರಾ ಕದ್ದುಕೊಂಡು ಹೋಗಿದ್ದ. ತ್ರಿದಂಡಿ ಸನ್ಯಾಸಿ ಆಗಿ ತತ್ಪೂರ್ವದಲ್ಲಿ ಈ ಕಾರ್ಯ ಮಾಡಿದ್ದ. ಈಗ ಅಶ್ವ ತಿರಗಸ್ತ ಬಂದಾನೆ. ಸುಭದ್ರಾ ತಂದುಕೊಟ್ಟು, ತನ್ನ ಕುದರಿ ಕೊಂಡುಹೋದಾನೆಂದು, ಪ್ರದ್ಯುಮ್ನ ಮೊದಲಾದ ಯಾದವರೆಲ್ಲ, ಕುದರಿ ವೈದು ಬಚ್ಚಿಟ್ಟರು. ಪರಾಕ್ರಮ ಮಾಡಿ, ಯುದ್ಧದಿಂದ ಗೆದ್ದು ಕುದರಿ ಒಯ್ಯಲಿ ಎಂದು

ಕುದರಿ ಬಚ್ಚಿಟ್ಟರು. ಅರ್ಜುನ ತಾ ಚಿಕ್ಕವರ ಕೂಡ ಯುದ್ಧ ಮಾಡಬಾರದೆಂದು ಶ್ರೀಕೃಷ್ಣ, ವಸುದೇವರಲ್ಲಿ ಗುರುತ್ವ ಇಟ್ಟು, ತಮ್ಮ ಸೋದರಮಾವ ವಸುದೇವನಲ್ಲಿ ಗುರುತ್ವ ಇಟ್ಟು, ಪ್ರದ್ಯುಮ್ನ ಮೊದಲಾದವರ ಕೂಡ ಯುದ್ಧ ಮಾಡಬಾರದೆಂದು, ಸೋದರಮಾವ ವಸುದೇವನಲ್ಲಿ ಹೋಗಿ, 'ನಿನ್ನ ಮೊಮ್ಮಕ್ಕಳು ನನ್ನ ಮ್ಯಾಲೆ ಅಗ್ಗಳಿಕೆ ಮಾಡ್ಯಾರೆ. ಕುದರಿ ಬಚ್ಚಿಟ್ಟಾರೆ' ಎಂದು ಹೇಳಲಿಕ್ಕೆ, ಮೊಮ್ಮಕ್ಕಳಿಗೆ ಜಬರಿಸಿಕೊಂಡ. 'ನಿಮ್ಮ ತಂದಿ ಶ್ರೀಕೃಷ್ಣ ಈ ವಾರ್ತೆ ಕೇಳಿದರೆ, ಬಂದಮ್ಯಾಲೆ ನಿಮ್ಮನ್ನ ಶಿಕ್ಷಿಸ್ಯಾನು. ಅರ್ಜುನ ಕೃಷ್ಣಗ ಬೇಕಾದವ. ಪಾಂಡವರೆಲ್ಲ ನಮಗೆ ಸಂಬಂಧೀಕರು. ಪಾಂಡವರು ಪರಚಕ್ರರಲ್ಲ. ಕುದರಿ ಸುಮ್ಮನೆ ಬಿಡರಿ' ಎಂದು ಹೇಳಲಿಕ್ಕೆ, ಮುತ್ಯಾನ ಮಾತು ಕೇಳಿ, ಕುದರಿ ತಂದುಕೊಟ್ಟರು. ಅರ್ಜುನ ಕುದರಿ ಕೊಂಡು ಹಸ್ತಿನಾವತೀ ಸಮೀಪಕ್ಕೆ ಬಂದು, ಧರ್ಮರಾಯಗೆ 'ದಿಗ್ವಿಜಯ ಮಾಡಿ ಕುದರಿ ಕೊಂಡುಬಂದೀನಿ' ಎಂದು ಹೇಳಿಕಳುಹಿದ. ಧರ್ಮರಾಯ ಅರ್ಜುನನ ಕಷ್ಟ ನೆನಸಿ. ಕೊಂಡು, ಬಬ್ರುವಾಹನನಲ್ಲಿ ಸೋತದ್ದು, ರಾಜಸೂಯಯಾಗದಲ್ಲಿ ಉತ್ತರಕ್ಕೆ ಹೋಗಿ ಧನ ತಂದದ್ದು, ವನವಾಸದಲ್ಲಿ ತೀರ್ಥಯಾತ್ರಿ ಹೋದದ್ದು, ಐದು ವರುಷ ಸ್ವರ್ಗಕ್ಕೆ ವಿದ್ಯಾ ಕಲಿಯಲಿಕ್ಕೆ ಹೋದದ್ದು ನೆನಸಿ, 'ಇಷ್ಟು ದಿವಸ ಪ್ರವಾಸ ಮಾಡಥಾನೆ. ಅರ್ಜುನ ನನ್ನ ಕಣ್ಣಿಗೆ ಸುಲಕ್ಷಣ ಕಾಣಥಾನೆ. ಏನುಕಾರಣ ಪ್ರವಾಸ ಮಾಡಿದ' ಎಂದು ಕಮಲೇಕ್ಷಣನಾದ ಪರಮಾತ್ಮನ ಕೇಳಲಿಕ್ಕೆ, 'ಕೇಳಯ್ಯ ಧರ್ಮರಾಯಾ, ಅರ್ಜುನನ ಹಿಮ್ಮಡ ದೊಡ್ಡವವೆ. ಅದರಿಂದ ಪ್ರವಾಸ ಮಾಡಥಾನೆ' ಎನ್ನಲಿಕ್ಕೆ, ಮತ್ತೆಲ್ಲಿ ಅರ್ಜುನನ ದುರ್ಲಕ್ಷಣ ಧರ್ಮರಾಯನ ಮುಂದೆ ಹೇಳಾನೋ ಎಂದು ದ್ರೌಪದೀ, ಹೇಳಬಾರದೆಂದು ಕಣ್ಣು ಚಿವಟಿದಳು. ಏನುಕಾರಣ ಹೇಳಬಾರದೆಂದಳು—ಧರ್ಮರಾಯ ಪ್ರಾಜ್ಞಶೀಲ, ಪ್ರಶ್ನಕ್ಕೆ ಬೀಜವಾದರೆ ಕೇಳತಲೇ ಕುಳಿಥಾನು; ಲಕ್ಷಣಗಳು ಅವನಿಗೆ ತಿಳಿಯಗೊಡಬಾರದು ಎಂದು ಹೇಳಬಾರದೆಂದು ಸಂಜ್ಞಾ ಮಾಡಿದಳು. ಈ ಲಕ್ಷಣಗಳು ಶ್ರೀಕೃಷ್ಣ ಬಲ್ಲ, ರುಕ್ಮಿಣೀಸತ್ಯಭಾವೆಯರು ಬಲ್ಲರು, ಭೀಮಸೇನ ಬಲ್ಲ, ದ್ರೌಪದೀ ಬಲ್ಲಳು. ಇವರ ಹೊರ್ತು ದಾರೂ ಅರೇರು. ಲಕ್ಷಣ ದುರ್ಲಕ್ಷಣಗಳು ಮತ್ತೊಬ್ಬರಿಗೆ ತಿಳಿಯಲಿಕ್ಕೆ ಯೋಗ್ಯವಲ್ಲವೆಂದು ಸ್ವಾಮೀ ಚಿತ್ತಾಭಿಪ್ರಾಯ ತಿಳದು ದ್ರೌಪದೀ ಮಾತಾಡಲಿಕ್ಕೆ, ದ್ರೌಪದೀ ಕಣ್ಣು ಚಿವಟಿದ ಪ್ರಯುಕ್ತ, ಸ್ವಾಮಿ ತಿಳದು ಸುಮ್ಮಗಾದ. ಆ ಮಾತು ಆಡತ ಆಡತ ಸುಮ್ಮಗಾಗಿ, 'ಅರ್ಜುನ ಪ್ರದ್ಯುಮ್ನರಿಗೆ ಯುದ್ಧವಾಯಿತೆಂದು ವಾರ್ತೆ ಕೇಳಥೀವಿ' ಎಂತ ಮಾತು ಮುರವಿಗೆ ಹಾಕಿ, ಈ ವಾರ್ತೆ ಹೇಳಿ, 'ಅರ್ಜುನಗೆ ಪ್ರದ್ಯುಮ್ನಗೆ ಯುದ್ಧವಾಗಲಾಗಿ, ವಸುದೇವ ಬಿಡಸಿದನಂತೆ' ಎಂಬ ಈ ಸುದ್ದಿಯಿಂದ ಲಕ್ಷಣಗಳು ಹೇಳೋದು ಮುರವಿಗೆ ಹಾಕಿದ.

ಶ್ರೀಕೃಷ್ಣನು ಲಕ್ಷಣಗಳು ಏನು ಹೇಳತಿದ್ದ'ನೋ ಅದನ್ನ ಲೋಕಕ್ಕೆ ತಿಳುಹ. ಬೇಕಾಗಿ, ಶ್ರೀಮದಾಚಾರ್ಯರು ತಾವು ಹೇಳಥಾರೆ. ಅರ್ಜುನನ ಹೊಟ್ಟ ಹೆಚ್ಚು ಕೊರತಿ ಇಹೋದು. ಒಂದು ಭಾಗ ಹೊಟ್ಟ ಜೋಲುತಿಹೋದು. ಎರಡು ವೃಷಣಗಳೊಳಗೆ ಒಂದು ದೊಡ್ಡದು, ಒಂದು ಚಿಕ್ಕದು. ಎರಡು ತೋಳೂ ಉದ್ದವಿಹೋವು. ಈ ಪ್ರಕಾರ ದುರ್ಲಕ್ಷಣಗಳು ಅರ್ಜುನನಲ್ಲಿದ್ದರೂ, ಪಾಂಚಾಲಿ ವ್ಯಾಲಿನ ಸ್ನೇಹದಿಂದ ಯಾದವಪತಿ-ಧರ್ಮರಾಯಗೆ ಹೇಳಿದ್ದಿಲ್ಲ. ಈ ಪ್ರಕಾರ ದುರ್ಲಕ್ಷಣಗಳು ಇರಥಾವೆ ಆ ದುರ್ಲಕ್ಷಣಗಳಿಂದ ಜ್ಞಾನಾನಂದ ಹ್ರಾಸವಾಗಿ ಹೋಗಥವೆ. ದುರ್ಲಕ್ಷಣಗಳಿಲ್ಲದವರು, ಭೀಮಸೇನ ದ್ರೌಪದೀ. ಮಿಗಿಲಾದ ಜೀವರು ದುರ್ಲಕ್ಷಣಗಳುಳ್ಳವರು. ರುಕ್ಮಿಣೀ, ಸತ್ಯಭಾಮಾ ಅನಾದಿಕಾಲದಿಂದ ದುಃಖರಹಿತರು, ನಿರ್ದೋಷ ಉಳ್ಳವರು. ಲಕ್ಷ್ಮೀದೇವಿ, ಸುಲಕ್ಷಣ ಉಳ್ಳಾಕೆ, ಸರ್ವತಂತ್ರಸ್ವತಂತ್ರ ಮುಖ್ಯ ನಾರಾಯಣ ಸುಲಕ್ಷಣ ಉಳ್ಳಾತ. ಈ ಪ್ರಕಾರ ಲಕ್ಷಣಗಳು ಹೇಳತ ಇನ್ನು ಕಥಾಸಂಗತಿ ಹೇಳಥಾರೆ.

ಕುದರೀ ಸಹವಾಗಿ ಅರ್ಜುನ ಯಜ್ಞಶಾಲಿಗೆ ಬರಲಿಕ್ಕೆ, ಸಮಸ್ತರೂ ಎದರುಗೊಂಡು, ಕರಕೊಂಡು ಹೋಗಿ ಸುಖ ಉಳ್ಳವರಾದರು. ಅಶ್ವಮೇಧಯಜ್ಞ ಯದುವೀರನಿಂದ ರಕ್ಷಿತವಾಗಿಹೋದು. ವೇದವ್ಯಾಸ ಪಾಂಡವರಿಗೆ ಶಿಕ್ಷಿಸತಿಹ. ಪರಶುರಾಮದೇವರು ಬಂದಿಹ. ಮುನಿಗಳು, ದೇತದೇಶದ ಬ್ರಾಹ್ಮಣರು, ದೇಶದೇಶದ ರಾಯರು, ದೇವತಿಗಳೂ ಬಂದಿಹೋರು. ತ್ರಿರೂಪಿ ನಾರಾಯಣರಿಂದ ಯಜ್ಞ ಒಪ್ಪತಿಹೋದು. ವಿಶ್ವ, ತೈಜಸ, ಪ್ರಾಜ್ಞ ಇವರಿಂದ ಜೀವ ಹ್ಯಾಂಗೆ ಇರಥಾನೆ, ವಿಶ್ವ, ತೈಜಸ, ಪ್ರಾಜ್ಞರಿಂದ ಜಗತ್ತು ಹ್ಯಾಂಗೆ ಒಪ್ಪತದೆ, ಹಾಂಗೆ ತ್ರಿರೂಪಿ ನಾರಾಯಣರಿಂದ ಯಜ್ಞ ಒಪ್ಪತಿಹೋದು. ಪೂರ್ವದಲ್ಲಿ ಬ್ರಹ್ಮರಾಯನ ಯಜ್ಞ ಹ್ಯಾಂಗೆ ಶೋಭಸ್ತು, ಹಾಂಗೆ ಧರ್ಮರಾಯನ ಯಜ್ಞ ಶೋಭಸ್ತಿಹೋದು. ಯಜ್ಞ-ಮಂಟಪಕ್ಕೆ ದೇವತಿಗಳು, ಗಂಧರ್ವರು, ಮನುಷ್ಯರು ತಮ್ಮ ಸ್ತ್ರೀಯರಿಂದ ಯುಕ್ತರಾಗಿ ಬಂದಿಹೋರು. ಅಶ್ವಮೇಧಯಜ್ಞದಲ್ಲಿ ಸಮಸ್ತರೂ ಸ್ವರ್ಗಸುಖ ಅನುಭವಿಸತಿಹೋರು. ದಾರದಾರಿಗೆ ತತ್ತ್ವಸಂಶಯವಿತ್ತು ಅದನ್ನೆಲ್ಲ, ತ್ರಿರೂಪಿ ನಾರಾಯಣರು ಪರಿಹರಿಸತಿಹೋರು. ಗಂಧರ್ವರು ಗಾಯನ ಮಾಡತಿಹೋರು. ಅಪ್ಸರಸ್ತ್ರೀಯರು ನೃತ್ಯ ಮಾಡತಿಹೋರು. ಬ್ರಾಹ್ಮಣರು ಧರ್ಮರಾಯಗೆ ಆಶೀರ್ವಾದ ಮಾಡತಿಹೋರು. ದೇವತಿಗಳು ಅಭೀಷ್ಟ ಕರೇತಿಹೋದು. ದೇವತಾಸ್ತ್ರೀಯರು, ವಾಸುದೇವನ, ಸ್ತ್ರೀಯರ ಸಂಗಡ ಬೆರೀತಿಹೋರು. ಹರಿಕಥಾಮೃತಸಾರ ಕೇಳಿ, ಜನರು ಮುಕ್ತಿಸುಖ ಬಯಸತಿದ್ದಿಲ್ಲ. ನಾರಾಯಣನಲ್ಲಿ ಆಸಕ್ತರಾಗಿ ಬಹಳ ಸುಖವುಳ್ಳವರಾಗಿಹೋರು. ಸಮಸ್ತ ಪ್ರಾಣಿಗಳು ಪೂರ್ಣಕಾಮವುಳ್ಳವರಾಗಿಹೋರು. ಭೀಮಸೇನ, ತಾ ಸರ್ವಜ್ಞನಾದಕಾರಣ, ಯಜ್ಞಕ್ಕೆ ಬಂದ ಜನರು ಎಷ್ಟು ಮುಂದಿ ಇದ್ದಾರೆಂದು

ಸಂಖ್ಯೆ ಬಲ್ಲ, ಸಕಲರಿಗೆ ಅನ್ನ ಕೊರತಿ ಮಾಡಲಿಲ್ಲ, ಉಳಸಲಿಲ್ಲ. ಹಾಳತವಾಗಿ ಸಾಮಗ್ರಿ ಹಾಕುವ. ಅನ್ನದ ಪರ್ವತ, ಭಕ್ಷ್ಯದ ರಾಶಿಗಳು ಗುಡ್ಡ ಹಾಕಿಸುವ. ಪರಿಪರಿ ಭಕ್ಷ್ಯ, ಪಾಯಸಗಳು ಮಾಡಿಸಿಹ. ನದೀ ಅಡ್ಡಗಟ್ಟಿದರೆ ಹ್ಯಾಂಗೆ ಮಡವು ನಿಂದರತದೆ, ಹಾಂಗೆ ಇದಕ್ಕೆ ತುಪ್ಪ, ಹಾಲು, ಮೊಸರು, ಜೇನುತುಪ್ಪಗಳು ಮಡವು ಮಡವು ಹಾಕಿಸಿಹ. ಗಂಧದ ಮಡವು, ಕುಂಕುಮಕೇಸರಿ ರಾಶಿ, ಪರಿಮಳ ದ್ರವ್ಯದ ಪೆಠಾರಿಗಳು, ಅನೇಕ ಕಸ್ತೂರಿ ಸಂದಕಗಳು, ಹೆಂಗಸರಿಗೆ ಕಾಡಿಗಿ ಬೇಕಲ್ಲ, ಜಿಟ್ಟಡಷ್ಟು ಮಾಡಿ ಇಟ್ಟಿಹ. ಈ ವಿಶಿಷ್ಟೂ ಜಿನಸುಗಳಿಗೆ ಬಂಗಾರದ ಕೇಸರಿನಿಂದ, ರತ್ನಗಳ ಕಲ್ಲಿನಲ್ಲಿ ಹೊಕ್ಕ ರಾಣಿ ಕಟ್ಟಿಹೋದು. ದಿವ್ಯ ಅಮೃತೋದಕ ಸರೋವರಗಳು, ಹೀಂಗೆ ನಿರಂತರ ಉಪ್ಪಿನಕಾಯಿ, ಕೋಸಂಬರಿ ಮುಂತಾದ್ದು, ಆ ಹೊತ್ತು ಮಾಡಿದ ಸ್ಥಳ ಬಿಟ್ಟು, ಮರುದಿವಸ ನೂತನವಾದ ಸ್ಥಳಗಳಲ್ಲಿ ಮಾಡತಿಹೋರು. ಬ್ರಾಹ್ಮಣರ ಭೋಜನ ಮಾಡಿಸತಿಹೋರು. 'ಇಂಥಾ ಅಶ್ವಮೇಧ ಯಜ್ಞ ದಾರೂ ಮಾಡಿದ್ದಿಲ್ಲ,' ಎಂದು ಬ್ರಾಹ್ಮಣರೆಲ್ಲ ಧರ್ಮರಾಯನ ಪೊಗಳತಿಹೋರು.

ಧರ್ಮರಾಯ ಮಾಡಿದಂಥ ಯಜ್ಞ ಪೂರ್ವದಲ್ಲಿ ದಾರು ಮಾಡಿದ್ದರೆಂದರೆ, ಇದಕ್ಕೆ ದೃಷ್ಟಾಂತ ದಾಶರಥೀರಾಮಚಂದ್ರ ಉತ್ತಮ ದೃಷ್ಟಾಂತ, ಬ್ರಹ್ಮರಾಯ ಮಧ್ಯಮ ದೃಷ್ಟಾಂತ, ದೇವೇಂದ್ರ ನೀಚ ದೃಷ್ಟಾಂತ, ಈ ಮೂರು ಮುಂದಿ ಹೊರ್ತು ದಾರೂ ಮಾಡಿದ್ದಿಲ್ಲ. ಹೀಂಗೆ ನಿರಂತರ ಏಕಪ್ರಕಾರ ಹದಿನೈದು ವರುಷ ಮಾಡಿದರು, ಐದು ಮುಂದಿ ಯಜಮಾನರು, ತ್ರಿಗುಣಾತ್ಮಕ ದಕ್ಷಿಣೆ ಕೊಟ್ಟರು. ಒಂದೊಂದು ದಿವಸಕ್ಕೆ ಹೆಚ್ಚೆಚ್ಚು ಸಮಾರಂಭ ಮಾಡತಿಹೋರು. ಯಜ್ಞ ಮುಗಿಸಿದ ಮ್ಯಾಲೆ ಪಾಂಡವರು ಸರ್ವಸಾಮ್ರಾಜ್ಯ ಬ್ರಾಹ್ಮಣರಿಗೆ ಕೊಟ್ಟರು. ದ್ರೌಪದೀ ಮುಂಗಳಸೂತ್ರದ ಹೊರ್ತು ತನ್ನ ಆಭರಣಗಳು ವಸ್ತ್ರಗಳು ದಿವ್ಯವಾದಂಥಾವು ಯಾವತ್ತೂ ತೆಗೆದು, ವೇದವ್ಯಾಸನ ಮುಂದೆ ಇಟ್ಟಳು. 'ಎಲ್ಲೆ ದೇವ ಋತ್ವಿಕರ ಯೋಗ್ಯತಿ ನೋಡಿ, ಈ ಆಭರಣ ವಸ್ತ್ರಗಳು ವಿಭಾಗ ಮಾಡಿ ಕೊಡು' ಎಂದು, ತಮ್ಮ ಪಿತಾಮಹನಾದ ವೇದವ್ಯಾಸನ ಮುಂದೆ ಇಟ್ಟಳು. ಹಾಂಗೇ ಪಾಂಡವರು, ಸರ್ವಸ್ವವನ್ನೂ, ಛತ್ರ, ಚಾಮರ ಮೊದಲಾದವುಗಳನ್ನೂ, ಕೃಷ್ಣಾರ್ಪಣಬುದ್ಧಿಯಿಂದ ಕೊಟ್ಟರು. 'ಸ್ವಾಮೀ, ನಾವು ಕೊಡಲಿಕ್ಕೆ ಸ್ವತಂತ್ರರಲ್ಲ. ಮನು ದೇಹೇಂದ್ರಿಯ ಪ್ರಾಣಃ ಮನಶ್ಚಿಂತಪೂರ್ವಕಮ್। ಹರಿಣಾ ಪ್ರೇರಿತಾಃ ಸರ್ವೇ ಹರಿಯೇತ್ಸಮರ್ಪಯೇತ್॥ ನಾವು ಕೊಡಲಿಕ್ಕೆ ಎಷ್ಟರವರು! ಸರ್ವಸ್ವವೂ ನಿನ್ನದು. ನೀ ಕೊಟ್ಟಂಥಾದ್ದು ನಿನಗೆ ಸಮರ್ಪಿಸಿದ್ದೀವಿ.' ಹೀಂಗೆಂದು ಸಕಲ ಸಾಮ್ರಾಜ್ಯ ಬ್ರಾಹ್ಮಣರಿಗೆ ಅರ್ಪಿಸಿ, ನಮಸ್ಕಾರ ಮಾಡಲಿಕ್ಕೆ, ಬ್ರಾಹ್ಮಣರೆಲ್ಲ ವೇದವ್ಯಾಸರಿಗೆ ಅನಹೊಕ್ಕರು. 'ನಾವು ಮುನಿಗಳು ರಾಜ್ಯ ಆಳಲಾಪವೆ! ಈ

ಭಾರಿ ರಾಜ್ಯ, ದ್ರವ್ಯ, ಏನೂ ಇದ್ದದ್ದು ನಾವು ತೆಗೆದುಕೊಂಡು, ಬರೇ ರಾಜ್ಯ ಪಾಂಡವರಿಗೆ ಕೊಡಬೇಕು. ಭೂಮಿ ಪಾಲಿಸೋದು ನಮ್ಮಿಂದ ಆಗದು.' ಹೀಂಗೆನಲಿಕ್ಕೆ, 'ಎಲ್ಲೈ ದ್ವಿಜರ್ಯಾ, ನಾವು ನಿಮಗೆ ಸಕಲ ಸಾಮ್ರಾಜ್ಯ ಅರ್ಪಿಸಿರ ಲಿಕ್ಕೆ, ರಾಜ್ಯ ತಿರಗಿ ಕೊಂಡರೆ, ದತ್ತಾಪಹಾರದ ಪಾಪ ಬರತದೆ. ಇನ್ನು ರಾಜ್ಯ ಆಳೋದಿಲ್ಲ. ಸಮಗ್ರ ಭೂಮಿ, ನೀವು ಆಳರಿ. ನಾವು ವಾನಪ್ರಸ್ಥಾಶ್ರಮಕ್ಕೆ ಹೋದೇವು.' ಹೀಂಗೆ ಪಾಂಡವರು ವೇದವ್ಯಾಸನ ಬೇಡಿಕೋತಿಹೋರು. ಮುನಿ ಗಳೆಲ್ಲ ವೇದವ್ಯಾಸನ ಪ್ರಾರ್ಥಿಸತಿಹೋರು. 'ಸ್ವಾಮೀ, ಈ ಭೂಮಿ ಆಳೋಣ ನಮ್ಮಿಂದಾಗದು, ಪಾಂಡವರಿಗೇ 'ಕೊಡು' ಎಂದು ಹೇಳತಿಹೋರು. ಅವರು ಒಲ್ಲೆವೆನತಿಹೋರು. ಆಗ ವ್ಯಾಸರೂಪಿ ನಾರಾಯಣ ಪಾಂಡವರ ಕೂಡ ಮಾತ-ನಾಡಿದ. 'ನೀವು ಕ್ಷತ್ರಿಯರು, ಬಲ ವೀರ್ಯವುಳ್ಳವರು. ಬ್ರಾಹ್ಮಣರ ಕೈಯ, ಸಮುದ್ರವೇ ಒಡ್ಯಾಣವಾಗಿ ಉಳ್ಳ ಭೂಮಿ ಪಾಲಿಸೋಣ ಆಗದು. ನಿಮಗೆ ತಿರಗಿ ಕೊಡಥೀವಿ, ಎಂಥಾರೆ. ನಿಮಗೆ ದತ್ತಾಪಹಾರದ ದೋಷ ಬರೋದಿಲ್ಲ. ನನ್ನ ಆಜ್ಞೆ ಆದೆ. ಅವಶ್ಯ ರಾಜ್ಯ ಆಳಿ, ಪ್ರತಿವರುಷ ಬಂದ ದ್ರವ್ಯ ಬ್ರಾಹ್ಮಣರಿಗೆ ಕೊಡತಾ ಬನ್ನಿ. ನಾನು ನಿಮಗೆ ಪಿತಾಮಹ, ನಿಮ್ಮ ವ್ಯಾಲಿನ ಮುಮುತಿಯಿಂದ ರಾಜ್ಯ ಕೊಡಥೀನಿ. ನಿಮಗೆ ಪಾಪ ಬಾರದು. ಮನಸ್ಸಿನಲ್ಲಿ ಸಂಶಯ ಮಾಡದೆ ಆಳಿರಿ' ಎನಲು, ವೇದವ್ಯಾಸರ ಆಜ್ಞೆಯಿಂದ, ರಾಜ್ಯ ತೆಗೆದುಕೊಂಡು, ಪಾಂಡವರು, ಭಂಡಾರದಲ್ಲಿದ್ದ ದ್ರವ್ಯ ಯಜ್ಞದಗೋಸ್ಕರ ತಂದ ಹಣ, ಅರಸರುಗಳಿಂದ ಕಪ್ಪ ತಂದ ಹೊನ್ನು, ವೇದವ್ಯಾಸನ ಮುಖದಿಂದ ಭೂಸುರರಿಗೆ ವೆಚ್ಚಿಸಿದರು. ವೇದ-ವ್ಯಾಸದೇವರು ಸರ್ವವೂ ದ್ವಿಜರಿಗೆ ವಿಭಾಗ ಮಾಡಿಕೊಟ್ಟು, ತನ್ನ ಪಾಲಿನ ದ್ರವ್ಯ ತನ್ನ ಸೊಸಿ ಕುಂತೀಗೆ ಕೊಟ್ಟನು. ತನ್ನ ಮಗನ ಹೆಂಡತಿ, ದಾನ ಧರ್ಮ ಮಾಡಿ-ಕೊಂಡಿರಲಿ ಎಂದು ಕೊಟ್ಟನು. ಪಾಂಡವರು, ದ್ರೌಪದೀ ಮೊದಲಾದ ಸ್ತ್ರೀಯರು, ಆಲಂಕಾರ, ಆಭರಣ ವಸ್ತ್ರ ರಹಿತರಾಗಿ ಸರ್ವಸ್ವವೂ ಕೊಟ್ಟರೂ ಹೀಂಗಿರಬಾರದು ಎಂದು, ವೇದವ್ಯಾಸದೇವರು ಅವರಿಗೆಲ್ಲ ಆಲಂಕಾರ ಆಭರಣ ವಸ್ತ್ರಗಳು ಕೊಟ್ಟನು. ಸ್ವಾಮೀ ಆಜ್ಞೆ ಮೀರಬಾರದೆಂದು, ವೇದವ್ಯಾಸ ತಿರಗಿ ಕೊಟ್ಟಂಥ ದಿವ್ಯ ವಸ್ತ್ರ-ಭರಣ ತೆಗೆದುಕೊಂಡರು. ಮುತ್ಯಾ ಕೊಟ್ಟದ್ದು ಮೊಮ್ಮಕ್ಕಳಿಗೆ ದತ್ತಾಪಹಾರವಲ್ಲ ಎಂದು ತೆಗೆದುಕೊಂಡರು.

ಒಂದು ಅಶ್ವಮೇಧಯಜ್ಞ ಐದು ಯಜ್ಞ ಅನಸ್ತದೆ. ತ್ರಿಗುಣಾತ್ಮಕ ದಕ್ಷಿಣೆ ಯಿಂದ, ಹದಿನೈದು ಅಶ್ವಮೇಧಯಜ್ಞ ಅನಿಸಿತು. ಈ ಪ್ರಕಾರ ಯಜ್ಞ ಮುಗದ-ಮ್ಯಾಲೆ, ಅವಭೃತಸ್ನಾನ ಮಾಡಿ, ಎಲ್ಲರೂ ಸಭೆಯಲ್ಲಿ ಕುಳಿತರು. ಪಾಂಡವರು ಐದು ಮಂದಿ ಚಂದ್ರರಪ್ಪಂದೆ ಒಪ್ಪತಿಹೋರು. ಅಶ್ವಮೇಧಯಜ್ಞದ ಮಹಿಮಿ ಹೊಗಳತಿಹೋರು. 'ಭಲಾ ಧರ್ಮರಾಯಾ! ಬಹಳ ಅಪೂರ್ವ ಯಜ್ಞ ಮಾಡಿದಿ'

ಎಂದು ಸರ್ವರೂ ಹೊಗಳತ ಕುಳಿತಿರಲಿಕ್ಕೆ ಪಾಂಡವರ ಸಭಿಗೆ ಕ್ರೋಧನಾವಕ ದೈತ್ಯ ಮುಂಗಲಿ ವೇಷ ಧರಿಸಿ ದೊಡ್ಡ ಗರ್ಜನಿ ಮಾಡತ, ಯಜ್ಞ ಮಾಡಿದವರಿಗೆ, ಮಾಡಿಸಿದವರಿಗೆ ನಿಂದಸ್ತ, ದೂಷಸ್ತ ಬಂದನು. ಸಕ್ತುಪ್ರಸ್ಥ ಬ್ರಾಹ್ಮಣನ ಹೊಗಳತ, ಪಾಂಡವರ ಯಜ್ಞ ದೂಷಸ್ತ ಬರಲಿಕ್ಕೆ, ಸಭಾಪತಿಗಳೆಲ್ಲ ಕೇಳಿ, ಆ ಬ್ರಾಹ್ಮಣನ ಮಹಿಮಿ ಏನೆಂದು ಕೇಳಲು, 'ಈ ಸಕ್ತುಪ್ರಸ್ಥ ಬ್ರಾಹ್ಮಣ, ತನ್ನ ಹೆಂಡತಿ, ಮಗ, ಸೊಸಿ, ಹೀಂಗೆ ನಾಲ್ವರು ಶಿಲೋಂಚನ ವೃತ್ತಿಯಿಂದ ಗ್ರಾಸ ಮಾಡಿಕೊಂಡಿರಲಿಕ್ಕೆ, ಯಮಧರ್ಮ ಬ್ರಾಹ್ಮಣನ ವೇಷ ಧರಿಸಿ ಬಂದು ಗ್ರಾಸ ಬೇಡಲಾಗಿ, ತನ್ನ ನಾಲ್ವರ ಭಾಗ ಬ್ರಾಹ್ಮಣಗೆ ಕೊಟ್ಟನು. ಬ್ರಾಹ್ಮಣ ಏನು ಅನ್ನದಾನ ಮಾಡ್ಯಾನೆ ಅದರ ಹದಿನಾರನೇ ಭಾಗ ಈ ಯಜ್ಞ ಹೋಲದು.' ಹೀಂಗಂತ ಹೊಗಳಿಲಿಕ್ಕೆ, 'ಎಲೋ ನಿನಗೇನು ಪ್ರಾಪ್ತಿ ಬಂದದೆ ಹೇಳು' ಎನಲಿಕ್ಕೆ, 'ಸಕ್ತುಪ್ರಸ್ಥ ಬ್ರಾಹ್ಮಣ ಆ ಅತಿಥಿಗೆ ಪಾದಪ್ರಕ್ಷಾಳನಿ ಮಾಡಿದ. ಭೂಮ್ಯಾಮ್ಯಾಲೆ ಸ್ವಲ್ಪ ಪಾದೋದಕ ನಿಂತಿರಲಿಕ್ಕೆ, ಆ ಪಾದೋದಕದಲ್ಲಿ ನಾ ಹೊರಳಲಾಗಿ, ನನ್ನ ದೇಹ ಅರ್ಧ ಬಂಗಾರ ದ್ಹಾಯಿತು. ಪೂರ್ಣದೇಹ, ಸುವರ್ಣದ್ದು ಆಗಬೇಕೆಂದು ನಾ ತೀರ್ಥಯಾತ್ರಿ ತಿರಗಿದೆ. ಅದಕ್ಕೆ, ಈ ಯಜ್ಞದಲ್ಲಿ ತ್ರಿರೂಪಿ ನಾರಾಯಣರು ಇದ್ದಾರೆ. ನನ್ನ ದೇಹ ಸುವರ್ಣದ್ದು ಮಾಡಿದರೆ, ಈ ಯಜ್ಞ ದೂಷಿಸದೆ ಬಿಟ್ಟೀನು.' ಹೀಂಗನಲಿಕ್ಕೆ, ವಿಪ್ರೌಘ, 'ಇವನ ದೇಹ ಸುವರ್ಣವಾಗಬಾರದು. ಈ ಯಜ್ಞಕ್ಕೆ ದೂಷಿಸಿದ-ಮ್ಯಾಲೆ ತಮುಸ್ಸಿಗೆ ಹೋಗಿ ಬೀಳಬೇಕು' ಎಂದು ಮುಂಗುಲೀವೇಷ ಧರಿಸಿ ಬಂದವಗೆ ನಕ್ಕು ಕ್ರೋಧಿಸಲು, ಕಣ್ಣಿಗೆ ಕಾಣಧಾಂಗೆ ಬೆಂವಟಾಗಿಹೋದನು. ಕಾಲಾಂತರದಲ್ಲಿ ತಮುಸ್ಸಿಗೆ ಹೋಗಿ ಬಿದ್ದಾನು. ಕ್ರೋಧನೆಂಬ ದೈತ್ಯ ಮುಂಗಲಿ ಆಗಲಿಕ್ಕೆ ಕಾರಣವೇನೆಂದರೆ, ಜಮುದಗ್ನಿ ಋಷಿಯಲ್ಲಿ ಶ್ರಾದ್ಧ ಬಂತು. ದೈತ್ಯರೂಪ ದಿಂದ ಹೋದರೆ ಕೊಂದಾನೆಂದು, ಮುಂಗಲೀರೂಪ ಧರಿಸಿ ಹೋಗಿ ಹಾಲು ಕುಡಿದನು. ಅದೇ ಹಾಲು ಪರಮಾನ್ನಕ್ಕೆ ಹಾಕಿದರು. ಉಚ್ಚಿಷ್ಟ ಪರಮಾನ್ನ ಪಿತೃಗಳು ಕೊಳ್ಳಲಿಲ್ಲ ಪಿತೃಗಳೆಲ್ಲ ದೈತ್ಯಗೆ ಶಾಪ ಕೊಟ್ಟರು. ಕಡಿಗೆ ಮುಂಗಲೀ-ರೂಪದಲ್ಲಿದ್ದು, ಪಾಂಡವರ ನಿಂದಾ ಮಾಡಿ, ಕಟ್ಟಕಡೀಲಿ ತಮುಸ್ಸಿಗೆ ಹೋಗಿ ಬೀಳೆಂದು ಶಾಪ ಕೊಟ್ಟರು.

ಸಕ್ತುಪ್ರಸ್ಥ ಬ್ರಾಹ್ಮಣ ಸರ್ವಸ್ವವೂ ದಾನ ಕೊಟ್ಟ. ದೊಡ್ಡವನ್ಯಾಕೆ ಆಗ-ಬಾರದು ಎಂದಲ್ಲಿ, ಪಾಂಡವರು ದೇವಾಂಶರು, ಪಾಂಡವರ ಸದೃಶ ಯಜಮಾನರು ದಾರಿದ್ದಾರೆ! ತ್ರಿರೂಪಿ ನಾರಾಯಣರು ಈ ಯಜ್ಞದಲ್ಲಿದ್ದಾರೆ. ಈ ವಿಶ್ವಮೇಧ-ಯಜ್ಞ ಸಕಲ ಯಜ್ಞದೊಳಗೆ ಅರಸು. ಸಕಲ ಜೀವರೊಳಗೆ ಭೀಮಸೇನ ದೊಡ್ಡಾತ. ಪರದೇವತಿ ಯಜ್ಞ ಮಾಡಿಸಿದ್ದಾನೆ. ಈ ಯಜ್ಞಸದೃಶ ದಾವದಿಲ್ಲ. ವೈಷ್ಣವ ಶೂದ್ರ ನೋಡಲಿಕ್ಕೆ, ವೈಷ್ಣವವೈಶ್ಯ ದೊಡ್ಡಾತ. ವೈಷ್ಣವವೈಶ್ಯ ನೋಡಲಿಕ್ಕೆ

ವೈಷ್ಣವಕ್ಷತ್ರಿಯ ದೊಡ್ಡಾತ. ವೈಷ್ಣವಕ್ಷತ್ರಿಯ ನೋಡಲಿಕ್ಕೆ ವೈಷ್ಣವಬ್ರಾಹ್ಮಣ ದೊಡ್ಡವ. ಹೀಂಗೆ ಮನುಷ್ಯೋತ್ತಮರ ನೋಡಲಿಕ್ಕೆ, ಮನುಷ್ಯಗಂಧರ್ವರು ದೊಡ್ಡವರು ಮನುಷ್ಯಗಂಧರ್ವರ ನೋಡಲಿಕ್ಕೆ ದೇವಗಂಧರ್ವರು ದೊಡ್ಡವರು. ದೇವಗಂಧರ್ವರ ನೋಡಲಿಕ್ಕೆ ಪಿತೃಗಳು, ಪಿತೃಗಳ ನೋಡಲಿಕ್ಕೆ ಮುನಿಗಳು, ಇವರ ನೋಡಲಿಕ್ಕೆ ದೇವತಿಗಳು, ದೇವತಿಗಳಲ್ಲಿ ದೇವೇಂದ್ರ ದೊಡ್ಡಾತ, ದೇವೇಂದ್ರನ ನೋಡಲಿಕ್ಕೆ ಶಿವ, ಶಿವನ ನೋಡಲಿಕ್ಕೆ ವಾಯು, ವಾಯು ನೋಡಲಿಕ್ಕೆ ಬ್ರಹ್ಮ ದೊಡ್ಡಾತ. ಹೀಂಗೆ ಶತತ್ರಯ ತಿಳೀಬೇಕು. ಭಾವಿಬ್ರಹ್ಮ ಭೀಮಸೇನ ಯಜ್ಞ ಮಾಡಿದ್ದಾನೆ. ಭೀಮಸೇನನ ಸದೃಶ ಯಜಮಾನ ದಾರೂ ಇಲ್ಲ. ಮುಂಗಲೀ ಸಾಯಲಿಕ್ಕೆ, 'ಸುವರ್ಣದೇಹ ಏನುಕಾರಣ ಆಗಲಿಲ್ಲ' ಎಂದು ಧರ್ಮರಾಯ ಸಂಶಯಜ್ಞಾನ ಉಳ್ಳವನಾದ. ತ್ರಿರೂಪಿ ನಾರಾಯಣರು 'ಮುಂಗಲಿ, ದೈತ್ಯನು' ಎಂದು ವಿವೇಕಿಸಿ ಹೇಳಿ, ಸಂಶಯಜ್ಞಾನ ಪರಿಹರಿಸಿದರು ಎಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ, 'ಶ್ರೀಕೃಷ್ಣಚರಿತೇ ಅಶ್ವಮೇಧಿಕನಿರ್ಣಯಃ' ಎಂಬಂಥ ಮೂವತ್ತನೇ ಅಧ್ಯಾಯ ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೩೧

ಶ್ರೀಕೃಷ್ಣಚರಿತೇ ಧೃತರಾಷ್ಟ್ರ ಸ್ವರ್ಗಾರೋಹಣಃ

ಈ ಮೂವತ್ತೊಂದನೇ ಅಧ್ಯಾಯದಲ್ಲಿ — ಧೃತರಾಷ್ಟ್ರರಾಯ ಋಷಿಯಪ್ಪಂದೆ ವೈರಾಗ್ಯ ಉಳ್ಳವನಾಗಿ, ವಾನಪ್ರಸ್ಥಾಶ್ರಮಕ್ಕೆ ವನಕ್ಕೆ ಹೋಗಿದ್ದಾನೆ. ಪಾಂಡವರು ಅಶ್ವಮೇಧಯಜ್ಞ ಮಾಡಿ ಸಕಲ ಸಾಮ್ರಾಜ್ಯ ವೈಭೋಗ ಭೋಗಿಸತ ಇಹೋರು. ಹೀಂಗೆ ಸರ್ವ ಸಾಮ್ರಾಜ್ಯ ಧರ್ಮರಾಯ ಆಳಲಿಕ್ಕೆ, ಅರ್ಧರಾತ್ರೀಲಿ ಒಬ್ಬ ಬ್ರಾಹ್ಮಣ, ನಾ ಯಜ್ಞ ಮಾಡಥೀನಿ, ಯಜ್ಞಕ್ಕೆ ದ್ರವ್ಯ ಕೊಡೆಂದು, ಧರ್ಮರಾಯನ ಬೇಡಲಾಗಿ, 'ಅರ್ಧರಾತ್ರೀಲಿ ದಾನಕಾಲವಲ್ಲ, ಭಂಡಾರದ ಮನೀ ಒಳಗೆ ಬೀಗಮುದ್ರಿಗಳು ಹಾಕವೆ. ನಾಳೆ ಬೆಳಿಗ್ಗೆ ಬಾ. ಎಷ್ಟು ದ್ರವ್ಯ ಬೇಕೋ ಅಷ್ಟೂ ಹೊರಸಿಕೊಟ್ಟೀನು.' ಹೀಂಗಂತ ಧರ್ಮರಾಯ ಅನಲಿಕ್ಕೆ, 'ಅರಸಿನ ಹತ್ತಿರ ಹೆಚ್ಚು ಮಾತನಾಡಲಿಕ್ಕೆ ಕೂಡದು, ದಂಡಿಸಲಿಕ್ಕೆ ಬಾರದು' ಎಂದು, ಪ್ರಧಾನಿ ಭೀಮಸೇನನ ಸಮೀಪಕ್ಕೆ ಹೋಗಿ ಯಜ್ಞ ಮಾಡಲಿಕ್ಕೆ ದ್ರವ್ಯ ಬೇಡಲಿಕ್ಕೆ, 'ನವ್ಮ ಯಜಮಾನನ ಸಮೀಪಕ್ಕೆ ಹೋಗಿದ್ಯಾ?' ಎಂದು ಕೇಳಲಿಕ್ಕೆ, 'ರಾಯನ ಸಮೀಪಕ್ಕೆ ಹೋಗಿದ್ದೆ. ನಾಳೆ ಕೊಟ್ಟೀನೆಂಥಾನೆ.' ಹೀಂಗಂತ ಬ್ರಾಹ್ಮಣನ ಮುಖದಿಂದ ವಚನ ಕೇಳಿ, ತನ್ನ ಅಮೌಲಿಕ ಹಸ್ತಕಡಗವನ್ನು ಇತ್ತ. ಆ ಹಸ್ತಕಡಗದಿಂದ ಅಪಾರ ದ್ರವ್ಯ ಬಾಹೋದು, ಅಂಥಾದ್ದು ಕೊಟ್ಟು, 'ಹೋಗಿಬಾ' ಎಂದು ದ್ವಿಜನ್ನ ಕಳುಹಿಸಿಕೊಟ್ಟ. ತರುವಾಯ ಭೀಮಸೇನ ಬಹಳ ಸಂತೋಷವುಳ್ಳವನಾಗಿ, ನವ್ಮ ರಾಯ ನಿಶ್ಚಯ ಆಯುಷ್ಯವುಳ್ಳವನೆಂದು ತಿಳಕೊಂಡಾನೆಂದು, ಸಂತೋಷದಿಂದ ಭೇರಿ ಬಾರಿಸಲಿಕ್ಕೆ, ಅರ್ಧರಾತ್ರೀಲಿ ಅಪ್ಪಣೆ ಕೊಟ್ಟ. ಧರ್ಮರಾಯ ಆಶ್ಚರ್ಯವುಳ್ಳವನಾಗಿ, 'ಏನು ಸುವಾರ್ತೆ ಬಂತು, ಒಮ್ಮಿಂದೊಮ್ಮಿಗೆ ಭೇರಿ ಬಾರಿಸಲಿಕ್ಕೆ ಕಾರಣವೇನು ತಿಳದು ಬನ್ನಿ' ಎಂದು ರಾಯ ಭೀಮಸೇನನ ಸಮೀಪಕ್ಕೆ ದೂತರ ಕಳುಹಿಸಿದ. ದೂತರು ಬಂದು ಕೇಳಿದರು. 'ಅಕಾಲದಲ್ಲಿ ಸಂತೋಷಭೇರಿ ಬಾರಿಸಲಿಕ್ಕೆ ಕಾರಣವೇನೆಂದು ರಾಯ ಕೇಳಕಳಿಸ್ಯಾನೆ' ಎಂದಲ್ಲಿ, 'ನವ್ಮ ರಾಯ ನಿಶ್ಚಿತ ಆಯುಷ್ಯ ಉಳ್ಳವನಾಗಿಹಾನೆಂದು ಸಂತೋಷ ಹೊರಜೆಲ್ಲಿ, ಭೇರಿ ಬಾರಿಸಲಿಕ್ಕೆ, ಅಪ್ಪಣೆ ಕೊಟ್ಟೀನಿ.' ಹೀಂಗೆಂದು ಭೀಮಸೇನ ಆಡಲಿಕ್ಕೆ, ದೂತರು ಹೋಗಿ, ಧರ್ಮರಾಯಗೆ ವಾರ್ತೆ ಮುಟ್ಟಿಸಿದರು. ರಾಯ ಬಹಳ ಪಶ್ಚಾತ್ತಾಪ ಉಳ್ಳವನಾಗಿ, 'ಆಯುಷ್ಯ ನಿಶ್ಚಯಿಸಲಿಕ್ಕೆ ಶಕ್ಯವಲ್ಲ, ಧರ್ಮಕ್ಕೆ ತ್ವರಿತ ಇರಬೇಕು. ಭೀಮಸೇನ ಒಳಿಥಾಂಗೆ ಶಿಕ್ಷಸ್ಥಾನೆ' ಎಂದು, 'ಸಾಧು! ಸಾಧು! ಭೀಮಸೇನ' ಎಂದು ತನ್ನ ತಮ್ಮಗೆ ಹೊಗಳಿದನು. ರಾಯ

ಧರ್ಮದಲ್ಲಿ ತ್ವರಿತ ಉಳ್ಳವನಾದ. ಅರ್ಧರಾತ್ರೀಲಿ ಬರಲೀ, ದಾವಾಗೇ ಬ್ರಾಹ್ಮಣ ಬಂದಾನು, ಆಗ ಧರ್ಮಕ್ಕೆ ವಿಮುಖನಾಗಲಿಲ್ಲ. ಬಂದಂಥ ಬ್ರಾಹ್ಮಣರಿಗೆ ದ್ರವ್ಯ ಕೊಡತಿಹ.

ಹೀಂಗೆ ಧರ್ಮರಾಯ ಇರಲಿಕ್ಕೆ, ಧೃತರಾಷ್ಟ್ರ ಪುತ್ರಶೋಕದಿಂದ ಬಹಳ ದುಃಖ ಬಡಥಾನೆ. ದುಃಖ ಶಾಂತಿ ಆಗಬೇಕೆಂದು ಸಮುಸ್ತರೂ ಗತಲೋಚನನ ಸೇವಿ ಮಾಡತಿಹೋರು. ಭೋಗದ್ರವ್ಯ ಏನು ಬೇಕು, ಏನು ಬೇಡಿದ್ದೂ ತಂದು-ಕೊಡೋರು. ಈ ವಿಷಯಭೋಗದಿಂದ ಮಕ್ಕಳು ಸತ್ತ ದುಃಖ ಮುರತುಬಿಟ್ಟ. ವಿಷಯದಲ್ಲಿ ಆಸಕ್ತನಾದ. ಭೀಮಸೇನ ಸರ್ವಜ್ಞಶಿಖಾಮಣಿ, 'ಧೃತರಾಷ್ಟ್ರ ಶುಭ-ಜೀವ ಹಿರಿಯಪ್ಪನಾಗಬೇಕು. ಇಷ್ಟು ದಿವಸ ಮಕ್ಕಳ ಸಂಗದಿಂದ ಬುದ್ಧಿಲ್ಲ ಬಹಳ ಕೆಟ್ಟದೆ. ಪಾಪಿಷ್ಟನಾಗ್ಯಾನೆ, ಮತ್ತೆ ವಿಷಯದಲ್ಲಿ ಆಸಕ್ತನಾಗ್ಯಾನೆ. ಪಾಪ ಪರಿಹಾರ ಮಾಡಿಕೊಂಬೋದಿಲ್ಲ. ಆಂಧನೃಪಗೆ ವಿಷಯವೈರಾಗ್ಯ ಆಗಬೇಕು. ವನಕ್ಕೆ ಹೋಗಿ, ದುರಾತ್ಮ ಮಕ್ಕಳ ಸಂಗದಿಂದ ಏನು ಸಂಚಿತ ಪಾಪ ಇತ್ತು, ಅದನ್ನೆಲ್ಲ ತಪಸ್ಸಿನಿಂದ ಕಳಕೋಬೇಕು' ಎಂದು, ಆಂಧನೃಪಗೆ ಭೀಮಸೇನ ನಿಷ್ಠುರವಚನ ಆಡಹೊಕ್ಕ. 'ಈ ಧೃತರಾಷ್ಟ್ರ ಹದಿನೆಂಟು ಅಕ್ಷೌಹಿಣಿ ಸೇನಿ ವಿನಾಶವಾಗಲಿಕ್ಕೆ ಮೂಲಕಾರಣ. ಈತನೇ ತನ್ನ ಮಕ್ಕಳಿಗೆ ಶಿಕ್ಷಿಸಿದ್ದಿಲ್ಲ. ಮಕ್ಕಳ ಅಧೀನನಾಗಿ ಅವರನ್ನ ಬಹಳ ಬಲಿಸಿದ. ಸರ್ವಸಂಹಾರ ಆಗಲಿಕ್ಕೆ ಈತನೇ ನಿಮಿತ್ತ. ಈತನ ಪಾಪ ಎಂದಿಗೆ ಹೋಗಬೇಕು. ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಬೋದಿಲ್ಲ. ವಿಷಯಾಸಕ್ತನಾಗ್ಯಾನೆ. ಶುಭಜೀವ ಇದ್ದಾನೆ. ವನಕ್ಕೆ ಹೋಗಿ ವೈರಾಗ್ಯದಿಂದ ದೇಹ ಶೋಷಿಸಿಕೊಂಡು ಗತಿ ಐದಲಿ' ಎಂದು ನಿಷ್ಠುರವಚನದಿಂದ ಭೀಮ. ಸೇನ ಬಹಳ ಅನುಗ್ರಹ ಮಾಡಿದ್ದಾನೆ. ವೈರಾಗ್ಯ ಹುಟ್ಟಿಸಿಕೊಟ್ಟಿದ್ದಾನೆ. ಧೃತರಾಷ್ಟ್ರರಾಯ ಏನಾದರೂ ಬೇಡಿ ಕಳುಹಿದರೆ, ತಾ ಪ್ರಧಾನಿ ನಿವಕಾರಣ ಏನೂ ಕೊಡಗೊಡಸ. ದಾನ ಧರ್ಮ ಮಾಡೇನೆಂಬ, ಭೀಮಸೇನ ದ್ರವ್ಯ ಕೊಡವಲ್ಲ. ಆಂಧನೃಪ ಮಾವನೆಂದು ಪಾಂಡವರ ಹೆಂಡರೆಲ್ಲ ಮಾವನ ಕಾಲು ಒತ್ತಲಿಕ್ಕೆ ಹೋಗೋರು. ಅವರಿಗೆಲ್ಲ ಹೋಗಬ್ಯಾಡರೆಂದು ನಿವಾರಿಸುವ. 'ಗತಲೋಚನನಿಗೆ ಭೋಗದ್ರವ್ಯ ಒಯ್ದು ಕೊಡಬ್ಯಾಡರಿ. ಅತನ ಸೇವಿ ಮಾಡಬ್ಯಾಡಿ.' ಹೀಂಗಂತ ಸಮುಸ್ತರನ್ನೂ ನಿಷೇಧಿಸುವ. ಭೀಮಸೇನನ ಅಂಜಿಕೆಯಿಂದ, ಪಾಂಡವರ ಹೆಂಡರು ತಾವು ಸೇವಿಗೆ ಹೋಗದೆ, ಭೃತ್ಯರ ಕಳಸೋರು. ದಾಸದಾಸೇರನ್ನ ಕಳಸೋರು. ಅವರಿಗೆ ಹೋಗಬ್ಯಾಡಿರೆಂದು ಭೀಮಸೇನ ಹೇಳುವ. ಈತನ ಅಂಜಿಕೆಯಿಂದ, ರಾಯನ ಸಮೀಪಕ್ಕೆ ದಾರೂ ಹೋಗದು. ಕಾರಣ ಭೀಮಸೇನಗೆ ತಿಳೀಗೊಡದೆ, ನಾಲ್ವರು ಪಾಂಡವರು ತಮ್ಮ ಹೆಂಡರಿಂದ ಯುಕ್ತರಾಗಿ, ಕದ್ದುಕದ್ದು ಆಂಧ-ನೃಪನ ಸೇವಿಗೆ ಹೋಗೋರು. 'ಹಿರೇರ ಉಸುರು ಒಳ್ಳೇದಲ್ಲ, ಮಕ್ಕಳು ಸತ್ತ

ದುಃಖ ಮರೀಲಿ' ಎಂದು ದ್ರೌಪದೀ ತನ್ನ ಮಾವನ ಸೇವೀಗೆ ಹೋಗೋಳು. ದ್ರೌಪದೀ ಸೇವಿಗೆ ತುಷ್ಟನಾಗಿ, 'ಬಹುಕಾಲ ಮುತ್ತೈದಿಯರಾಗಿ' ಎಂದು ಆಶೀರ್ವಾದಗಳು ಕೊಡುವ. ಭೀಮಸೇನನ ಕೂಡ ದ್ವೇಷ ಕಟ್ಟೈಹ. 'ನನ್ನ ನೂರು ಮಂದಿ ಮಕ್ಕಳನ್ನ ಭೀಮಸೇನನೇ ಕೊಂದಾನೆ' ಎಂದು ದ್ವೇಷ ಮಾಡತಿಹ.

ಧೃತರಾಷ್ಟ್ರ ಶುಭಜೀವ, ಜ್ಞಾನಿ, ವೇದವ್ಯಾಸನ ಕುಮಾರ. ತನ್ನ ನೂರೂ ಮಂದಿ ಮಕ್ಕಳು ಸಾವೋಣ, ಸರ್ವೋತ್ತಮನ ಭಾವ ಎಂದು ಬಲ್ಲರೂ ಸರಿಯೆ, ತನ್ನ ಮಕ್ಕಳನ್ನ ಭೀಮಸೇನ ಕೊಂದನೆಂದು ದ್ವೇಷ ಕಟ್ಟೈಹ. ಭೀಮಸೇನ ತಿಳಿದ, 'ಧೃತರಾಷ್ಟ್ರ ಶುಭಜೀವ, ನನ್ನ ದ್ವೇಷ ಮಾಡಿದ್ದರಿಂದ ತಮಸ್ಸಿಗೆ ಸಾಧನ ವಾಗತದೆ. ಧೃತರಾಷ್ಟ್ರಗೆ ವಿಷಯಾಸಕ್ತಿ ಬಿಡಸಬೇಕು. ನನ್ನ ಮ್ಯಾಲಿನ ದ್ವೇಷ ಬಿಡಸಬೇಕು' ಎಂದು ಮಾದ್ರೀಪುತ್ರರು ನೋಡತಿರಲು, ಭೀಮಸೇನ ತನ್ನ ಎರಡೂ ತೋಳುಗಳು ಚಪ್ಪರಿಸಿಕೊಂಡು, 'ಈ ವೃದ್ಧನ ಮಕ್ಕಳನ್ನ ನನ್ನ ತೋಳುಗಳು ಕೊಂದವು. ಆದಕಾರಣ ಈ ತೋಳುಗಳಿಗೆ ಗಂಧ ಕಸ್ತೂರಿಗಳಿಂದ ಬಹಳ ಬಹುಮಾನ ಮಾಡಥೀನಿ, ಸುಖ ಬಡಸ್ತೀನಿ. ಬಟ್ಟುವಾದಂಥ ತೋಳು ಗಳಿಂದ, ಈ ಕುರುಡನ ಮಕ್ಕಳನ್ನ ಕೊಂದೆನು. ಈ ತೋಳುಗಳಿಗೆ ನಿರಂತರ ಕುಂಕುಮಕೇಸರಿ, ಗಂಧ, ಪರಿಮಳದ್ರವ್ಯ ಹಚ್ಚಥೀನಿ.' ಹೀಂಗಂತ ಭೀಮಸೇನ ಅನಲಿಕ್ಕೆ, 'ಅಣ್ಣಾ, ಹೀಂಗೆ ಅನಬಾರದು, ರಾಯನ ದುಃಖ ಕೆದರಬ್ಯಾಡ' ಅಂತ ಮಾದ್ರೀಪುತ್ರರು ಅಂದು, ತರುವಾಯ ಭೀಮಸೇನ ಜಗದ್ಗುರು ಅಂತ ತಿಳದು, ಅಣ್ಣನಲ್ಲಿ ಸ್ನೇಹ ಉಳ್ಳವರಾಗಿ, ಅಣ್ಣ ಹ್ಯಾಂಗೆ ಮಾತನಾಡಿದ, ಆ ಮಾತಿಗೆ ಬಲಿಕೀ ಕೊಟ್ಟು 'ಅಣ್ಣಾ, ನಿನ್ನ ತೋಳುಗಳು ಬಹಳ ಪರಾಕ್ರಮ ಮಾಡ್ಯಾವೆ' ಅಂದರು. ಈ ಪ್ರಕಾರ ಭೀಮಸೇನ ಧೃತರಾಷ್ಟ್ರ ಕೇಳೋಹಾಂಗೆ ಮಾತನಾಡಿದ.

ಭೀಮಸೇನನ ವಚನ, ಆ ವ್ಯಾಳ್ಯಾದಲ್ಲಿ ದಾರು ಇಲ್ಲದಿದ್ದರೂ, ಸಮಸ್ತರಿಗೆ ಅರಿಕಿ ಆಯಿತು. ಧೃತರಾಷ್ಟ್ರ ಬಹಳ ದುಃಖ ಉಳ್ಳವನಾದ. 'ಭೀಮಸೇನ ನನ್ನ ಎದುರಿಗೆ ನಿಂತು ಇಂಥಾ ಮಾತನಾಡಿ ದುಃಖ ಕೊಟ್ಟನಲ್ಲ!' ಎಂದು ಬಹಳ ವೈರಾಗ್ಯ ಉಳ್ಳವನಾಗಲಿಕ್ಕೆ, ರಾಯ ಮತ್ತೆ ವಿಷಯದಲ್ಲಿ ಆಸಕ್ತನಾದಾನೆಂದು, ವಿದುರ ಬಂದು ವೈರಾಗ್ಯ ಬಲಿಸಬೇಕಾಗಿ, ಧೃತರಾಷ್ಟ್ರನ ಕೂಡ ಮಾತನಾಡಿದ. 'ರಾಯಾ, ನಿನಗೆ ಎಷ್ಟು ನಿಷ್ಠುರವಚನ ಆಡಿದರೂ, ವೈರಾಗ್ಯ ಬಾಹೋದಿಲ್ಲ. ಮನುಷ್ಯಗೆ ಒದಕಬೇಕೆಂಬೋ ವಾತ್ಸಲ್ಯ ಇರತದೆ. ಅದಕ್ಕೆ ದೃಷ್ಟಾಂತ ನೀನೇವೆ. ಬದಕಬೇಕೆಂಬೊ ವಾತ್ಸಲ್ಯ ನಿನ್ನಲ್ಲಿ ಬಹಳ ಅದೆ, ವೈರಾಗ್ಯವುಳ್ಳವನಾಗೋದಿಲ್ಲ. ಪ್ರಧಾನಪುರುಷ ಭೀಮಸೇನ ನಿನ್ನ ಲೆಕ್ಕಿಸೋದಿಲ್ಲ. ಭೀಮಸೇನನ ಆಜ್ಞೆದ ಹೊರತು, ಕದ್ದುಕದ್ದು ನಿನಗೆ ಪಿಂಡ ತಂದುಕೊಡಥಾರೆ. ನಾಯಿಗೆ ಹ್ಯಾಂಗೆ ಹಾಕಥಾರೆ, ಹಾಂಗೆ ನಿನಗೆ ಹೊರಗೈಲಿ ಪಿಂಡ ಹಾಕಥಾರೆ. ನಾಯಿ ಕದ್ದು

ತಿನ್ನತದೆ. ನೀನೂ ಹಾಂಗೇ ತಿನ್ನತಿದ್ದೀ. ಈ ಪ್ರಕಾರ ಸಕಲರಿಂದ ಉದಾಸೀನ ಮಾಡಿಸಿಕೊಂಡು ಇಲ್ಲೆ ಬಿದ್ದುಕೊಂಡಿದೀ. ಭೀಮಸೇನ ನಿಷ್ಠೂರವಚನ ಆಡಿದ ನೆಂದು ಕ್ಲೇಶ ಹಚ್ಚಿಕೊಂಡಿದಿ ಭೀಮಸೇನ ಬಕಳ ಒಳ್ಳೇವ. ನೀ ಮಾಡಿದಂಥಾ ಅನ್ಯಾಯಕ್ಕೆ ಪ್ರತೀಕಾರ ಮಾಡೋದಿಲ್ಲ. ಆ ಅನ್ಯಾಯಗಳು ಮನಸ್ಸಿಗೆ ತಾಹೋ-ದಿಲ್ಲ. ನಿನ್ನ ಮಕ್ಕಳು ಪಾಂಡವರಿಗೆ ಸರ್ಪಗಳ ಕೈಯ ಕಚ್ಚಿಸಿದರು. ಪ್ರಮಾಣ-ಕೋಟಿ ಮಡುವಿನಲ್ಲಿ ಮುಣಗಿಸಿದರು. ಭೋಜನದೊಳಗೆ ವಿಷ ಹಾಕಿದರು. ಲಾಕ್ಷಾಗೃಹ ಮನಿಯೊಳಗೆ ಸುಟ್ಟು ಸಾಯಿಸಬೇಕೆಂದು ಮಾಡಿದರು. ದೈವೇಚ್ಛೆ ಯಿಂದ ಉಳದು, ಇಂದ್ರಪ್ರಸ್ಥದಲ್ಲಿ ರಾಜ್ಯ ಆಳಲಿಕ್ಕೆ, ಅವರ ಭೋಗ ಸಹಿಸಲಾರದೆ ಜೂಜು ನಡಸಿ ವನಕ್ಕೆ ಅಟ್ಟಿದರು. ದ್ರೌಪದೀ ವಸ್ತ್ರ ಅಪಹರಣ ಮಾಡಿದರು. ನಿಮ್ಮ ಅನ್ಯಾಯ ಎಷ್ಟಂತ ಹೇಳಲಿ! ಇಂಥಾ ದುರಾತ್ಮ ಮಕ್ಕಳ ಅನುಸರಿಸಿ, ಹದಿನೆಂಟು ಅಕ್ಷೋಹಿಣಿ ಸೇನಿ ಸರ್ವಸಂಹಾರ ಮಾಡಸ್ದೀ. ಪಾಂಡವರು ಬಲವೀರ್ಯ-ವುಳ್ಳವರಾದಕಾರಣ, ದೇವರ ಅನುಗ್ರಹದಿಂದ ಸರ್ವಸಾಮ್ರಾಜ್ಯ ಆಳಥಾರೆ. ಇಷ್ಟೂ, ಸರ್ವಸಂಹಾರವಾಗಿ ನಿನಗಿನ್ನೂ ವೈರಾಗ್ಯ ಹುಟ್ಟೋದಿಲ್ಲ! ರಾಯಾ, ನಿನಗೆ ವೈರಾಗ್ಯ ಹುಟ್ಟಬೇಕೆಂದು ಭೀಮಸೇನ ನಿನ್ನ ಮ್ಯಾಲೆ ಅನುಗ್ರಹ ಮಾಡ್ಯಾನೆ. ಇನ್ನಾದರೂ ಭೀಮಸೇನನ ಮ್ಯಾಲೆ ದ್ವೇಷ ಬಿಡು.' ಹೀಂಗಂತ ವಿದುರ ಹೇಳಿದ.

ಗತಲೋಚನ, ವಿದುರ ಹೇಳಿದ್ದು ಕೇಳಿ ವೈರಾಗ್ಯ ಉಳ್ಳವನಾದ. 'ನಾ ಇನ್ನ ಹಸ್ತಿನಾವತೀಲಿ ಇರವಲ್ಲೆ ವನಕ್ಕೆ ಹೋಗಥೀನಿ' ಎಂದು, ತಂದಂಥ ಅನ್ನೋದಕ ಕೊಳ್ಳದೆ, ಮೂರು ದಿವಸ ನಿರಾಹಾರ ಮಾಡಿದನು. ಧರ್ಮರಾಯಗೆ ವಾರ್ತಿ ಮುಟ್ಟಿತು. ಧೃತರಾಷ್ಟ್ರ ಏನುಕಾರಣ ಭೋಜನ ಮಾಡೋದಿಲ್ಲೆಂದು ರಾಯ, ಸಮೀಪಕ್ಕೆ ಬಂದು ಕೇಳಲಾಗಿ, 'ನನಗೆ ವನಕ್ಕೆ ಅಪ್ಪಣಿ ಕೊಟ್ಟರೆ ನಾ ಭೋಜನ ಮಾಡಥೀನಿ. ವನಕ್ಕೆ ಅಪ್ಪಣಿ ಕೊಡದ ಪಕ್ಷವೇ, ನಿರಂತರ ಉಪವಾಸ ಮಾಡಿ, ಇಲ್ಲೀ ದೇಹತ್ಯಾಗ ಮಾಡೇನು' ಹೀಂಗೆ ಮಾತನಾಡತ ಆಡತ, ಮೂರು ದಿವಸ ಉಪವಾಸದಿಂದ ಮೂರ್ಛಿ ಉಳ್ಳವನಾಗಿ, ಗಾಂಧಾರೀ ದೇಹದ ಮ್ಯಾಲೆ ಬಿದ್ದನು. ಕಣ್ಣು ಮೂಗಿಗೆ ನೀರು ಒತ್ತಿ ಎಚ್ಚರಿಕೀ ಮಾಡಿ, ಧರ್ಮರಾಯ ಮಾತ-ನಾಡಿದ. 'ರಾಯಾ, ಮುದುಕನಿದ್ದೀ, ಏನುಕಾರಣ ವನಕ್ಕೆ ಹೋಡೇನೆಂಥಿ? ವೈಶ್ಯಕನ್ನಿಕೆಯಲ್ಲಿ ಹುಟ್ಟಿದ ಯುಯುತ್ಸು ಎಂಬ ಮಗನಿದ್ದಾನೆ. ಇವನ್ನ ಮುಂದ ಮಾಡಿಕೊಂಡು, ಸಮುದ್ರನೇ ಒಡ್ಯಾಣವಾಗಿ ಉಳ್ಳಂಥ ಭೂಮಿ ನೀನು ಆಳು. ನಮಗೆ ಅಪ್ಪಣಿ ಆದರೆ, ನಾವು ವನಕ್ಕೆ ಹೋದೇವು.' ಹೀಂಗೆಂದು ಧರ್ಮರಾಯ ಅನಲಿಕ್ಕೆ, ಅಂಧನೃಪ 'ಕಪಟತನದಲ್ಲಿ ವನಕ್ಕೆ ಹೋಗಥೇನೆಂದು ಮಾತನಾಡುವು ದಿಲ್ಲ. ನನಗೆ ವಾರ್ಧಿಕ್ಯ ಕಾಲವಾಯಿತು. ನಮ್ಮ ಕ್ಷತ್ರಿಯಕುಲಾಚಾರ ಪರಂಪರ ನಡದುಬಂದದೆ. ಮಕ್ಕಳಲ್ಲಿ ರಾಜ್ಯಭಾರವಿಟ್ಟು, ವನಕ್ಕೆ ಹೋಗಿ, ದಿವ್ಯಗತಿ

ಕಂಡಕೋಬೇಕು. ಹೀಂಗೆ ಕ್ಷತ್ರಿಯ ಕುಲಾಚಾರವದೆ. ನನಗೆ ವನಕ್ಕೆ ಅಪ್ಪಣೆ ಕೊಡು' ಎಂದನು.

ಈ ಪ್ರಕಾರ ಗತಲೋಚನರಾಯ ಮಾತನಾಡಲಿಕ್ಕೆ, ಆಸ್ಥರೊಳಗೆ ಅನಂತ-ವೇದಪ್ರತಿಪಾದ್ಯ ವೇದವ್ಯಾಸ ಬಂದು ಧರ್ಮರಾಯಗೆ ಹೇಳಿದ. ' ಹೇ ಧರ್ಮರಾಯಾ, ಏನುಕಾರಣ ಬ್ಯಾಡವೆಂದು ಧೃತರಾಷ್ಟ್ರನ್ನ ನಿವಾರಿಸ್ತಿ? ಅಂಧನ್ಯಪನಲ್ಲಿ ದುಷ್ಕರ್ಮ ಬಹಳವದೆ. ತನ್ನ ಪಾಪ ಪರಿಹರಿಸಿಕೊಳ್ಳಲಿಕ್ಕೆ ವನಕ್ಕೆ ಹೋದೇನೆಂಥಾನೆ. ಧರ್ಮಕ್ಕೆ ವಿಘ್ನ ಆಚರಿಸಬ್ಯಾಡ. ರಾಯಗೆ ವೈರಾಗ್ಯ ಬಂದದ್ದು ಬಹಳ ಹೆಚ್ಚುಟ್ಟ. ನನ್ನ ಕುಮಾರ ನಷ್ಟಕಲ್ಮಶ ಉಳ್ಳವನಾದಾನು. ರಾಯಾ, ಅವಶ್ಯ ಹಿರಿಯಪ್ಪಗೆ ಅಪ್ಪಣೆ ಕೊಡು.' ಹೀಂಗಂತ ವೇದವ್ಯಾಸ ಅನಲಿಕ್ಕೆ, ಬಹಳ ಒಳ್ಳೇದೆಂದು ' ಸ್ವಾಮೀ, ವನಕ್ಕೆ ಹೋಗಲಿ' ಎಂದು, ಆಗ ಧರ್ಮರಾಯನ ಅಪ್ಪಣೆ ಆಯಿತು. ನಾಲ್ಕನೇ ದಿವಸ, ಆಗ ಧೃತರಾಷ್ಟ್ರ ಭೋಜನ ಮಾಡಿದನು. ತರುವಾಯ ಧರ್ಮರಾಯಗೆ, ರಾಜ್ಯ ಈ ರೀತಿ ಆಳಬೇಕೆಂದು, ರಾಜ್ಯನೀತಿಗಳು, ಕ್ಷತ್ರಿಯಧರ್ಮ ಹೇಳಿದ್ದಾನೆ. ಧರ್ಮರಾಯ ಕ್ಷತ್ರಿಯನೀತಿ, ರಾಜಧರ್ಮ ಬರತದೆಂದು ಉದಾಸೀನ ಮಾಡಿ ಕೇಳಿದನಲ್ಲ, ಬಹು ನವ್ರುದಿಂದ ಹಿರೇರ ವಚನ ಆದರದಿಂದ, ಧರ್ಮಗಳು ಕೇಳಿದನು. ಧರ್ಮರಾಯ ಧೃತರಾಷ್ಟ್ರನ ಅಪ್ಪಣೆ ಕೊಂಡು ತನ್ನ ಅರಮನಿಗೆ ಹೋದನು.

ಗತಲೋಚನ 'ವನಕ್ಕೆ ಹೋಗಥೀನಿ. ಹೋದಮ್ಯಾಲೆ ಮಕ್ಕಳ ಶ್ರಾದ್ಧಾದಿಕ್ಕಳು ದಾರು ಮಾಡಥಾರೆ ಮಕ್ಕಳ ಋಣ ತಿದ್ದಿ ಹೋದೇನು. ದಾನ ಧರ್ಮಕ್ಕೆ ದ್ರವ್ಯ ಇಸಗೊಂಡು ಬಾ' ಎಂದು ತನ್ನ ತಮ್ಮ ವಿದುರನ್ನ ಕಳುಹಿದ. ಧರ್ಮರಾಯ 'ದ್ರವ್ಯ ಕೊಡು' ಎಂದು ಭೀಮಸೇನಗೆ ಆಜ್ಞಾಪಿಸಿದ. ಭೀಮಸೇನ ದ್ರವ್ಯ ಕೊಡವಲ್ಲ. ಏನುಕಾರಣ ದ್ರವ್ಯ ಕೊಡಲಿಲ್ಲೆಂದರೆ, ಧೃತರಾಷ್ಟ್ರ ಮಕ್ಕಳ ವ್ಯಾಮೋಹ ಉಳ್ಳಾತ. ದ್ರವ್ಯದಿಂದ ಮಕ್ಕಳ ಶ್ರಾದ್ಧಾದಿಗಳ ಮಾಡ್ಯಾನು. ಮಧುಸೂದನನ ದ್ವೇಷಿಗಳಿಗೆ ಪರಲೋಕವಾಗಬಾರದು. ಹೀನರಿಗೆ ಸಹಾಯವಾಗಬಾರದೆಂದು ದ್ರವ್ಯ ಕೊಟ್ಟಿದ್ದಿಲ್ಲ. ಭೀಷ್ಮಾದಿಕ್ಕಳ ಶ್ರಾದ್ಧ, ಬಾಹ್ಲೀಕರಾಯನ ಶ್ರಾದ್ಧ ಮಾಡೇನೆಂದರೆ ಈ ಶ್ರಾದ್ಧಕ್ಕಾದರೂ ದ್ರವ್ಯ ಕೊಡಬಾರದೆ ಎಂದಲ್ಲಿ, 'ಭೀಷ್ಮಾದಿಗಳ ಶ್ರಾದ್ಧ ಆತ ಏನು ಮಾಡ್ಯಾನು! ನಮ್ಮ ಪಿತಾಮಹ ಪ್ರಪಿತಾಮಹರ ಶ್ರಾದ್ಧ ನಾವು ಮಾಡೇವು.' ಹೀಂಗಂತ ಅನ್ನಲಿಕ್ಕೆ, 'ನನ್ನ ಮಗನ ಗೆಳಯ ಕರ್ಣನ ಶ್ರಾದ್ಧಕ್ಕಾದರೂ ದ್ರವ್ಯ ಕೊಡಬಾರದೆ' ಎಂದು ಗತಲೋಚನ ಎಂದಲ್ಲಿ, 'ಕರ್ಣ ನಮ್ಮ ಅಣ್ಣ, ಅಣ್ಣನ ಶ್ರಾದ್ಧ ನಾವು ಮಾಡೇವು. ರಾಯಗೆ ಮಕ್ಕಳ ಮ್ಯಾಲೆ ಸ್ನೇಹ ಬಹಳ. ಮಕ್ಕಳ ಶ್ರಾದ್ಧ ಮಾಡ್ಯಾನು. ಪಾಪಿಗಳಿಗೆ ದಿವ್ಯಗತಿ ಆಗಬಾರದು. ಕಷ್ಟಾತ್ ಕಷ್ಟತರಂ ಯಾಂತು ಸರ್ವೇ ದುರ್ಯೋಧನಾದಯಃ ॥ ಹೀಂಗೆ ನಿರಂತರ ಚಿಂತಿಸ್ತಿರಬೇಕು. ವಿಷ್ಣುವೈಷ್ಣವದ್ವೇಷಿಗಳಿಗೆ, ಅವೈಷ್ಣವಂಗೆ

ಅನ್ನ ಕೊಡಬಾರದು. ಸಾಯುತಿದ್ದರೆ ಬಿಂದುಮಾತ್ರ ಉದಕ ಕೊಡಬಾರದು. ಅವೈಷ್ಣವರು ಸತ್ತರೆ ದಹನ ಮೊದಲಾಗಿ ಮಾಡಬಾರದು ನಾಯಿನರಿಗಳು ತಿಂದು ಹೋಗಬೇಕಲ್ಲದೆ, ಅಗ್ನಿಸಂಸ್ಕಾರ ಮಾಡಬಾರದು. ಎಲೈ ಅಣ್ಣ ಧರ್ಮರಾಯಾ, ಸಾಪಿಗಳಿಗೆ ಸಹಾಯವಾಗಬ್ಯಾಡ. ನನ್ನಷ್ಟಕ್ಕೆ, ದ್ರವ್ಯ ನಾ ಕೊಡೋಹಾಂಗಿಲ್ಲ.' ಹೀಂಗೆಂದು ಭೀಮಸೇನ ಅನ್ನಲಿಕ್ಕೆ, 'ಎಲೋ ಅಪ್ಪ ಭೀಮಸೇನಾ, ಈ ರಾಜ್ಯ, ಐಶ್ವರ್ಯ, ಭಂಡಾರ, ಕೋಶ ಧೃತರಾಷ್ಟ್ರನದು. ಅತನ ದ್ರವ್ಯ ಅತಗೆ ಕೊಡೋದಕ್ಕೆ ನಮ್ಮಡೇನು ಹೋಗತದೆ. ಇಷ್ಟಾಗಿ ರಾಯ ವನಕ್ಕೆ ಹೋಗಥಾನೆ. ಹೋದಮ್ಯಾಲೆ, ನಮ್ಮನ್ನ ದ್ರವ್ಯ ಬೇಡಬೇಕಾಗಿಲ್ಲ. ಹಿರಿಯ, ಆಯುಷ್ಯದಲ್ಲಿ ಇರೋ ಪರ್ಯಂತ ಅವನ್ನ ಲಾಲಿಸಬೇಕು. ಹಿರಿಯರ ಆಜ್ಞಾ ನಡಸದಿದ್ದರೆ, ನಮಗೆ ಕ್ಷೋಭಿಸ್ಯಾರು. ರಾಯನ ದ್ರವ್ಯ ರಾಯಗೆ ಕೊಡದಿದ್ದರೆ, ಲೋಕವಾದರೂ ನಮಗೆ ಏನು ಅಂದೀತು? ರಾಯ ವನಕ್ಕೆ ಹೋಗಥಾನೆ. ಹೋದಮ್ಯಾಲೆ ನಮ್ಮನ್ನ ದ್ರವ್ಯ ಬೇಡೋ ಹಾಂಗಿಲ್ಲ.' ಹೀಂಗೆ ಭೀಮಸೇನಗೆ ರಾಯ ದ್ರವ್ಯ ಕೊಡೆಂದು ಅನೇಕ ಪ್ರಕಾರ ಹೇಳಿದರೂ ಕೊಡುವಲ್ಲ.

ವಿದುರನ್ನ ರಿಕ್ತಹಸ್ತದಲ್ಲಿ ಕಳಸಬಾರದು ಎಂದು, 'ಭೀಮಸೇನನ ದುಷ್ಟತನ ಹೇಳಬ್ಯಾಡ. ರಾಯ ಮತ್ತಷ್ಟು ದುಃಖ ಬಟಕೊಂಡಾನು.' ಹೀಂಗೆಂದು, ಧರ್ಮರಾಯ ದಾನಧರ್ಮಕ್ಕೆ, ಭೋಗಕ್ಕೆ ದ್ರವ್ಯ ಇಟ್ಟುಕೊಂಡಿಹ, ಅದನ್ನೆಲ್ಲ ಕೊಂಡು ಹೋಗು' ಎಂದು ವಿದುರಗೆ ಹೇಳಲಿಕ್ಕೆ, ಅರ್ಜುನ ತನ್ನ ಭೋಗದ್ರವ್ಯ, ದಾನಧರ್ಮಕ್ಕೆ ಎಷ್ಟು ತೆಗೆದುಕೊಂಡಿದ್ದ, ಅಷ್ಟೂ ವಿದುರಗೆ ಕೊಂಡುಹೋಗೆಂದು ದ್ರವ್ಯನೆಲ್ಲ ಕೊಟ್ಟನು. ಈ ವಾರ್ತೀನೆಲ್ಲ ವಿದುರ ಹೋಗಿ ಧೃತರಾಷ್ಟ್ರಗೆ ಹೇಳಿದನು. 'ಭಂಡಾರ ದ್ರವ್ಯ ಭೀಮಸೇನ ಕೊಡವಲ್ಲ. ಧರ್ಮಾರ್ಜುನರು ತಮ್ಮ ಭೋಗದ್ರವ್ಯ ಕೊಟ್ಟರು. ಭೀಮಸೇನ ಶ್ರಾದ್ಧಕ್ಕೆ ದ್ರವ್ಯ ಕೊಡಲಿಲ್ಲ' ಎಂದು ರಾಯಗೆ ಹೇಳಿ, ದುಃಖಬಡಬ್ಯಾಡೆಂದು ಹೇಳಿದರೂ ಸರಿಯೆ, 'ಇಲ್ಲಿ ಇದಂಥ ವಾರ್ತಿ ನಿನ್ನ ಮುಂದೆ ಹೇಳಬೇಕೆಂದು ಹೇಳಥೀನಿ. ಧರ್ಮಾರ್ಜುನರು ಕಾಮ್ಯಕರ್ಮ ಉಳ್ಳವರು. ಹಿರೇರ ಅನುಗ್ರಹ ಸಂಪಾದಿಸಬೇಕೆಂದು ತಮ್ಮ ಭೋಗದ್ರವ್ಯ ಅವನಗೆ ಕಳುಹಿಕೊಟ್ಟಾರೆ. ಭೀಮಸೇನನ ಸ್ನೇಹ ನಿನ್ನ ಮ್ಯಾಲೆ ಇಲ್ಲ ನಿನ್ನ ಆಜ್ಞಾ ಕೇಳಲಿಕ್ಕೆ ಪ್ರಧಾನಪುರುಷ ಭೀಮಸೇನ ಹರ್ಷ ಬಡೋದಿಲ್ಲ. ಆಜ್ಞಾ ಹೇಳಲಿಕ್ಕೆ ಸಿಟ್ಟಿಗೆ ಬರಥಾನೆ ಎಂದು ಅತನ ಮ್ಯಾಲೆ ಕೋಪಕ್ಕೆ ಬರಬ್ಯಾಡ. ಭೀಮಸೇನ ಹೀನರ ಮ್ಯಾಲೆ ಕೋಪಕ್ಕೆ ಬಾಹೋದು ನೀತ. ನೀನು ಕೋಪಕ್ಕೆ ಬಾಹೋದು ಅನೀತ. ಬಂದಪಕ್ಷವೇ ಅನರ್ಥಕ್ಕೆ ಸಾಧನವಾದೀತು.' ಹೀಂಗೆಂದು ಅನಲಿಕ್ಕೆ, ಗತಲೋಚನ ಧರ್ಮಾರ್ಜುನರು ಲೋಕದಲ್ಲಿ ಕೃಪಾ ಉಳ್ಳವರು. ಹಿರೇರಲ್ಲಿ ಬಹುಮಾನ, ಮಾನ ಉಳ್ಳವರು. ಭೀಮಸೇನ ವೈಷ್ಣವೋತ್ತಮ. ಇಂಥಾ ಜೀವೋತ್ತಮನ ಮ್ಯಾಲೆ

ನಾ ಏನುಕಾರಣ ಕೋಪಕ್ಕೆ ಬರಲಿ! ನನಗೆ ಕೋಪವಿಲ್ಲ. ನನಗೆ ವೈರಾಗ್ಯ ಹುಟ್ಟಿಸಿಕೊಟ್ಟಾನೆ' ಎಂದು ಧೃತರಾಷ್ಟ್ರ ಸಂತೋಷನೇ ಹಚ್ಚಿಕೊಂಡು, ಶುದ್ಧ ಅಂತಃಕರಣ ಉಳ್ಳವನಾಗಿ, ಮಕ್ಕಳ ಶ್ರಾದ್ಧಾದಿಗಳ ಮಾಡತೊಡಗಿದನೆ. 'ಮಕ್ಕಳಾದವರು ಋಣ ತಿದ್ದಿಸಿಕೊಡಬೇಕು. ಅಥವಾ ಋಣ ತಿದ್ದಬೇಕಾಗಿ ಮಕ್ಕಳಾಗಿ ಹುಟ್ಟಬೇಕು. ಋಣ ನನ್ನ ಮ್ಯಾಲೆ ಇಲ್ಲದಾಂಗೆ ಮಾಡಬೇಕು. ಇಂಥಾ ಹೀನಮಕ್ಕಳ ಸಂಗ ಜನ್ಮಾಂತರದಲ್ಲಾದರೂ ನನಗೆ ಬ್ಯಾಡ. ಋಣಸಂಬಂಧದಿಂದ ನನ್ನ ಹೊಟ್ಟೇಲಿ ಹುಟ್ಟಬ್ಯಾಡ.' ಹೀಂಗಂತ ಮನಸ್ಸಿನಲ್ಲಿ ಕಲ್ಪಿಸಿ, ದುರ್ಯೋಧನಾದಿಗಳಿಗೆ ಶ್ರಾದ್ಧಗಳು ಮಾಡಿ ಗೋವಿಂದಗೆ ಅರ್ಪಿಸಿದನು. ಶ್ರಾದ್ಧಕರ್ಮವೆಲ್ಲ ಮುಗದಮ್ಯಾಲೆ, ಧೃತರಾಷ್ಟ್ರ ಪಾಂಡವರ ಕೈಯಿಂದ ಅಪ್ಪಣಿ ಕೊಂಡು, ಸಕಲ ಸಜ್ಜನರ ಕೈಯ ನಿರೂಪ ತಿಗೆದುಕೊಂಡು ವನಕ್ಕೆ ತೆರಳುವಾಗ, ಪಟ್ಟಣಸ್ಥರು ದೇಶಸ್ಥರ ಕೂಡ ಮಾತನಾಡಿದ.

ಗತಲೋಚನ, ' ಪೂರ್ವಾಪರ ಧರ್ಮದಿಂದ ರಾಜ್ಯಪಾಲನಿ ಮಾಡಿದೆವು. ನ್ಯಾಯದಿಂದ ದ್ರವ್ಯಗಳು ಕೊಂಡೆವು. ಅನ್ಯಾಯವಾಗಿ ಪ್ರಜರ ಪೀಡಿಸಿಕೊಂಡಿದ್ದಿಲ್ಲ. ಧರ್ಮದಿಂದ ಆಳಬಂದೆವು. ನಾವು ಅರಸರುಗಳೆಂದು ಉನ್ಮತ್ತರಾಗಿ ಮೈಮರತು ನಿಮ್ಮ ಮ್ಯಾಲೆ ಅಗ್ಗಳಿಕೆ ಮಾಡಿದ್ದಿಲ್ಲ. ಧರ್ಮದಿಂದ ರಾಜ್ಯ ಆಳಿದೆವು. ನಿಮ್ಮಂಥ ಪ್ರಜರುಗಳು ನನ್ನಲ್ಲಿದ್ದ ಕಾರಣ ದೊಡ್ಡದೊಡ್ಡ ಯಜ್ಞಾದಿ ಕರ್ಮಗಳು ಮಾಡಿದೆ. ಅನೇಕ ದಾನಧರ್ಮಗಳು ಮಾಡಿದೆ. ಕೆರಿ ಭಾವಿಗಳ ಕಟ್ಟಿಸಿದೆ. ವಿಚಿತ್ರವೀರ್ಯರಾಜನ ಅರಸತನ ಧರ್ಮದಿಂದ ಆಳತ ಬಂದೆವು.ನನ್ನ ಮಗ ದುಷ್ಟನಿದ್ದ. ಅವನ ದೆಸಿಯಿಂದ ಸರ್ವ ಕ್ಷತ್ರಿಯುಕುಲ ವಿನಾಶವಾಯಿತು. ನನ್ನ ಮಗ ದುರಾತ್ಮ, ಹಿರೇರ ಶಿಷ್ಟ ಮೀರಿ ನಡದ, ಬಹಳ ಅಹಂಕಾರವುಳ್ಳವ; ದುರಾಗ್ರಹದವ ಪಾಂಡವರ ಕೂಡ ದ್ವೇಷ ಕಟ್ಟಿದ್ದ; ಭ್ರಾತೃಸ್ನೇಹ ಮಾಡಿದ್ದಿಲ್ಲ; ಕಡೀತನಕ ವೈರಿತನ ಮಾಡಿದ; ವಿರುದ್ಧಕರ್ಮ ಮಾಡಿದ; ಕೃಷ್ಣ ಪಾಂಡವರಿಗೆ, ಬಹಳ ಅಪ್ರಿಯಕರ್ಮ ಮಾಡಿ, ಕೃಷ್ಣ ಸಂಧಾನಕ್ಕೆ ಬಂದಿರಲಾಗಿ ಕಟ್ಟಿಹಾಕಬೇಕಂತ ಮಾಡಿದ. ನನ್ನ ಮಗ ಭ್ರಾತೃಗಳ ಸಂಗಡ ವೈರವುಳ್ಳವನಾದರೂ, ಪ್ರಜರುಗಳಿಗೆ ಹೀನನಾಗಿದ್ದಿಲ್ಲ, ಚನ್ನಾಗಿ ರಕ್ಷಿಸಿದ್ದ; ನಿಮಗೆ ದುಃಖ ಕೊಟ್ಟಿದ್ದಿಲ್ಲ; ಕೃಷ್ಣ ಪಾಂಡವರಿಗೆ ಹೀನನಾಗಿದ್ದ. ಅವನಂತೂ ಹೀನನಾಗಿದ್ದರೂ, ಅವನ ತಮ್ಮಂದರಾದರೂ ಒಳ್ಳೇವರಾಗಿದ್ದಿಲ್ಲ. ಅವರೂ ಹೀನರು, ಪರಮ ಪಾಪಿಗಳು. ತಮ್ಮ ತಮ್ಮ ಪಾಪದಿಂದ ರಣರಂಗದಲ್ಲಿ ಅಷ್ಟೂ ಮಂದಿ ಸತ್ತುಹೋದರು. ಆ ಪಾಪಿಗಳ ಋಣಸಂಬಂಧದಿಂದ ಮಕ್ಕಳಾಗಬಾರದಂಗೆ ಆ ಪಾಪಿಗಳ ಋಣ, ಶ್ರಾದ್ಧಾದಿಗಳಿಂದ ಕಳದುಬಿಟ್ಟೆ.

'ಆ ಪಾಪಿಗಳ ಸಂಬಂಧದಿಂದ ಬಂದ ಪಾಪ ಕಳಕೋಬೇಕಾಗಿ, ನಾ ವನಕ್ಕೆ ಹೋಗಥೀನಿ. ಇಷ್ಟು ದಿವಸ ಮಕ್ಕಳ ಸ್ವಾರ್ಥದಿಂದ ಮೂರ್ಖನಾಗಿದ್ದೆ,

ಪಾಪಾಂತಃಕರಣವುಳ್ಳವನಾಗಿದ್ದೆ. ಅವರ ಸಂಗದಿಂದ ಬಂದ ದೋಷ ಕಳಕೋ-ಬೇಕಾಗಿ, ತಪಸ್ಸು ಮಾಡಿ ಪರಿಹರಿಸಿ ಕೊಳ್ಳಲಿಕ್ಕೆ, ವನಕ್ಕೆ ಹೋಗಥೀನಿ. ನನಗೆ ಅಪ್ಪಣಿ ಕೊಡಿ. ಪಾಂಡವರಲ್ಲಿ ರಾಜ್ಯಭಾರ ಇಟ್ಟಿದ್ದೀನಿ. ಪಾಂಡವರು ತಾವು ಒಳ್ಳೇವರು, ನೀವೂ ಉತ್ತವರು, ಎಲ್ಲಾ ಚೆನ್ನಾಗಿ ನಡದೀತು. ನನ್ನ ಪ್ರೀತ್ಯರ್ಥ ವಾಗಿ ಪಾಂಡವರ ಮ್ಯಾಲೆ ಸ್ನೇಹ ಮಾಡತ ಬನ್ನಿ. ನನಗೆ ಇವರೇ ಸತ್ಪುತ್ರರು. ಪಾಂಡವರಿಂದ ಪರಲೋಕಸುಖ ನನಗಾದೀತು. ನನಗೆ ಊರ್ಧ್ವಗತೀ ಕಾಣಸಲಿಕ್ಕೆ ಇವರು ಸಮರ್ಥರು.' ಈ ಪ್ರಕಾರ ಅಂಧನೃಪ ಮಾತನಾಡಲಿಕ್ಕೆ, ಪ್ರಜರು ಅಂತಃಕರಣ ಸ್ನೇಹದಿಂದ ಬಹಳ ಕದಡಿ, ಆನಂದಬಾಷ್ಪ ಉದರಿಸಿದರು. ರಾಯ ವನಕ್ಕೆ ಹೋಗಥಾನೆಂದು ಕಣ್ಣೀರು ಉದರಿಸಿದರು. ಅಂಧನೃಪ ವನಕ್ಕೆ ತೆರಳಿದನು.

ಪಾಂಡವರು ರಾಯಗೆ ಬಹು ದೂರ ಕಳಸತ ಹೋದರು. ಪಾಂಡವರಿಗೆ ನಿಂದರಿಸಿ, ಗತಲೋಚನ ವನಕ್ಕೆ ತೆರಳಲಿಕ್ಕೆ ರಾಯನ ಸಂಗಡ ಸಂಜಯ, ಸಾರಥ್ಯ-ಕರ್ಮ ಉಳ್ಳವನಾಗಿ ತೆರಳಿದ. ವಿದುರ ಹೋದ. ಗಾಂಧಾರೀ ಹೋದಳು. ಕುಂತೀ ನಾನೂ ಹೋಗಥೀನೆಂದು ಸೈಣಿಸಿದಳು. ಸೊಸೆಂದಿರು ಮಕ್ಕಳು ಕುಂತೀದೇವಿಗೆ ಬೇಡಿಕೊಳ್ಳತಿಹೋರು. ದ್ರೌಪದೀ ಕಾಲು ಹಿಡಿದುಕೊಳ್ಳತಿಹೋಳು. 'ನಮ್ಮ ವಿಯೋಗದಿಂದ ಬಹು ದಿವ್ಸ ಕಷ್ಟದಲ್ಲಿ ಕಾಲ ಕಳದಿದ್ದೀ. ವನಕ್ಕೆ ಹೋಗಬ್ಯಾಡ. ನಮ್ಮ ಸಮೀಪದಲ್ಲೆ ನಮ್ಮನ್ನ ನೋಡಿಕೊಂಡು ಇರು.' ಹೀಂಗಂತ ಪ್ರಾರ್ಥಿಸತಿಹೋಳು. ಸೊಸೆಂದಿರು, ಮಕ್ಕಳು ಕಾಲು ಹಿಡದುಕೊಳ್ಳತಿಹೋರು. ಬಹಳ ಪ್ರಕಾರದಿಂದ ಬೇಡಿಕೊಳ್ಳತಿಹೋರು. ಏನು ಬೇಡಿಕೊಂಡರೂ ಕೇಳವಲ್ಲಳು. 'ನನ್ನ ಭಾವನ ಸಂಗಡ ವನಕ್ಕೆ ಹೋದೇನು. ನನಗೆ ನಿಮ್ಮ ಒದೀಲಿ ಇಹೋದು ಪ್ರೀತಿ ಆಗೋದಿಲ್ಲ. ನನ್ನ ಪ್ರೀತಿ ಸಂಪಾದಿಸಬೇಕೆಂಬೋ ಹಾಂಗಿದ್ದರೆ, ನನಗೆ ಅಪ್ಪಣಿ ಕೊಡರಿ.' ಹೀಂಗೆ ಬೇಡಿಕೊಳ್ಳಲಿಕ್ಕೆ, ಆ ತಾಯೀ ಅಪ್ಪಣಿ ಮೀರಲಿಕ್ಕೆ ಬಾರದು; ಕುಂತೀದೇವಿಗೆ ವನಕ್ಕೆ ಅಪ್ಪಣಿ ಕೊಟ್ಟರು. ಹೀಂಗೆ ಐದು ಮಂದಿ ತೆರಳಿದರು. ಗತಲೋಚನ, ಗಾಂಧಾರೀ ಕುರುಡರು; ಸಂಜಯ ವಿದುರು ಕುಂತೀ-ದೇವಿ ಮೂರು ಮಂದೀ ಕಣ್ಣುಳ್ಳವರೂ ತೆರಳಿದರು. ಸಮುಸ್ತರೂ ಅಪ್ಪಣಿ ಕೊಂಡು, ಮೊದಲೇ ಕುರುಕ್ಷೇತ್ರಕ್ಕೆ ಹೋದರು. ಹೀಂಗೆ ಕ್ರಮದಿಂದ ತೀರ್ಥಕ್ಷೇತ್ರ ಯಾತ್ರಿ ಮಾಡತ, ಬದರಿಕಾಶ್ರಮಕ್ಕೆ ವೇದವ್ಯಾಸನ ಭರತಖಂಡಕ್ಕೆ, ಹಿಮವತ್ಪರ್ವತಕ್ಕೆ ಹೋದರು.

ಬದರಿಕಾಶ್ರಮದಲ್ಲಿ ಸತ್ಯವತೀಸುತ ದೇವತಿಗಳಿಂದ ಪೂಜಿತನಾಗ್ಯಾನೆ. ಅಲ್ಲಿ ಧೃತರಾಷ್ಟ್ರ ಹೋದಮ್ಯಾಲೆ ನಾರದಋಷೀನ ಕಂಡು ಕೇಳಿದ, 'ಎಲೈ ದೇವಋಷಿ ನಾರದನೇ, ನನ್ನ ಆಯುಷ್ಯ ಎಷ್ಟು ದಿವಸ ಉಳದದೆ? ಪಾಪದಲ್ಲಿ ನನ್ನ ಅಂತಃ-ಕರಣ ಬಹಳ ಕೆಟ್ಟದೆ. ಸಾಧನಸಂಪತ್ತು ಮಾಡಿಕೊಂಡೇನು. ಖಟ್ವಾಂಗರಾಯ

ತನ್ನ ಆಯುಸ್ಸು ಎರಡು ಘಳಿಗಿ ಉಳಿಪವೆಂದು ಕೇಳಿ, ಎರಡು ಘಳಿಗಿ ಒಳಗೆ ಪರಮಾತ್ಮವಿಷಯಕಜ್ಞಾನ ಸಂಪಾದಿಸಿ, ಸಾಧನಸಂಪತ್ತು ಮಾಡಿ, ಮುಕ್ತಿಮಾರ್ಗ ಐದಿದನು. ನನ್ನ ಆಯುಷ್ಯ ಎಷ್ಟು ಉಳದದೆ?' ಎಂದು ಕೇಳಲಾಗಿ, 'ಮೂರು ವರುಷ ಉಳದದೆ' ಎಂದು ನಾರದ ಹೇಳಿದನು. ರಾಯ ಬಹಳ ವೈರಾಗ್ಯ ಉಳ್ಳವನಾಗಿ, ತೀವ್ರ ತಪಸ್ಸು ಮಾಡಹೊಕ್ಕ. ಐದು ಮಂದಿ ಹೋದವರು ಬದರಿಕಾಶ್ರಮದಲ್ಲಿ ತೀವ್ರ ತಪಸ್ಸು ಮಾಡಥಾರೆಂದು ಪಾಂಡವರು ಕೇಳಿ, ಚತುರಂಗಸೇನಿಯಿಂದ ಯುಕ್ತರಾಗಿ, ಹೆಂಡರ ಕೂಡಿಕೊಂಡು, ದುರ್ಯೋಧನಾದಿಗಳ ಪತ್ನೀರ ಸಹವಾಗಿ, ಗತಲೋಚನನ ದರ್ಶನಕ್ಕೆ ಹೋದರು.

ಪಾಂಡವರು ಬರಥಾರೆಂದು ವಾರ್ತೆ ಕೇಳಿ ವಿದುರ, ಎದುರಿಗೆ ಹೋಗಿ ತನ್ನ ದೇಹ ವೃಕ್ಷದ ಮ್ಯಾಲಿಟ್ಟು ಧರ್ಮರಾಯನ ದೇಹದೊಳಗೆ ಹೊಕ್ಕ. ಇನ್ನು ನಾಲ್ಕು ಮಂದಿ ಉಳದರು. ಪಾಂಡವರಿಗೆ ಧೃತರಾಷ್ಟ್ರಗೆ ಭೆಟ್ಟಿ ಆಯಿತು. ಅಲ್ಲಿ ವೇದವ್ಯಾಸ ಪ್ರತ್ಯಕ್ಷನಾದ. ಸಮಸ್ತರೂ ಸ್ವಾಮಿಗೆ ಪೂಜಿ ಮಾಡಿ ನಮಸ್ಕಾರ ಮಾಡಿದರು. ವೇದವ್ಯಾಸ ಸಕಲರನ್ನ ಕೇಳಿದ, 'ನಿಮ್ಮ ಮನೋಬಯಕಿ ಏನದೆ ಹೇಳಿ. ನಾ ನಿಮ್ಮ ಮನೋಬಯಕೆ ಪೂರ್ಣ ಮಾಡಿಕೊಟ್ಟೀನು.' ಹೀಂಗೆಂತ ವೇದವ್ಯಾಸ ಕೇಳಲಿಕ್ಕೆ, ಪಾಂಡವರು 'ಸ್ವಾಮೀ ನಿನ್ನ ವಿಷಯಕ ದೃಢಭಕ್ತಿ ಕೊಡು' ಎಂದು ಬೇಡಿಕೊಂಡರು, ಕುಂತೀದೇವಿ ವೇದವ್ಯಾಸನ ಬೇಡಿಕೊಂಡಳು, 'ಸ್ವಾಮೀ ನನಗೆ ಮದುವಿ ಇಲ್ಲದಂಥ ಕನ್ಯಾವಸ್ಥೀಲಿ, ಸೂರ್ಯನ ದೆಸಿಯಿಂದ ಕರ್ಣನ್ನ ಹಡದೆ. ಪ್ರತ್ಯಕ್ಷ ನನ್ನ ಮಗ, ನಾ ಪಾಂಡವರ ಕೈಯ ಕೊಲ್ಲಿಸಿದೆ. ಕರ್ಣ ಮಗನಂತ ಹೇಳಿದ್ದಿಲ್ಲ. ಈ ಎರಡು ಪಾಪ ಹೋಗಲಿ' ಎಂದು ಬೇಡಿಕೊಂಡಳು.

ಧೃತರಾಷ್ಟ್ರ ತನ್ನ ಹೆಂಡತಿ ಗಾಂಧಾರೀನ್ನ ಕೇಳಿದ, 'ಸ್ವಾಮೀ ನಮ್ಮ ಮನೋಬಯಕಿ ಪೂರ್ಣ ಮಾಡಿ ಕೊಟ್ಟೀನೆಂಥಾನೆ. ಏನು ಬೇಡಿಕೊಂಬ ಎಂದು ಗಂಡಹೆಂಡರು ವಿಚಾರ ಮಾಡಿಕೊಂಡು, ವೇದವ್ಯಾಸನ್ನ ಬೇಡಿಕೊಂಡರು. 'ಹದಿನೆಂಟು ಅಕ್ಷೋಹಿಣಿ ಸಹವಾಗಿ ನನ್ನ ನೂರು ಮಂದಿ ಮಕ್ಕಳನ್ನ ನೋಡಥೀವಿ. ನಮಗೆ ತೋರಸಬೇಕು' ಎಂದು ಬೇಡಿಕೊಳ್ಳಲಾಗಿ, ಸ್ವಾಮಿ ಅಚಿಂತ್ಯಮಹಿಮನ ಆಜ್ಞಾದಿಂದ ಹದಿನೆಂಟು ಅಕ್ಷೋಹಿಣಿ ಕುರುಸೇನ, ಸಮಸ್ತರಾಯರಿಂದ ಯುಕ್ತರಾಗಿ, ದುರ್ಯೋಧನಾದಿಗಳು ನೂರು ಮಂದಿ, ಧೃತರಾಷ್ಟ್ರನ ಸಮೀಪಕ್ಕೆ ಬಂದರು. ಇವರನ್ನೆಲ್ಲ ನೋಡಲಿಕ್ಕೆ ದೃಷ್ಟಿ ಬೇಕಲ್ಲ, ಸ್ವಾಮಿ, ವೈಚಿತ್ರ್ಯವೀರ್ಯಗೆ ದಿವ್ಯಚಕ್ಷು ಕೊಟ್ಟನು. ಹದಿನೆಂಟು ಅಕ್ಷೋಹಿಣಿ ಮಹರ್ಬಲ ಮೊದಲಪ್ಪಂದೆ ತೋರಿಸಿದನು. 'ಒಂದು ದಿವಸ ಇವರೆಲ್ಲ ನಮ್ಮ ಬಳೀಲೆ ಇರಲಿ' ಎಂದು, ವೇದವ್ಯಾಸನ್ನ ಧೃತರಾಷ್ಟ್ರ ಬೇಡಿಕೊಂಡನು. ತಮ್ಮತಮ್ಮ ಹೆಂಡಂದಿರ ಸಹವಾಗಿ, ಯುದ್ಧ ಆಗದಕಿಂತ ಮೊದಲೆ ಹ್ಯಾಂಗಿದ್ದರು, ಹಾಂಗೆ ಸಮಸ್ತರೂ ತಮ್ಮತಮ್ಮ ಸ್ತ್ರೀಯರಿಂದ

ಯುಕ್ತರಾಗಿ ರಾತ್ರೀ ಕಳೆದರು. ಸ್ತ್ರೀಯರು ತಮ್ಮ ಗಂಡಂದರ ಬಿಡವಲ್ಲರು. ಅವರು ಸ್ತ್ರೀಯರನ್ನ ಬಿಡವಲ್ಲರು. ಸ್ತ್ರೀಪುರುಷರು ಯುಕ್ತರಾಗಿ ವೀರಸ್ವರ್ಗಕ್ಕೆ ಹೋದರು. ಉತ್ತರಾದೇವಿ ವ್ಯತಿರಿಕ್ತವಾಗಿ, ಸಮಸ್ತ ಸ್ತ್ರೀಯರೂ, ತಮ್ಮ ಗಂಡಂದರ ಸಂಗಡಲೇ, ವೇದವ್ಯಾಸನ ಆಜ್ಞೆಯಿಂದ ಸ್ವರ್ಗಕ್ಕೆ ಹೋದರು.

ಈ ಪ್ರಕಾರ ಭಾರತ, ಜನಮೇಜಯರಾಯನಿಗೆ ವೈಶಂಪಾಯನಾಚಾರ್ಯರು ಪೂರ್ಣವಾಗಿ ಹೇಳಿದ್ದಾರೆ. ಜನಮೇಜಯರಾಯ ಕೇಳಿದವನಾಗಿ, 'ಸತ್ತವರನ್ನ ಬದಕಿಸಿ ತೋರಿಸಿದನಲ್ಲ ಸ್ವಾಮಿ!' ಎಂದು ಆಶ್ಚರ್ಯ ಉಳ್ಳವನಾಗಿ, ಜನಮೇಜಯರಾಯ ವೇದವ್ಯಾಸನ್ನ ಬೇಡಿಕೊಂಡ. 'ಅಂದು ನನ್ನ ಪೂರ್ವಜರಿಗೆ ತೋರಿಸಿದಾತ ನೀನೇವೆ. ನನಗೆ ಒಂದು ಕೌತುಕ ತೋರಿಸಬೇಕು. ನಮ್ಮ ಪರೀಕ್ಷಿತರಾಯ ಸಾವೋ ಅಂದು ನಾ ಚಿಕ್ಕವನಿದ್ದೆ. ನಮ್ಮಪ್ಪನ್ನ ಕಂಡಿದ್ದಿಲ್ಲ. ನಮ್ಮ ತಂದಿ ಪರೀಕ್ಷಿತರಾಯ ಎಂಥಾತ, ನಮ್ಮ ತಂದೀನ್ನ ನೋಡೇನೆಂಥೀನಿ. ನೀ ನನಗೆ ತೋರಸಬೇಕು' ಎಂದು ಜನಮೇಜಯರಾಯ ಬೇಡಿಕೊಳ್ಳಲಾಗಿ, ಸ್ವಾಮಿ ಅದ್ಭುತ ಪರಾಕ್ರಮ ಉಳ್ಳಾತ, ಅದೇ ಕ್ಷಣದಲ್ಲಿ ವೈಕುಂಠದಿಂದ ಪರೀಕ್ಷಿತರಾಯನ್ನ ಕರೆಕಳುಹಿ, ಜನಮೇಜಯರಾಯನಿಗೆ ತೋರಿಸಿದನು. ಪರೀಕ್ಷಿತರಾಯ ಜನಮೇಜಯರಾಯನಿಗೆ ಪ್ರತ್ಯಕ್ಷ ಭೆಟ್ಟಿ ಕೊಟ್ಟು ಪುನಃ ವೈಕುಂಠಕ್ಕೆ ಹೋದನು. ಜನಮೇಜಯರಾಯ ಭಾರತ ಪ್ರತ್ಯಕ್ಷ ಫಲವೆಂದು ವಿಶ್ವಾಸ ಮಾಡಿದನು.

ಪಾಂಡವರು ಧೃತರಾಷ್ಟ್ರ, ಗಾಂಧಾರಿ, ಕುಂತೀ, ಸಂಜಯ ಇವರ ದರ್ಶನ ಕೊಂಡು ತಮ್ಮ ಹಸ್ತಿನಾವತಿಗೆ ಹೋದರು. ಜಗದಾಧಾರ ವಾಸುದೇವನ ಅನುಗ್ರಹಕ್ಕೆ ಪಾತ್ರರು, ಬಹಳ ಸುಖದಲ್ಲಿ ರಾಜ್ಯ ಆಳಹೊಕ್ಕರು. ಸಂಜಯ ವೇದವ್ಯಾಸನ ಸಮೀಪಕ್ಕೆ ಹೋಗಿರಲಾಗಿ, ಗತಲೋಚನ ವನಕ್ಕೆ ಹೋಗಿ ಮೂರು ವರುಷ ತುಂಬಿತು. ತನ್ನ ಅಗ್ನಿಹೋತ್ರದ ಅಗ್ನಿ ವನದೊಳಗೆ ಚಲ್ಲಿದನು. ಅಗ್ನಿ ಆತ್ಮಾರೋಪಣೆ ಮಾಡಿಕೊಂಡು, ಲಯಚಿಂತನಿ ಮಾಡತ, ಧೃತರಾಷ್ಟ್ರ ದೇಹವಿಯೋಗ ಮಾಡಿದನು. ಗಾಂಧಾರೀ, ಕುಂತೀ ದೇಹವಿಯೋಗ ಮಾಡಿಕೊಂಡು ತಮ್ಮ ಮೂಲರೂಪ ಕೂಡಿದರು. ದೇಹವಿಯೋಗಕಾಲದಲ್ಲಿ ರಕ್ತಪಾಷಾಣಗಳು ಬಾಯಲ್ಲಿ ಹಾಕಿಕೊಂಡು, ಸ್ವಾಮೀ ಪಾದಮೂಲದಲ್ಲಿ ಏಕಾಗ್ರಚಿತ್ತ ಉಳ್ಳವರಾಗಿ, ಮೂರು ಮುಂದಿ ದೇಹವಿಯೋಗ ಮಾಡಿಕೊಂಡು ತಮ್ಮ ಮೂಲರೂಪ ಕೂಡಿದರು. ಈ ವಾರ್ತಿ ಹಸ್ತಿನಾವತಿಗೆ ಹೋಯಿತು.

ಪಿತೃವರ್ಯರು ಸತ್ತರೆಂಬ ವಾರ್ತಿ ಕೇಳಿ, ಪಾಂಡವರು ಬಹಳ ಕ್ಲೇಶ ಉಳ್ಳವರಾದರು. ಧೃತರಾಷ್ಟ್ರ, ಗಾಂಧಾರೀ, ಕುಂತೀ ಇವರಿಗೆ ದ್ವಾದಶಾಹ ಕರ್ತವ್ಯ ಕರ್ಮ ಮಾಡಿದರು. ಅವರಿಗೆ ಊರ್ಧ್ವಗತಿ ಆಗೋಹಾಂಗೆ, ಯಥೇಷ್ಟ ಭೂರಿಭೋಜನ, ಬ್ರಾಹ್ಮಣರಿಗೆ ದ್ರವ್ಯದಕ್ಷಿಣೆ ಬಹಳೇ ಕೊಟ್ಟರು. ಸತ್ಪುತ್ರರು,

ಸದ್ವೈಷ್ಣವೋತ್ತಮರು, ಉತ್ತರಕರ್ಮ ಮಾಡಿದ ಕಾರಣ, ಪಿತೃಗಳು ತಮ್ಮ ದಿವ್ಯ-ಲೋಕಕ್ಕೆ ಹೋದರು. ಸಂಜಯ ತನ್ನ ಗುರು ವೇದವ್ಯಾಸನ ಸಮೀಪಕ್ಕೆ ಹೋಗಿದ್ದ. ವನದೊಳಗೆ ಸತ್ತಿದ್ದಿಲ್ಲ. ವೇದವ್ಯಾಸನ ಸೇವೆಯಿಂದ, ನಿಜಗತಿ ಗಂಧರ್ವಲೋಕ ಐದಿದನು. ದುರ್ಯೋಧನಾದಿಗಳು ಸತ್ತಮ್ಯಾಲೆ ಹದಿನೈದು ವರುಷ ಏಕಪ್ರಕಾರ್ಷಅಶ್ವಮೇಧಯಜ್ಞ ಮಾಡಿದರು. ಧೃತರಾಷ್ಟ್ರ ಮೂರು ವರುಷ ವನಕ್ಕೆ ಬಂದಿದ್ದ. ಹೀಂಗೆ ಹದಿನೆಂಟು ವರುಷ ಪಾಂಡವರು ಸರ್ವಸಾಮ್ರಾಜ್ಯ ಆಳಿದರು. ಧೃತರಾಷ್ಟ್ರಾದಿ ಐದು ಮಂದಿ ಸತ್ತಮ್ಯಾಲೆ ಪುನಃ ಹದಿನೆಂಟು ವರುಷ ಆಳಿದರು. ಹೀಂಗೆ ಮೂವತ್ತಾರು ವರುಷ ಸಾಮ್ರಾಜ್ಯ ಆಳಿದರು. ಹರಿಪರವಾಗಿ ಪಾಂಡವರು ರಾಜ್ಯ ಆಳಿದರೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತ-ತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ, 'ಶ್ರೀಕೃಷ್ಣಚರಿತೇ ಧೃತರಾಷ್ಟ್ರ ಸ್ವರ್ಗಾರೋಹಣಃ' ಎಂಬ ಮೂವತ್ತೊಂದನೇ ಅಧ್ಯಾಯ ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೩೨

ಶ್ರೀಕೃಷ್ಣಚರಿತೇ ಪಾಂಡವ ಸ್ವರ್ಗಾರೋಹಣಃ

ಈ ಮೂವತ್ತೆರಡನೇ ಅಧ್ಯಾಯದಲ್ಲಿ ಮುಸಲಪರ್ವ, ಭಾರತಮಹಾಪ್ರಸ್ಥಾನಿಕಪರ್ವ, ಸ್ವರ್ಗಾರೋಹಣಪರ್ವ, ಹೀಂಗೆ ಮೂರು ಪರ್ವ ಭಾರತಕಥ, ಶ್ರೀಮದಾಚಾರ್ಯರು ಸಂಗ್ರಹಿಸಿ ಹೇಳಥಾರೆ. ಧೃತರಾಷ್ಟ್ರ ವನಕ್ಕೆ ಹೋಗಿ ಸಪ್ತವ್ಯಾಲಿ, ಪಾಂಡವರು ಹದಿನೆಂಟು ವರುಷ ರಾಜ್ಯವಾಳಿದ್ದಾರೆ. ಪಾಂಡವರು ರಾಜ್ಯ ಆಳುವಾಗ ಸ್ವಾಮಿ ಯಾದವಪತಿ ಶ್ರೀಕೃಷ್ಣ ಕುರುಕ್ಷೇತ್ರದಲ್ಲಿ ಹನ್ನೆರಡು ವರುಷ ಯಜ್ಞ ಮಾಡಿದ್ದಾನೆ. ಸ್ವಾಮಿ ಜನಾರ್ದನ ಯಜ್ಞ ಮಾಡಥಾನೆಂದು, ಪಾಂಡವರು ಕುರುಕ್ಷೇತ್ರಕ್ಕೆ ಬಂದು ಹನ್ನೆರಡು ವರುಷ ವಾಸ ಮಾಡಿಕೊಂಡಿದ್ದರು. ಸ್ವಾಮಿ, ಯಜ್ಞದಲ್ಲಿ ದೀಕ್ಷ ಕಟ್ಟಿಕೊಂಡು ಕುಳಿತನು. ವೇದವ್ಯಾಸ, ಪರಶುರಾಮ ಯಜ್ಞದಲ್ಲಿ ಸಭಾಪತಿಗಳಾದರು. ದಕ್ಷಪ್ರಜೇಶ್ವರ, ಭೃಗುಋಷಿ ಮೊದಲಾದವರು ಋತ್ವಿಕರಾದರು. ಸ್ವಾಮಿ ಯಜ್ಞ ಮಾಡಥಾನೆಂದು ಸಮಸ್ತ ಭೂಪಾಲಕರು ಬಂದಿಹೋರು. ಯಾದವರು, ಪಾಂಡವರು ಸಕಲರೂ ಸಮ್ಮೇಳವಾಗಿಹೋರು. ಬ್ರಹ್ಮ, ರುದ್ರ, ಇಂದ್ರಾದಿ ದೇವತಿಗಳು ಭೃತ್ಯರಾಗಿ ವಾಲ್ಗೈಸತಿಹೋರು. ಒಬ್ಬರೂ-ಬಂದಿದ್ದಿಲ್ಲವೆಂದು ಅನಸಲಿಲ್ಲ ಭೂತಳದಲ್ಲಿ ನಾಲ್ಕು ವರ್ಣದವರು, ನಾಲ್ಕು ಆಶ್ರಮದವರು, ಸ್ತ್ರೀಯರು, ವೃದ್ಧರು, ಬಾಲಕರು ಸಮಸ್ತರೂ ಬಂದಿಹೋರು. ಅತಳಾದಿ ಸಪ್ತಲೋಕ, ಸ್ವರ್ಗಾದಿ ಸಪ್ತಲೋಕ, ಹೀಂಗೆ ಹದಿನಾಲ್ಕು ಲೋಕದವರು ಯಜ್ಞಮಂಟಪಕ್ಕೆ ಬಂದಿಹೋರು. ನಾಗಲೋಕದಿಂದ ನಾಗಗಳು, ಹೀಂಗೆ ಸಮಸ್ತ ಪ್ರಾಣಿಗಳು ಬಂದಿಹೋರು. ಋಷಿಗಳಿಗೆ ದೇವತಿಗಳಿಗೆ ತತ್ತ್ವನಿರ್ಣಯ ಹತ್ತಿತು. ಮನುಷ್ಯರಾದವರು ದೇವತಿಗಳ ತತ್ತ್ವನಿರ್ಣಯ ಅರಿತವರಲ್ಲ. ಮನುಷ್ಯರು ಸಂಶಯಜ್ಞಾನವುಳ್ಳವರಾದರೆ ಪರಶುರಾಮ, ವೇದವ್ಯಾಸರು ಅವರ ಸಂಶಯನೆಲ್ಲ ಪರಿಹರಿಸಿಬಿಡೋರು. ಈ ಪ್ರಕಾರ ಬ್ರಾಹ್ಮಣರು ದೇವತಿಗಳ ಮುಖದಿಂದ ತತ್ತ್ವನಿರ್ಣಯ ಚೆನ್ನಾಗಿ ತಿಳದುಕೊಂಡರು. ಕುರುಕ್ಷೇತ್ರದಲ್ಲಿ ತ್ರಿರೂಪಿ ನಾರಾಯಣರ ದರ್ಶನದಿಂದ ಚತುರ್ವಿಧ ಪುರುಷಾರ್ಥ ಉಳ್ಳವರಾದರು. ಧರ್ಮ ಅರ್ಥ ಕಾಮ ಮೋಕ್ಷ ಸುಲಭವಾಗಿ ತೋರಿದವು. ಸಮಸ್ತ ಪ್ರಾಣಿಗಳು ಮಧುರರಸ ಅನ್ನದಿಂದ ಸಂತುಷ್ಟರಾಗಿಹೋರು. ಕುರುಕ್ಷೇತ್ರ ವೈಕುಂಠಕ್ಕೆ ಸದೃಶವಾಗಿಹೋದು ಸರ್ವರಿಗೆ ಸರ್ವಾಭೀಷ್ಟವಾಗತಿಹೋದು. ತ್ರಿರೂಪಿ ನಾರಾಯಣರು ಪ್ರಯತ್ನವಿಲ್ಲದೆ ಪ್ರತ್ಯಕ್ಷ ಕಾಣತಿಹೋರು. ಹೀಂಗೆ ಶ್ರೀಕೃಷ್ಣ, ಹನ್ನೆರಡು ವರುಷ ಏಕಪ್ರಕಾರ ಯಜ್ಞ ಮಾಡಿ ಮುಗಿಸಿದನು. ಸಮಸ್ತರಿಗೆ ಉಡುಗೊರಿ ಉತ್ಸಾಹಗಳು ಕೊಟ್ಟು, ಬಹುಮಾನ ಮಾಡಿ ಕಳುಹಿಸಿ-

ಕೊಡೋದಕ್ಕೆ ಒಂದು ವರುಷ ಹತ್ತಿತು. ಇನ್ನು ಮುಸಲಪರ್ವ ಭಾರತಕಥ ಹೇಳಥಾರೆ.

ಸ್ವಾಮಿ ಶ್ರೀಕೃಷ್ಣ ತಮ್ಮ ಯಾದವಕುಲ ಸಂಹಾರಾರ್ಥವಾಗಿ, ವಿಪ್ರಶಾಪ ನಿಮಿತ್ತ ಮಾಡಿಕೊಟ್ಟ. ಯಾದವರಿಗೆ ಬ್ರಾಹ್ಮಣಶಾಪವಾಗಲಿಕ್ಕೆ ಕಾರಣವೇನು ಎಂದರೆ, ಋಷಿಗಳು ತಮ್ಮ ಆಶ್ರಮದಲ್ಲಿ ತಪಸ್ಸು ಮಾಡತಿರಲಿಕ್ಕೆ—ಋಷಿಗಳು ತ್ರಿಕಾಲದರ್ಶಿಗಳೆನಸ್ಥಾರೆ—ಋಷಿಗಳ ಪರೀಕ್ಷ ಮಾಡಬೇಕಾಗಿ, ಯಾದವರೆಲ್ಲ ಕೂಡಿ ಕೃಷ್ಣನ ಮಗ ಸಾಂಬಗೆ ಹೆಣ್ಣುವೇಷಾಕಾರ ಮಾಡಿ, ಸೀರಿ ಉಡಸಿ, ಗರ್ಭಿಣಿ-ಯೋಪಾದಿಯಲ್ಲಿ ತೋರೋಹಾಂಗೆ ಮಾಡಿ, ಅವರ ಸಮೀಪಕ್ಕೆ ಕರಕೊಂಡು ಹೋಗಿ, 'ಈ ಸ್ತ್ರೀ ಏನು ಹಡದಾಳು?' ಎನಲು, ಋಷಿಗಳು ದೊಡ್ಡವರು, ಯಾದವರು ಈರ್ಷ್ಯತನದಿಂದ ಕೇಳಬಂದಾರೆಂದು ಜ್ಞಾನದಿಂದ ತಿಳದು, 'ಈಕಿ ಉದರದಿಂದ ಒನಕಿ ಹುಟ್ಟಿ ನಿಮ್ಮ ಕುಲ ಸಂಹಾರವಾದೀತು.' ಹೀಂಗಂತ ಋಷಿಗಳು ಅನಲಿಕ್ಕೆ, ಅಲ್ಲಿ ಒನಕಿ ನಿರ್ಮಾಣವಾಯಿತು. ಯಾದವರೆಲ್ಲ ಪಶ್ಚಾತ್ತಾಪ ಉಳ್ಳವರಾಗಿ, ಉಗ್ರಸೇನರಾಯಗೆ ಈ ವಾರ್ತಿ ಹೇಳಿದರು. ಉಗ್ರಸೇನರಾಯನ ಆಜ್ಞದಿಂದ ಒನಕಿ ತೇಯಲಿಕ್ಕೆ, ಅದರ ತುದಿಗೆ ಉಕ್ಕುಹಾಕಿದ್ದು ತೇಯಲಿಕ್ಕೆ ಬಾರದ ಕಾರಣ, ಸಮುದ್ರದೊಳಗೆ ಈಡ್ಯಾಡಲಿಕ್ಕೆ, ಆ ಉಕ್ಕು ಮೀನ ನುಂಗಿತು. ಮೀನ ಕೊಂದು, ಜರಾ ಎಂಬಂಥ ವ್ಯಾಧ, ಮೀಸಿನ ಹೊಟ್ಟೆಯೊಳಗೆ ಇದ್ದ ಕಬ್ಬಿಣ ತನ್ನ ಧನುಸ್ಸಿನ ತುದಿಗೆ ಹಾಕಿದನು. ಒನಕೀ ತೇಯ್ದದ್ದು, ಸಮುದ್ರತೀರದಲ್ಲಿ ವಜ್ರಕ್ಕೆ ಸದೃಶ ಆಸಾಗಿ ಬೆಳೀತು. ಈ ಪ್ರಕಾರ ದೇವರ ಇಚ್ಛಾದಿಂದ ಯಾದವ-ಕುಲಕ್ಕೆ ವಿಪ್ರಶಾಪ ಆಗಲಿಕ್ಕೆ, ಶ್ರೀಕೃಷ್ಣದೇವರು ಉದ್ಧವಗೆ ಹೇಳಥಾನೆ. 'ನೀ ಇನ್ನು ಇಲ್ಲಿ ಇರಬ್ಯಾಡ. ಬದರಿಕಾಶ್ರಮಕ್ಕೆ ಹೋಗು.' ಹೀಂಗೆಂದು ಹೇಳಿ, ತತ್ತ್ವೋಪ-ದೇಶ ಮಾಡಿದ್ದಾನೆ. ಶ್ರೀಕೃಷ್ಣ-ಉದ್ಧವರ ಸಂವಾದ, ಭಾಗವತ ಏಕಾದಶ-ಸ್ಕಂಧದಲ್ಲಿ ಹೇಳೀದೆ. ಸ್ವಾಮಿ ಒಂದುನೂರಾಏಳುವರುಷ ಪಾಂಡವರಿಂದ ಯುಕ್ತ ನಾಗಿ, ಈ ಭೂಮೀನ್ನ ಭೂವೈಕುಂಠ ಮಾಡಿ ಆಳಿದನು. ದುರ್ಯೋಧನ ರಣರಂಗದಲ್ಲಿ ಸಾಯಲಿಕ್ಕೆ, ಕಲಿಯುಗ ಪ್ರಾಪ್ತವಾಯಿತು. ದುರ್ಯೋಧನ ಸತ್ತಮ್ಯಾಲೆ, ಮೂವತ್ತಾರು ವರುಷ ಪಾಂಡವರಿಂದ ಯುಕ್ತನಾಗಿ ಸ್ವಾಮಿ, ಸರ್ವಸಾಮ್ರಾಜ್ಯ ಆಳಿದನು. ನೋಡಿದರೆ ಕಲಿಯುಗವಾದರೂ, ಕೃತಯುಗದ ಧರ್ಮಕ್ಕಿಂತಲೂ ಅಧಿಕ ನಡಸಿದನು. ಕಲಿಯುಗದಲ್ಲಿ ಆಲ್ಪ ಪುಣ್ಯ ಮಾಡಿದರೆ ಅಧಿಕಫಲವಾಗತದೆ, ಬಹಳ ಪಾಪ ಮಾಡಿದರೆ ಥೋಡೆ ಫಲವಾಗತದೆ. ಅದಕಾರಣ ಕೃತಯುಗ ನೋಡಲಿಕ್ಕೆ ಕಲಿಯುಗ ಶ್ರೇಷ್ಠ. ಶ್ರೀಕೃಷ್ಣ, ಪಾಂಡವರು ಭೂಮೀಮ್ಯಾಲೆ ಇದ್ದ ಕಾರಣ ಇನ್ನೂ ಹೆಚ್ಚಾಯಿತು. ಲೋಕದಲ್ಲೆಲ್ಲ ಹರಿಭಕ್ತರೆ, ಕಲಿಯುಗದಲ್ಲಿ ಏನೂ ಪಾಪ ಇಲ್ಲಥಾಂಗಾಯಿತು.

ಈ ಪ್ರಕಾರ ಸಮಸ್ತ ಪ್ರಾಣಿಗಳು ಪುಣ್ಯ ಮಾಡಲಾಗಿ, ಬ್ರಹ್ಮಾದಿ ದೇವತೆಗಳು, ಯಾದವೋತ್ತಮನ ದರ್ಶನಕ್ಕೆ ಬಂದು, 'ಸ್ವಾಮೀ, ಯುಗಧರ್ಮ ಮುಗಿಗತದಲ್ಲ! ನೀ ಭೂಮೀ ಮ್ಯಾಲೆ ಇದ್ದಕಾರಣ, ಸಮಸ್ತರೂ ಧರ್ಮಗಳ ಮಾಡಥಾರೆ, ಪಾಪ ಲೇಶವಿಲ್ಲ ಎಂಭಾಂಗಾಯಿತು. ಇನ್ನು ಅವತಾರ ಸಾಕುಮಾಡ-ಬೇಕು. ಪರಂಧಾಮಕ್ಕೆ ಬರಬೇಕು' ಎಂದು ಬ್ರಹ್ಮರುದ್ರಾದಿ ದೇವತೆಗಳು, ಕೇಶವಗೆ ಬೇಡಿಕೊಂಡರು. ಸ್ವಾಮಿ ಅಚ್ಯುತ, ದೇವತೆಗಳಿಂದ ಸ್ತೋತ್ರ ಮಾಡಿಸಿ-ಕೊಂಡು, 'ಇನ್ನು ಪರಂಧಾಮಕ್ಕೆ ತೆರಳಬೇಕು. ಯಾದವರು ಮಹಾಪ್ರಬಲರು, ಕಲೀ ವ್ಯಾಪಾರ ನಡೀಗೊಡರು. ಆದಕಾರಣ ಯಾದವರ ವಿನಾಶ ಮಾಡಬೇಕಾಗಿ ಪರ್ವಕಾಲ ಬಂದದೆ.' ಹೀಂಗೆ ಆಲೋಚಿಸಿ, ಯಾದವರಿಗೆ 'ಪ್ರಭಾಸಕ್ಷೇತ್ರಕ್ಕೆ ನಡೀರಿ' ಎಂದು ಆಜ್ಞಾಪಿಸಿದ. 'ಪರ್ವಕಾಲದಲ್ಲಿ ವಿಶೇಷವಾಗಿ ದಾನಧರ್ಮಾದಿಗಳು ಮಾಡಬೇಕು.' ಹೀಂಗಂತ ಹೇಳಿದನು. ಮರಣಕಾಲದಲ್ಲಿ ವಿಶೇಷ ಧರ್ಮ ಮಾಡ-ಬೇಕು. ದ್ರವ್ಯ ವೆಚ್ಚ ಮಾಡಿದ್ದರಿಂದ ಪರಲೋಕವಾಗತದೆ. ಮರಣ ಸ್ವಗೃಹದಲ್ಲಿ ಆಗಬಾರದು. ಸ್ವಗೃಹವಾಗಿತ್ತು, ಪುಣ್ಯಕ್ಷೇತ್ರವಾದರೂ, ಮತ್ತೊಂದು ನೀಚ-ಕ್ಷೇತ್ರವಾದರೂ, ಅಲ್ಲಿ ಹೋಗಿ ದೇಹವಿಯೋಗ ಮಾಡಬೇಕಲ್ಲದೆ, ತಾ ಇದ್ದದ್ದು ದೊಡ್ಡ ಕ್ಷೇತ್ರವೆಂದು ಮರಣ ಐದಬಾರದು. ಆದಕಾರಣ ದ್ವಾರಾವತಿ ದೊಡ್ಡ ಕ್ಷೇತ್ರವಾದರೂ, ಆದರಕಿಂತ ಅಧಿಕ ಕ್ಷೇತ್ರ ಸಮೀಪದಲ್ಲಿದ್ದಕಾರಣ, ಪ್ರಭಾಸ-ಕ್ಷೇತ್ರಕ್ಕೆ ಪರ್ವಕಾಲಕ್ಕೆ ನಡೀರೆಂದು ಯಾದವರಿಗೆಲ್ಲ ಆಜ್ಞಾಪಿಸಿದ. ಪ್ರಭಾಸ-ಕ್ಷೇತ್ರದಲ್ಲಿ ತನ್ನ ಸ್ವಜನರ ಕೈಯಿಂದ, ಯಜ್ಞಾದಿ ಕರ್ಮಗಳು ಮಾಡಿಸಿ, ಅಪಾರ ದ್ರವ್ಯ ದಕ್ಷಿಣೆಗಳು ಕೊಡಿಸಿದನು. ಯಾದವರೆಲ್ಲ ಮೈರೇಯ ಎಂಬ ರಸ ಪಾನ ಮಾಡಿ, ಶ್ರೀಕೃಷ್ಣನ ಮಾಯಾದಿಂದ ಮೋಹಿತರಾಗಿ, ತಮ್ಮತಮ್ಮ ಸ್ಮರಣೆ ತಮಗೇ ಇಲ್ಲದೆ ಒಬ್ಬೊಬ್ಬರ ಗುಣದೋಷ ಮತ್ತೊಬ್ಬರು ವಿಚಾರ ಮಾಡತ, ಪರಸ್ಪರ ವರ್ಮಕರ್ಮಗಳ ಎತ್ತಿ, ಕೋಪದಿಂದ ಮೋಹಿತರಾಗಿ, ಸಮುದ್ರತೀರದಲ್ಲಿ ಆಲ ಬೆಳದಿತ್ತು, ಆ ಆಲುಗಳ ಕಿತ್ತುಕೊಂಡು, ಪರಸ್ಪರ ಹೊಡದಾಡಿ ಅಷ್ಟೂ ಮಂದಿ ಯಾದವರು ಸತ್ತುಹೋದರು. ಬಲರಾಮ ಈ ಅನರ್ಥ ಕಂಡು, ಯೋಗ-ಧ್ಯಾನ ಮಾಡಿ ಸತ್ತು, ತನ್ನ ಮೂಲ ಶೇಷರೂಪ ಐದಿದನು. ರುಕ್ಮಿಣೀ ಅಗ್ನಿ ಯೊಳಗೆ ಪ್ರವೇಶವಾದಳು. ಸತ್ಯಭಾಮಾ ವನದೊಳಗೆ ಅದೃಶ್ಯಳಾದಳು. ಹೀಂಗಂತ ಹರಿವಂಶದಲ್ಲಿ ಮೋಹಕ ಕಥ ಹೇಳತದೆ. ಅದನ್ನೆಲ್ಲ ವಿಸ್ತರಿಸಿ ಶ್ರೀ ಮಧ್ವಾ-ಚಾರ್ಯರು ನಿರ್ಣಯ ಹೇಳ್ಯಾರೆ.

ಸ್ವಾಮಿ ಪರಂಧಾಮಕ್ಕೆ ಹೋಗುವಾಗ್ಗೆ, ದಾರುಕನ ಕೈಯ ಪಾಂಡವರಿಗೆ ಹೇಳಿಕಳುಹಿಸಿದ. 'ನಾನು ನನ್ನ ಲೋಕಕ್ಕೆ ಹೋಗಥೀನಿ. ನೀವು ಬಹಳ ಸನ್ನದ್ಧ-ರಾಗಿರರಿ.' ಹೀಂಗಂತ ಹೇಳಿಕಳುಹಿಸಿ, ಅಶ್ವತ್ಥವೃಕ್ಷದ ಮೂಲದಲ್ಲಿ, ತನ್ನ ಎಡದ

ತೊಡೀ ಮ್ಯಾಲೆ ಈನ್ನ ಬಲದ ಕಾಲು ಹಾಕಿ, ಕಾಲಬೆರಳು ಅಲ್ಲಾಡಿಸತ ಕುಳಿತಿರ ಲಿಕ್ಕೆ, ಸ್ವಾಮೀ ಪಾದಕಮಲ ಎಳೀ ಸೂರ್ಯನೋಪಾದೀಲಿ, ಕೆಂಪುವರ್ಣದಿಂದ ಹೊಳೀತಿಹೋದು. ಜರಾ ಎಂಬ ವ್ಯಾಧ ಮೃಗವೆಂದು ತಿಳದು, ಗುರಿನೂಡಿ ಬಾಣ ಎಚ್ಚಿದನು. ಸ್ವಾಮೀ ಪಾದಕಮಲಕ್ಕೆ ಸ್ಪರ್ಶವಾಗಿ ಬಿತ್ತು. ಸ್ವಾಮಿ ಅಭೇದ್ಯ, ವ್ಯಾಧನ ಬಾಣದಿಂದ ಸ್ವಾಮಿಗೆ ಲೇಶಮಾತ್ರ ದುಃಖವಿಲ್ಲ. ಜರಾನಾಮಕ ವ್ಯಾಧ ಸಮೀಪಕ್ಕೆ ಒಂದು ನೋಡಥಾನೆ, ಸ್ವಾಮಿ ಅನಂತವೇದಪ್ರತಿಪಾದ್ಯ, ಬ್ರಹ್ಮಾದಿ ದೇವತಿಗಳಿಗೆ ಅರಸು, ಲಕ್ಷ್ಮೀಪತಿ ಕುಳಿಥಾನೆ! 'ದೇವರಿಗೆ ನಾ ಬಾಣ ಎಚ್ಚಿದೆನಲ್ಲ' ಎಂದು ಕ್ಲೇಶದಿಂದ ಮೂರ್ಛಿತನಾಗಿ ಬಿದ್ದ. ಒಂದಿಷ್ಟು ಎಚ್ಚರಿಕೆ ಉಳ್ಳವನಾಗಿ, 'ಸ್ವಾಮೀ, ನಾ ಪರಮ ಪಾಪಿ! ಸ್ವಾಮೀ ದ್ರೋಹ ಮಾಡಿದ್ದೀನಿ. ನನ್ನ ಉಳಹ-ಬ್ಯಾಡ, ಕೊಂದುಬಿಡು' ಎಂದು ಬೇಡಿಕೊಳ್ಳಲಾಗಿ, 'ವಿಪ್ರಶಾಪ ಸತ್ಯ ಮಾಡ-ಬೇಕಾಗಿ, ನಿನಗೆ ನಾನೇ ಬುದ್ಧಿ ಪ್ರೇರಿಸಿದ್ದೀನಿ. ಬಾಣ ನಿನ್ನಿಂದ ಎಚ್ಚಿಸಿದ್ದೀನಿ. ಈ ಪಾಪ ನಿನಗಿಲ್ಲ. ಈ ದೇಹದಿಂದೇ ಸ್ವರ್ಗಕ್ಕೆ ಹೋಗು' ಎಂದನು. ಸ್ವಾಮಿ, ಭಕ್ತರ ಜನ್ಮಜರಾದಿ ದೋಷಗಳ ಮರ್ದಿಸುವಂಥ ಜನಾರ್ದನ, ಅದೇ ದೇಹದಿಂದ ವ್ಯಾಧನ್ನ ಸ್ವರ್ಗಕ್ಕೆ ಕಳುಹಿದ್ದು ಆಶ್ಚರ್ಯವಲ್ಲ.

ವೈರಾಗ್ಯಜ್ಞಾನವುಳ್ಳ ಇಂಥಾ ಭಕ್ತಗೆ ವ್ಯಾಧಜನ್ಮ ಬರಲಿಕ್ಕೆ ಕಾರಣವೇನು ಎಂದರೆ, ಪೂರ್ವದಲ್ಲಿ ಭೃಗುಋಷಿ ಆಗಿ ಬಂದು, ಸ್ವಾಮೀ ಎದಿಗೆ ಒದ್ದಿದ್ದ. ಬ್ರಾಹ್ಮಣ ತನ್ನ ಎದಿಗೆ ಒದ್ದನೆಂದು, ಶ್ರೀವತ್ಸಚಿನ್ಹ ಒಂದು ಭೂಷಣ ಮಾಡಿ-ಕೊಂಡ. ಇಂಥಾ ಭಕ್ತವತ್ಸಲ, ಸಜ್ಜನಪ್ರಿಯ, ಬ್ರಾಹ್ಮಣರಲ್ಲಿ ಪ್ರೀತಿವುಳ್ಳಾತ, ತನ್ನ ಎದಿ ಬಹಳ ಕಠಿಣ, ಬ್ರಾಹ್ಮಣರ ಪಾದಗಳು ಬಹಳ ಕೋಮಲ; ಪಾದಕ್ಕೆ ಪೆಟ್ಟು ತಾಕಿದ್ದೀತಲ್ಲ ಎಂದು, ದ್ವಿಜನ ಕಾಲು ಒತ್ತ್ಯಾನೆ. ಇಂಥಾ ಭಕ್ತಪ್ರಿಯ. ಭೃಗುಋಷಿ, ಆ ದೋಷದಿಂದ ವ್ಯಾಧನಾಗಿ ಹುಟ್ಟಿದ್ದಾನೆ. ಸ್ವಾಮೀ ಪಾದಮೂಲ ದಲ್ಲಿ ಬಾಣ ಹೊಡದನಲ್ಲ ಎಂದು ಪಶ್ಚಾತ್ತಾಪ ಉಳ್ಳವನಾದಕಾರಣ, ಭಕ್ತಪ್ರಿಯ ಸ್ವಾಮಿ, ಕಿರಾತನ್ನ ಅದೇ ದೇಹದಿಂದ ಸ್ವರ್ಗಕ್ಕೆ ಕಳುಹಿದ್ದಾನೆ. 'ಇನ್ನು ಸಂಸಾರ-ದಲ್ಲಿರಬ್ಯಾಡ ಸ್ವರ್ಗಕ್ಕೆ ಹೋಗು' ಎನ್ನಲು, 'ಹ್ಯಾಂಗೆ ಹೋಗಲಿ?' ಎಂದು ಕಿರಾತ ಕೇಳಲಿಕ್ಕೆ, ಸ್ವರ್ಗದಿಂದ ಅದೇ ಘಳಿಗೀಲಿ ವಿಮಾನ ತಂದು, ದೇವದೂತರು ಜರಾನಾಮಕ ವ್ಯಾಧನ್ನ ಅದೇ ದೇಹದಿಂದ ಸ್ವರ್ಗಕ್ಕೆ ಕೊಂಡುಹೋದರು. ಭೃಗು ಋಷಿ ಕಿರಾತನಾಗಿ ಹುಟ್ಟಿದ್ದರೂ, ಭಾವ ಕೆಟ್ಟಿದ್ದಿಲ್ಲ. ಮನೋದೋಷ ಇದ್ದಿಲ್ಲ. ಅಜ್ಞಾನದಲ್ಲಿ ಎದಿಗೆ ಒದ್ದಿದ್ದ. ಅಜ್ಞಾನದಲ್ಲಿ ಸ್ವಾಮೀ ಪಾದಮೂಲದಲ್ಲಿ ಬಾಣ ಎಚ್ಚಿದ್ದ. ವೈರಾಗ್ಯ ಉಳ್ಳವನಾಗಿದ್ದ. ಭಕ್ತಿ ಲೋಪವಾಗಿದ್ದಿಲ್ಲ. ಆದ್ದರಿಂದ ಅದೇ ದೇಹದಿಂದ, ವಿಮಾನ ಏರಿಕೊಂಡು ಸ್ವರ್ಗಕ್ಕೆ ಹೋದನು.

ಸ್ವಾಮಿ ಅಶ್ವತ್ಥಮೂಲದಲ್ಲಿ ಕುಳಿಥಾನೆ. ಅಲ್ಲಿಗೆ ಬ್ರಹ್ಮ ರುದ್ರ ಇಂದ್ರಾದಿ ದೇವತಿಗಳು ಬಂದರು. 'ಸ್ವಾಮೀ ಅವತಾರಪ್ರಯೋಜನ ಮುಗಿಯಿತು. ಇನ್ನು ಪರಂಧಾಮಕ್ಕೆ ಬರಬೇಕು' ಎಂದು ಪ್ರಾರ್ಥಿಸಲಿಕ್ಕೆ, 'ಒಳ್ಳೇದು ಬರಥೀನಿ' ಎಂದು ಹೇಳಿ, ಭೂಮೀ ಮ್ಯಾಲೆ ತನ್ನ ಚಿದಾನಂದರೂಪ ಇಟ್ಟನು. ಏನುಕಾರಣ ಚಿದಾನಂದರೂಪ ಇಟ್ಟನೆಂದರೆ, ಪ್ರಾಣಿಗಳು ಸಂತಾನಾರ್ಥವಾಗಿ ಗೋಪಾಲಮಂತ್ರ ಜಪಿಸ್ಯಾರು, ಅವರಿಗೆ ಅಭೀಷ್ಟ ಕೊಡಬೇಕಾಗಿ ಕೃಷ್ಣರೂಪ ಭೂಮೀಮ್ಯಾಲೆ ಇಟ್ಟನು. ಒಂದು ಕೃಷ್ಣಮೂರ್ತೀ ರೂಪ ಸೂರ್ಯಮಂಡಲದಲ್ಲಿಟ್ಟನು. ಹೀಂಗೆ ಪರಂಧಾಮಕ್ಕೆ ಹೋಗುವಾಗ ಮಹಾರುದ್ರ ಬೇಡಿಕೊಂಡ, 'ಕೃಷ್ಣಮೂರ್ತೀ ಪೂಜಿ ಮಾಡೇನಂಥೀನಿ. ನನ್ನಲ್ಲಿ ಒಂದು ರೂಪದಲ್ಲಿ ನಿಂದರಬೇಕು.' ಹೀಂಗಂತ ಮಹಾರುದ್ರ ಬೇಡಿಕೊಳ್ಳಲಿಕ್ಕೆ, ಕೈಲಾಸದಲ್ಲಿ ಮಹಾರುದ್ರನ ಪೂಜಾ ಕೊಳ್ಳಲು, ಕೈಲಾಸಪರ್ವತದಲ್ಲಿ ಒಂದು ಚಿದಾನಂದರೂಪ ಇಟ್ಟನು. ಬ್ರಹ್ಮದೇವರು ಬೇಡಿಕೊಂಡ, 'ಸ್ವಾಮೀ ಸತ್ಯಲೋಕದಲ್ಲಿ ಒಂದು ರೂಪದಲ್ಲಿ ನಿಂದರಬೇಕು' ಎಂದು ಬೇಡಿಕೊಳ್ಳಲಿಕ್ಕೆ, ಬ್ರಹ್ಮರಾಯನ ಕೈಯ ಪೂಜಿಗೊಳ್ಳಬೇಕಾಗಿ, ಸತ್ಯಲೋಕದಲ್ಲಿ ಒಂದು ಚಿದಾನಂದರೂಪದಲ್ಲಿ ನಿಂತನು. ಹೀಂಗೆ ನಾಲ್ಕು ಚಿದಾನಂದರೂಪ ನಾಲ್ಕು ಸ್ಥಳಗಳಲ್ಲಿ ಇಟ್ಟನು. ಐದನೇ ಚಿದಾನಂದರೂಪದಿಂದ ವೈಕುಂಠಕ್ಕೆ ಹೋಗಥಾನೆ. ಬ್ರಹ್ಮಾದಿ ದೇವತಿಗಳು ಕಳುಹುತ ಹೋಗಥಾರೆ. ಸ್ವಾಮೀ ತೇಜಸ್ಸು ನೋಡಲಾರದೆ ಕಣ್ಣು ಮುಚ್ಚಿಕೊಳ್ಳತಿಹೋರು. ಸ್ವಾಮೀ ತೇಜಸ್ಸು, ಬ್ರಹ್ಮಾದಿ ದೇವತಿಗಳ ಕಣ್ಣು ಕುಕ್ಕತಿಹೋದು. ಸ್ವಾಮೀರೂಪ, ಆದರದಿಂದ, ಪರಮ ಸ್ನೇಹದಿಂದ ನೋಡತಿಹೋರು. ದೇವತಿಗಳು ತಮ್ಮ ಮರ್ಯಾದಿ ಸ್ಥಳದಲ್ಲಿ ನಿಂತರು. ಗರುಡ ಶೇಷ ರುದ್ರ ಇವರು, ಬ್ರಹ್ಮದೇವರ ಬಳಿವಿಡಿದು ತಮ್ಮತಮ್ಮ ಗಮ್ಯಸ್ಥಳಕ್ಕೆ ಹೋದರು. ಗರುಡ ಶೇಷ ರುದ್ರರು ತಮ್ಮ ಸ್ಥಳದಲ್ಲಿ ನಿಂತರು. 'ಇನ್ನು ನೀ ನಿಂದರು' ಎಂದು ಬ್ರಹ್ಮರಾಯ ಅಪ್ಪಣೆ ಕೊಂಡು, ಸ್ವಾಮೀನ್ನ ಬೇಡಿಕೊಂಡ, 'ಇದೇ ಪ್ರಕಾರ ಅವತಾರ ಮಾಡಿ, ಭೂಭಾರ ಇಳಹಿ, ಧರ್ಮಸಂರಕ್ಷಣೆ ಮಾಡಬೇಕು.' ಶ್ರೀಕೃಷ್ಣನ್ನ ಈ ಪ್ರಕಾರ ಬೇಡಿಕೊಂಡು, ಸ್ವಾಮೀ ಆಜ್ಞ ಕೊಂಡು, ಬ್ರಹ್ಮರಾಯ ತನ್ನ ಸತ್ಯಲೋಕಕ್ಕೆ ತಿರಗಿದ. ಮಾರ್ಗದಲ್ಲಿ ಗರುಡ, ಶೇಷ, ರುದ್ರರು ಕುಳಿತಿದ್ದರು. ಬ್ರಹ್ಮರಾಯ ಬಾಹೋಣ ತಮ್ಮತಮ್ಮ ಲೋಕಕ್ಕೆ ಹೋದರು. ಸ್ವಾಮಿ, ವೈಕುಂಠಕ್ಕೆ ಹೋಗಿ ತನ್ನ ಮೂಲರೂಪದಲ್ಲಿ ಐಕ್ಯನಾದನು. ಅಲ್ಲಿ ಮುಕ್ತಬ್ರಹ್ಮ, ಗರುಡ, ಶೇಷರ ಕೈಯ ವಾಲ್ಗೈಸಕೊಳ್ಳತ, ಲಕ್ಷ್ಮೀಪತಿ ರವಿಸಹೊಕ್ಕನು. ಶ್ರೀಕೃಷ್ಣ ಪರಂಧಾಮಕ್ಕೆ ಹೋದಮ್ಯಾಲೆ, ಬ್ರಹ್ಮರುದ್ರಾದಿಗಳು ತಮ್ಮತಮ್ಮ ಚಿದಾನಂದ ಕೃಷ್ಣಮೂರ್ತಿಯನ್ನು ಪೂಜಿಗೈದರು. ನಿರಂತರ ಬ್ರಹ್ಮರುದ್ರಾದಿ ದೇವತಿಗಳು, ಸೂರ್ಯಮಂಡಲಕ್ಕೆ ಬಂದು, ಅಲ್ಲಿದ್ದ ಕೃಷ್ಣನ ದರ್ಶನ, ಪೂಜಿ ಮಾಡಿ ಹೋಗತಿಹೋರು.

ಶ್ರೀಕೃಷ್ಣ ಅಸುರಜನಮೋಹನಾರ್ಥ, ತನ್ನ ರೂಪದಂತೆ ಪ್ರಾಕೃತದೇಹ ನಿಂದರಿಸಿ, ವ್ಯಾಧನ ಬಾಣ ತಾಕಿ ಸತ್ತನೆಂಬೋಹಾಂಗೆ ತೋರಿಸಿದ್ದಾನೆ. ಅಸುರ-ಜನಮೋಹನಾರ್ಥ, ರುಕ್ಮಿಣೀ ಅಗ್ನಿಯಲ್ಲಿ ಬಿದ್ದಳೆಂಬೋಹಾಂಗೆ ತೋರಿಸಿದ್ದಾಳೆ. ಸತ್ಯಭಾಮಾ ವನದೊಳಗೆ ಅದೃಶ್ಯಳಾದಳೆಂಬೋಹಾಂಗೆ ತೋರಿಸ್ಯಾಳೆ. ಸ್ವಾಮಿ ದಾವದಾವ ಅವತಾರ ಮಾಡ್ಯಾನೆ, ಅವಕ್ಕೆಲ್ಲ ದೇಹತ್ಯಾಗ ಎಲ್ಲಾದರೂ ಹೇಳಿಲ್ಲ. ಕೃಷ್ಣಾವತಾರದಲ್ಲಿ ಭ್ರಾಂತಿಜ್ಞಾನ ಅಸುರಜನಕ್ಕೆ ಹುಟ್ಟಿಸಿಕೊಟ್ಟಾನೆ. ಅಸುರರ ಮೋಹಿಸಿ ತಮುಸ್ಸಿಗೆ ಕೆಡಹಾಕಬೇಕೆಂತ, ತಕ್ಷನದೃಶ ಪ್ರಾಕೃತದೇಹ ನಿರ್ಮಾಣಮಾಡಿ, ಕೃಷ್ಣ ದೇಹತ್ಯಾಗ ಮಾಡ್ಯಾನೆಂಬೋಹಾಂಗೆ, ಅಸುರಜನಕ್ಕೆ ತೋರಿಸಿದ್ದಾನೆ. ಲಕ್ಷ್ಮೀನಾರಾಯಣರೂಪಗಳಿಗೆ ದೇಹತ್ಯಾಗವಿಲ್ಲ.

ಸ್ವಾಮಿ ಪರಂಧಾವುಕ್ಕೆ ಹೋಗುವಾಗ ಪಾಂಡವರಲ್ಲಿ ದಾರುಕನ್ನ ಕಳುಹಿದ್ದ. ದಾರುಕ, ಅರ್ಜುನನ ಕೂಡಿಕೊಂಡು ಬರಥಾನೆ. ಯಾದವರೆಲ್ಲ ಸರ್ವರೂ ಮೃತರಾಗ್ಯಾರೆ. ಕೃಷ್ಣನ ಪ್ರಾಕೃತದೇಹ ಅಶ್ವತ್ಥಮೂಲದಲ್ಲಿ ಬಿದ್ದದೆ. ದಾರುಕ ಕೃಷ್ಣನ ಪ್ರಾಕೃತದೇಹ ಕಂಡು ಬಹಳೇ ದುಃಖಬಟ್ಟ. ಆ ದೇಹ ದಹನ ಮಾಡಿದ. ಹಾಂಗೆ ಬಲರಾಮ, ಸಾತ್ಯಕಿ ಮೊದಲಾದ ಯಾದವಶ್ರೇಷ್ಠರನೆಲ್ಲ ದಹನ ಮಾಡಿದ. ಅವರೆಲ್ಲ ತಮ್ಮ ಮೂಲರೂಪ ಕೂಡಿದರು. ದಾರುಕನ ಉತ್ಪತ್ತಿ ಭೂಮೀವ್ಯಾಲೆ ಇಲ್ಲ. ವೈಕುಂಠದಿಂದ ಸಾರಥಿಕರ್ಮ ಮಾಡಲಿಕ್ಕೆ ಬಂದಿದ್ದ. ಆದೇ ದೇಹದಿಂದ ದಾರುಕ ವೈಕುಂಠಕ್ಕೆ ಹೋದನು. ಶ್ರೀಕೃಷ್ಣ ಜನರ ಹ್ಯಾಂಗೆ ಮೋಹಿಸಥಾನೆ, ಆದೇ ರೀತಿ ರುಕ್ಮಿಣೀ, ಸತ್ಯಭಾಮು ಮೋಹಿಸ್ಯಾರೆ. ರುಕ್ಮಿಣೀ ಅಗ್ನಿಕುಂಡ ತೋಡಿಸಿ, ಅಗ್ನಿಯೊಳಗೆ ಪ್ರವೇಶವಾದಳು. ವನದಲ್ಲಿ ಸತ್ಯಭಾಮಾ ಅದೃಶ್ಯಳಾದಳೆಂಬಹಾಂಗೆ ಅಸುರಜನಮೋಹನಾರ್ಥ ತೋರಿಸಿದ್ದಾಳೆ. ಈ ಪ್ರಕಾರ ಲಕ್ಷ್ಮೀನಾರಾಯಣರು ಜಗತ್ತನ್ನು ಮೋಹಿಸಥಾರೆ. ಇನ್ನು ಷಣ್ಮಹಿಷೇರೊಳು, ಮೂರು ಮಂದಿ ಅಗ್ನಿ-ಪ್ರವೇಶ ಮಾಡಿ, ಮೂರು ಮಂದಿ ವನದೊಳಗೆ ತಪಸ್ಸು ಮಾಡಿ, ದೇಹವಿಯೋಗ ಮಾಡಿದರು. ಅವರೆಲ್ಲ ದೇಹತ್ಯಾಗ ಮಾಡಿ ನಾರಾಯಣನ ಐದಿದರು. ಬಲರಾಮನ ಹೆಂಡರು ಅಗ್ನಿಮುಖದಿಂದ, ತಮ್ಮ ಗಂಡಂದಿರ ಲೋಕ ಐದಿದರು. ಯಾದವರ ಹೆಂಡರೆಲ್ಲ ಅಗ್ನಿಸಾಕ್ಷಿಯಿಂದ ತಮ್ಮತಮ್ಮ ಪತಿಲೋಕಕ್ಕೆ ಹೋದರು. 'ಪ್ರಭಾಸ. ಕ್ಷೇತ್ರದಲ್ಲಿ ಯಾದವರ ಕುಲವೆಲ್ಲ ಸರ್ವಸಂಹಾರವಾಯಿತು' ಎಂದು ಅರ್ಜುನ ದ್ವಾರಾವತಿಗೆ ಹೋಗಿ, ವಸುದೇವನಿಗೆ ವಾರ್ತೆ ಮುಟ್ಟಿಸಿದನು. ಈ ಪ್ರಕಾರ ಅನರ್ಥ ಸಮಾಚಾರ ಕೇಳಿ, ವಸುದೇವ ಪುತ್ರಶೋಕವುಳ್ಳವನಾಗಿ, ಯೋಗಧ್ಯಾನ ಮಾಡಿ ದೇಹವಿಯೋಗ ಆದವ್ಯಾಲೆ ತನ್ನ ಮೂಲರೂಪ, ಕಶ್ಯಪನಲ್ಲಿ ಕೂಡಿದನು. ವಸುದೇವನ ಅಗ್ನಿಹೋತ್ರದ ಅಗ್ನಿಯಲ್ಲಿ ವಸುದೇವನಿಗೆ ದಹನಾದಿ ಕರ್ಮಗಳ ಅರ್ಜುನ ಮಾಡಿದನು. ವಸುದೇವನ ಹೆಂಡರು, ದೇವಕೀ ಮೊದಲಾದ ನೂರು

ಮುಂದಿ ಅಗ್ನಿಯೊಳಗೆ ಬಿದ್ದು, ಕಶ್ಯಪನ ಲೋಕಕ್ಕೆ ಹೋದರು. ಉಳದಿದ್ದ ಮುಂದಿ ದ್ವಾರಾವತಿಯಲ್ಲಿ ಎಷ್ಟು ಮುಂದಿ ಇದ್ದರು, ಅಷ್ಟೂ ಮುಂದೀನ್ನ ಹಾಂಗೆ ದ್ರವ್ಯ, ಯಾನ, ವಸ್ತು, ಒಡವಿ ಸಮಗ್ರ ಕೊಂಡು, ಹಾಂಗೆ ಬಾಲಕರು, ವೃದ್ಧರು, ಹಾಂಗೆ ಕೃಷ್ಣನ ಹದಿನಾರು ಸಾವಿರ ಹೆಂಡರ ಕೂಡಿಕೊಂಡು, ಅರ್ಜುನ ಹಸ್ತಿನಾ-ವತಿಗೆ ಹೋಗಬೇಕಾಗಿ, ದ್ವಾರಾವತಿ ಬಿಟ್ಟು ಹೊರಗೆ ಬರಲಿಕ್ಕೆ, ಸಮುದ್ರದಲ್ಲಿ, ಹನ್ನೆರಡು ಯೋಜನ ದ್ವಾರಾವತಿ ಪಟ್ಟಣ ಮುಣಗಿಸಿಬಿಟ್ಟನು. ಸ್ತ್ರೀಯರಿಂದ, ಬಾಲಕರಿಂದ ಯುಕ್ತನಾಗಿ ಹಸ್ತಿನಾವತಿಗೆ ಅರ್ಜುನ ಬರಥಾನೆ.

ಅರ್ಜುನ ದ್ವಾರಾವತಿಗೆ ಬರುವ ಮಾರ್ಗದಲ್ಲಿ ಮ್ಲೇಂಛರು—ಸಮುದ್ರತೀರ-ವಲ್ಲಿದ್ದವರು, ಅವರು ಅಭೀರರೆಂಬ ಮ್ಲೇಂಛರು, ಮಹಾ ಉದ್ಧಟರು—ಅರ್ಜುನಗೆ ಮಾರ್ಗ ಅಡ್ಡಗಟ್ಟಿ ಕೃಷ್ಣನ ಹೆಂಡರು ಹದಿನಾರು ಸಾವಿರ ಮುಂದೀನ್ನ ಹಿಡಕೊಂಡು ಹೋದರು. ಅವರಿಗೆಲ್ಲ, 'ನನ್ನ ಭೋಗದಿಂದ ನಿಮಗೆಲ್ಲ ದರ್ಪ ಬಂದದೆ. ನೀವು ಮ್ಲೇಂಛರ ವಶವಾಗಿರಿ' ಎಂದು ಕೃಷ್ಣನ ಶಾಪವಾಗಿತ್ತು. ಹೀಂಗೆ ಕೃಷ್ಣ ಶಾಪ ಕೊಟ್ಟದ್ದ. ಆದಕಾರಣ ಮ್ಲೇಂಛರು ಉನ್ಮತ್ತರಾಗಿ, ಕೃಷ್ಣನ ಹೆಂಡರು ಹದಿನಾರು ಸಾವಿರ ಮುಂದೀನ್ನ ಹಿಡಕೊಂಡು ಹೋದರು. ಇಷ್ಟಾಗಿನೂ, ಮ್ಲೇಂಛರು ಮೇರಿ-ದಪ್ಪಿ ಅರ್ಜುನನ ಮ್ಯಾಲೆ ಬರತಿಹೋರು. ಅರ್ಜುನ ಗಾಂಡೀವ ಧನಸ್ಸು ಹೆದಿ ಏರಿಸೇನೆಂದರೆ, ಹೆದಿ ಶೀಘ್ರ ಕೂಡದು. ಬಹಳ ಕಷ್ಟದಿಂದ ಹೆದಿ ಕೂಡಿಸಿದನು. ಅಸ್ತ್ರಗಳನ್ನ ನೆನಸಥಾನೆ, ಒಂದೂ ಅಸ್ತ್ರ ನೆನಪಿಗೆ ಬಾರದು! ಅಕ್ಷಯಬತ್ತಳಿಕೆ ಒಳಗೆ ಬಾಣಗಳು ಕೊಂಡೇನೆಂದರೆ, ಬಾಣಗಳು ಇಲ್ಲಥಾಂಗಾದವು. ಇದಿಷ್ಟೂ ದೇವರ ಚರಿತ್ರ, ಸ್ವಾಮಿ ತನ್ನ ಬಿಟ್ಟು ಪರಂಧಾಮಕ್ಕೆ ಹೋದಕಾರಣ ಇದಿಷ್ಟೂ ವಿನರ್ಥವಾಯಿತೆಂದು ತಿಳದು, ಮ್ಲೇಂಛರು ತನ್ನ ಮ್ಯಾಲೆ ಮೇರಿದಪ್ಪಿ ಬಾಹೋದು ಕಂಡು, ಗಾಂಡೀವ ಧನ:ಸ್ಸಿನಿಂದ ಹೊಡೀತ, ದ್ರವ್ಯ ಹೋಗಾಡಿಸಿಕೋತ, ಯುದ್ಧ ಮಾಡತ ಹೋದಷ್ಟು ಮುಂದಿ ಹೋದರು, ಉಳದವರ ಕರಕೊಂಡು ಹಸ್ತಿನಾವತಿಗೆ ಬಂದನು 'ನಾವು ನಿರ್ವೀರ್ಯ ಉಳ್ಳವರಾಪೆವು' ಎಂದು ಬಹಳ ಖಿನ್ನನಾಗಿ, 'ಇದಿಷ್ಟೂ ದೇವರ ಚರಿತ್ರ' ಎಂದು ಬಹಳ ದುಃಖವುಳ್ಳವನಾಗಿ, ಕುರುಕ್ಷೇತ್ರಕ್ಕೆ ಬಂದನು.

ಅರ್ಜುನ ಅಲ್ಲಿ ಬರತಲೇ, ಜಗದ್ಗುರುವಾದಂಥ ವೇದವ್ಯಾಸ ಪ್ರತ್ಯಕ್ಷನಾದ. ಅತನ ಕಂಡು ಅರ್ಜುನ ಪರಮ ದುಃಖದಿಂದ, ಅಳತಲೇ ಸ್ವಾಮೀ ಪಾದದಮ್ಯಾಲೆ ಬಿದ್ದನು. 'ಎಲೈ ಪಾರ್ಥ, ಏನುಕಾರಣ ದುಃಖಬಡತಿದಿ.' ವಿಪತ್ತು, ಸಂಪತ್ತು ಸಾರಿಗೂ ಬಿಟ್ಟದ್ದಲ್ಲ. ನಿನಗೆ ನಿಶ್ಚಯ ಬುದ್ಧಿ ಹೇಳಥೀನಿ. ದೇವರ ಸ್ಮರಣೆ ಎಂಬೋದೇ ಬಹಳ ಸಂಪತ್ತು, ದೇವರ ಸ್ಮರಣೆ ಇಲ್ಲದೇ ಇಹೋದು ಅದೇ ವಿಪತ್ತು.' ಹೀಂಗೆಂದು ಅರ್ಜುನಗೆ ಹೇಳಿ, ಅವನ ಅಜ್ಞಾನವೆಲ್ಲ ಪರಿಹರಿಸಿಬಿಟ್ಟನು.

ಸೂರ್ಯೋದಯವಾದರೆ ಅಂಧಕಾರ ಹ್ಯಾಂಗೆ ಪರಿಹಾರವಾಗತದೆ, ಹಾಂಗೆ ಅರ್ಜುನ, ವೇದವ್ಯಾಸನ ದರ್ಶನದಿಂದ ಒಹಕ್ಕೆ ದುಃಖ ಬಿಟ್ಟುಕೊಟ್ಟನು. ವೇದವ್ಯಾಸನ ಆಜ್ಞೆ ಕೊಂಡು ಅರ್ಜುನ, ಹಸ್ತಿನಾವತಿಗೆ ಧರ್ಮರಾಯನ ಸಮೀಪಕ್ಕೆ ಬಂದನು. ಕೃಷ್ಣನ ಹೆಂಡರನ್ನ ಮ್ಲೇಂಛರು ಹಿಡಕೊಂಡುಹೋದದ್ದು ವರ್ತಮಾನ ಹೇಳಿದನು.

ಹದಿನಾರು ಸಾವಿರದ ನೂರು ಮಂದಿ ಕೃಷ್ಣಪತ್ನೀರನ್ನ ಮ್ಲೇಂಛರು ಹಿಡಕೊಂಡುಹೋದಕಾರಣ, ಆ ಪತ್ನೀರ ದರ್ಪವೆಲ್ಲ ಭಂಗವಾಯಿತು. ಅವರು ರುಕ್ಮಿಣೀ-ಸತ್ಯಭಾಮೇರ ಸರೀಕರಂತ ತಿಳದುಕೊಂಡಿದ್ದರು. ಆದಕಾರಣ, ಅವರ ಗರ್ವ ಪರಿಹರಿಸಿ, ಅವರ ಮ್ಯಾಲೆ ಅನುಗ್ರಹಾರ್ಥವಾಗಿ, ದಾಲ್ಭ್ಯಋಷಿಗೆ ಶ್ರೀಕೃಷ್ಣ ಹೇಳಿದ. 'ಹದಿನಾರು ಸಾವಿರದ ಒಂದುನೂರಾ ಹೆಂಡರನ್ನ ಮ್ಲೇಂಛರು ಒಯ್ದುರೆ, ಆ ಸ್ತ್ರೀಯರಿಗೆ ನನ್ನ ವಚನ ಹೇಳು. ಮ್ಲೇಂಛರ ಸ್ಪರ್ಶವಾಗೇದೆ ಆದಕಾರಣ, ಗೋವಿಂದಏಕಾದಶಿ ಉಪವಾಸ ಮಾಡಿ, ಸರಸ್ವತೀ ನದೀಯೊಳಗೆ ದೇಹತ್ಯಾಗ ಮಾಡಿರಿ ಎಂದು ಹೇಳು' ಎಂದು ಹೇಳಿಕಳಸಿದ. ಆ ಸ್ತ್ರೀಯರಿಗೆ ದಾಲ್ಭ್ಯಋಷೀ ವಚನದಲ್ಲಿ ವಿಶ್ವಾಸ ಸಾಲದು. ಆದಕಾರಣ, ಮುಖ್ಯಪ್ರಾಣದೇವರು ಅಶರೀರವಾಕ್ಯ ನುಡದರು. 'ಹದಿನಾರು ಸಾವಿರದ ಒಂದುನೂರು ಸ್ತ್ರೀಯರೆಲ್ಲ ಗೋವಿಂದೈಕಾದಶಿ

ವ್ರತ (ಆಷಾಢ ಶುದ್ಧ ಏಕಾದಶೀ ಅಥವಾ ಫಾಲ್ಗುಣ ಶುದ್ಧ ಏಕಾದಶೀ ದಿವಸ) ಮಾಡಿ, ಸರಸ್ವತೀನದಿ ಒಳಗೆ ದೇಹತ್ಯಾಗ ಮಾಡಿ, ಸ್ವರ್ಗಕ್ಕೆ ಹೋಗರಿ' ಎಂತ ಮುಖ್ಯಪ್ರಾಣದೇವರು ಅಶರೀರವಾಣಿ ನುಡದರು. ಅದರಂತೆ ದೇಹತ್ಯಾಗ ಮಾಡಿ ಸ್ವರ್ಗಕ್ಕೆ ಹೋದರು.

ಅರ್ಜುನ, ಕುರುಕ್ಷೇತ್ರದಲ್ಲಿ ಕೃತವರ್ಮನ ಮಗಗೆ, ಸಾತ್ಯಕೀ ಮಗಗೆ ಸಾರಸ್ವತ ದೇಶದಲ್ಲಿ, ಅರಸುಪಟ್ಟದಲ್ಲಿ ಅಭಿಷೇಕ ಮಾಡಿ, 'ಕುರುಕ್ಷೇತ್ರದೇಶ, ಸರಸ್ವತೀತೀರ ದೇಶವೆಲ್ಲ ನೀವು ಆಳಿ ಬನ್ನಿ' ಎಂದು ಹೇಳಿದನು ಅಲ್ಲಿಂದ, ಕೃಷ್ಣನ ಮೊಮ್ಮಗ, ಅನಿರುದ್ಧನ ಮಗ, ವಜ್ರನೆಂಬವ, ಶ್ರೀಕೃಷ್ಣಗೆ ಪರಮಪ್ರೀತಿ ಆದವ, ಶ್ರೀಕೃಷ್ಣಗೆ ಮರಿಮಗ ಆಗಬೇಕು, ಈ ವಜ್ರನೆಂಬ ಯಾದವಗೆ ಯಾದವದೇಶ ಎಷ್ಟಿತ್ತು ಅಷ್ಟೂ ಕೊಟ್ಟ, ದೇಶ ಥೋಡೆ ಎಂದು ತನ್ನ ಇಂದ್ರಪ್ರಸ್ಥ ಸಹವಾಗಿ ರಾಜ್ಯ ಕೊಟ್ಟ, ಶೂರಸೇನದೇಶ ಕೊಟ್ಟ, ವಜ್ರನಿಗೆ ಮಥುರಾಪಟ್ಟಣದಲ್ಲಿ ರಾಜ್ಯಾಭಿಷೇಕ ಮಾಡಿದನು. ಯಾದವಸ್ತ್ರೀಯರು, ಬಾಲಕರು, ವೃದ್ಧರು ಎಷ್ಟು ಮಂದಿ ಇದ್ದರು, ಹಾಂಗೇ ಅವರ ದ್ರವ್ಯ ಸಹವಾಗಿ ಅವರನ್ನೆಲ್ಲ ವಜ್ರನ ಬಳಿ ಇಟ್ಟನು. ಅಲ್ಲಿಂದ ಅರ್ಜುನ ಧರ್ಮರಾಯನ ಸಮೀಪಕ್ಕೆ ಬಂದು ಆದ್ಯಂತ ವರ್ತಮಾನ, ಪ್ರಭಾಸಕ್ಷೇತ್ರಕ್ಕೆ ಹೋದದ್ದು, ಅಲ್ಲಿ ಯಾದವಕುಲವೆಲ್ಲ ನಾಶವಾದದ್ದು, ಅಲ್ಲಿಂದ ದ್ವಾರಾವತಿಗೆ ಹೋಗಿಬಾಹಾಗ, ಮಾರ್ಗದಲ್ಲಿ ಮ್ಲೇಂಛರು ಅಗ್ಗಳಿಕೆ ಮಾಡಿದ್ದು ಸಕಲ ವೃತ್ತಾಂತನೆಲ್ಲ ಹೇಳಿದ. ವೇದವ್ಯಾಸನ ದರ್ಶನವಾದದ್ದು ಸಕಲ ವೃತ್ತಾಂತ ಹೇಳಲಿಕ್ಕೆ, ಧರ್ಮರಾಯ ಬಹಳ ಖಿನ್ನನಾದ.

ಧರ್ಮರಾಯ ಅದೇ ವ್ಯಾಳ್ಯಾದಲ್ಲಿ, 'ಮ್ಲೇಂಛರ ಮ್ಯಾಲೆ ದಂಡಯಾತ್ರಿ ಮಾಡಬೇಕು. ದೇವರು ಭೂಮೀಮ್ಯಾಲೆ ಇರೋ ಪರಿಯಂತ ನಾವು ರಾಜ್ಯ ಆಳ-ಬೇಕೆಂದು ನಮ್ಮ ಸಂಖ್ಯೆ. ದೇವರು ಪರಂಧಾಮಕ್ಕೆ ಹೋದ. ನಾವೂ ಹೋಗ-ಬೇಕು' ಎಂದು ಧರ್ಮರಾಯ, ಸಿಂಹಾಸನ ಇಳದು, ಪರೀಕ್ಷಿತರಾಯಗೆ ಪಟ್ಟಾಭಿಷೇಕ ಮಾಡಿ, ಆತಗೆ ಹೇಳಿದ, 'ಮ್ಲೇಂಛರು ಬಹಳ ಅಗ್ಗಳಿಕೆ ಮಾಡಥಾರೆ. ಅವರಿಗೆ ಭೂಮೀಮ್ಯಾಲೆ ಇಲ್ಲಥಾಂಗೆ ಮಾಡಿಬಿಟ್ಟು, ರಾಜ್ಯ ಪಾರುಪತ್ಯ ಮಾಡು.' ಹೀಂಗಂತ ಹೇಳಿ, ಪಾಂಡವರು ತೆರಳಿದರು. ಇಲ್ಲಿಗೆ ಮುಸಲಪರ್ವ ಭಾರತಕಥ ಮುಗಿಯಿತು.

ಮಹಾಪ್ರಸ್ಥಾನಿಕಪರ್ವ ಭಾರತಕಥ ಹೇಳಥಾರೆ. ಪರೀಕ್ಷಿತರಾಯ, ಪಿತಾ-ಮಹರ ಆಜ್ಞೆದಿಂದ, ಮ್ಲೇಂಛರ ಮ್ಯಾಲೆ ದಂಡಯಾತ್ರಿ ಮಾಡಿ, ಮ್ಲೇಂಛರನ್ನೆಲ್ಲ ಹರದುಬಿಟ್ಟನು. ವಾಸುದೇವ ಪರಂಧಾಮಕ್ಕೆ ಹೋದಮ್ಯಾಲೆ ಪಾಂಡವರು ಭೂಮಿ ಬಿಟ್ಟು ತೆರಳಿದರು. ಕ್ರಮದಿಂದ ಮರಣ ಹೇಳಬೇಕಾಗಿ, ಭೀಮಸೇನನ ಹೆಂಡತಿ ಕಾಳೀದೇವಿ, ಅಚ್ಚ ಭಾರತೀ ಅವತಾರ, ದೇವರ ಧ್ಯಾನದಿಂದ ಜೀವ, ಬ್ರಹ್ಮರಂಧ್ರಕ್ಕೆ ತಂದು ದೇಹವಿಯೋಗ ಮಾಡಿ, ದ್ರೌಪದೀ ಒಳಗೆ ಐಕ್ಯಳಾದಳು. ಅರ್ಜುನನ ಹೆಂಡತಿ ಸುಭದ್ರಾ, ಧರ್ಮರಾಯನ ಹೆಂಡತಿ ದೇವಕೀ ಮೊದಲಾದವರು ಪಾಂಡವರ ಹೆಂಡರು ಎಷ್ಟು ಮುಂದಿ ಇದ್ದರೋ, ಅಷ್ಟೂ ಮುಂದಿಯನ್ನ ಹಸ್ತಿನಾ-ವತಿಯಲ್ಲಿಟ್ಟು, ಧೃತರಾಷ್ಟ್ರರಾಯನ ಮಗ ಯುಯುತ್ಸುಗೆ ಹೇಳಿದರು. 'ಪರೀಕ್ಷಿತ ರಾಯ ಇನ್ನೂ ಚಿಕ್ಕವ. ನಿನಗೆ ಹಿರೇತನ ಕೊಟ್ಟಿದ್ದೀವಿ. ಈತನ ಮುಂದ-ಮಾಡಿಕೊಂಡು ರಾಜ್ಯ ಪಾರುಪತ್ಯ ನಡಸು. ಹೀಂಗೆಂದು ಹೇಳಿ, ಪಾಂಡವರು ತಮ್ಮ ವಸ್ತ್ರಾಭರಣಗಳನ್ನೆಲ್ಲ ಬಿಟ್ಟುಕೊಟ್ಟು, ಪವಿತ್ರಪಾಣಿ ಉಳ್ಳವರಾಗಿ ತೆರಳಿದರು.

ವೈಷ್ಣವಯೋಗದಿಂದ ಹಸ್ತಿನಾವತಿ ಬಿಟ್ಟು, ಮೊದಲೇ ಈಶಾನ್ಯದಿಕ್ಕಿಗೆ ಹೋದರು. ಸಮುದ್ರಪರಿಯಂತ ಹೋಗಲಾಗಿ, ತಾ ಕೊಟ್ಟಂಥ ಗಾಂಡೀವ ಧನುಸ್ಸು ಬೇಡಿಕೊಳ್ಳಲಿಕ್ಕೆ, ಅಗ್ನಿ ಅರ್ಜುನನ ಸಮೀಪಕ್ಕೆ ಬಂದು, ಅರ್ಜುನನ ಕೂಡ ಮಾತನಾಡಿದ. ವರುಣನ ಕೈಯ ಗಾಂಡೀವ ಧನುಸ್ಸು ಇಸಗೊಂಡು ನಿನಗೆ ನಾ ಕೊಟ್ಟಿದ್ದೀನಿ. ನನ್ನ ಕೈಲಿ ಗಾಂಡೀವಧನುಸ್ಸು ತಿರಗಿ ಕೊಟ್ಟರೆ, ವರುಣಗೆ ಒಯ್ದು ತಿರಗಿ ಕೊಟ್ಟೀನು.' ಹೀಂಗೆಂದು ಅಗ್ನಿ ಬೇಡಿಕೊಳ್ಳಲಾಗಿ, ಅರ್ಜುನ ಲೋಭದಿಂದ ಗಾಂಡೀವಧನುಸ್ಸು ಕೊಡಲಾರ. ತನ್ನ ಆಯುಧಗಳನ್ನೆಲ್ಲ ಹಸ್ತಿನಾವತೀಲಿ ಬಿಟ್ಟು ಪಾಂಡವರು ಬಂದಿಹೋರು. ಅರ್ಜುನ ಮಾತ್ರ ಗಾಂಡೀವ-ಧನುಸ್ಸು ಕೊಂಡುಬಂದಿಹ. ಅಗ್ನಿ ಬೇಡಿದರೆ ಕೊಡವಲ್ಲ. ಅಗ್ನಿ ಧರ್ಮರಾಯಗೆ

ಹೋಗಿ ಹೇಳಿದ. 'ನಿನ್ನ ತಮ್ಮಗೆ ಹೇಳಿ, ಗಾಂಡೀವಧನುಸ್ಸು ನನ್ನದು, ನನಗೆ ಕೊಡಸು' ಎಂದು ಹೇಳಲಾಗಿ, ಧರ್ಮರಾಯ ಅರ್ಜುನಗೆ ಹೇಳಿದ. 'ಗಾಂಡೀವ-ಧನುಸ್ಸು ಕೊಂಡು ಏನು ಮಾಡೀ, ಕೊಡವಲ್ಲ್ಯಾಕೆ?' ಎಂದು ಹೇಳಿದರೂ, ಲೋಭದಿಂದ ಕೊಡಲಾರ. ಗಾಂಡೀವಧನುಸ್ಸು ಬೇಡಿ ಅಗ್ನಿ ಪೀಡಸ್ತಿಹ. ಶಿಟ್ಟಿನಿಂದ ಗಾಂಡೀವಧನುಸ್ಸು ಕೊಂಡು, ಅರ್ಜುನ ಸಮುದ್ರದೊಳಗೆ ಈಡ್ಯಾಡಿದನು. ಇಷ್ಟಾಗಲಿಕ್ಕೆ, ಅಗ್ನೀ ಸಮುದ್ರಗೆ ಒದಂದ, 'ಎಲ್ಲೆ ವರುಣ, ನಿನ್ನ ಧನುಸ್ಸು ಎರವು ಇಸಕೊಂಡು ಬಂದಿದ್ದೆ. ನಿನ್ನ ಧನುಸ್ಸು ನಿನಗೆ ಮುಟ್ಟತು.' ಹೀಂಗಂತ ಅಗ್ನಿ ಒದರಿ ಅದೃಶ್ಯನಾದನು

ಪಾಂಡವರು ವಾಯುವೇಗದಿಂದ ಆಕಾಶಮಾರ್ಗದಿಂದ ತೆರಳಿದರು. ಏಳು ದಿವಸದೊಳಗೆ ಸಪ್ತಸಮುದ್ರ, ಸಪ್ತದ್ವೀಪ ಪ್ರದಕ್ಷಿಣೆ ಮಾಡಿ, ಅಲ್ಲಿಂದ ಪುನಃ ಜಂಬೂದ್ವೀಪಕ್ಕೆ, ಗಂದಮಾಧನ ಪರ್ವತಕ್ಕೆ ಬಂದರು. ಅಲ್ಲಿ ದ್ರೌಪದೀ ದೇಹ ಬಿಟ್ಟಳು. ಅವಳ ತರುವಾಯ ಸಹದೇವ, ತರುವಾಯ ನಕುಲ, ತರುವಾಯ ಅರ್ಜುನ, ಹೀಂಗೆ ನಾಲ್ವರು ದೇಹ ಬಿಟ್ಟರು. ಭೀಮಸೇನ, ಧರ್ಮರಾಯ ಇಬ್ಬರು ಉಳದರು. ದೇಹ ಬಿಟ್ಟದೆ, ಸ್ವರ್ಗಕ್ಕೆ ಹೋಗೋದಿಲ್ಲವೆಂದು, ಭೀಮಸೇನ ತಾ ಬಲ್ಲರೂ ಸರಿಯೆ, ಧರ್ಮರಾಯನ ಕೂಡ ಮಾತನಾಡಥಾನೆ. 'ಇವರೆಲ್ಲ ದಾವ ಪಾಪದಿಂದ ಸತ್ತರು? ನಾನೂ ದೇಹ ಬಿಡಬೇಕಾಗೇದೆ. ಇವರು ನಾಲ್ವರ ಮ್ಯಾಲೆ ಏನು ದೋಷವವೆ ಹೇಳು' ಎಂದನು. ಏನುಕಾರಣ ದೋಷ ಉಚ್ಚರಿಸಬೇಕೆಂದಲ್ಲಿ, ಉಚ್ಚಾರಣೆ ಮಾಡಿದ್ದರಿಂದ ಋಣ ಕಡದುಹೋಗತದೆ. ಗುಣದೋಷ ಆಡಿದ್ದರಿಂದ, ಅವರ ದೋಷ ಆಡಿದವರಿಗೆ ಬರತದೆ. ಆದಕಾರಣ ಭೀಮಸೇನ ಧರ್ಮರಾಯನ ಕೈಯ ದೋಷ ಉಚ್ಚರಿಸಿಸಿದ್ದಾನೆ. 'ಎಲ್ಲೆ ಅಣ್ಣಾ ಧರ್ಮರಾಯ, ಹಿರೇರ ಮುಂದೆ ಚಿಕ್ಕವರು ಸಾಯಲಿಕ್ಕೆ ಕಾರಣವೇನು?' ಹೇಳು ಎಂದನು. ಭೀಮಸೇನ ತಾ ಬಲ್ಲ, ಇವರೆಲ್ಲ ಯೋಗಧ್ಯಾನ ಮಾಡಿ, ತಮ್ಮ ಇಚ್ಛಾದಿಂದಲೇ ದೇಹ ಬಿಟ್ಟರೆಂದು ಬಲ್ಲರೂ ಸರಿಯೆ, ಧರ್ಮರಾಯ ಇವರ ಮ್ಯಾಲೆ ದೋಷ ಕಲ್ಪಿಸಿದ್ದಾನೆ ಆ ದೋಷ ಹೊರಗೆ ಹಾಕಬೇಕಾಗಿ, ಭೀಮಸೇನ ಕೇಳಿದರೆ, ಧರ್ಮರಾಯ ಹೇಳಥಾನೆ. 'ಎಲೋ ಅಪ್ಪ ಭೀಮಸೇನಾ, ಅವರಲ್ಲಿ ದೋಷ ಇದ್ದಕಾರಣ ಸತ್ತಾರೆ. ಆದೇನು ದೋಷ ಎಂದಲ್ಲ, ದ್ರೌಪದೀ ನಾ ಹಿರಿಯನೆಂದು ನನ್ನ ಮ್ಯಾಲೆ ಸ್ನೇಹ ಮಾಡದೆ, ಅರ್ಜುನನಲ್ಲಿ ಅತಿ ಪ್ರೀತಿ ಮಾಡತ ಬಂದಳು. ಈ ದ್ರೌಪದೀಯಲ್ಲಿ ಈ ದೋಷ ಇದ್ದಕಾರಣ ಸತ್ತಾಳೆ' ಎಂದಲ್ಲಿ, ಇದಕ್ಕೆ ತಾತ್ಪರ್ಯ, ಭೀಮನ ವ್ಯತಿರಿಕ್ತ ಉಳದ ನಾಲ್ವರೊಳಗೆ ಅರ್ಜುನ ದೊಡ್ಡವನೆಂದು ತಿಳದು, ಅರ್ಜುನನ ಮ್ಯಾಲೆ ಸ್ನೇಹ ಮಾಡೋಳು. ಧರ್ಮರಾಯ, ತನ್ನ ಮ್ಯಾಲೆ ಆಕೆ ವಾಂಛಲ್ಯ ಮಾಡಲಿಲ್ಲವೆಂದು, ದ್ರೌಪದೀಮ್ಯಾಲೆ ದೋಷಾರೋಪಣೆ ಮಾಡಿದ, ಅದು ದೋಷವಲ್ಲ.

ಮಾದ್ರೀಪುತ್ರರ ಮ್ಯಾಲೆ, ಅರ್ಜುನನ ಮ್ಯಾಲೆ ಏನು ದೋಷ ಆರೋಪಿಸಿದನೆಂದರೆ, 'ಸಹದೇವ ತಾ ನೀತಿಜ್ಞ ಎಂದು ಅಹಂಕಾರವುಳ್ಳವನಾಗಿದ್ದ. ನಕುಲ ತಾ ಬಹಳ ಚೆಲುವನೆಂದು ಗರ್ವ ಉಳ್ಳವನಾಗಿದ್ದ. ಅರ್ಜುನ ತಾ ಪರಾಕ್ರಮಿ, ಎಂದು ಗರ್ವ ಉಳ್ಳವನಾಗಿದ್ದ. ಈ ಮೂವರೂ ಈ ದೋಷಗಳಿಂದ ಸತ್ತರು' ಎಂದನು. ಇನ್ನು ಭೀಮಸೇನನ ಮ್ಯಾಲೆ ಏನು ದೋಷ ಆರೋಪಿಸಿದನು ಎಂದರೆ, 'ಭೀಮಸೇನ ತಾ ಬಲಿಷ್ಠನೆಂದು ಬಹಳ ಗರ್ವ ಉಳ್ಳವನಾಗಿದ್ದ, ಅನ್ಯಾಯದಿಂದ ದುರ್ಯೋಧನನ ಕೊಂದ. ಇದಲ್ಲದೆ ಬಹಳ ಉಣಥಾನೆ. ಅಶನಘಾತಕದೋಷದಿಂದ ಭೀಮಸೇನ ಸತ್ತನು.' ಹೀಂಗೆ ಭೀಮಸೇನನ ಮ್ಯಾಲೆ ದೋಷ ಆರೋಪಿಸಿದ. ಭೀಮಸೇನ ಯಥೇಷ್ಟ ಭೋಜನ ಮಾಡೋದು ದೋಷನಲ್ಲ. ಮುಖ್ಯಪ್ರಾಣನ ದೇಹದಲ್ಲಿ ಜಠರಾಗ್ನಿ ಅಂಗುಷ್ಠಪ್ರಮಾಣವದೆ. ದಾವಾಗಲೂ ಜ್ವಲಸ್ತ ಇರತದೆ. ಮಿಗಿಲಾದ ಪ್ರಾಣಿಗಳಲ್ಲಿ ಸಾಸವೀಕಾಳಿನಷ್ಟು, ಅದರ ಮ್ಯಾಲೆ ಮಾಂಸ ಸುತ್ತಿ ಅದೆ. ಆದಕಾರಣ ಆ ಪ್ರಾಣಿಗಳು ಯಥೇಷ್ಟ ಭೋಜನ ಮಾಡಿ ದಕ್ಕಿಸಿಕೊಂಬೋ ಸಾಮರ್ಥ್ಯ ಇಲ್ಲ. ತಿಂದಂಥಾದ್ದು ದಕ್ಕಸಿಕೊಂಡರೆ ದೋಷ ಇಲ್ಲ. ಭೀಮಸೇನ ಗರ್ವಿಷ್ಟನೆಂದು ದೋಷ ಆರೋಪಿಸಿದ. ಭೀಮಸೇನ ಬಹಳ ಬಲಾಧಿಕ. ನಿನ್ನ ಬಲ ಎಷ್ಟು ಅದೆಂದು ಕೇಳಿದರೆ, 'ಈ ಬ್ರಹ್ಮಾಂಡ ಎರಡು ಹೋಳು ಮಾಡಿ ತಾಳ ಬಾರಿಸೇನು' ಎಂದು ತನ್ನ ಸಾಮರ್ಥ್ಯ ಕೃಷ್ಣನ ಮುಂದೆ ಹೇಳಿದ್ದ. 'ಥೋಡೇ ಹೇಳಕೊಂಡಿದಿ. ಇದಕ್ಕೆ ಹೆಚ್ಚು ಬಲ ನಿನ್ನಲ್ಲಿ ಅದೆಂದು ತಿಳಿದೀನಿ.' ಹೀಂಗಂತ ಸ್ವಾಮಿ ಅಂದಿದ್ದಾನೆ. ಭೀಮಸೇನ ಬಲವೀರ್ಯ ಉಳ್ಳಾತ, ಗರ್ವ ಮಾಡಿದಾತನಲ್ಲ, ತನ್ನ ಬಲ ಹೇಳಕೊಂಬಾತನಲ್ಲ. ಅರ್ಜುನ, ನಕುಲ ಸಹದೇವರು ಹೀಂಗೆ ಮೂರು ಮಂದಿ, ಉತ್ತಮರಕಿಂತ ತಾವು ಹೆಚ್ಚೆಂದು ಹೇಳಕೊಂಡರೆ ದೋಷ. ನೀಚರ ನೋಡಲಿಕ್ಕೆ ಅವಶ್ಯ ತಮ್ಮ ಗುಣಗಳ ಹೇಳಕೋಬಹುದು. ಅದು ದೋಷವಲ್ಲ. ಈ ಮೂರು ಮಂದಿಗೆ ಒಮ್ಮಿಗೇ ಅಹಂಕಾರ ಹುಟ್ಟಿತು. ಭೀಮಸೇನ, ದ್ರೌಪದೀ ಇವರಿಗೆ ಅಹಂಕಾರವಿಲ್ಲ. ಈ ದೋಷಗಳಿಂದ ದೇಹ ಬೀಳಲಿಲ್ಲ. ಪ್ರಾರಬ್ಧಕರ್ಮದಿಂದ ದೇಹಗಳು ಬೀಳತವೆ. ಆ ದೇಹದ ಕರ್ಮ ತೀರಿದರೆ, ಆ ದೇಹದಿಂದೇ ಸ್ವರ್ಗಕ್ಕೆ ಹೋಗೋದಿಲ್ಲ. ಭೀಮಸೇನ ಋಜುಯೋಗಿ. ಧ್ಯಾನ, ಜ್ಞಾನ, ಭಕ್ತಿ, ವೈರಾಗ್ಯ ಉಳ್ಳವನಾಗಿ, ದೇಹಗಳು ಧರಿಸಿ, ಸಾಧನಸಂಪತ್ತು ಮಾಡಿ ವಾಯುಪದವಿಗೆ ಬರಥಾನೆ. ಈ ಪ್ರಕಾರ ತಾತ್ಪರ್ಯ ಹೇಳಿ, ಇನ್ನು ಕಥಾಸಂಗತಿ ಹೇಳಥಾರೆ.

ನೀಚಕ್ರಮದಲ್ಲಿ ದ್ರೌಪದೀ, ಮಾದ್ರೀಪುತ್ರರು, ಅರ್ಜುನ, ಭೀಮಸೇನ ಹೀಂಗೆ ದೇಹ ಬಿಷ್ಟಲಿಕ್ಕೆ, ಒಬ್ಬ ಧರ್ಮರಾಯ ಉಳದ. ಅಲ್ಲಿಗೆ ಯಮಧರ್ಮರಾಯ ಒಂದು ನಾಯಿರೂಪ ಧರಿಸಿ ಬಂದನು. ಅಷ್ಟರೊಳಗೆ ಧರ್ಮರಾಯುಗೆ ಸ್ವರ್ಗದಿಂದ ವಿಮಾನ ಬಂತು. ದೇವದೂತರು ಮಾತನಾಡಿದರು, 'ಎಲೈ ಧರ್ಮರಾಯಾ, ನೀ

ದೊಡ್ಡ ಅರಸು ಇದ್ದೀ. ಸ್ವರ್ಗಸುಖ ಭೋಗಬೇಕಾಗಿ, ಈ ದಿವ್ಯರಥ ಏರಿಕೊಂಡು ಸ್ವರ್ಗಕ್ಕೆ ನಡೀ' ಎಂದಲ್ಲಿ, ದೇವದೂತರ ಕೂಡ ಧರ್ಮರಾಯ ಮಾತನಾಡಿದ. 'ನನ್ನ ತಮ್ಮಂದಿರಂತೂ ಸತ್ತುಹೋದರು. ನನ್ನ ಸಂಗಡೀಲೆ ಒಂದು ನಾಯಿ ಅದೆ. ನಾಯಿ ರಥದೊಳಗೆ ಏರಿಸಿಕೊಂಡರೆ, ನಾನೂ ರಥ ಏರಿಕೊಂಡೇನು' ಎಂದಲ್ಲಿ, 'ನೀ ರಾಜಾಧಿರಾಜ, ನಾಯೀ ಸಹವಾಗಿ ರಥದಲ್ಲಿ ಕೂಡ್ರಬಾರದು. ನೀನೇ ಸ್ವರ್ಗಕ್ಕೆ ಬರಬೇಕು' ಎಂದಲ್ಲಿ 'ನಾಯಿ ಬಿಟ್ಟು ಬರೋ ಹಾಂಗಿಲ್ಲ' ಎಂದು, ನಿಷ್ಟಂಕ ಹೇಳಲಾಗಿ, ಧರ್ಮರಾಯನ ಕೃಪಾಳುತನಕ್ಕೆ ಯಮಧರ್ಮ ತುಷ್ಟನಾಗಿ, ತನ್ನ ನಿಜ-ರೂಪ ತೋರಿಸಿದನು. 'ರಾಯಾ ಬಹಳ ದಯಾಳು ಇದ್ದಿ. ಇನ್ನು ರಥ ಏರಿಕೋ' ಎಂದು ಯಮಧರ್ಮ ಹೇಳಲಾಗಿ, ಆಗ ಧರ್ಮರಾಯ ದಿವ್ಯ ರಥ ಏರಿಕೊಂಡು ಖೇಚರ ಮಾರ್ಗದಿಂದ, ದೇವದೂತರ ಸಹವಾಗಿ ಹೋಗಥಾನೆ.

ಈ ಪ್ರಕಾರ ಹೋಗೋಲ್ಲಿ, ಮಾರ್ಗದಲ್ಲಿ ಧರ್ಮರಾಯ ವೀರಸ್ವರ್ಗ ಕಂಡ. ಅಲ್ಲಿ ದುರ್ಯೋಧನ ತನ್ನ ತಮ್ಮಂದರು ನೂರು ಮಂದಿ ಸಹವಾಗಿ, ತನ್ನ ಸ್ತ್ರೀಯರ ಕೂಡ, ಅನೇಕ ವೈಭವ ಮೊಡಲಪ್ಪಂದೆ ಸಮಸ್ತ ರಾಯರಿಂದ ಯುಕ್ತನಾಗಿ, ಚತುರಂಗ ಸೇನಿ ಉಳ್ಳವನಾಗಿ, ಬಹುಮುಂದಿ ಕೈಯ ಪೂಜಿಗೊಳ್ಳತ, ಬಹಳ ಸುಖ ಭೋಗಸ್ಥಾನೆ. ಇದನ್ನೆಲ್ಲ ಧರ್ಮರಾಯ ದೃಷ್ಟೀಲೆ ಕಂಡ. ದೇವದೂತರು ರಾಯಗೆ ಅಂದರು, 'ರಥ ಇಳೀಬೇಕು, ಸ್ವರ್ಗಸುಖ ಅನುಭೋಗಿಸಬೇಕು' ಎಂದಲ್ಲಿ, ದುರ್ಯೋಧನನ ಸಮೀಪದಲ್ಲಿ ಭೀಷ್ಮ, ದ್ರೋಣ, ಧೃಷ್ಟದ್ಯುಮ್ನ ದಾರಿದ್ದಿಲ್ಲ. ಭೀಮಾರ್ಜುನರು, ಮಾದ್ರೀಪುತ್ರರು, ದ್ರೌಪದೀ ಮೊದಲಾದವರು ತನ್ನವರಿದ್ದಿಲ್ಲ. ಇದು ಕಂಡು 'ದುರಾತ್ಮರ ಸಂಗತಿ ಅನೇಕ ಸುಖವಾದರೂ ಹತ್ತದು' ಎಂದು ಮಾತನಾಡಲಿಕ್ಕೆ, ದೇವತಿಗಳೆಂದರು, 'ಎಲೈ ಧರ್ಮರಾಯಾ, ನೀನು ಭೋಗಸ್ಥಳ ಬಿಟ್ಟು, ಮುಂದಕ್ಕೆ ಎತ್ತಹೋದೇನೆಂತಿದಿ! ದುರ್ಯೋಧನನ ಸಮೀಪದಲ್ಲಿ ವೈಭವ ಭೋಗಿಸು. ಭೀಮಾರ್ಜುನರು, ಮಾದ್ರೀಪುತ್ರರು. ಅಭಿಮನ್ಯು ಮೊದಲಾದವರು ಎಲ್ಲಿದ್ದಾರೆಂದು ಕೇಳತಿದ್ದೀ. ಅವರು ಇಲ್ಲಿ ಇಲ್ಲ, ಸ್ಥಳಾಂತರದಲ್ಲಿದ್ದಾರೆ. ಅವರ ಕೊಂಡು ಏನು ಮಾಡೀ! ನಿನ್ನ ಪುಣ್ಯಫಲ ಅನುಭವಿಸು' ಎಂದು ದೇವದೂತರು ಹೇಳಲಾಗಿ, ರಾಯ, 'ಏನಂದರೂ ಈ ದುರಾತ್ಮ ದುರ್ಯೋಧನನ ಸಂಗತೀಲಿ ಇರಲೇ ಆರೆ' ಎಂದು ನಿಷ್ಟಂಕ ಮಾತನಾಡಲಿಕ್ಕೆ, ದೇವತಿಗಳು ದೇವದೂತರಿಗೆ ಆಜ್ಞಾಪಿಸಿದರು. 'ರಾಯನ ಸಂಬಂಧೀಕರೆಲ್ಲ ಎಲ್ಲಿದ್ದಾರೆ, ಅಲ್ಲಿಗೆ ಕರಕೊಂಡು ಹೋಗರಿ' ಎಂದು ಆಜ್ಞಾಪಿಸಲಿಕ್ಕೆ, ಕರಕೊಂಡು ಹೋಗಥಾರೆ.

ಈ ಪ್ರಕಾರ ಕರಕೊಂಡು ಹೋಗೋಲ್ಲಿ, ನರಕ ದೃಷ್ಟಿಗೆ ಬಿತ್ತು. ಅಲ್ಲಿ ಅಶುದ್ಧ, ಮೂತ್ರ, ಕೀವು, ರಕ್ತ, ಕರ್ದಮವಾಗೇದೆ. ಮಹಾ ದುರ್ಗಂಧ ನಾರತವೆ. ಮಹಾ ಗಾಢಾಂಧಕಾರ ಬಿದ್ದದೆ. ಅದನ್ನೆಲ್ಲ ನೋಡಿ ತನ್ನ ಸಂಬಂಧೀಕರ

ಸಮೀಪಕ್ಕೆ ಹೋಗಬೇಕೆಂದು ಹೋಗಥಾನೆ. ದುರ್ಗಂಧ ವಾಸನಿ ಕೊಳ್ಳಲಾರದೆ, ನರಕ ದೃಷ್ಟೀಲೆ ನೋಡಲಾರದೆ, ಬಹಳ ಕಷ್ಟ ಉಳ್ಳವನಾಗಿ, ತಿರಗಿದ. ಅಷ್ಟರೊಳಗೆ ಭೀಮಾರ್ಜುನರ ಧ್ವನಿ, ಮಾದ್ರೀಪುತ್ರರು ಮತ್ತು ದ್ರೌಪದೀ, ಅಭಿಮನ್ಯು ಮೊದಲಾದವರು ಪ್ರಲಾಪ ಮಾಡೋದು ಕೇಳಿದ. 'ರಾಯಾ, ಹಿಂದಕ್ಕೆ ತಿರಗ-ಬ್ಯಾಡ, ನಮಗೆಲ್ಲ ಬಹಳ ದುಃಖಬಡಸ್ಥಾರೆ. ನೀ ಧರ್ಮಿಷ್ಟ ತಿರಸು ಬಾಹೋದು ಕಂಡು ನಮ್ಮ ದುಃಖ ಶಾಂತವಾಗತದೆ. ಹಿಂದಕ್ಕೆ ತಿರಗಬ್ಯಾಡ' ಎಂದು ಒದರಲಿಕ್ಕೆ, ಧರ್ಮರಾಯ ಬಹಳ ಕೃಪಾಳು ಹಿಂದಕ್ಕೆ ತಿರಗದೆ ಅಲ್ಲೇ ನಿಂತನು. ನರಕ ದೃಷ್ಟೀಲೆ ಕಂಡನು.

ಏನುಕಾರಣ ಧರ್ಮರಾಯಗೆ ನರಕದೃಷ್ಟಿ ಆಯಿತೆಂದರೆ, ಕೃಷ್ಣನ ವಾಕ್ಯದಲ್ಲಿ ವಿಶ್ವಾಸ ಮಾಡಿದ್ದಿಲ್ಲ. ದ್ರೋಣಾಚಾರ್ಯನ ಕೊಲ್ಲೋದಕ್ಕೆ 'ಅಶ್ವತ್ಥಾಮ ಸತ್ತನೆಂತ ಅನ್ನು' ಹೀಂಗಂತ ಶ್ರೀಕೃಷ್ಣ ಹೇಳಿದರೂ, ಸ್ವಾಮೀ ಆಜ್ಞೆದಲ್ಲಿ ವಿಶ್ವಾಸ ಮಾಡದೆ, ಹ್ಯಾಂಗೆ ಹುಸಿ ಆಡಲೆಂದು ಮಹಾ ಕಷ್ಟದಿಂದ, ಸಂಶಯಜ್ಞಾನ ಉಳ್ಳವನಾಗಿ ಏಕಾಂತದಲ್ಲಿ ಒತ್ತಿ ಒದರದೆ, ಅಶ್ವತ್ಥಾಮನೆಂಬ ಆನಿ ಸತ್ತಿತೆಂದನು. ದೇವನ ವಚನದಲ್ಲಿ ವಿಶ್ವಾಸ ಮಾಡಲಿಲ್ಲಾದಕಾರಣ ಧರ್ಮರಾಯಗೆ ನರಕದೃಷ್ಟಿ ಆಯಿತು.

ಮಿತ್ರ ಬಾಂಧವರ ಧ್ವನೀ ಕೇಳಿ ರಾಯ ನರಕ ಬಿಟ್ಟು ಹೋಗಲಾರ. ಧರ್ಮ-ರಾಯಗೆ ಯಮಧರ್ಮ ಪ್ರತ್ಯಕ್ಷನಾಗಿ, 'ಭಲಾ ರಾಯಾ! ನಿನ್ನ ದಯಾಳುತನ ಮೂರು ಖ್ಯಾಪಿ ಕಂಡೆ. ಯಕ್ಷಪ್ರಶ್ನದಲ್ಲಿ, ನಾಯಿ ಕೊಂಡುಬಾಹೋ ಅಲ್ಲಿ, ಇಲ್ಲಿ, ನಿನ್ನ ಭ್ರಾತೃಗಳ ಬಿಟ್ಟು ಬರವಲ್ಲಿ, ಇಲ್ಲೇ ನಿಂತಿದಿ, ಭಲಾ ರಾಯಾ!' ಎಂದು ಹೊಗಳಿ, 'ಇದು ನರಕವಲ್ಲ, ಈ ನರಕ ಮಿಥ್ಯಾಭೂತ. ದೇವರ ವಚನದಲ್ಲೆ ವಿಶ್ವಾಸ ಮಾಡಿದ್ದಿಲ್ಲ. ಆದಕಾರಣ ನರಕ ನಿರ್ಮಾಣ ಮಾಡಿ ನಿನ್ನ ದೃಷ್ಟಿಗೆ ತೋರಿಸಿದೆವು' ಎಂದು ಹೇಳಿ ಒಮ್ಮಿಂದೊಮ್ಮೆ ನರಕ ಇಲ್ಲಥಾಂಗೆ ಮಾಡಿದರು.

ದೇವರ ವಚನದಲ್ಲಿ, ಗುರುವಚನದಲ್ಲಿ ವಿಶ್ವಾಸ ಉಳ್ಳವನಾಗಬೇಕು. ಬ್ರಹ್ಮಹತ್ಯ ಮೊದಲಾದ ಪಂಚಮಹಾಪಾತಕಗಳು ಮಾಡಿರಲ್ಯಾಕೆ, ವಾಸುದೇವನ ಆಜ್ಞೆ ನಡಸಿದ್ದರಿಂದ ಸರ್ವಪಾಪದಿಂದ ಮುಕ್ತನಾಗಥಾನೆ. ಇವನಲ್ಲಿ ಲೇಶಮಾತ್ರ ದೋಷ ನಿಂದರೋದಿಲ್ಲ. ದೃಷ್ಟಾಂತ ಹೇಳಥಾರೆ. ಬಹಳ ಅನ್ಯಾಯ ಮಾಡಿರಥಾನೆ. ಸಕಲರಿಗೆ ಮಾಡಿದ ಅನ್ಯಾಯ ಅರಸಾದಾತ ಹ್ಯಾಂಗೆ ಕ್ಷಮಿಸಥಾನೆ ಹಾಂಗೆ, ಸ್ವಾಮಿ ತನ್ನಾಜ್ಞೆ ನಡಸಿದವನಂತ ಅನ್ಯಾಯ ಕ್ಷಮಿಸಥಾನೆ. ಅಪರೋಕ್ಷಜ್ಞಾನಿಗಳು ನೂತನವಾಗಿ ಬ್ರಹ್ಮಹತ್ಯ ಮಾಡಿದ ಪಕ್ಷವೇ, ಪ್ರಾರಬ್ಧಪಾಪಕ್ಕೆ ಸೂಚಕವಾಡಿ ಕೊಡಥಾನೆ. ಅಪರೋಕ್ಷಜ್ಞಾನಿಗಳಿಗೆ ಪ್ರಾರಬ್ಧಕರ್ಮದ ಹೊರತು ಆಗಾಮಿ ಪಾಪವಿಲ್ಲ. ಪ್ರಾಣಿಗಳಿಗೆ ಸಾಯಬೇಕೆಂಬೋ ನೇಮವಿರತದೆ. ವಿನಾಶನ ಹ್ಯಾಂಗೆ ಸೂಚಕವಾಗತದೆ ಹಾಂಗೆ ಆಗಾಮಿ ಪಾಪ ಪ್ರಾರಬ್ಧಕ್ಕೆ ಸೂಚಕವಾಗತದೆ. ದೇವರ ಆಜ್ಞೆ ನಡಿಸಿದ್ದರಿಂದ ಆಗಾಧ ಪಾಪವಾದರೂ ದೋಷವಲ್ಲ.

ಧರ್ಮರಾಯನ ದೃಷ್ಟೀಗೆ ನರಕ ಇಲ್ಲಧಾಂಗೆ ಮಾಡಿ, ಧರ್ಮರಾಯನ ಕೂಡ ದೇವೇಂದ್ರ ಮಾತನಾಡಥಾನೆ. 'ರಾಯಾ, ನೀ ಐದು ಮಂದಿ ಮ್ಯಾಲೆ ದೋಷ ಆರೋಪ ಮಾಡಿದಿ. ಭೀಮ, ಅರ್ಜುನ, ಮಾದ್ರೀಪುತ್ರರು, ದ್ರೌಪದೀ ಹೀಂಗೆ ಐದು ಮಂದಿ ಪಾಪದ್ವೇಷಿಯಿಂದ ದೇಹತ್ಯಾಗ ಮಾಡಿದರೆಂದು ಹೇಳಿದ್ದೀ. ಇವರಿಗೆ ಪಾಪದಿಂದ ದೇಹತ್ಯಾಗ ಉಂಟೆ! ಭೀಮಸೇನ ಮೊದಲಾದವರಿಗೆ ನರಕ ಎಂದಿಗೂ ಇಲ್ಲ. ಭ್ರಾಂತಿಜ್ಞಾನ ಉಳ್ಳವನಾಗಬ್ಯಾಡ. ಈ ಐದು ಮಂದಿ ಎಂಥಾ ಉಚ್ಚ-ಸ್ಥಾನದಲ್ಲಿ ಕುಳಿಥಾರೆ, ಎಂಥಾ ವೈಭವ ಭೋಗಸ್ಥಾರೆ ದೃಷ್ಟೀಲೆ ನೋಡು' ಎಂದು, ಧರ್ಮರಾಯಗೆ ದೇವೇಂದ್ರ ತೋರಿಸಿದ. ಧರ್ಮರಾಯ ನೋಡಥಾನೆ, ತನ್ನ ಬಾಂಧವರು ಅನೇಕ ಪ್ರಕಾರ ದೇವತೆಗಳ ಕೈಯ ಪೂಜಿಗೊಳ್ಳಥಾರೆ. ಸಕಲರಿಂದ ವಾಲ್ಗೈಸಿಕೊಳ್ಳಥಾರೆ. ಇದನ್ನೆಲ್ಲ ಧರ್ಮರಾಯ ದೃಷ್ಟೀಲೆ ಕಂಡ, ಆಗ ಇವರಿಗೆ ಪಾಪದ ಫಲವಿಲ್ಲೆಂದು ತಿಳದ. ಯೋಗಧ್ಯಾನ ಮಾಡಿ, ತೇಜೋಮಯ ದೇಹದಿಂದ ಇಲ್ಲಿಗೆ ಬಂದಾರೆ. ಮೊದಲಪ್ಪಂದೆ ತತ್ಸದೃಶ ದೇಹ ಉಳ್ಳವರು, ದೇವತೆಗಳ ಕೈಯ ಪೂಜಿಗೊಳ್ಳಥಾರೆ. ಧರ್ಮರಾಯ ಬಹಳ ಆಶ್ಚರ್ಯ ಉಳ್ಳವನಾಗಿ, ತನ್ನ ತಮ್ಮಂದರ ಕಂಡ. ದೇವೇಂದ್ರ ರಾಯಗೆ ಅಂದ, 'ರಾಯಾ, ಇವರೆಲ್ಲ ನಿನ್ನ ತಮ್ಮಂದರೆಂದು ಹಚ್ಚಿಕೋಬ್ಯಾಡ. ಇವರು ದೇವಶ್ರೇಷ್ಠರು. ನಾರಾಯಣ, ಭೂಭಾರ ಇಳಹ-ಬೇಕಾಗಿ ಭೂಮೀಮ್ಯಾಲೆ ಕೃಷ್ಣಾವತಾರ ಮಾಡಿದಕಾರಣ, ದೇವತೆಗಳೆಲ್ಲ ದೇವರ ಸೇವಿ ಮಾಡಬೇಕಾಗಿ, ಅಂಗಭೂತರಾಗಿ ಅವತಾರ ಮಾಡಿ, ಜರಾಸಂಧ ಮೊದಲಾದ ದೈತ್ಯರನ್ನ ಕೊಂದು, ಕೃಷ್ಣಾರ್ಪಣ ಮಾಡಿ, ಬಹಳ ಫಲಕ್ಕೆ ಪಾತ್ರರಾಗ್ಯಾರೆ. ದೇವರು ಪರಂಧಾವುಕ್ಕೆ ಬರಲಾಗಿ, ತಾವೂ ತಮ್ಮ ದೇಹ ವಿಯೋಗ ಮಾಡಿ ತಮ್ಮತಮ್ಮ ಲೋಕಕ್ಕೆ ಬಂದಾರೆ. ರಾಯಾ, ನಿನಗಿನ್ನೂ ಮನುಷ್ಯಸ್ವಭಾವ ಹೋಗಿಲ್ಲ. ಅಭಿಮಾನ ಉಳ್ಳವನಾಗಿ ದುರ್ಯೋಧನನ ಐಶ್ವರ್ಯ, ವೈಭವ ಕಂಡು ಬಹಳ ಅಸಹ್ಯ ಉಳ್ಳವನಾಗಿದ್ದೀ ಇನ್ನು ಅಸಹ್ಯ ಬಡಬ್ಯಾಡ. ಅಭಿಮಾನ ಬಿಡು. ದುರ್ಯೋಧನಾದಿಗಳು, ಜ್ಞಾತಿಗಳು ಬಹಳ ದುಃಖ ಬಡಿಸಿದರೆಂದು, ದುಃಖ ಹಚ್ಚಿಕೊಂಡಿದೀ ಆ ದುಃಖನೆಲ್ಲ ಬಿಡು, ಬಹಳ ಶುದ್ಧಾಂತಃಕರಣ ಉಳ್ಳವನಾಗಿ, ಈ ಸ್ವರ್ಗನದಿಯಲ್ಲಿ ಸ್ನಾನ ಮಾಡಿ ದೇಹವಿಯೋಗ ಮಾಡಿ, ದೇವತಾದೇಹ ಐದು. ಈ ದುರ್ಯೋಧನಾದಿಗಳು, ಪ್ರಾರಬ್ಧಕರ್ಮದಿಂದ ಪುಣ್ಯವಾದ ವೀರಸ್ವರ್ಗ ಅನುಭವಿಸ-ಥಾರೆ. ಪುಣ್ಯವೆಲ್ಲ ತೀರಿದವ್ಯಾಲೆ ನಿತ್ಯದುಃಖವಾದಂಥ ತಮಸ್ಸಿನಲ್ಲಿ ಬಿದ್ದವ್ಯಾಲೆ, ಅತಿಶಯ ದುಃಖ ಅನುಭವಿಸತ ಅಲ್ಲೇ ಇದ್ದಾರು. ಇವರಿಗೆ ಉದ್ಧಾರವಿಲ್ಲ. ಎಂದಿಗೆ ತಮಸ್ಸಿಗೆ ಹೋಗಿ ಬೀಳಥಾರೆಂದರೆ, ವೀರಸ್ವರ್ಗ ಅನುಭವಿಸಿ ತತ್ಕೃಷದಿಂದ ಭೂಮೀ ಮ್ಯಾಲೆ ಜಿನಾದಿ ದೈತ್ಯರಾಗಿ ಹುಟ್ಟಿ, ನಾರಾಯಣ ನಿರ್ಗುಣ, ನಿರಾಕಾರ ನೆಂದು ತಿಳದು, ಕಲಿಯುಗ ಆರಂಭವಾದ ಮ್ಯಾಲೆ ನಾಲ್ಕುಸಾವಿರದ ಮುನ್ನೂರ

ವರುಷಕ್ಕೆ ತಮುಸ್ಸಿಗೆ ಹೋಗಿ ಬಿದ್ದಾರು. ಇನ್ನು ಭೂಮೀಮ್ಯಾಲೆ ದೇವತಿಗಳು ಅವತಾರ ಮಾಡಿದ್ದರೂ, ಅವರು ತಾರತಮ್ಯಾನುಸಾರ ಮುಕ್ತಿ ಐದ್ಯಾರು.' ಈ ಪ್ರಕಾರ ದೇವೇಂದ್ರ ಅನಲಿಕ್ಕೆ, ಧರ್ಮರಾಯ ದೇವನದಿಯಲ್ಲಿ ಸ್ನಾನಮಾಡಿದ.

ಧರ್ಮರಾಯ ಸ್ನಾನ ಮಾಡಲಿಕ್ಕೆ, ಶರೀರವು ತನ್ನದೃಶ ಉಳ್ಳದ್ದು ಒಂತು. ಆಗ, ದುರ್ಯೋಧನಾದಿಗಳ ಮ್ಯಾಲಿನ ರೋಷ ರಾಯು ಬಿಟ್ಟುಕೊಟ್ಟು, ತಮ್ಮ ಸಜ್ಜನರನ್ನೆಲ್ಲ ಕಂಡನು. ವಾಯುದೇವರ ಸಮೀಪದಲ್ಲಿ ಭೀಮಸೇನ ಕುಳಿಥಾನೆ. ದ್ರೌಪದೀ ಬದೀಲಿಹಾಳೆ. ದೇವೇಂದ್ರನ ಸಮೀಪದಲ್ಲಿ ಅರ್ಜುನ, ಅಶ್ವಿನೀ ದೇವತಿಗಳ ಸಮೀಪದಲ್ಲಿ ಮಾದ್ರೀಪುತ್ರರು, ಹೀಂಗೆ ಇಹೋದು ಕಂಡ. ದ್ರೌಪದೀ ಮುಖ್ಯ-ಪ್ರಾಣನ ಸಮೀಪದಲ್ಲಿ ಶಚಿ, ಶಾಮಲಾ, ಉಷಾ, ಪಾರ್ವತೀ ಇವರನ್ನ ಮೀರಿದ ಲಾವಣ್ಯದಿಂದ ಹೊಳಿಯುತ, ಉಚ್ಚಸ್ಥಳದಲ್ಲಿ ಕುಳಿಥಾಳೆ. ಧರ್ಮರಾಯು ದೇವತಾ-ದೇಹ ಉಳ್ಳವನಾದರೂ, ಸಂಸ್ಕಾರವಶದಿಂದ ಕಾಮು ಉಳ್ಳವನಾಗಿ, ದ್ರೌಪದೀ ಅಪ್ಪಿಕೊಳ್ಳಲಿಕ್ಕೆ ಹೋದ. ಆ ವ್ಯಾಳ್ಯಾದಲ್ಲಿ ದೇವೇಂದ್ರ ಮಾತನಾಡಥಾನೆ. 'ಹೇ ರಾಯಾ ದ್ರೌಪದೀ ಎದುರಿಗೆ ನಿಂದರಲಿಕ್ಕೆ ನೀ ಸಮರ್ಥನಲ್ಲ. ಮುಟ್ಟ-ಲಿಕ್ಕಂತೂ ಯೋಗ್ಯತೀನೆ ಇಲ್ಲ. ಒಂದು ಕಾರಣಾಂತರದಿಂದ ದ್ರೌಪದೀ ಮುಟ್ಟತಿದ್ದಿ. ದ್ರೌಪದೀ ಜೀವೋತ್ತಮಳು, ಮುಖ್ಯಪ್ರಾಣನ ಹೆಂಡತಿ. ನಿಮ್ಮ ದೇಹಗಳಲ್ಲಿ ಮುಖ್ಯಪ್ರಾಣನ ಆವೇಶ ವಿಶೇಷ ಇದ್ದಕಾರಣ, ಇದಲ್ಲದೇ ಆಕೆಯಲ್ಲಿ ಶಚೀ, ಶಾಮಲಾ, ಉಷಾ ರೂಪದಿಂದ ಈ ನಾಲ್ಕೂ ಮಂದಿ ಇದ್ದಕಾರಣ ನಿಮ್ಮ ಅಂಗ-ಸಂಗವಾಗಿತ್ತು. ದ್ರೌಪದೀ ಅರ್ಜುನನಲ್ಲಿ ವಿಶೇಷ ಸ್ನೇಹ ಮಾಡಿ, ನಿನ್ನಲ್ಲಿ ಸ್ನೇಹ ಮಾಡಲಿಲ್ಲೆಂದು ದೋಷ ಆರೋಪಿಸಿದೀ. ನಿನ್ನಕಿಂತ ಅರ್ಜುನ ದೊಡ್ಡವ. ಭೀಮ-ಸೇನನ ವ್ಯತಿರಿಕ್ತ, ಅರ್ಜುನಾದಿಗಳ ಮ್ಯಾಲೆ ಯಥಾಕ್ರಮ ಸ್ನೇಹ ಮಾಡಿದಳು. ಅರ್ಜುನನಲ್ಲಿ ಮುಖ್ಯಪ್ರಾಣನ ಆವೇಶ ಅಧಿಕವಾಗಿದ್ದ ಕಾರಣ ಸ್ನೇಹ ಮಾಡಿದಳು. ಈಗ, ದ್ರೌಪದೀಯಲ್ಲಿ ಶಚಿ, ಶಾಮಲಾ, ಉಷಾ, ಪಾರ್ವತೀ ರೂಪಗಳಿಲ್ಲ. ನಿಮ್ಮ ನಾಲ್ವರು ಹೆಂಡಂದಿರಿಂದ ರಹಿತಳಾಗ್ಯಾಳೆ. ನಿಮ್ಮಲ್ಲಿ ಈಗ ಮುಖ್ಯಪ್ರಾಣನ ವಿಶೇಷ ಆವೇಶವಿಲ್ಲ. ಈ ದ್ರೌಪದೀ ಮುಟ್ಟೋ ಅಲ್ಲಿ ನಿನಗೆ ಯೋಗ್ಯತಿ ಇಲ್ಲ. ಮನುಷ್ಯ-ದೇಹ ಉಳ್ಳವರು ಮೂಲದೇವತಾ ಸ್ತ್ರೀದೇಹ ಹ್ಯಾಂಗೆ ಮುಟ್ಟತೀರಿ! ದ್ರೌಪದೀ ದೇವತಾರೂಪದಿಂದ ಮುಖ್ಯಪ್ರಾಣನ್ನ ಸೇರಿದಳು.' ಈ ಪ್ರಕಾರ ದೇವೇಂದ್ರ ಧರ್ಮರಾಯಗೆ ಅನಲಿಕ್ಕೆ, ಧರ್ಮರಾಯ ನಾಚಿಕಿ ಉಳ್ಳವನಾಗಿ, ಹಿಂದಕ್ಕೆ ತಿರಗಿದ. ಧರ್ಮರಾಯಗೆ ಮನುಷ್ಯದೇಹ ಹೋಗದು. ಅಷ್ಟರೊಳಗೆ ಯುಗಧರ್ಮರಾಯ ಈ ದೋಷ ತನಗೆ ಬಂದೀತೆಂದು—ನಾರಾಯಣನ ಸ್ಥನದಿಂದ ಹುಟ್ಟಿದಂಥ ಯುಗ-ಧರ್ಮ — ಯುಧಿಷ್ಠಿರನ್ನ ಅಪ್ಪಿಕೊಳ್ಳಲಿಕ್ಕೆ, ಧರ್ಮರಾಯನ ಮನುಷ್ಯವಾಸನಿ ಹೋಯಿತು. ಧರ್ಮರಾಯ, ಯುಗಧರ್ಮರಾಯನೊಳಗೆ ಐಕ್ಯವಾದನು. ವಾಯು-

ದೇವರೊಳಗೆ ಭೀಮಸೇನ, ದೇವೇಂದ್ರನೊಳಗೆ ಅರ್ಜುನ, ಅಶ್ವಿನೀ ದೇವತೆಗಳೊಳಗೆ ಮಾದ್ರೀಪುತ್ರರು ಐಕ್ಯರಾದರು. ತಮ್ಮ ತಮ್ಮ ಹೆಂಡಂದರಿಂದ ಯುಕ್ತರಾಗಿ, ಅನೇಕ ಭೋಗಗಳು ಭೋಗಸ್ತಾ ಇರಹೊಕ್ಕರು.

ಒಂದೊಂದು ರೂಪದಿಂದ ಧರ್ಮರಾಯ, ಭೀಮಸೇನ, ಅರ್ಜುನ, ಮಾದ್ರೀ-ಪುತ್ರರು, ದ್ರೌಪದೀ ಮೊದಲಾದವರು ರೂಪ ಉಳ್ಳವರಾಗಿ, ಸ್ವರ್ಗದಲ್ಲಿ ಪೂರ್ಣ-ಭೋಗಗಳು ಭೋಗಸ್ತಾ ಇರಲಾಗಿ, ಅಲ್ಲಿಗೆ ಶ್ರೀಕೃಷ್ಣ ಬಾಹೋನು. ಭೂಮೀ ವ್ಯಾಳೆ ಸಂಸಾರದಲ್ಲಿ ಹ್ಯಾಂಗೆ ಕ್ರೀಡಿಸೋರು, ಹಾಂಗೆ ಶ್ರೀಕೃಷ್ಣನಿಂದ ಪಾಂಡವರು ಸ್ವರ್ಗದಲ್ಲಿ ರಮಿಸ್ತಿಹೋರು. ಪ್ರತ್ಯೇಕ ರೂಪಗಳಿಹೋವು. ಕೃಷ್ಣಾರ್ಜುನರು ಸೊಡಲಪ್ಪಂದೆ, ದಿವ್ಯ ರಥ ಏರಿಕೊಂಡು ವೈಹಾಳಿ ಮಾಡಿ ಬಾಹೋರು. ಅನೇಕ ಪ್ರಕಾರ ಹೀಂಗೆ ಕ್ರೀಡಸ್ತಿಹೋರು. ಮಿಗಿಲಾದ ದೇವತೆಗಳು ತಮ್ಮ ಮೂಲರೂಪ ಕೂಡಿದರು. ಈ ಪ್ರಕಾರ ದೇವಾಂಶ ದೇವಾಂಶರು ತಮ್ಮ ಮೂಲರೂಪ ಕೂಡಿದರು. ದೇವತೆಗಳೆಲ್ಲ ತಮ್ಮ ಪ್ರಾರಬ್ಧ ತೀರಿಸಿಕೊಂಡು, ಮೂಲರೂಪ ಕೂಡಿದರು.

ದೈತ್ಯರು ತಮ್ಮ ಪುಣ್ಯಕ್ಷಯ ಮಾಡಿಕೊಂಡು, ಕ್ರಮದಿಂದ ತಮಸ್ಸಿಗೆ ಹೋಗಿ ಬಿದ್ದಾರೆ. ಸೌಗಂಧಿಕಾವನದಲ್ಲಿ ಭೀಮಸೇನನ ಕೈಯ, ಮಣಿಮಂತ ಮೊದಲಾದ ದೈತ್ಯರು ಸತ್ತು, ಭೂಮೀವ್ಯಾಳೆ ಸಂಕರ ಮೊದಲಾಗಿ ಅದ್ವೈತರಾಗಿ ಹುಟ್ಟಿ, ಜೀವೇಶ್ವರ ಐಕ್ಯ, ಜಗತ್ತು ಮಿಥ್ಯ ಎಂದು ತಿಳದು, ಕಲಿಯುಗ ನಾಲ್ಕು-ಸಾವಿರ ಮುನ್ನೂರು ವರುಷ ಆದಮ್ಯಾಲೆ, ತಮಸ್ಸಿಗೆ ಹೋಗಿ, ಕಲಿ ಮೊದಲಾದವರೆಲ್ಲ ಬಿದ್ದಾರು. ತಮಸ್ಸಿನಲ್ಲಿ ಅತಿಶಯ ದುಃಖ, ತಮಸ್ಸಿನಲ್ಲಿ ತಾರತಮ್ಯ ಉಂಟು. ಅತಿಶಯ ದುಃಖ ಕಲಿಗೆ ಆಗತದೆ. ದುಃಖದಲ್ಲಿ ತಾರತಮ್ಯ ಉಂಟು. ಅತಿಶಯ ಸುಖ ಮುಖ್ಯಪ್ರಾಣಗೆ ಉಂಟು. ವಿಶೇಷ ಸುಖ ಉಂಬೋ ಅಲ್ಲಿ ಮುಖ್ಯಪ್ರಾಣ ದೊಡ್ಡಾತ, ವಿಶೇಷ ದುಃಖ ಉಂಬೋ ಅಲ್ಲಿ ಕಲಿ ದೊಡ್ಡಾತ. ಹರಿದ್ವೇಷಿಗಳು, ಹರಿಭಕ್ತರ ದ್ವೇಷಿಗಳು ಪಾಪವಶದಿಂದ ಕೆಲವರು ದೈತ್ಯರು, ಕೆಲವರು ಪಿಶಾಚಿಗಳು, ಕೆಲವರು ಅಸುರ, ರಾಕ್ಷಸರಾಗಿ, ಈ ಪ್ರಕಾರ ಭೂಮೀವ್ಯಾಳೆ ಹುಟ್ಟಿ, ಹರಿದ್ವೇಷ ಮಾಡಿ, ಹರಿಭಕ್ತರ ದ್ವೇಷ ಮಾಡಿ, ತರುವಾಯದಿಂದ ತಮಸ್ಸಿಗೆ ಹೋಗಿ ಬೀಳಥಾರೆ. ಸಜ್ಜನರು ಸಾಧನಸಂಪತ್ತು ಮಾಡಿ, ಬ್ರಹ್ಮದೇವರ ಮಾರ್ಗ ನೋಡತ ಹ್ಯಾಂಗೆ ನಿರೀಕ್ಷ ಕೂಡಥಾರೆ, ಹಾಂಗೆ ದೈತ್ಯರು ಕಲಿಮಾರ್ಗ ನೋಡತ, ಕಲಿನಿರೀಕ್ಷ ಮಾಡತ ಕೂಡ್ರೋದಿಲ್ಲ. ಪಾಪವಶದಿಂದ ವಿಷ್ಣುವೈಷ್ಣವರ ದ್ರೋಹ ಮಾಡಿ, ಘೋರವಾದಂಥ ತಮಸ್ಸಿಗೆ ಹೋಗಿ, ಬೀಳಥಾರೆ. ದೈತ್ಯರಿಗೆಲ್ಲ ಅರಸು ಕಲಿ, ಸಜ್ಜನರಿಗೆಲ್ಲ ಅರಸು ಮುಖ್ಯಪ್ರಾಣ. ಈತನೇ ದೈತ್ಯರ ಸಂಹರಿಸಬೇಕಾಗಿ ಹನುಮಂತನ ಅವತಾರ ಮಾಡ್ಯಾನೆ, ಭೀಮಸೇನನ ಅವತಾರ ಮಾಡ್ಯಾನೆ.

ಭೀಮಸೇನನೇ ಕಲಿಯುಗದಲ್ಲಿ ನಾಲ್ಕು ಸಾವಿರದ ಮುನ್ನೂರು ವರುಷಕ್ಕೆ, ಮಧ್ವಗೇಹಭಟ್ಟನೆಂಬಂಥ ಬ್ರಾಹ್ಮಣನಲ್ಲಿ ಮಗನಾಗಿ ಅವತರಿಸಿದ್ದಾನೆ. ಪಾಪಿ ದೈತ್ಯರು, ನಾರಾಯಣ ನಿರ್ಗುಣ, ನಿರಾಕಾರನಂತ ಅದ್ವೈತಶಾಸ್ತ್ರ ಬಲಿಸಿಹೋರು. ಅಂಥಾ ಶಾಸ್ತ್ರ ಕೆಡಸಬೇಕಾಗಿ, ಭೀಮಸೇನನೇ ಮಧ್ವಾಚಾರ್ಯರಾಗಿ ಅವತರಿಸಿದ್ದಾನೆ. ಭೀಮಸೇನ ಆನಂದತೀರ್ಥರಾಗಿ ಅವತರಿಸಲಿಕ್ಕೆ, ದ್ರೌಪದೀ, ಶಂಕರಭಟ್ಟನೆಂಬ ಬ್ರಾಹ್ಮಣನಲ್ಲಿ ಅವತರಿಸಿದ್ದಾಳೆ. ಆ ಶಂಕರಭಟ್ಟಗೆ ಮಗಳಾಗಿ, ಚಂದ್ರಾದೇವಿ ಎಂಬ ನಾಮ ಉಳ್ಳಾಕೆಯಾಗಿರಲಿಕ್ಕೆ, ಆ ಚಂದ್ರಾದೇವಿ ಮದುವಿ ಆಗಲಿಲ್ಲ. ಲೋಕವೆಲ್ಲ ಶಂಕರಭಟ್ಟನ್ನ ವಾಳಿಸಿ, ಅನ್ನ, ಉದಕ ಕೊಳ್ಳದೆ ಬಹಿಷ್ಕಾರ ಮಾಡಿರಲಿಕ್ಕೆ, ಶ್ರೀಮದಾನಂದತೀರ್ಥರು, ಶಂಕರಭಟ್ಟರಲ್ಲಿ ಭಿಕ್ಷಾ ಕೊಂಡಿದ್ದಾರೆ. ಆದಕಾರಣ ಆ ಬ್ರಾಹ್ಮಣ ಶುದ್ಧಾತ್ಮನಾದ. ಚಂದ್ರಾದೇವಿ ತನ್ನ ನಿಜಸ್ತ್ರೀ ಏನುಕಾರಣ ಮದುವಿ ಮಾಡಿಕೊಳ್ಳಲಿಲ್ಲವೆಂದಲ್ಲಿ, ಹನುಮದವತಾರದಲ್ಲಿ, ಆನಂದತೀರ್ಥರ ಅವತಾರದಲ್ಲಿ ಮದುವಿ ಮಾಡಿಕೊಂಡಿಲ್ಲ. ಆನಂದತೀರ್ಥರು ಎಂಟು ವರುಷ ಆದಮ್ಯಾಲೆ ಅಚ್ಯುತಪ್ರೇಕ್ಷರ ಕೈಯ ಸನ್ಯಾಸ ಕೊಂಡಾರೆ. ಈ ಶ್ರೀಪಾದಪಟ್ಟ ಮೊದಲು ಪೂರ್ವಾಸರ, ದೂರ್ವಾಸ ಮುನೀಶ್ವರರಿಂದ ನಡದುಬಂದದೆ. ಅವರ ಶಿಷ್ಯರು ಪ್ರಾಜ್ಞತೀರ್ಥರು, ಪ್ರಾಜ್ಞತೀರ್ಥರ ಶಿಷ್ಯರು ಸತ್ಯಪ್ರಜ್ಞರು, ಸತ್ಯಪ್ರಜ್ಞರ ಶಿಷ್ಯರು ಅಚ್ಯುತಪ್ರೇಕ್ಷರು. ಅವರು ಮಧ್ವರಾಯರಿಗೆ ಮಠದಲ್ಲಿ ಶ್ರೀಪಾದಪಟ್ಟ ಕೊಟ್ಟು, ತಮ್ಮ ಸ್ವೇಚ್ಛಾದಿಂದ ತಿರಗತಿಹೋರು. ಅಚ್ಯುತಪ್ರೇಕ್ಷರು, ಮಾಯಾವಾದಿಗಳ ಅಂಜಿಕೆಯಿಂದ ಅವರಪ್ಪಂದೆ ಬಹಿಚ್ಛಿನ್ನ ಧರಿಸಿಹೋರು. ಅಂತಃಚಿನ್ನ ಬಹಳ ಜೆನ್ನಾಗಿಹೋದು. ನಾರಾಯಣ ಸರ್ವೋತ್ತಮ, ಬ್ರಹ್ಮರುದ್ರಾದಿಗಳು ತದ್ದಾಸರೆಂದು ನಿಶ್ಚಯವಾಗಿಹೋದು. ವೈಷ್ಣವಚಿನ್ನ ಧರಿಸಿದರೆ ಸಂಕರ ಮೊದಲಾದವರು ಭೈರವೀಚಕ್ರದಿಂದ ಶಿರಚ್ಛೇದನ ಮಾಡಥಾರೆಂದು, ಊರ್ಧ್ವಪುಂಡ್ರ ಇಲ್ಲದೆ ಭಸ್ಮಧಾರಿಗಳಾಗಿಹೋರು. ಅಚ್ಯುತಪ್ರೇಕ್ಷರು ಮಧ್ವರಾಯರಿಗೆ ಶ್ರೀಪಾದಪಟ್ಟ ಕೊಟ್ಟು, ಮಠದಲ್ಲಿ ಇಟ್ಟಿರಲಿಕ್ಕೆ, ಮಧ್ವರಾಯರು ವಾಯುದೇವರ ಅವತಾರವಾದ ಕಾರಣ, ಬಹಳ ಪ್ರಬಲ ಉಳ್ಳವರಾಗಿ, ಮಾಯಾವಾದಿಗಳ ದುರ್ಮತನೆಲ್ಲ ಖಂಡಿಸಿ, ಅವೈಷ್ಣವರನ್ನು ಸೋಲಿಸಿ, ವಿಷ್ಣು ಸರ್ವೋತ್ತಮನೆಂಬ ಜ್ಞಾನ ಲೋಕದೊಳಗೆ ಸ್ಥಾಪಿಸಿದರು. ಇನ್ನು ಚಂದ್ರಾದೇವಿ ಮದುವಿ ಇಲ್ಲದೆ ದೇಹತ್ಯಾಗ ಮಾಡಿ ತನ್ನ ಮೂಲರೂಪ ಕೂಡಿದಳು. ತ್ರಿಜ್ಞನಾದಿಕ್ಕಳು ನಾರಾಯಣನ ತುಷ್ಟಿ ಬಡಿಸಬೇಕಾಗಿ, ಅರ್ಜುನ ಜಯತೀರ್ಥರಾಗಿ ಹುಟ್ಟಿದ್ದಾನೆ, ಶೇಷ ಪದ್ಮನಾಭತೀರ್ಥರಾಗಿ ಹುಟ್ಟಿದ್ದಾನೆ. ಈ ಪ್ರಕಾರ ಸಾಧನಸಂಪತ್ತು ಮಾಡಿ, ಬ್ರಹ್ಮದೇವರ ನೂರು ವರುಷ ಆದಮ್ಯಾಲೆ, ಬ್ರಹ್ಮದೇವರ ಸಂಗಡ ಮೋಕ್ಷ ಐದಾರು.

ಹನುಮಂತ, ಭೀಮಸೇನನ ಅವತಾರಗಳು ಮೂಲವಮುಖ್ಯಪ್ರಾಣನೊಳಗೆ ಐಕ್ಯವಾಗಿ ವಾಯು ವಾಯುವಿನಲಿ ಐಕ್ಯ ಹೊಂದಿ, ಬ್ರಹ್ಮದೇವರು ಮುಕ್ತಿಗೆ ಹೋದಮ್ಯಾಲೆ, ಈ ವಾಯುದೇವರು ಬ್ರಹ್ಮಪದವಿಗೆ ಬಂದಾನು. ದ್ರೌಪದೀ, ಸರಸ್ವತೀಪದವಿಗೆ ಬಂದಾಳು. ಬ್ರಹ್ಮಪದವಿ ಆದಮ್ಯಾಲೆ ಗಂಡನ ಸಂಗಡ ಮುಕ್ತಿ ಐದ್ಯಾಳು. ಭೂವಿೀಮ್ಯಾಲೆ ಹನುಮಂತ, ಭೀಮಸೇನ, ಆನಂದತೀರ್ಥರು ಏನು ಚರಿತ್ರ ಮಾಡಥಾರೆ, ಆದರಿಂದ ನಾರಾಯಣನ ತುಷ್ಟೀ ಬಹಳಾಗತದೆ. ಮೂಲದಲ್ಲಿ ವಾಯುಪದವಿ ಆಳುವಾಗ, ಅವತಾರದಲ್ಲಿ, ಮುಕ್ತಿಯಲ್ಲಿ, ಇವರಿಂದ ರಮೇಶ ಬಹಳ ತುಷ್ಟನಾಗಥಾನೆ. ಅವರು ನಿರ್ದೋಷಭಕ್ತಿ ಉಳ್ಳವರು. ಮುಖ್ಯಪ್ರಾಣನ ಭಕ್ತಿಗೆ ಪ್ರತ್ಯಕ್ಷ ವೇದಶ್ರುತಿಯೇ ಪ್ರಮಾಣ. 'ಬಳಿತ್ಥಾ ತದ್ವಪುಷೇಧಾಯಿ ದರ್ಶಿತಂ' ಹೀಂಗೆ ಶ್ರುತಿಗಳಲ್ಲಿ ಹೇಳತದೆ ಪಂಚರಾತ್ರಾಗಮದಲ್ಲೂ, ಇದೇ ಪ್ರಕಾರ ಶ್ರುತಿಯಲ್ಲಿ ಹೇಳಿದಂತೆ, ಮುಖ್ಯಪ್ರಾಣನ ಅತಿಶಯ ಭಕ್ತಿ ನಾರಾಯಣನಲ್ಲಿ, ಹೇಳತದೆ. ಸ್ವಾಮಿ ಅವತಾರ ಮಾಡಲಿಕ್ಕೆ, ತಾವೂ ಅವತಾರ ಮಾಡಥಾರೆ, ಅಂಗಭೂತರಾಗಿ ದೇವರ ಸೇವಿ ಮಾಡಿ, ಅನುಗ್ರಹ ಸಂಪಾದಿಸ್ಥಾರೆ.

ಕೃಷ್ಣ ಭೂಭಾರ ಇಳಹಿ, ಪರಂಧಾಮಕ್ಕೆ ಹೋಗಲಿಕ್ಕೆ, ಪಾಂಡವರು ತಾವೂ ಪರಂಧಾಮಕ್ಕೆ ಹೋದರಷ್ಟೆ. ಯೌವರಾಜ್ಯದಲ್ಲಿ ಅನಿರುದ್ಧನ ಮಗ ವಜ್ರಗೆ ರಾಜ್ಯಾಭಿಷೇಕವಾಯಿತು. ಪಾಂಡವರ ಸಂತಾನದವರು, ವೇದವ್ಯಾಸನ ಕೈಯಿಂದ ಶಿಕ್ಷಾ ಕೊಂಡು, ಸರ್ವಸಾಮ್ರಾಜ್ಯ ಕ್ಷೇಮಕರಾಯನ ಪರ್ಯಂತ ಆಳಿದರು. ಕಲಿಯುಗದಲ್ಲಿ ಒಂದು ಸಾವಿರ ವರುಷ ಪಾಂಡವರ ಸಂತಾನ ನಡಿಯಿತು. ಪಾಂಡವರ ಸಂತಾನದವರು ಕಲಿಯುಗದಲ್ಲಿ ರಾಜ್ಯ ಆಳುವಾಗ, ತಮ್ಮ ಪೂರ್ವಜರ ಚರಿತ್ರಾ, ಭಾರತಾದಿ ಶಾಸ್ತ್ರ ನಿರಂತರ ಮರಳಿ ಮರಳಿ ಕೇಳತಿಹೋರು. ಕಲಿವ್ಯಾಪಾರ ನಡೇಗೊಡರು. ಪಾಂಡವರ ಸಂತಾನದವರು ಜ್ಞಾನ, ಭಕ್ತಿ, ವೈರಾಗ್ಯಶೀಲರು. ಬ್ರಾಹ್ಮಣರಲ್ಲಿ ವಾತ್ಸಲ್ಯ ಉಳ್ಳವರು. ಅವರಿಗೆ ನಾರಾಯಣನ ಚಲಪ್ರತಿಮಾದಲ್ಲಿ ಭಕ್ತಿ ಕೆಟ್ಟದ್ದಿಲ್ಲ. ತಾತ್ಪರ್ಯಕದೇವತಿಗಳು, ಅಧರ್ಮ ಕೆಡಸಿ, ಧರ್ಮ ಸಂರಕ್ಷಿಸತಿಹೋರು. ಸಕಲ ಸಜ್ಜನರಿಂಗೆ ಬೇಕಾಗಿಹೋರು, ಪರಮಪ್ರಿಯರು. ಸಜ್ಜನರ ಮುಖಕಮಲ ದಿಂದ, ನಾರಾಯಣ ಸರ್ವೋತ್ತಮನೆಂಬ ಜ್ಞಾನ, ಈ ಜಗತ್ತಿನೊಳಗೆ ಪಸರಿಸಿಹೋದು. ಸಮಸ್ತ ಪ್ರಾಣಿಗಳು ತತ್ತ್ವಜ್ಞಾನ ಸಂಪಾದಿಸ್ತಿಹೋರು. ಹೀಂಗೆ ಸತ್ಸಂಪ್ರದಾಯ ಬಹುಕಾಲ ನಡೇತ ಬಂತು. ಹೀಂಗೆ ಜಗತ್ತಿನೊಳಗೆ ಸತ್ಕರ್ಮ ಮಾಡಲಾಗಿ, ದೈತ್ಯರು ತ್ರಿಪುರಸಂಹಾರಕಾಲದಲ್ಲಿ, ಮಹಾರುದ್ರನ ಕೈಯಿಂದ ಸತ್ತು ಹೋದ ಆದೇ ದೈತ್ಯರು ಭೂಮಿೀಮ್ಯಾಲೆ ಹುಟ್ಟಿ, ಶುದ್ಧ ಸಂಪ್ರದಾಯ, ಶುದ್ಧ ಕರ್ಮ ಮಾಡಹೊಕ್ಕರು. ಪಾಂಡವರ ಸಂತಾನ ಸಾವಿರ ಸಾವಿರ ವರುಷಕ್ಕೆ ಕಡಿಕಾಗಲಿಕ್ಕೆ, ವೇದವ್ಯಾಸರು ಬದರಿಕಾಶ್ರಮದಿಂದ ಹಸ್ತಿನಾವತಿಗೆ ಬಾರಥಾಂಗಾದರು.

ದೈತ್ಯರು ಸಜ್ಜನರಲ್ಲಿ ಹುಟ್ಟಿ ಶುದ್ಧಾಚಾರ ಮಾಡಹೊಕ್ಕರು. ಆದ್ವೈತಶಾಸ್ತ್ರ ಇಲ್ಲಧಾಂಗಾಯಿತು. ಪಾಶುಪತ್ಯಾದಿ ದುರ್ಮತಗಳ ವೇದವ್ಯಾಸರು ಮೊದಲಿಗೇ ಕೆಡಸಿಬಿಟ್ಟಿಹೋರು. ದೈತ್ಯರೆಲ್ಲ ವೈಷ್ಣವಮಾರ್ಗ ಉಳ್ಳವರಾಗಿಹೋರು. ಇದು ಕಂಡು ದೇವತೆಗಳು ಬಹಳ ದುಃಖಬಡಹೊಕ್ಕರು. ಪಾಪಿಗಳು ಶುದ್ಧಕರ್ಮ ಮಾಡಥಾರೆ. ಈ ಪಾಪಿಗಳಿಗೆ ದಿವ್ಯಗತಿ ಆಗಬಾರದು. ಹೋಮದ್ರವ್ಯ, ಪುರೋಡಾಷ ನಾಯಿ ಹ್ಯಾಂಗೆ ಮುಟ್ಟಬಾರದು, ಹಾಂಗೆ ಇಂಥಾ ವೈಷ್ಣವಮಾರ್ಗಕ್ಕೆ ಈ ಪಾಪಿಗಳು ಯೋಗ್ಯರಲ್ಲ. ಚಂಡಾಲರಿಗೆ ವೇದ ಹ್ಯಾಂಗೆ ಗ್ರಾಹ್ಯವಲ್ಲ, ಹಾಂಗೆ ಈ ಪಾಪಿಗಳು ಸ್ವಚ್ಛ ಜ್ಞಾನಕ್ಕೆ ತಕ್ಕವರಲ್ಲ. ಇಂಥಾ ಶುದ್ಧ ಸಂಪ್ರದಾಯ ದೈತ್ಯರಿಗೆ ಯೋಗ್ಯವಲ್ಲ. ಇವರು ತಮೋಯೋಗ್ಯರು. ಇವರಿಗೆ ಮುಕ್ತಿ ಆಗಬಾರದಂತ ದೇವತೆಗಳು, ತಮ್ಮೊಳಗೆ ತಾವು ದುಃಖಬಡಹೊಕ್ಕರು. ತಮಗೆ ದೇವರಾಜ್ಞವದೆ. ಪಾಪಿಗಳಿಗೆ ವಿಘ್ನ ಆಚರಿಸಬೇಕಾಗಿ, ಅಸಜ್ಜನರಿಗೆ ಪಾಪ ಹೆಚ್ಚಿಸಿಕೊಡಬೇಕಾಗಿ, ವೈರಿಶಿಕ್ಷಕ ನಾರಾಯಣ ತಮ್ಮನ್ನೆಲ್ಲ ತಾತ್ತ್ವಿಕದೇವತೆಗಳ ಮಾಡಿ ಹುಟ್ಟಿಸ್ಯಾನೆ. ಈ ಪಾಪಿ ದುರಾತ್ಮರಿಗೆ ಬ್ರಹ್ಮ, ರುದ್ರ, ಇಂದ್ರಾದಿ ದೇವತೆಗಳು ತಾವೇ ವರಗಳು ಕೊಟ್ಟಾರೆ. ಇಂಥಾ ಜಿನಾದಿ ದೈತ್ಯರ ಸ್ವಚ್ಛ ಜ್ಞಾನ ಕೆಡಸಿ, ಪಾಪಕರ್ಮ ಮಾಡಿಸಿ, ತಮ್ಮುನ್ನಗೆ ಕೆಡಹಾಕಬೇಕೆಂದು, ಬೌದ್ಧಾವತಾರ ಮಾಡಬೇಕೆಂದು ಸ್ವಾಮೀನ್ನ ಕ್ಷೀರಸಮುದ್ರಕ್ಕೆ ಹೋಗಿ ಸ್ತೋತ್ರ ಮಾಡ್ಯಾರೆ.

ತಾತ್ತ್ವಿಕದೇವತೆಗಳು, ಪಾಪಿಗಳಿಗೆ ತಾವು ವಿಘ್ನ ಆಚರಿಸಬೇಕಾದರೆ ತಮಗೆ ಶಕ್ತಿ ಸಾಲದೆ ಬ್ರಹ್ಮ, ರುದ್ರದೇವರನ್ನ ಮುಂದುಮಾಡಿಕೊಂಡು ಕ್ಷೀರಸಮುದ್ರ ಉತ್ತರದಿಕ್ಕಿಗೆ ಹೋಗಿ ಅನೇಕ ಪ್ರಕಾರ ಸ್ತೋತ್ರ ಮಾಡಲಿಕ್ಕೆ, ರಮಾಪತಿ ಪ್ರಕಟನಾಗ್ಯಾನೆ. 'ನಿಮ್ಮ ಮನೋಬಯಕೆ ಪೂರ್ಣಮಾಡಿಕೊಟ್ಟೀನಂತೆ, ಅಂಜಬ್ಯಾಡಿ ಹೋಗಿ' ಎಂದು ಪ್ರತ್ಯಕ್ಷನಾಗಿ ಅಪ್ಪಣೆ ಕೊಟ್ಟ. ಸ್ವಾಮಿ ಕ್ಷಣಮಾತ್ರದಲ್ಲಿ, ಶುದ್ಧೋದನಜಿನ ಎಂಬಾತನ ಹೆಂಡತಿ ಗಯಾ ಎಂಬ ಹೆಂಗಸು ಗರ್ಭಿಣಿ ಆಗಿದ್ದಳು, ಸ್ವಾಮಿ ಗರ್ಭದೊಳಗಿನ ಬಾಲಕನ್ನ ಬಹು ದೂರ ಈಡ್ಯಾಡಿ, ತಾ ಬಾಲಕನೋಪಾದೀಲೆ ತಿಪ್ಪೀಮ್ಯಾಲೆ ಬಿದ್ದಾನೆ. ಶುದ್ಧೋದನಜಿನ ಜಿನಾದಿ ದೈತ್ಯರಲ್ಲಿ ಶ್ರೇಷ್ಠ, ಹಡದ ಕೂಸು ಹೋಯಿತೆಂದು ಸ್ಥಳಸ್ಥಳಗಳಲ್ಲಿ ಹುಡಕತ ಬರಲಾಗಿ ತಿಪ್ಪೀಮ್ಯಾಲೆ ಬಾಲಕ ಬಿದ್ದಾನೆ. ಇನ್ನೂ ಹುರಿ ಕೊಯ್ದಿಲ್ಲ. ಈತ ಸರ್ವೋತ್ತಮ ದೇವತಿ ಎಂದು ತಿಳೀದೆ, ತಮ್ಮ ಬಾಲಕನೆಂದು ತಿಳದು, ಮನಿಗೆ ಕೊಂಡುಬಂದು ವೇದೋಕ್ತಕರ್ಮಗಳಿಂದ ಜಾತಕರ್ಮ ಮಾಡಹೊಕ್ಕನು. ಕೇಶವ ಬಾಲಕರೂಪದಿಂದ ಥೋಡೆ ನಗಹೊಕ್ಕನು. ಈಗ ಹುಟ್ಟಿದ ಕೂಸು ನಗತೆಂದು ಆಶ್ಚರ್ಯವುಳ್ಳವರಾಗಿ, ಭೂತನೋ, ಪ್ರೇತನೋ, ಹೀಂಗ ಒಮ್ಮಿಂದೊಮ್ಮೆ ನಗತದೆಂದು ಕೇಳಲಾಗಿ—ತ್ರಿಪುರಸಂಹಾರಕಾಲದಲ್ಲಿ ಮಹಾರುದ್ರನ ಕೈಯ ಸತ್ತಂಥವರು ಜಿನಾದಿ ದೈತ್ಯರಾಗಿ, ಶುದ್ಧಕರ್ತವ್ಯ

ಮಾಡಹೊಕ್ಕರು. ಅವರೆಲ್ಲ ಬಾಲಕಗೆ ಕೇಳಲಾಗಿ—'ನೀ ದಾರು' ಎಂದು ಕೇಳಲಾಗಿ, 'ನಾ ಬುದ್ಧನೆದ್ದೀನಿ' ಎಂದು ಹೇಳಿದ. 'ಏನುಕಾರಣ ನಗತಿದ್ದಿ?' ಎಂದು ಕೇಳಲಾಗಿ, 'ನೀವು ಮಾಡೋ ಕರ್ಮ ಕಂಡು ನಾ ನಗಥೀನಿ. ಯಾಕೆ ಶ್ದ್ಧಕರ್ಮ ಮಾಡಬಾರದೆಂದಲ್ಲಿ, ವೇದ ಅಪ್ರಮಾಣ, ಜಗತ್ತು ಶೂನ್ಯ, ಅಭಾವ, ಅಸತ್ಯ, ಕ್ಷಣಿಕ.' ಈ ಪ್ರಕಾರ ಬಾಲಕನು ಅನಲಿಕ್ಕೆ ಜಿನಾದಿ ದೈತ್ಯರಿಗೆ ಬಾಲಕನ ವಚನದಲ್ಲಿ ವಿಶ್ವಾಸ ಸಾಲದು. 'ಪರಂಪರಾ ನಡದುಬಂದದೆ. ಸಂಪ್ರದಾಯ, ಸತ್ಕರ್ಮ ಹ್ಯಾಂಗೆ ಬಿಡತದೆ?' ಹೀಂಗೆ ಅನ್ನಲು, ದೈತ್ಯರಿಗೆ ವಿಶ್ವಾಸ ಹುಟ್ಟಿಸಿಕೊಡ-ಬೇಕಾಗಿ, ಸ್ವಾಮಿ ಬೌದ್ಧನಾಮಕ ನಾರಾಯಣ, ರುದ್ರಾದಿ ದೇವತಿಗಳ ಸ್ಮರಿಸಿದ. ದೇವತಿಗಳು ದೇವರ ಮನೋಗತ ತಿಳದರು. ರುದ್ರ ತನ್ನ ತ್ರಿಶೂಲ ಬಾಲಕನವ್ಯಾಲೆ ಈಡ್ಯಾಡಿದನು. ದೇವೇಂದ್ರ ತನ್ನ ವಜ್ರಾಯುಧ ಈಡ್ಯಾಡಿದನು. ಯಮ ಬಾಲಕನ ವ್ಯಾಲೆ ತನ್ನ ದಂಡ ಈಡ್ಯಾಡಿದ. ಈ ಪ್ರಕಾರ ದೇವತಿಗಳೆಲ್ಲ ತಮ್ಮತಮ್ಮ ಆಯುಧಗಳನ್ನೆಲ್ಲ ಈಡ್ಯಾಡಲಿಕ್ಕೆ, ಸ್ವಾಮಿ ಅಷ್ಟೂನು ನುಂಗಿಬಿಟ್ಟ. ಮೂಲ-ನಾರಾಯಣ ತನ್ನ ಚಕ್ರ ಹಾಕಿದನು. ಜಿನಾದಿ ದೈತ್ಯರನ್ನ ಮೋಹಿಸಬೇಕಾಗಿ, ಸರ್ವತಂತ್ರಸ್ವತಂತ್ರನಾದಂಥ ಬುದ್ಧನಾಮಕ ನಾರಾಯಣ, ಬಂದಂಥ ಚಕ್ರ ಹಿಡದುಕೊಂಡು ನಿಂತು, ಆಸನಮಡಿ ಹಾಕಿಕೊಂಡು ಕುಳಿತನು. ದೇವತಿಗಳೆಲ್ಲ ಆಕಾಶಮಾರ್ಗದಲ್ಲಿ ಸ್ವಾಮಿಗೆ ನಮಸ್ಕಾರ ಮಾಡಿ, ತಮ್ಮತಮ್ಮ ಲೋಕಕ್ಕೆ ಹೋದರು. ಜಿನಾದಿ ದೈತ್ಯರು ತಮ್ಮ ಬಾಲಕ ನಾರಾಯಣನಿಗಿಂತ ದೊಡ್ಡಾತನೆಂದು ತಿಳದು, ಆಗ ವೇದ ಅಪ್ರಾಮಾಣ್ಯವೆಂದು ತಿಳದು, ನಾರಾಯಣನಿಂದ ಮೋಹಿತ-ರಾಗಿ, ಜಗತ್ತೆಲ್ಲ ಪ್ರತಿಕ್ಷಣಕ್ಕೆ ಹುಟ್ಟತದೆ, ಕಣ್ಣು ಮುಚ್ಚಲಿಕ್ಕೆ ಸಾವತದೆ, ಕಣ್ಣು ತೆರಿಯಲಿಕ್ಕೆ ಹುಟ್ಟತದೆ, ಅಸತ್ಯ, ಶೂನ್ಯ, ಅಭಾವ, ಘಟಾದಿಕ್ಕಳು ಪ್ರತಿಕ್ಷಣಕ್ಕೆ ವಿನಯ ಉಳ್ಳವು, ಈ ಪ್ರಕಾರ ಮಿಥ್ಯಾಜ್ಞಾನಿಗಳು ಇಂಥಾ ಕುಬುದ್ಧಿ ಬಲ್ಕೀ ಮಾಡಲ್ಪಟ್ಟರು. ಕೆಲವು ದಿವಸ ಜಿನಾದಿ ದೈತ್ಯರ ಬಳೀಲಿದ್ದು, ಆಲ್ಲಿಂದ ಬುದ್ಧ-ನಾಮಕ ನಾರಾಯಣ ಸುರೇಂದ್ರಲೋಕಕ್ಕೆ ಹೋಗಿ, ದೇವತಿಗಳ ಕೈಯ ಪೂಜಿ-ಗೊಂಡನು.

ದೇವತಿಗಳೆಲ್ಲ, ಸ್ವಾಮೀ ಪೂಜಿ ಮಾಡಿ ಕೇಳದರು, 'ಜಗತ್ತು ಕ್ಷಣಿಕ, ಅಭಾವ, ಶೂನ್ಯ, ಅಸತ್ಯವೆಂದು ಹೇಳಿದಿ. ಇದೆಲ್ಲ ಹ್ಯಾಂಗೆ?' ಎಂದು ಕೇಳಲಾಗಿ, ಬುದ್ಧನಾಮಕ ನಾರಾಯಣ ದೇವತಿಗಳಿಗೆ ಅರ್ಥಾಂತರ ಮಾಡಿ ಹೇಳಿದ್ದಾನೆ. 'ಹ್ಯಾಂಗೆಂದರೆ, ಜಗತ್ತು ಕ್ಷಣಿಕ ಎಂದು ಹೇಳಿದ್ದಕ್ಕೆ ಅರ್ಥ, ತೃಟಿ, ಲವ, ಕ್ಷಣಾದಿ ಕಾಲಗಳು ಅನಿತ್ಯ. ಹಿಂದೆ ಹೋದಂಥ ತೃಟಿ, ಲವ, ಕ್ಷಣಗಳು ಮುಂದೆ ಬಾರವು. ಘಟಕ್ಕೂ ಘಟಗತ ಧರ್ಮಕ್ಕೂ ಭೇದವಿಲ್ಲ. ಧರ್ಮಕ್ಕೆ, ಧರ್ಮಿಗೆ ಅಭೇದವಾದರೆ, ಧರ್ಮಾಧರ್ಮಿಗಳು ಏನುಕಾರಣ ಬ್ಯಾರೆ ಅಂತೀದೀರಿ ಎಂದಲ್ಲಿ, ವಿಶೇಷವದೆ ಕ್ಷಣ-

ಮಾತ್ರದಲ್ಲಿ ಜಗತ್ತು ವಿಕಾರ ಐದತದೆ. ಆದಕಾರಣ ಜಗತ್ತು ಕ್ಷಣಿಕ' ಎಂದನು. ಜಗತ್ತು ಶೂನ್ಯ ಎಂದಲ್ಲಿ, 'ಈ ಜಗತ್ತೆಲ್ಲ ನನ್ನಿಂದ ಜ್ಞಾನ ಉಳ್ಳದ್ದಾಗೇದೆ. ನಾ ಇಲ್ಲದಿದ್ದರೆ ಸ್ಥಾವರ ಜಂಗಮ ಪ್ರಾಣಿಗಳಿಗೆ ಚೇಷ್ಟಾ ಇಲ್ಲದೇ ಹೋದೀತು. ಜಗತ್ತು ಅಸ್ವತಂತ್ರ ಉಳ್ಳದ್ದು. ಜಗತ್ತು ಪಾಲಸ್ತೀನಿ, ಆದಕಾರಣ ಶೂನ್ಯ ಎಂದೆನು. ಜಗತ್ತು ಅಸತ್ಯ ಎಂಬ ಅಭಿಪ್ರಾಯವೇನೆಂದಲ್ಲಿ, ಸಕಲ ಜಗತ್ತು ನನ್ನಿಂದ ಸಂಹರಿಸಿಕೊಳ್ಳಲ್ಪಡತದೆ. ಆದಕಾರಣ ಅಸತ್ಯವೆಂದು ಕರೆಸಿಕೊಳ್ಳಲ್ಪಡತದೆ. ಅಭಾವ ಎಂಬ ಅಭಿಪ್ರಾಯವೇನೆಂದರೆ, ಜಗತ್ತು ನನ್ನಿಂದಲೇ ಉತ್ಪನ್ನವಾಗತದೆ, ಎಂಬ ಕಾರಣ ಅಭಾವವೆಂದು ಕರೆಸಿಕೊಳ್ಳಲ್ಪಡತದೆ.' ಹೀಂಗೆ ನಾಲ್ಕಕ್ಕೂ, ಅರ್ಥಾಂತರ ಮಾಡಿ ಸ್ವಾಮಿ ದೇವತಿಗಳಿಗೆ ಬೋಧಿಸತ ಸ್ವರ್ಗದಲ್ಲಿ ಒಂದು ರೂಪದಲ್ಲಿ ನಿಂತನು. ಮತ್ತೊಂದು ಬುದ್ಧರೂಪ ಧರಿಸಿ, ಮೂಲನಾರಾಯಣನಲ್ಲಿ ಐಕ್ಯವಾದನು. ಭಿನ್ನವಾಗಿ ಬೌದ್ಧಾವತಾರವದೆ. ಅನಂತಾವತಾರಗಳು, ಅನಂತಕಾಲದಲ್ಲಿ ನಿತ್ಯವಾಗಿರತವೆ.

ಜಿನಾದಿ ದೈತ್ಯರು ಕ್ಷಣಿಕ, ಶೂನ್ಯ, ಅಸತ್ಯ, ಅಭಾವ, ಹೀಂಗೆ ನಾಲ್ಕು ಶಾಸ್ತ್ರ ಮಾಡಿಕೊಂಡರು. ಆ ಬುದ್ಧಶಾಸ್ತ್ರದಿಂದ ದೈತ್ಯರಿಗೆ ಬಹಳ ಸಂತೋಷವಾಯಿತು. ತಮ್ಮ ಧರ್ಮವೆಲ್ಲ ಮುಣಗಿಹೋಗಿತ್ತು, ಉದ್ಧಾರವಾಯಿತೆಂದು ಬಹಳ ಸಂತೋಷ ಉಳ್ಳವರಾದರು. ಬುದ್ಧನಾಮಕ ನಾರಾಯಣ, ದೇವತಿಗಳಿಗೆ ಪ್ರಾಶಾಂತವಿದ್ಯ ಹೇಳಿದನು. ಪ್ರಾಶಾಂತವಿದ್ಯ ದೇವರ ಮುಖದಿಂದ ಕೇಳಿ, ವೇದಸಾರ ಭಕ್ತಿತಿಳಕೊಂಡು ಬಹಳ ಸಂತೋಷವುಳ್ಳವರಾದರು. ಪ್ರಾಶಾಂತವಿದ್ಯ ಸಂಪಾದಿಸಿದರೆ, ಶೀಘ್ರದಲ್ಲಿ ಮುಕ್ತಿಮಾರ್ಗ ಐದಥಾರೆ. ಆದಕಾರಣ, ಆ ವಿದ್ಯಾದಲ್ಲಿ ರತಿ ಉಳ್ಳವರಾಗಿರಬೇಕು. ಭಾರತ, ಪಂಚರಾತ್ರಾಗಮ ಅನುಸರಿಸಿ, ಜ್ಞಾನಿಗಳು ಸನ್ಮಾರ್ಗದಲ್ಲಿ ಪ್ರವರ್ತಿಸಲಿಕ್ಕೆ, ಸಜ್ಜನರೆಲ್ಲ ಸಚ್ಛಾಸ್ತ್ರ ಅಭ್ಯಾಸ ಉಳ್ಳವರಾಗಿ, ಮುಕ್ತಿಮಾರ್ಗ ಐದಹೊಕ್ಕರು. ಕ್ರೋಧನಾಮಕ ದೈತ್ಯರು ಮೂರು ಪದ್ಮ ಮುಂದಿ, ಅವರಿಗೆಲ್ಲ ಅಗ್ರೇಸರ ಮಣಿಮಂತ, ಇವರೆಲ್ಲ ಭೀಮಸೇನನಿಂದ ಸತ್ತಿದ್ದರು, ಸಂಕರನಾಗಿ ಹುಟ್ಟಿದ. ಉಳದ ದೈತ್ಯರು ಅವೈಷ್ಣವರಾಗಿ ಹುಟ್ಟಿದರು. ಸಜ್ಜನರ ಸುಖ ತಾಳಲಾರದೆ, ಆ ಕ್ರೋಧನಾಮಕ ದೈತ್ಯರು, ಜಗತ್ತೆಲ್ಲ ಮಿಥ್ಯಾಭೂತವೆಂದೂ, ಮಿಥ್ಯಾಜ್ಞಾನದಿಂದ ಸಜ್ಜನರನ್ನ ಮೋಹಿಸಿಬಿಡಬೇಕೆಂದು, ಮಹಾರುದ್ರನ ಕುರತು ತಪಸ್ಸು ಮಾಡಿ, ಭೂಮೀಮ್ಯಾಲೆ ಹುಟ್ಟಿ, ಮೋಹಕಶಾಸ್ತ್ರ ಜೀವ ಪರಮಾತ್ಮ ಐಕ್ಯ, ಜಗತ್ತು ಮಿಥ್ಯಾಭೂತ, ಈ ಪ್ರಕಾರ ಅದ್ವೈತಶಾಸ್ತ್ರ ಬಲಿಸಿ, ಸಚ್ಛಾಸ್ತ್ರ ಮುಚ್ಚಿಬಿಟ್ಟರು. ಜಗದೊಳಗೆ ಮಾಯಾವಾದಿಗಳು ಬಹಳಾದರು. ಇಂಥಾ ದುರ್ಮತ ಖಂಡಿಸಬೇಕಾಗಿ, ಭೀಮಸೇನನೇ ಆನಂದತೀರ್ಥರಾಗಿ ಅವತರಿಸಿ, ಅವರ ದುರ್ಮತನೆಲ್ಲ ಖಂಡಿಸಿ, ಸಂಕರ ಮಾಡಿದಂಥ ದುರ್ಭಾಷ್ಯಗಳಿಗೆಲ್ಲ ದೂಷಣಗಳು ಕೊಟ್ಟು, ಆನಂದತೀರ್ಥರು

ದಿವ್ಯಶಾಸ್ತ್ರ ಮಾಡಿದರು. ಆನಂದತೀರ್ಥರು ಮಾಡಿದಂಥ ಸಚ್ಛಾಸ್ತ್ರ ಜ್ಞಾನಿಗಳು ಮರಳಿ ಮರಳಿ ಹೇಳಿದ್ದಾರೆ.

ಆನಂದತೀರ್ಥರು ಮಾಡಿದಂಥ ಸಚ್ಛಾಸ್ತ್ರವೆಲ್ಲ, ಕಡಿಗೆ ಕಲಿಯುಗದೊಳಗೆ ನಡದೀತು. ದೈತ್ಯರು ಈ ಶಾಸ್ತ್ರ ಕೆಡಸಿಬಿಟ್ಟು, ದುರ್ಮತ ಬಲಿಸ್ಯಾರು ಜಗತ್ತೆಲ್ಲ ಪಾಪದಲ್ಲಿ ಆಸಕ್ತವಾದೀತು. ದೈತ್ಯರು ಸಜ್ಜನರ ಮಾರ್ಗವೆಲ್ಲ ಮುಚ್ಚಿಬಿಟ್ಟಾರು. ಆದಕಾರಣ ದುಷ್ಟಜನರ ಸಂಹರಿಸಬೇಕಾಗಿ, ದುರ್ಗಾದೇವಿ ಕೇರಳದೇಶದಲ್ಲಿ, ಪಯಸ್ವಿನೀ ನದೀತೀರದಲ್ಲಿ, ಒಬ್ಬ ಬ್ರಾಹ್ಮಣನ ಉದರದಲ್ಲಿ ದುರ್ಗಾರೂಪಳಾದಂಥ ಲಕ್ಷ್ಮೀದೇವಿ ಅವತಾರ ಮಾಡಿ, ದೈತ್ಯರ ಹಿಂಡನ್ನೆಲ್ಲ ಸಂಹರಿಸಿಬಿಟ್ಟಾಳು. ಅಧರ್ಮ ಕೆಡಸಿ, ಧರ್ಮಸ್ಥಾಪನೆ ಮಾಡ್ಯಾಳು. ಹೀಂಗೆ ಸತ್ಸಂಪ್ರದಾಯ, ಸಚ್ಛಾಸ್ತ್ರ ಕಲಿಯುಗದಲ್ಲಿ ಬಹಳ ಕಾಲ ನಡಿಯಲಿಕ್ಕೆ, ಕಲಿಯುಗದ ಅವಸಾನಕಾಲದಲ್ಲಿ ಪಾಪ ಬಹಳ ಪ್ರಬಲವಾದೀತು. ಧರ್ಮವೆಲ್ಲ ಕೆಟ್ಟುಹೋದೀತು, ಜಾತಿಸಂಕರವಾದೀತು. ಮಂಗಳಗುಣಗಳೆಲ್ಲ ಕೆಟ್ಟುಹೋದಾವು. ಬಹಳ ಅನ್ಯಾಯ ಹೆಚ್ಚೀತು. ಆದಕಾರಣ ಬ್ರಹ್ಮರುದ್ರಾದಿ ದೇವತಿಗಳು ಕ್ಷೀರಸಮುದ್ರಕ್ಕೆ ಹೋಗಿ, ಕಮಲೋದ್ಭವಪಿತನ ಸ್ತೋತ್ರ ಮಾಡ್ಯಾರು. ಕಮಲೇಕ್ಷಣ, ದೇವತಿಗಳ ಕೈಯ ಸ್ತೋತ್ರ ಮಾಡಿಸಿಕೊಂಡು, ತಾಮ್ರಪರ್ಣೀ ತೀರದಲ್ಲಿ ಶಂಘಲ (ಶಂಭಲ) ಎಂಬ ಗ್ರಾಮದಲ್ಲಿ, ವಿಷ್ಣುಯಶಃ ಎಂಬ ಬ್ರಾಹ್ಮಣನಲ್ಲಿ, ಸ್ವಾಮಿ ಅಚಿಂತ್ಯ ಶಕ್ತಿ ಉಳ್ಳಾತ, ಕಲ್ಕ್ಯವತಾರ ಮಾಡ್ಯಾನು. ಬ್ರಹ್ಮಾದಿ ದೇವತಿಗಳು ಖಡ್ಗ ಮೊದಲಾದ ಆಯುಧಗಳು, ಅಶ್ವ ತಂದುಕೊಟ್ಟಾರು. ಸ್ವಾಮಿ ದಿವ್ಯ ಕುದರಿ ಏರಿಕೊಂಡು, ಜ್ಞಾನ ಸುಖಾತ್ಮ ಉಳ್ಳಂಥ ಕಲ್ಕಿನಾಮಕ ನಾರಾಯಣ, ಕಲಿ ವಿನಾಶ ಮಾಡೋ ಅಂಥ ಸ್ವಾಮಿ, ಖಡ್ಗಪಾಣಿ ಆಗಿ, ಒಂದು ದಿವಸದೊಳಗೆ ದುಷ್ಟಜನರನೆಲ್ಲ ನಾಶ ಮಾಡ್ಯಾನು. ನಾರಾಯಣಗೆ ದಾರುದಾರು ವಿಮುಖರೋ, ಅಂಥಾ ಪಾಪಿಗಳನೆಲ್ಲ ಸಂಹಾರ ಮಾಡಿಬಿಟ್ಟು, ತನ್ನ ನಿಜಪ್ರಜರು ಸಜ್ಜನರನ್ನ ಸ್ಥಾಪಿಸಿ, ತನ್ನ ಭಕ್ತರಿಗೆ ಜ್ಞಾನ, ಭಕ್ತಿ, ವೈರಾಗ್ಯ, ಹೆಚ್ಚಿಸಿಕೊಟ್ಟಾನು. ತ್ರೇತಾಯುಗಕ್ಕೆ ನಾಲ್ಕು ಪಾಲು ಧರ್ಮ ನಡಸಬೇಕಾಗಿ, ದುಷ್ಟಜನರನೆಲ್ಲ ಸಂಹರಿಸಿ, ಸಜ್ಜನರ ಸ್ಥಾಪಿಸ್ಯಾನು.

ಸ್ವಾಮಿ ಮೂರು ಯುಗದಲ್ಲಿ ಅವತಾರ ಮಾಡಥಾನೆ. ಒಂದು ಯುಗದಲ್ಲಿ ಅವತಾರ ಮಾಡೋದಿಲ್ಲ. ಈ ಪ್ರಕಾರ ಸ್ವಾಮಿ ಅನಂತ ವೇದಪ್ರತಿಪಾದ್ಯ, ಅನಂತಾನಂತ ಅವತಾರ ಮಾಡಥಾನೆ. ಅನಂತಾನಂತ ವೀರ್ಯ ಉಳ್ಳಾತ, ಅನಂತಕರ್ಮ ಉಳ್ಳಾತ, ಅನಂತ ಉದಾರಗುಣ ಉಳ್ಳಾತ, ಅನಂತ ಮಹಿಮಿ, ಅನಂತ ಚರಿತ್ರ ಉಳ್ಳಾತ, ಇಂಥಾ ನಾರಾಯಣನ ಅದ್ಭುತ ಚರಿತ್ರ, ಪರಾಕ್ರಮ, ಆನಂದತೀರ್ಥರು ವರ್ಣಿಸಿದ್ದಾರೆ ಜಗತ್ತಿಗೆ ಪರಮ ಆಪ್ತರು, ಸರ್ವಜ್ಞರು, ಸರ್ವಜ್ಞಶಿಖಾಮಣಿಗಳು, ಪೂರ್ಣಜ್ಞಾನ ಉಳ್ಳವರು, ಇಂಥಾ ಆನಂದತೀರ್ಥರು, ಶ್ರೀಮನ್-

ಮಹಾಭಾರತತಾತ್ಪರ್ಯನಿರ್ಣಯ, ವೇದವ್ಯಾಸರ ಆಜ್ಞೆಯಿಂದ, ನಿರ್ಣಯಗ್ರಂಥ ಮಾಡ್ಯಾರೆ. ಆನಂದತೀರ್ಥರು ಉಡುಪಿಕ್ಷೇತ್ರದಲ್ಲಿ, ವೇದವ್ಯಾಸರು ಬದರಿಕಾಶ್ರಮದಲ್ಲಿ ಆಜ್ಞೆ ಎಲ್ಲಿಂದ ಕೊಟ್ಟರು ಎಂದಲ್ಲಿ, ವೇದವ್ಯಾಸರ ಭಕ್ತರೊಳಗೆ ಆನಂದತೀರ್ಥರು ಮುಖ್ಯಾಗ್ರೇಸರರು, ಮುಖ್ಯಭಕ್ತರು, ವೇದವ್ಯಾಸರ ಅನುಗ್ರಹಕ್ಕೆ ಮುಖ್ಯಪಾತ್ರರು. ಆದಕಾರಣ ಆನಂದತೀರ್ಥರು ಸ್ವಾಮಿ ವೇದವ್ಯಾಸನ ದರ್ಶನಕ್ಕೆ ಮೂರು ಖ್ಯಾಪಿ ಹೋಗಿರಲಾಗಿ, ನಿರ್ಣಯಗ್ರಂಥ ಮಾಡೆಂದು ಸತ್ಯಶಬ್ದವಾಚ್ಯ ವೇದವ್ಯಾಸನ ಆಜ್ಞೆ ಆಯಿತು ಆಜ್ಞಾಪಿಸಲಿಕ್ಕೆ, ತಾ ಏನು ಎಂದರೆ, ಅನಾದ್ಯನಂತಕಾಲದಲ್ಲಿ ಕ್ಷರಾಕ್ಷರ ಚೇತನಕ್ಕೆ ಒಡಿಯ, ಸರ್ವಜಗತ್ತಿಗೆ ಮುಖ್ಯಸ್ವಾಮಿ, ಆದ್ಯನಾದಿ ಕರ್ತ, ಸರ್ವದೇವೋತ್ತಮ, ಅಂಥಾ ಸ್ವಾಮಿ ಅನುಗ್ರಹಕ್ಕೆ ಆನಂದತೀರ್ಥರು ಪಾತ್ರರಾದ ಕಾರಣ, ವೇದವ್ಯಾಸರ ಪ್ರಸಾದದಿಂದ ಸಕಲ ವೇದಾರ್ಥಗಳೂ ಕರತಲಾಮಲಕೋ-ಪಾಪೇಲಿ ಕಾಣಸ್ತಿಹೋವು. ವೇದವ್ಯಾಸನ ಅನುಗ್ರಹದಿಂದ, ವೇದಶಿರಸ್ಸು ಉಪ-ನಿಷದರ್ಥ, ಅಷ್ಟಾದಶ ಪುರಾಣ, ಭಾರತಾದಿ ಸಕಲ ಶಾಸ್ತ್ರವನ್ನೂ ಆನಂದತೀರ್ಥರು ಬಲ್ಲರು. ಅಂಥಾ ಆನಂದತೀರ್ಥರು ಸಕಲ ಶಾಸ್ತ್ರನಿರ್ಣಯ ಮಾಡಿ, ಸರ್ವಸಾರಭೂತ ಹೇಳಿದ್ದಾರೆ. ವಿಶೇಷಾಕಾರವಾಗಿ ಭಾರತಾರ್ಥ ಹೇಳಿದ್ದಾರೆ. ಆದಕಾರಣ ಮಹಾ-ಭಾರತತಾತ್ಪರ್ಯನಿರ್ಣಯಗ್ರಂಥವೆಂದು ಕರಸಿಕೊಳ್ಳತದೆ. ಈ ನಿರ್ಣಯಗ್ರಂಥ ಅಪೇಕ್ಷೆಯಿಂದ ಮಾಡಿದವರಲ್ಲ. ಸ್ವಾಮಿ ವೇದವ್ಯಾಸನ ತುಷ್ಟ್ಯರ್ಥವಾಗಿ, ಸಜ್ಜನರ ಉದ್ಧರಿಸಬೇಕಾಗಿ, ತಾವೂ ಜೀವೋತ್ತಮರಾದ ಕಾರಣ ನಿರ್ಣಯಗ್ರಂಥ ಮಾಡ್ಯಾರೆ. ಈ ಗ್ರಂಥ ಅನುಸರಿಸಿ ಸಕಲಶಾಸ್ತ್ರನಿರ್ಣಯ ತಿಳಕೋಬೇಕು. ಈ ಗ್ರಂಥದ ಹೊರ್ತು ಮತ್ತೊಂದು ಗ್ರಂಥದಿಂದ ತಿಳೀಥೀನೆಂದರೆ ಬಾರದು. ಸಕಲರಿಗೆ ಆದಿ, ವೇದ; ವೇದಗಳು, ಅಷ್ಟಾದಶ ಪುರಾಣಗಳು, ಭಾರತಾದಿ ಸಕಲ ಶಾಸ್ತ್ರಗಳಿಗೆ ಮುಖ್ಯ ನಿರ್ಣಯಗ್ರಂಥ, ಶ್ರೀಮದಾಚಾರ್ಯರು ಮಾಡಿದ್ದಾರೆ.

ವೇದವ್ಯಾಸ ಸಕಲ ಲೋಕೋಪಕಾರವಾಗಿ, ಸಕಲ ನಿರ್ಣಯವಾದಂಥ ಗ್ರಂಥ ಮಾಡಿಕೊಟ್ಟರಲಿಕ್ಕೆ, ಸೂತ್ರದ ಮುಂದೆ ನಿರ್ಣಯಗ್ರಂಥವೇನು ಎಂದಲ್ಲಿ, ಬ್ರಹ್ಮ-ಸೂತ್ರ ಕಾವುಚಾರ ಎತ್ತ ಎಳದರತ್ತ ಬಾಹೋ ಅಂಥಾ ಗ್ರಂಥ. ಬ್ರಹ್ಮಸೂತ್ರಕ್ಕೆ ಅದ್ವೈತರಾದ್ಧಾಂತರು, ಭಾಟ್ಟರು, ಸಾಂಖ್ಯರು, ಕಾಣ್ವರು, ಚಾರ್ವಾಕರು, ಅನ್ಯಾರ್ಥಭಾಷ್ಯಗಳು ತಮಗೆ ತಿಳಿಧಾಂಗೆ ಮಾಡಿದ್ದಾರೆ. ಅಂಥಾ ಕುಭಾಷ್ಯಗಳೆಲ್ಲ ಖಂಡಿಸಿ, ನಾರಾಯಣ ಚರಾಕ್ಷರ ಚೇತನಕ್ಕೆ ಒಡಿಯ, ಬ್ರಹ್ಮಾದಿ ವಂದಿತ, ಸರ್ವೋತ್ತಮದೇವತಿ ಆತನೇ ಎಂದು ತಿಳಸಬೇಕಾಗಿ, ಆನಂದತೀರ್ಥರು ಬ್ರಹ್ಮ-ಸೂತ್ರಕ್ಕೆ ಭಾಷ್ಯ ಮಾಡಿದ್ದಾರೆ. 'ದುರ್ವಾದಿಗಳು ಜೀವೇಶ್ವರ ಐಕ್ಯ, ಜಗತ್ತು ಮಿಥ್ಯಾಭೂತವೆಂದು, ಜಗತ್ತಿನೊಳಗೆ ಪಸರಿಸಿಬಿಟ್ಟಾರೆ. ನಾರಾಯಣ ಸರ್ವೋತ್ತಮ ಎಂಬ ಜ್ಞಾನ ಪಾಪಿಗಳು ಮುಚ್ಚಿಬಿಟ್ಟದ್ದಾರೆ. ಅದನೆಲ್ಲ ಖಂಡಿಸಿಬಿಡು. ಬ್ರಹ್ಮ-

ಸೂತ್ರಕ್ಕೆ ಭಾಷ್ಯ ಮಾಡು. ನಿರ್ಣಯಗ್ರಂಥ ಮಾಡು' ಎಂದು ಆನಂದತೀರ್ಥರಿಗೆ ವೇದವ್ಯಾಸನ ಆಜ್ಞೆ ಆಗಿತ್ತು. ಆಜ್ಞೆ ಶಿರಸಾವಹಿಸಿಕೊಂಡು ಆನಂದತೀರ್ಥರು ಬ್ರಹ್ಮಸೂತ್ರಕ್ಕೆ ಭಾಷ್ಯ ಮಾಡಿದ್ದಾರೆ, ಗೀತಾಭಾಷ್ಯ ಮಾಡಿದ್ದಾರೆ. ಈ ಪ್ರಕಾರ ಗ್ರಂಥ ಮಾಡಿ, ನಾರಾಯಣ ಪುರುಷೋತ್ತಮ, ಸರ್ವೋತ್ತಮ ಎಂದು ಸ್ಥಾಪಿಸಿಬಿಟ್ಟರು. ಆನಂದತೀರ್ಥರು ಯಾದೃಶ ತಾದೃಶ ಬ್ರಾಹ್ಮಣರಲ್ಲ ಕಂಡಿರ್ಯಾ! ಸಜ್ಜನರಿಗೆ ತಮ್ಮ ಸ್ವರೂಪ ತಿಳಿಸಬೇಕಾಗಿ, ಮುಖ್ಯಪ್ರಾಣನ ಮೂರನೇ ಅವತಾರವೆಂದು, ತಮ್ಮ ಮಹಿಮಿ ಸಜ್ಜನರಿಗೆ ಹೇಳದ್ದಾರೆ. ಐದನೇ ವೇದ ಆದಂಥ ಭಾರತಕ್ಕೆ ತಾತ್ಪರ್ಯ, ನಿರ್ಣಯ ಮಾಡಿ ಹೇಳದ್ದಾರೆ. ಆನಂದತೀರ್ಥರು ಉತ್ಕೃಷ್ಟ ವಿದ್ಯ ಉಳ್ಳವರು. ಹರಿಪಾದದಲ್ಲಿ ಭಕ್ತಿವುಳ್ಳವರು, ಆದಕಾರಣ ಹರಿವಿಷಯಕವಾದಂಥ ಹರಿನಿರ್ಣಯಗ್ರಂಥ ಹೇಳಥಾರೆ. ಈ ವಿದ್ಯ ಮನದಲ್ಲಿ ಹರಿಭಕ್ತರು ಪ್ರತಿಕ್ಷಣದಲ್ಲಿ ಮರಳಿಮರಳಿ ವಿಶ್ವಾದಿಸಿ ಅನೇಕ ಪ್ರಕಾರ ರಮಿಸ್ಯಾರು. ದೇವರಲ್ಲಿ ಭಕ್ತಿ ಇಲ್ಲದವರಿಗೆ ರುಚಿ ಹುಟ್ಟೋದಿಲ್ಲ. ಆನಂದತೀರ್ಥರು ಮುಖ್ಯಪ್ರಾಣನ ಮೂರನೇ ಅವತಾರವೆಂಬೋಲ್ಲಿ ಮತ್ತೆ ವೇದವಾಕ್ಯ, ಉಪಸಂಹಾರಕಾಲದಲ್ಲಿ ಹೇಳಥಾರೆ. 'ತೃತೀಯಮನುಷ್ಯ ವೃಷಭಸ್ಯ ದೋಹಸೇ' ಎಂಬ ಶ್ರುತಿ ಹೇಳತದೆ. ಮುಖ್ಯಪ್ರಾಣ ದೇವೋತ್ತಮನು, ಪೂರ್ಣ ಪ್ರಜ್ಞ ಉಳ್ಳಾತ. ಇಂಥಾ ಜೀವೋತ್ತಮನ್ನ ಹೆಂಗಸರು ಹಡದಾರೆ. ಬಹುವಚನ ಏನುಕಾರಣ ಬಂತೆಂದಲ್ಲಿ, ಗುರುಗಳನ್ನ ಹಡದಾರೆ, ಆದಕಾರಣ 'ಹಡದರು' ಎಂದು ಬಹು ಶಬ್ದವಾಚ್ಯ ಬಂತು. ಆನಂದತೀರ್ಥರು ಜ್ಞಾನವೆಂಬ ಹಾಲು ಕರದುಕೊಡಬೇಕಾಗಿ, ಹೆಂಗಸರು ಮಧ್ವರಾಯರನ್ನು ಹಡೆದರು. ಮಧ್ವರಾಯರ ದೆಸೆಯಿಂದ ಮಹಾರುದ್ರ ಮೊದಲಾದ ದೇವತಿಗಳು, ನಾರಾಯಣವಿಷಯಕ ಜ್ಞಾನ ಬೋಧಿಸಿಕೊಂಡಿದ್ದಾರೆ. ಮಧ್ವರಾಯರು ದೊಡ್ಡ ಪಂಡಿತರು, ನಾರಾಯಣನ ಬಲ, ಜ್ಞಾನ ಬೋಧಿಸೋವಲ್ಲಿ ಪರಮಸಮರ್ಥರಾದ ಕಾರಣ, ರುದ್ರೇಂದ್ರಾದಿ ದೇವತಿಗಳಿಗೆ ಹರಿವಿಷಯಕ ಜ್ಞಾನ ತಿಳುಹಿಸಿಕೊಟ್ಟಿದ್ದಾರೆ. ನಿರ್ಗುಣವಾದಿಗಳು ಪರಮಾತ್ಮನ ಆಜ್ಞಾದಿಸಿದ್ದರು. ನಾರಾಯಣ ಸರ್ವೋತ್ತಮನೆಂದು ಯುಗಾದಿ ವೇದಗಳಿಗೂ, ಸರ್ವಶಾಸ್ತ್ರಕ್ಕೂ ವ್ಯಾಖ್ಯಾನ ಮಾಡಿ, ಸಕಲಶಾಸ್ತ್ರ ನಿರ್ಣಯದಲ್ಲಿ ಸರ್ವೋತ್ತಮದೇವತಿ ನಾರಾಯಣನೆಂದು ಸಕಲ ಸಜ್ಜನರಿಗೆ ತಿಳುಹಿಕೊಟ್ಟಾರೆ. ನಾರಾಯಣ ಸರ್ವೋತ್ತಮನೆಂದು, ಜಗತ್ತಿಗೇ ಮುಖ್ಯ ಗುರುವು, ಮುಖ್ಯಪ್ರಾಣನ ಅವತಾರರಾದಂಥ ಮಧ್ವರಾಯರು ಹೇಳಿದ್ದಾರೆ.

ಅಷ್ಟಾದಶ ಪುರಾಣ, ಪಂಚರಾತ್ರಾಗಮ, ಸಕಲ ಉಪಪುರಾಣಗಳು, ವೇದ, ನಿರ್ಣಯಗ್ರಂಥ ಈ ಮೂಲರಾಮಾಯಣ, ಭಾರತಾದಿ ಸಕಲ ಶಾಸ್ತ್ರಗ್ರಂಥ ಸಂಗ್ರಹಿಸಿ, ನಿರ್ಣಯಗ್ರಂಥ ಹೇಳಿದ್ದಾರೆ. ಈ ನಿರ್ಣಯಗ್ರಂಥ ಆಸ್ತಿಕತನದಿಂದ ಹೇಳಿಕೇಳಿದವರಿಗೆ ವೈಕುಂಠಲೋಕ ಪ್ರಾಪ್ತವಾಗತದೆ. ಧರ್ಮ ಅರ್ಥ ಕಾಮ ಮೋಕ್ಷ,

ಹೀಂಗೆ ಚತುರ್ವಿಧ ಪುರುಷಾರ್ಥಗಳು ಆಗತವೆ. ಅಧಿಕಾರಪರತ್ವೇನ ತತ್ತ್ವದಲ್ಲಿ ಅವರವರ ಮನೋಭೀಷ್ಟಸಕಲವೂ ಆಗತವೆ. ಈ ಗ್ರಂಥ ಭಕ್ತಿಪುರಸ್ಸರದಿಂದ ಹೇಳಿ-ಕೇಳಿದ್ದರಿಂದ ನಾರಾಯಣನಿಗೆ ಪ್ರೀತಿ ಬಹಳ ಆಗತದೆ. ಆದ್ದರಿಂದ ಸಕಲ ಸಜ್ಜನರಿಗೆ ದಿವ್ಯ ಗತಿ ಆಗತದೆ. ಮುಖ್ಯಪ್ರಾಣದೇವರು ನಾರಾಯಣನ ಸೇವಿ ಮಾಡಬೇಕಾಗಿ, ಮೂರನೇ ಅವತಾರ ಮಾಡಿದ್ದಾರೆ. '**ಯಸ್ಯ ಶ್ರೀಣ್ಯುದಿತಾನಿ ವೇದ-ವಚನೇ ರೂಪಾಣಿ ದಿವ್ಯಾನ್ಯಲಂ**' ಎಂಬ ಶ್ಲೋಕ, ಹಾಂಗೆ ಅರಣ್ಯಪರ್ವದಲ್ಲಿ ಹೇಳತದೆ. ವಾಯುದೇವರು ಭರಣಗಮನಕರ್ತರು. ಸರ್ವಪ್ರಾಣಿಗಳಲ್ಲಿರಥಾರೆ. ಸಕಲ ಪ್ರಾಣಿಗಳಿಗೆ ಪ್ರೇರಕ, ಪೋಷಕ ವಾಯುದೇವರು, ಹನುಮಂತನ ಅವತಾರ ಮಾಡಿ, ಸೀತಾಪ್ರತಿಕೃತಿಗೆ ರಾಮಮುದ್ರಿಕೆ ಒಯ್ದು ಕೊಟ್ಟದ್ದಾರೆ. ಎರಡನೇದು ಭೀಮ-ಸೇನನ ಅವತಾರ ಮಾಡಿ, ದುರ್ಯೋಧನಾದಿಗಳ ಸೇನಿನೆಲ್ಲ ಸಂಹರಿಸಿಬಿಟ್ಟಾರೆ. ಬಕಾಸುರನ ಕೊಂದು ಯಥೇಷ್ಟ ಅನ್ನ ಉಂಡಿದ್ದಾರೆ. ಆ ಭೀಮಸೇನನೇ ಪೂರ್ಣ-ಬೋಧ, ಆನಂದತೀರ್ಥರಾಗಿ ಅವತರಿಸಿದ್ದಾರೆ. **ಯಃ ಸರ್ವಗುಣಸಂಪೂರ್ಣಃ ಸರ್ವ-ದೋಷ ವಿವರ್ಜಿತಃ। ಪ್ರೀಯತಾಂ ಪ್ರೀತ ಏವಾಲಂ ವಿಷ್ಣುರ್ಮೇ ಪರಮಂ ಸುಹೃತ್ ॥** ಸ್ವಾಮೀ ಲೇಶಮಾತ್ರ ಪಾರತಂತ್ರ್ಯಾದಿ ದೋಷಗಳಿಲ್ಲ. ಸ್ವಾಮಿ ಸರ್ವೇಶ್ವರ, ಭಕ್ತರ ಸೇವಿಯಿಂದ ಮೊದಲಿಂದಲೇ ತುಷ್ಟನಾಗಿರಥಾನೆ ಮತ್ತಷ್ಟು ಪ್ರೀತನಾಗಲೆಂದು ಆನಂದತೀರ್ಥರು ಸ್ವಾಮೀನ್ನ ಬೇಡಿಕೊಂಡಾರೆ. 'ಸ್ವಾಮೀ ನೀ ನಮಗೆ ಅನಾದಿಕಾಲದಲ್ಲಿ ಪರಮಪ್ರಿಯ. ಈ ಗ್ರಂಥ ಹೇಳಿಕೇಳಿದವರಿಗೆ ಸ್ವಾಮಿ, ಪರಮಪ್ರೀಯನಾಗಲಿ' ಎಂದು ಸಕಲ ಸಜ್ಜನರಿಗಾಗಿ ಟೀಕಾಕಾರರು ಬೇಡಿ-ಕೊಂಡಾರೆ ಎಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಮಹಾಭಾರತತಾತ್ಪರ್ಯ-ನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ, '**ಶ್ರೀಕೃಷ್ಣಚರಿತೇ ಪಾಂಡವ-ಸ್ವರ್ಗಾರೋಹಣಃ**' ಎಂಬ ಮೂವತ್ತೆರಡನೇ ಅಧ್ಯಾಯವು ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಶ್ರೀಹನುಮದ್ಭೀಮಮಧ್ವಾಂತರ್ಗತ ಶ್ರೀರಾಮಕೃಷ್ಣವೇದವ್ಯಾಸಾತ್ಮಕ
ಶ್ರೀಲಕ್ಷ್ಮೀನೃಸಿಂಹಾಭಿನ್ನ ಶ್ರೀಲಕ್ಷ್ಮೀಹಯಗ್ರೀವಾರ್ಪಣಮಸ್ತು

ಶ್ರೀಹರಯೇ ನಮಃ
ಶ್ರೀಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು

ಆನಂದ್ ಪ್ರಿಂಟರ್ಸ್, 25, ಗಾಂಧೀ ಬಜಾರ್, ಬಸವನಗುಡಿ, ಬೆಂಗಳೂರು-560 004

ಈ ಗ್ರಂಥದಲ್ಲಿ ಪ್ರತಿಪಾದಿತ ಹಾಗೂ ನಿರ್ಣೀತ ವಿಷಯಗಳ ಪುಟಸಂಖ್ಯಾಸೂಚಿ [ದ್ವಿತೀಯ ಸಂಪುಟದಿಂದ ಮುಂದುವರೆದುದು]

ವಿಷಯ	ಪುಟಸಂಖ್ಯೆ
ದುರ್ಯೋಧನ ಮತ್ತು ಅರ್ಜುನ ಇಬ್ಬರೂ ಯುದ್ಧಕ್ಕೆ ಪೂರ್ವ ಶ್ರೀಕೃಷ್ಣನ ಸಹಾಯ ಕೋರಲು, ನಿರಾಯುಧನಾದ ತಾನೇ ಒಂದು ಪಾಲು, ಹತ್ತು ಸಾವಿರ ಮುಂದಿ ಶ್ರೀಕೃಷ್ಣಪುತ್ರರು ಮತ್ತು ಕಾಲಾಳು ಒಂದು ಪಾಲು, ಹೀಗೆ ಎರಡು 'ಸಮ-ಪಾಲು' ಎಂದು ಶ್ರೀಕೃಷ್ಣ ಹೇಳಿದ್ದು -ನಿರ್ಣಯ	೪
ಭೀಮಸೇನ ಕೌರವದ್ವೇಷಿಯಾದರೂ, ಶ್ರೀಕೃಷ್ಣ ಸಂಧಾನಕ್ಕೆ ಹೋಗುವಾಗ, ಸಂಧಾನವನ್ನೇ ಮಾಡಿಕೊಂಡು ಬರಲು ಹೇಳಿದ	೮
ದುರ್ಯೋಧನ, ಭೀಷ್ಮ ದ್ರೋಣಾದಿಗಳಿಂದ ತಾನು ಆತಿಥ್ಯವನ್ನು ಸ್ವೀಕರಿಸದಿರಲು ಶ್ರೀಕೃಷ್ಣನು ಕೊಟ್ಟ ಕಾರಣಗಳು	೯
ಕರ್ಣ, ಸೂರ್ಯಾಂಶನಾಗಿ ದೇವತೆಗಳಿಗೆ ವಿರುದ್ಧನಾದರೂ, ದಿವ್ಯಗತಿ ಹೊಂದಿದ. ವಿಕರ್ಣ, ದೇವತೆಗಳ ಪರನಾದರೂ, ಹೀನಗತಿ ಹೊಂದಿದ	೧೦
ಸರ್ವೋತ್ತಮ, ಸರ್ವಶಂತರ್ಯಾಮಿ ಶ್ರೀಕೃಷ್ಣ ಹೇಳಿದರೂ ದುರ್ಯೋಧನಾದಿಗಳು ಸಂಧಾನಕ್ಕೆ ಒಪ್ಪಲಿಲ್ಲ—ನಿರ್ಣಯ	೧೧
ಚತುರ್ವಿಧ ನಾಶಗಳು	೧೪
ಭಾರತಯುದ್ಧ ಪ್ರಾರಂಭದಲ್ಲಿ ಭೀಮಸೇನ ಯುದ್ಧ ಮಾಡದೆ ತಾಳ್ಮೆಸ್ವಭಾವ ತೋರಿದ್ದೇಕೆ	೧೫
ಅರ್ಜುನ ಯುದ್ಧದಲ್ಲಿ ನಿರಾಸಕ್ತನಾಗಿರಲು ಶ್ರೀಕೃಷ್ಣ, ತಾನು ಶಸ್ತ್ರಧಾರಣ ಮಾಡುವುದಿಲ್ಲವೆಂದು ಕೊಟ್ಟಿದ್ದ ವಚನಕ್ಕೆ ವಿರೋಧವಾಗಿ, ಚಕ್ರಧಾರಿಯಾಗಿ, ಭೀಷ್ಮಾಚಾರ್ಯರನ್ನು ಸಂಹರಿಸಲು ಹೋದನು	೧೭
ಭೀಮಸೇನ, ಭಗದತ್ತ ಇವರಿಗೆ ಯುದ್ಧವಾಗುವಾಗ ಘಟೋತ್ಕಚ ಭೀಮಸೇನನ್ನ ತಡೆದು, ತಾನೇ ಭಗದತ್ತನನ್ನು ಸಂಹರಿಸುವುದಾಗಿ ಹೇಳಲು, ಪರಾಕ್ರಮಿಯಾದರೂ, ಭೀಮಸೇನ ಹಿಂದಾಗಿದ್ದಕ್ಕೆ ನಿರ್ಣಯ	೨೦
ಪಾಂಡವರು ಭೀಷ್ಮಾಚಾರ್ಯರನ್ನು ವಧಿಸಲು ಶಕ್ತರಾದರೂ ಅತನ ಸಂಹಾರದ ಉಪಾಯವನ್ನು ಅತನಿಂದಲೇ ಏಕೆ ಕೇಳಿದರು	೨೪
ಭಗದತ್ತನು ವರಾಹಾಸ್ತ್ರ ಅಭಿಮಂತ್ರಿಸಿ, ಅರ್ಜುನನ ಮೇಲೆ ಪ್ರಯೋಗ ಮಾಡಿದ ಅಂಕುಶವನ್ನು ಶ್ರೀಕೃಷ್ಣನು ತಾನೇ ಧರಿಸಿದ್ದೇಕೆ	೩೧
ದ್ರೋಣನಿರ್ಮಿತ ಪದ್ಮವ್ಯೂಹವನ್ನು ಸೀಳಲು ಭೀಮಸೇನ ತಾನು ಶಕ್ತನಾದರೂ ಏಕೆ ಸೀಳಲಿಲ್ಲ	೩೨

ವಿಷಯ	ಪುಟಸಂಖ್ಯೆ
ಅಭಿಮನ್ಯುವನ್ನು ಪದ್ಮವ್ಯೂಹದಲ್ಲಿ ಹೋಗಗೊಟ್ಟು, ಜಯದ್ರಥನು ಇತರ ಪಾಂಡವರನ್ನು ತಡೆಗಟ್ಟಿದಾಗ ಸಮರ್ಥನಾದ ಭೀಮಸೇನ ಜಯದ್ರಥನನ್ನು ಕೊಲ್ಲಲಿಲ್ಲ—ನಿರ್ಣಯ	೩೩
ಗುರುಮುಖೇನ ತಾನು ಪ್ರಸನ್ನನಾಗುವೆನೆಂದು ಸ್ವಾಮಿ ಸ್ವಪ್ನದ್ವಾರ ಅರ್ಜುನನಿಗೆ ತೋರಿಸಿದ್ದು	೩೩
ಕೃತವರ್ಮ ಸಮಸ್ತಸೈನ್ಯವನ್ನು ಗೆಲ್ಲಲು ಹೇಗೆ ಸಮರ್ಥನಾಗಿದ್ದನು. ಅಹರೂ ಸಾತ್ಯಕಿಯಿಂದ ಹೇಗೆ ಸೋತನು—ವಿವರಣೆ	೩೭
ಸಾತ್ಯಕಿ, ಸೈನ್ಯ ಸೀಳಿ ಅರ್ಜುನನನ್ನು ಕೂಡಲು ಹೋದಾಗ ದ್ರೋಣಾಚಾರ್ಯ ತಡೆಯದಿರಲು ಕಾರಣ	೩೮
ಭೀಮಸೇನ ಕರ್ಣನೊಡನೆ ಭಯಂಕರ ಯುದ್ಧ ಮಾಡಿ, ಕರ್ಣನನ್ನು ಸೋಲಿಸಲು ತಾನು ಶಕ್ತನಾದರೂ, ಗದೆ ಉಪಯೋಗಿಸದೆ ಜಡದಂತೆ ನಿಂತನು	೪೨-೪೩
ಭೀಮಸೇನ ಕರ್ಣನ ರಥದೊಳಗೆ ಹಾರಿ ಕುಳಿತಾಗ, ಕರ್ಣ ಶಸ್ತ್ರಗಳನ್ನು ಬಿಟ್ಟು, ಅಡಗಿಕೊಳ್ಳಲು ಓಡಿಹೋಗಿದ್ದರೂ, ಅವುಗಳನ್ನು ಭೀಮಸೇನನು ಏಕೆ ತೆಗೆದುಕೊಂಡು ಹೋಗಲಿಲ್ಲ	೪೪
ಭೀಮಸೇನನ್ನ ಕರ್ಣ 'ತೂಬರ' ಎಂದು ಸಂಬೋಧಿಸಲು, ಭೀಮಸೇನನಿಗೆ ಕೋಪ ಬರಲು ಕಾರಣ	೪೪
ವಿದ್ಯೆ ಕಲಿಯುವಾಗಲೇ, ಗಾಂಡೀವಧನುಸ್ಸು ತನಗೆ ಪ್ರಾಪ್ತನಾಗುವುದಕ್ಕೆ ಮೊದಲೇ, ಗಾಂಡೀವಧನುಸ್ಸು ಬಿಸಾಡೆಂದು ಹೇಳುವವರನ್ನು ಸಂಹಾರ ಮಾಡುವುದಾಗಿ ಅರ್ಜುನ ಪ್ರತಿಜ್ಞೆ ಮಾಡಲು ಹೇಗೆ ಸಾಧ್ಯ	೪೫
ಕರ್ಣನ ಶಕ್ತ್ಯಾಯುಧದಿಂದ ಘಟೋತ್ಕಚ ಸಂಹರಿಸಲ್ಪಡಲು, ಸ್ವಾಮಿ ಶ್ರೀಕೃಷ್ಣ ಸಂತೋಷದಿಂದ ಕುಣಿದಾಡುತ್ತ ಅರ್ಜುನನ್ನ ಅಪ್ಪಿಕೊಂಡನು.—ಕಾರಣ	೫೨
ಭೀಮಸೇನನಿಂದಲೇ ಬಾಹ್ಲೀಕರಾಯ ಮರಣ ಐದಲು ಕಾರಣ	೫೩
ದ್ರೋಣಾಚಾರ್ಯರ ಪಶ್ಚಾತ್ತಾಪ ಮತ್ತು ಬೃಹಸ್ಪತಿಲೋಕಕ್ಕೆ ಪ್ರಯಾಣ ..	೫೪-೫೫
ಅಶ್ವತ್ಥಾಮನಿಂದ ಪ್ರಯೋಗಿಸಲ್ಪಟ್ಟ ನಾರಾಯಣಾಸ್ತ್ರದಿಂದ ಅರ್ಜುನನು ಸುಡಲ್ಪಡಲಿಲ್ಲವೇಕೆ—ಸಕಲರೂ ನಾರಾಯಣಾಸ್ತ್ರಕ್ಕೆ ನಮನ ಮಾಡುತ್ತಿರಲು, ಭೀಮಸೇನ ತಾನು ಏಕೆ ನಮಸ್ಕರಿಸಲಿಲ್ಲ	೫೬
ಅರ್ಜುನನು ಧರ್ಮರಾಯನಿಂದ ನಿಂದಿತನಾಗಿ ಅವನನ್ನು ಸಂಹರಿಸಲು ಉದ್ಯುಕ್ತನಾದಾಗ, ಅರ್ಜುನನಿಗೆ ಶ್ರೀಕೃಷ್ಣನಿಂದ ಧರ್ಮಾಧರ್ಮ ಸೂಕ್ಷ್ಮ ತಿಳುವಳಿಕೆ	೬೮
ಧರ್ಮರಾಯನ್ನ ನಿಂದಿಸಿದ ಅರ್ಜುನ ಪಶ್ಚಾತ್ತಾಪದಿಂದ ತನ್ನನ್ನು ತಾನೇ ಸಂಹರಿಸಿಕೊಳ್ಳಲು ಯತ್ನಿಸಿದಾಗ, ಶ್ರೀಕೃಷ್ಣನು ಅದನ್ನು ನಿವಾರಿಸಿದ್ದು	೬೯-೭೦
ಭೀಮಸೇನ ದುಶ್ಶಾಸನನ ರಕ್ತ ಕುಡಿದ ಬಗೆ	೭೨

ವಿಷಯ	ಪುಟಸಂಖ್ಯೆ
ಕರ್ಣನ ಸಾವಿಗೆ ತಾನೇ ಕಾರಣನೆಂದು ಅರ್ಜುನ ಅಹಂಕಾರ ಪಡಲು ಶ್ರೀಕೃಷ್ಣನಿಂದ ಆ ಅಹಂಕಾರದ ಪರಿಹಾರ	೭೭
ದೇವಾಸುರರುಗಳಿಂದಲೂ ಸೋಲಿಸಲು ಸಾಧ್ಯವಿಲ್ಲದ ದುರ್ಯೋಧನನನ್ನು ಭೀಮಸೇನನು ಹೇಗೆ ಸಂಹರಿಸಿದನು. ಧರ್ಮರಾಯನಿಗೆ ಶ್ರೀಕೃಷ್ಣನ ವಚನಗಳು	೮೪
ದುರ್ಯೋಧನನೊಡನೆ, ಗದಾಯುದ್ಧಕಾಲದಲ್ಲಿ, ಭೀಮಸೇನ ತನ್ನ ಪರಾಕ್ರಮದಿಂದ ಅವನನ್ನು ಆದೇ ಕ್ಷಣದಲ್ಲಿ ಸಂಹರಿಸಬಲ್ಲನಾದರೂ, ಏಕೆ ಮೊದಲಿಗೆ ಶಾಂತತ್ವದಿಂದ ಯುದ್ಧ ಮಾಡಿದನು	೮೫
ಗದಾಯುದ್ಧದಲ್ಲಿ ಭೀಮಸೇನನು ದುರ್ಯೋಧನನ ತೊಡೆ ಮುರಿದದ್ದು ನ್ಯಾಯವೇ, ಅನ್ಯಾಯವೇ	೮೬-೮೭
ದುರ್ಯೋಧನ ಮೃತ್ಯುಮುಖನಾದಾಗ, ತಾನು ಸಕಲ ಸಂಪದ್ಯುಕ್ತವಾದ ರಾಜ್ಯ ಆಳಿ ಸುಖಪಟ್ಟನೆಂದೂ, ಸಂಪದ್ರಹಿತವಾದ ರಾಜ್ಯವನ್ನು ಪಾಂಡವರು ಭೋಗಿಸಲೆಂದು ಹೇಳುತ್ತಿರಲು ದೇವತೆಗಳು, ದುರ್ಯೋಧನನ ಮೇಲೆ ಪುಷ್ಪವೃಷ್ಟಿಗೈದರು—ನಿರ್ಣಯ	೮೮
ಅಶ್ವತ್ಥಾಮನು ಪಾಂಡವರ ಶಿಬಿರದಲ್ಲಿದ್ದವರನ್ನೆಲ್ಲ ಸಂಹಾರ ಮಾಡಲು ಬಂದಾಗ ಶರ್ವತ್ರಾತನನ್ನು ಮೂಲರುದ್ರ ಕೈಲಾಸಕ್ಕೆ ಕೊಂಡುಹೋದದ್ದು ಏಕೆ	೯೩
ಪಾಂಡವರ ಮೇಲೆ ತಾನು ಪ್ರಯೋಗಿಸಿದ ಬ್ರಹ್ಮಾಸ್ತ್ರವನ್ನು ಉಪಸಂಹಾರ ಮಾಡಲು ಅಶ್ವತ್ಥಾಮನು ಅಶಕ್ತನಾಗಲು ಕಾರಣ	೯೪
ಅರ್ಜುನನು ಪ್ರತಿಬ್ರಹ್ಮಾಸ್ತ್ರದಿಂದ ಅಶ್ವತ್ಥಾಮನ ಬ್ರಹ್ಮಾಸ್ತ್ರವನ್ನು ನಿವಾರಣೆ ಮಾಡುವಾಗ, ಅಶ್ವತ್ಥಾಮನಿಗೆ ಮತ್ತು ಸಮಸ್ತ ಪ್ರಾಣಿಗಳಿಗೆ ಕ್ಷೇಮವಾಗಲಿ ಎಂದು ಹೇಳಲು ಕಾರಣ	೯೪
ಅಶ್ವತ್ಥಾಮನ ಶಿರೋರತ್ನವನ್ನು ವೇದವ್ಯಾಸನು ಭೀಮಸೇನನಿಗೆ ಕೊಡಿಸಿದ್ದೇಕೆ	೯೫
ಭೀಮಸೇನನಿಂದ ತನಗೆ ಕೊಡಲ್ಪಟ್ಟಿದ್ದ ಅಶ್ವತ್ಥಾಮನ ಶಿರೋರತ್ನವನ್ನು ದ್ರೌಪದಿ ಧರ್ಮರಾಯನಿಗೇಕೆ ಕೊಟ್ಟಳು	೯೭
ಭೀಮಸೇನನು ಧೃತರಾಷ್ಟ್ರನಿಗೆ ನಮಸ್ಕಾರ ಮಾಡಲು ಹೋದಾಗ, ಶ್ರೀಕೃಷ್ಣನು, ಉಕ್ಕಿನಿಂದ ಮಾಡಿದ ಭೀಮಪ್ರತಿಮೆಯನ್ನು ಮುಂದಿಟ್ಟದ್ದೇಕೆ	೯೮-೯೯
ತಮ್ಮ ಮಕ್ಕಳ ಪ್ರೇತದೇಹವನ್ನು ನೋಡಲು ಧೃತರಾಷ್ಟ್ರ, ಗಾಂಧಾರಿ, ಇವರಿಗೆ ಶ್ರೀಕೃಷ್ಣ ದಿವ್ಯ ಚಕ್ಷುಸ್ಸು ಕೊಡಲು ಕಾರಣ	೧೦೦-೧೦೧
ಧರ್ಮರಾಯನಿಂದ ಸಕಲ ಸ್ತ್ರೀಸಮೂಹಕ್ಕೆ ಶಾಪ	೧೦೨
ಭೀಷ್ಮನು ಧರ್ಮರಾಯನಿಗೆ ಹೇಳಿದ ರಾಜಧರ್ಮ, ವರ್ಣಾಶ್ರಮಧರ್ಮ, ಪುರುಷ ಮತ್ತು ಸ್ತ್ರೀಧರ್ಮಗಳು	೧೦೩-೧೦೯

ವಿಷಯ	ಪುಟಸಂಖ್ಯೆ
ಧರ್ಮ, ಅರ್ಥ, ಕಾಮಗಳಲ್ಲಿ ಯಾವುದು ಶ್ರೇಷ್ಠವೆಂಬ ಧರ್ಮರಾಯನ ಪ್ರಶ್ನೆಗೆ, ಭೀಮಸೇನನಿಂದ ಮಾತ್ರ ಕಾಮವೇ ಶ್ರೇಷ್ಠವೆಂದು ಪ್ರತಿಪಾದನೆ ಮತ್ತು ಅದರಲ್ಲಿನ ತಾರತಮ್ಯ	೧೧೦-೧೧೧
ವಿಷಯಸುಖಗಳನು ಅನುಭವಿಸುವಲ್ಲಿ ಭೀಮಸೇನನ ನಿಲುವು	೧೧೪-೧೧೫
ಧರ್ಮರಾಯ ಕಲಿಪುರುಷರ ಸಂಭಾಷಣೆ	೧೧೬-೧೧೯
ಶ್ರೀಕೃಷ್ಣನಿಂದ ಅರ್ಜುನನಿಗೆ ಜ್ಞಾನೋಪದೇಶ	೧೧೯
ಅಶ್ವಮೇಧಯಜ್ಞಕ್ಕೆ ದ್ರವ್ಯ ತರಲು ವೇದವ್ಯಾಸದೇವರು ಸೂಚಿಸಿದಾಗ ಧರ್ಮರಾಯ ಸಂದೇಹಿಸಿದ್ದಕ್ಕೆ, ಭೀಮಸೇನನಿಂದ ಪರಿಹಾರ ಸೂಚನೆ	೧೨೨
ಅರ್ಜುನನ ದೇಹಲಕ್ಷಣಗಳನ್ನು, ಶ್ರೀಕೃಷ್ಣ ಧರ್ಮರಾಯನಿಗೆ ಹೇಳುವಾಗ ಅದನ್ನು ಹೇಳದಂತೆ, ಶ್ರೀಕೃಷ್ಣನಿಗೆ ದ್ರೌಪದಿ ಸೂಚಿಸಿದ್ದೇಕೆ	೧೨೬
ಅರ್ಜುನನ ದೇಹಲಕ್ಷಣಗಳು	೧೨೮
ಕ್ರೋಧನಾಮಕ ದೈತ್ಯ ಮುಂಗುಸಿವೇಷದಿಂದ ಬಂದು, ಸಕ್ತುಪ್ರಸ್ಥ ಬ್ರಾಹ್ಮಣನ ದಾನಕರ್ಮ ಹೊಗಳಿ, ಪಾಂಡವರ ಅಶ್ವಮೇಧಯಜ್ಞ ದೂಷಿಸಿದ್ದು—ದೈತ್ಯನಿಗೆ ಮುಂಗುಸಿರೂಪ ಬರಲು ಕಾರಣ—ವಿಪ್ರಾಘ್ರ, ದೈತ್ಯನ್ನ ದೂಷಿಸಲು ದೈತ್ಯನ ಮರಣ	೧೩೧
ಪಾಂಡವರು ಮಾಡಿದ ಅಶ್ವಮೇಧಯಜ್ಞವೇ ಶ್ರೇಷ್ಠ	೧೩೧-೧೩೨
ಅರ್ಧರಾತ್ರಿಯಲ್ಲಿ ಬಂದು ಬೇಡಿದ ಬ್ರಾಹ್ಮಣನಿಗೆ, ಯಜ್ಞಕ್ಕಾಗಿ ಭೀಮಸೇನ, ತನ್ನ ಬಂಗಾರದ ಕೈ-ಕಪ್ಪವನ್ನು ಕೊಟ್ಟಿದ್ದ, ಅದೇ ಸಮಯದಲ್ಲಿ ಭೇರಿತಾಡನ ಮಾಡಿಸಲು ಕಾರಣ	೧೩೩
ಧೃತರಾಷ್ಟ್ರನನ್ನು ಸರ್ವರೂ ಸರ್ವವಿಧದಲ್ಲಿ ಸೇವಿಸುತ್ತಿರಲು, ಭೀಮಸೇನ ಮಾತ್ರ ಅವನಿಗೆ ನಿಷ್ಕಾರವಚನಗಳನ್ನು ಆಡುತ್ತಾನೆ	೧೩೪
ವಾನಪ್ರಸ್ಥಕ್ಕೆ ಹೋಗುವ ಮುನ್ನ, ತನ್ನ ಮಕ್ಕಳ ಶ್ರಾದ್ಧಕರ್ಮ ಮಾಡಿ ಹೋಗುವುದಾಗಿ, ಧೃತರಾಷ್ಟ್ರ ದ್ರವ್ಯ ಕೇಳಲು, ಭೀಮಸೇನನು ಮಾತ್ರ ದ್ರವ್ಯ ಕೊಡದೆ, ಧರ್ಮಾರ್ಜುನರುಗಳು ಕೊಟ್ಟರು—ಏಕೆ	೧೩೬-೧೩೮
ವಿದುರನು ಧರ್ಮರಾಯನ ದೇಹವನ್ನು ಪ್ರವೇಶಿಸಿದ್ದು	೧೪೧
ಭಾರತ, ಪ್ರತ್ಯಕ್ಷಫಲವೆಂಬ ವಿಶ್ವಾಸ ಜನಮೇಜಯನಿಗೆ ಹೇಗೆ ಉಂಟಾಯಿತು	೧೪೨
ಶ್ರೀಕೃಷ್ಣನು ಪರಂಧಾಮಕ್ಕೆ ಹೋಗುವ ಮುನ್ನ ಯಾದವರನ್ನೆಲ್ಲಾ ಕೂಡಿಕೊಂಡು ಪ್ರಭಾಸಕ್ಷೇತ್ರಕ್ಕೆ ಹೋದುದೇಕೆ	೧೪೬
ಜರಾನಾಮಕ ವ್ಯಾಧ ಯಾರು — ಅವನು ವ್ಯಾಧದೇಹದಿಂದಲೇ ಸ್ವರ್ಗಕ್ಕೆ ಹೋಗಲು ನಿಮಿತ್ತ	೧೪೭

ವಿಷಯ	ಪುಟಸಂಖ್ಯೆ
ಪರಂಧಾಮಕ್ಕೆ ಹೋಗುವಾಗ ಶ್ರೀಕೃಷ್ಣನು ತನ್ನ ಚಿದಾನಂದರೂಪವನ್ನು ಎಲ್ಲೆಲ್ಲಿಟ್ಟನು	೧೪೮
ಶ್ರೀಕೃಷ್ಣ, ರುಕ್ಮಿಣೀ, ಸತ್ಯಭಾಮಾ ಮತ್ತು ಕೃಷ್ಣನ ಪಣ್ಮಹಿಷಿಯರು ದೇಹತ್ಯಾಗ ಮಾಡಿದ ಬಗೆ	೧೪೯
ಅರ್ಜುನನು ಶ್ರೀಕೃಷ್ಣನ ಹದಿನಾರುಸಾವಿರದನೂರು ಮಂದಿ ಹೆಂಡಂದಿರನ್ನು ಕರಕೊಂಡು ದ್ವಾರಾವತಿಗೆ ಬರುವಾಗ, ಮಹಾ ಪರಾಕ್ರಮಿಯಾದರೂ, ಮ್ಲೇಂಛರಿಂದ ಪರಾಜಿತನಾದದ್ದು ಹೇಗೆ	೧೫೦
ಹದಿನಾರುಸಾವಿರದಒಂದುನೂರು ಮಂದಿ ಗೋಪಿಕಾಸ್ತ್ರೀಯರನ್ನು ಮ್ಲೇಂಛರು ಹಿಡಕೊಂಡುಹೋದದ್ದೇಕೆ	೧೫೧
ಗೋವಿಂದ್ಯೆಕಾದಶೀ ವ್ರತ	೧೫೧
ಪಾಂಡವರಲ್ಲಿ ಧರ್ಮರಾಯ, ಭೀಮಸೇನ ಉಳಿದು, ಮಿಕ್ಕವರು ಮೃತರಾಗಿರಲು, ಭೀಮಸೇನ ಅವರುಗಳ ಮರಣಕ್ಕೆ ಕಾರಣವನ್ನು ಧರ್ಮರಾಯನಿಂದ ಹೇಳಿಸಿದ್ದೇಕೆ	೧೫೨
ಧರ್ಮರಾಯನು ದ್ರೌಪದೀ ಮೇಲೆ ಆರೋಪ ಮಾಡಿದ ದೋಷಗಳು, ಅವಳಲ್ಲಿ ದೋಷಗಳಿಲ್ಲ	೧೫೫
ಧರ್ಮರಾಯನಿಗೆ ನರಕದರ್ಶನವಾಗಲು ನಿಮಿತ್ತ	೧೫೬
ಶ್ರೀಹರಿಯಾಜ್ಞೆ ನಡೆಸುವುದರಿಂದ ಪ್ರಾಪ್ತವಾಗುವ ಫಲ	೧೫೬
ಭೀಮಾರ್ಜುನಾದಿಗಳು ಯಾವ ನರಕದಲ್ಲಿದ್ದರು	೧೫೭
ಜಿನಾದಿ ದೈತ್ಯರಿಗೆ ಸ್ವಾಮಿ ಬುದ್ಧನಾಗಿ ಬೋಧಿಸಿದ ಜ್ಞಾನವು ಮಿಥ್ಯಾಜ್ಞಾನವಲ್ಲ —ಸತ್ಯವಾದುದನ್ನೇ ಬೋಧಿಸಿದ್ದಾನೆ	೧೬೪-೧೬೪
ಕಲಿಯುಗದಲ್ಲಿ ಶ್ರೀದುರ್ಗಾದೇವಿಯ ಅವತಾರ	೧೬೫
ಸ್ವಾಮಿಯ ಕಲ್ಕ್ಯವತಾರ ಪ್ರಕರಣ	೧೬೬
ಮಹಾಭಾರತತಾತ್ಪರ್ಯನಿರ್ಣಯಗ್ರಂಥ ಹೇಳಿಕೇಳುವವರಿಗೆ ಪ್ರಾಪ್ತವಾಗುವ ಫಲ ...	೧೬೨-೧೬೯